# ಕೆಲವು ಕತೆಗಳು

ಡಾ. ಮನು ಬಳಿಗಾರ್





# ಕೆಲವು ಕತೆಗಳು

## ಡಾ. ಮನು ಬಳಿಗಾರ್

ಪರಮಶಂಕರ ಪ್ರಕಾಶನ ಶಿಗ್ಲಿ, ಬೆಂಗಳೂರು.

Kelavu Kathegalu: Selected Short Stories of Dr. Manu Baligar, President Kannada Sahitya Parishattu, from his three collections of short stories - Avyakta, Runa and Baduku Mayeya Maata.

2005 - First Impression
2010 - Second Impression
2018 - Third Impression

Pages :XIV+140

(C) Dr. Manu Baligar (Author)

800 Copies

Publishers:
Paramshankar Prakashana
Shigli, Bangalore
SHIGLI HOUSE, No.37, 6th Cross
35th Main, B.T.M. 2nd Stage
Bengaluru - 560 068. INDIA

Price : Rs. 125/-

Printers : Vinayaka Offset Printers
Bengaluru - 560 070.
Mobile : 98455 82152

ಚಿ|| ಮಯೂರವರ್ಮನಿಗೆ

## ಪರಿವಿಡಿ


| | |
|---|---|
| ಮುನ್ನುಡಿಗಳು : ಡಾ. ಯು.ಆರ್. ಅನಂತಮೂರ್ತಿ | v-vii |
| ಡಾ. ಚಂದ್ರಶೇಖರ ಕಂಬಾರ | viii-xi |
| ಪ್ರೊ, ಕೀರ್ತಿನಾಥ ಕುರ್ತಕೋಟಿ ಅವರ ಅಭಿಪ್ರಾಯ | xii |

- ವಂಚಿತ 1-6
- ಗಂಗಮ್ಮನ ಜೀವನ ದೃಷ್ಟಿ 7-14
- ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ 15-32
- ಕಥಾ ವಸ್ತು 33-40
- ಸಾವು ಬದುಕು ನಿರಂತರ (ಬದುಕು ಮಾಯೆಯ ಮಾಟ) 41-49
- ಎರಡು ದಾರಿ 50-58
- ಮುತ್ತೈದೆ 59-67
- ಒಂದು ಚಪ್ಪಲಿ ಪ್ರಕರಣ 68-73
- ಅಳು 74-78
- ಪೃಥ್ವಿಯ ಮೇಲೊಂದು ಮೊರಡಿ 79-87
- ಆಶ್ರಯ 88-102
- ಘಾತ 103-109
- ಅನುಭೋಗ 110-115
- ರಾಜಕಾರಣ 116-127
- ಋಣ 128-134
- ಜೋಳದ ಬುಟ್ಟಿಯೊಳಗಿಂದ 135-140

# ಮುನ್ನುಡಿ

## (‘ಋಣ' ಕಥಾಸಂಕಲನಕ್ಕೆ)

(1999)

ಮನು ಬಳಿಗಾರ್ ನನಗಿನ್ನೂ ಮುಖತಃ ಪರಿಚಯವಾಗಿಲ್ಲ. ಅವರು ಕನ್ನಡದಲ್ಲಿ ಆರು ಪುಸ್ತಕಗಳನ್ನು ಪ್ರಕಟಿಸಿದ್ದರೂ ಅವನ್ನು ನಾನಿನ್ನೂ ಓದಿಲ್ಲ. ಈಗ ಪ್ರಕಟವಾಗುತ್ತಿರುವ ಸಂಕಲನದ ಕಥೆಗಳನ್ನು ಓದುತ್ತಿದ್ದಂತೆ ನಾನೇನೋ ಕಳೆದುಕೊಂಡಂತೆ ಭಾಸವಾಗಿದೆ. ಮನು ಬಳಿಗಾರ್ ನಮ್ಮ ನಡುವಿನ ಒಬ್ಬ ಸಮರ್ಥ ಲೇಖಕ; ಇನ್ನೂ ಬೆಳೆಯಬಲ್ಲ ಮುಕ್ತ ಮನಸ್ಸಿನ ಲೇಖಕ; ಹದವಾದ ದೃಷ್ಟಿಯ ಲೇಖಕ ಎಂದು ನನಗೆ ಅನ್ನಿಸಿದೆ.

ಇವರ ಬರವಣಿಗೆಯ ಹದ, ಭಾವನೆಯ ಆರ್ದ್ರತೆಯನ್ನು ಕಳೆದುಕೊಳ್ಳದ ಹದ ನನಗೆ ತುಂಬ ಇಷ್ಟವಾಗಿದೆ. ಆರ್ದ್ರ ಸ್ವಭಾವದವನು ವಿವೇಕಿಯಲ್ಲದೇ ಇರಬಹುದು: ಹಾಗೆಯೇ ವಿವೇಕಿಯಾದವನ ಭಾವನಾಲೋಕ ಒಣಗಿ ಹೋಗಿರಬಹುದು. ಆದರೆ ಮನು ಬಳಿಗಾರ್ ವಿವೇಕ ಕಳೆದುಕೊಳ್ಳದಂತೆ ಆರ್ದ್ರವಾಗಿ ಸ್ಪಂದಿಸುತ್ತಾರೆ. 'ವಂಚಿತ' ಕಥೆಯ ಮಡ್ಡೆಪ್ಪ ದುರಗಪ್ಪ ಕೊಂಪಿಯನ್ನು ನೋಡಿ. ಅವನ ದಾರುಣ ಬಡತನ ಸಾಲದಲ್ಲವೆಂಬಂತೆ ಅವನ ಹೆಸರೂ ಅವನಿಗೆ ಶಾಪವಾಗಿದೆ. ಇಡೀ ಕಥೆಯನ್ನು ಅತಿರೇಕಕ್ಕೆ ಹೋಗದಂತೆ ಬಳಿಗಾರ್ ಬರೆಯುತ್ತಾರೆ. ಈತನಿಗೆ ನೌಕರಿಯಿಲ್ಲ; ಮದುವೆಯಾಗಲು ಹುಡುಗಿ ಕಡೆಯವರು ಒಪ್ಪುವುದಿಲ್ಲ. ಮಡ್ಡೆಪ್ಪ ಯಾವುದೋ ಭರವಸೆಯಿಂದ ದಸರಾ ಉತ್ಸವ ನಡೆಸುವ ಒಬ್ಬ ಮೇಲಾಧಿಕಾರಿ ಹಿಂದೊಮ್ಮೆ ಗೆಳೆಯನಾಗಿದ್ದನೆಂದು ನೆನಸಿ ಮೈಸೂರಿಗೆ ಹೋಗುತ್ತಾನೆ; ಕುಚೇಲ ಕೃಷ್ಣನನ್ನು ನೋಡಲು ಹೋದಂತೆ. ಓದುಗನೂ ಅನುಕಂಪಿತನಾಗಿ ಈತನ ಬಗ್ಗೆ ಭರವಸೆ ತಾಳುತ್ತಾನೆ. ಒಂದೋ ಆಸೆ ಕೈಗೂಡಬೇಕು ಅಥವಾ ನಿರಾಸೆಯಾಗಬೇಕು; ಸಾಮಾನ್ಯವಾಗಿ ಈ ಕಥೆ ಅಪೇಕ್ಷಿಸುವ ಮುಕ್ತಾಯ ಹಾಗಿರಬೇಕು. ಆದರೆ ಬಳಿಗಾರರ ವಿಶೇಷ ಕಲೆಗಾರಿಕೆಯಿಂದಾಗಿ ಮಡ್ಡೆಪ್ಪನ ಒಂದು ಭವ್ಯ ಹಗಲುಗನಸಿನಲ್ಲಿ ಕಥೆ ಮುಕ್ತಾಯವಾಗುತ್ತದೆ. ಇದು ಕನಸೂ ಹೌದು; ಅವನು ತನ್ನಲ್ಲಿರುವ ಹಣವನ್ನೆಲ್ಲ ಖರ್ಚು ಮಾಡಿ ನಿರುಪಯುಕ್ತವಾದ ಒಂದು ಆನೆಯನ್ನು ಕೊಂಡು ತರುವ ಕಥೆಯೂ ಹೌದು. ಮಡ್ಡೆಪ್ಪನ ಈ ಮೂರ್ಖತನದಲ್ಲಿಯೇ ಅವನ ಹಲವು ಸಾಧ್ಯತೆಗಳ ಆತ್ಮ ನಮಗೆ ಗೋಚರಿಸುತ್ತದೆ.

‘ಒಂದು ಚಪ್ಪಲಿ ಪ್ರಕರಣ' ಕಥೆಯ ಬಸವಣ್ಣಿಯ ಭಯಂಕರ ಕೋಪವನ್ನೂ ಇದೇ ಹದದಲ್ಲಿ ಬಳಿಗಾರ್ ಚಿತ್ರಿಸಿದ್ದಾರೆ. ಕಥೆಯಲ್ಲಿ ಅನುಕಂಪವಿದೆ. ನವಿರಾದ ಹಾಸ್ಯವಿದೆ. ಬಸವಣ್ಣಿ ವಂಚಿತನಾಗುತ್ತಾನೆ. ಆದರೆ ಅವನ ಒಳಗಿನ ಸಿಟ್ಟು ಅವನಿಗೆ ಘನತೆಯನ್ನು ತರುತ್ತದೆ. ಅವನು ಬಡವ; ಆದರೆ ಬಡಪಾಯಿಯಲ್ಲ, ಬಂಡಾಯ ಸಾಹಿತ್ಯದ ‘ರೋಷ'ದ ಬರವಣಿಗೆಯಲ್ಲಿ ದಕ್ಕಲಾರದೇ ಹೋಗುವ ಕೋಪಾಗ್ನಿ ಬಸವಣ್ಣಿಗೆ ಘನತೆ ತರುತ್ತದೆ. ಬಸವಣ್ಣಿ ನಮ್ಮ ಕರುಣೆಗೆ ಪಾತ್ರವಾಗದೇ ನಮ್ಮ ಮೆಚ್ಚುಗೆ ಗಳಿಸುವುದು ಕಥೆಯಲ್ಲಿ ಚೆನ್ನಾಗಿ ಮೂಡಿದೆ. ಬಳಿಗಾರ್‌ಗೆ ಶೈಲಿಯ ಹದ ದಕ್ಕಿದೆ ಎಂದು ಅನ್ನಿಸುತ್ತದೆ. “ಜೋಳದ ಬುಟ್ಟಿಯೊಳಗಿಂದ” ಕಥೆಯಲ್ಲಿಯೂ ಭದ್ರವ್ವ ತನ್ನ ಹೆಣ್ಣುತನದ ಅಳುಕನ್ನು ಗೆದ್ದು ನಿಲ್ಲುವುದು ಹದವಾಗಿ ಮೂಡಿದೆ.

ಬಳಿಗಾರ್‌ರ ಕಥೆಗಳಲ್ಲಿನ ಹದವಾದ ನಿರ್ವಹಣೆಯಂತೆಯೇ ಅವರ ಭಾವನಾಲೋಕ ಜೀವನದ ಹಲವು ಮಗ್ಗಲುಗಳನ್ನು ಒಳಗೊಳ್ಳುವ ಕ್ರಮ ಚೆನ್ನಾಗಿದೆ. ‘ಅಳು' ಕಥೆಯ ಮಂಜು ನಾವು ಯಾರಾದರೂ ಆಗಿರಬಹುದು. ಒಬ್ಬ ಹುಡುಗ ಓದಿ ಮುಂದೆ ಬರುವುದು; ಅದಕ್ಕಾಗಿ ತಾಯಿ ತಂದೆಗಳು ಹಾತೊರೆದು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡುವುದು; ಓದಿ ಮುಂದೆ ಬಂದ ಹುಡುಗ ಕ್ರಮೇಣ ತನ್ನ ಮುಗ್ಧತೆ ಕಳೆದುಕೊಂಡು ಬರಡಾಗುವುದು: ಹೀಗೆ ಬರಡಾದೆನೆಂದು ನರಳುವುದು - ನಮಗೆ ಪರಿಚಿತವಾದ ಥೀಮು. ಆದರೆ ಬಳಿಗಾರ್‌ರ ಸಮರ್ಥ ನಿರ್ವಹಣೆಯಲ್ಲಿ ಮಂಜು ಕಳೆದುಕೊಂಡ ಬದುಕು ವಿಶಿಷ್ಟ ವಿವರಗಳಲ್ಲಿ ಮೂಡುವುದಷ್ಟೇ ಅಲ್ಲ – ಮಂಜು ಒಳ್ಳೆಯವನಾಗಿದ್ದೂ

ಬರಡಾಗುತ್ತಾನೆ ಮತ್ತು ಹೀಗಾದನೆಂದು ನರಳುತ್ತಾನೆ. ಆದರೆ ಹೀಗೆ ನರಳುವುದು ಪ್ರಯೋಜನವಿಲ್ಲದ...... ಇತ್ಯಾದಿ ಭಾವನೆಗಳು ಪ್ರೌಢವಾಗಿ ನಮ್ಮ ಮನಸ್ಸಿನಲ್ಲಿ ಮೂಡಿಸುವಂತೆ ಬಳಿಗಾರ್ ಬರೆಯುತ್ತಾರೆ.

"ಗಂಗಮನ ಜೀವನ ದೃಷ್ಟಿ" ಕತೆ ಭಾವಾತಿರೇಕದ ಆದರ್ಶವಾದೀ ನಿರೂಪಣೆಯಿಂದ ಕೃತಕವಾಗಬಹುದಿತ್ತು. ಆದರೆ ನಿರೂಪಕನ ಪಕ್ವತೆಯಿಂದಾಗಿ ಹಾಗಾಗದೇ ಗಂಗಮ್ಮ ನೈಜವಾಗಿದ್ದೇ ಆದರ್ಶಪ್ರಾಯಳಾಗುತ್ತಾಳೆ. 'ಋಣ'ದ ರಮೇಶ ಒಳ್ಳೆಯವನು. ಆದರೆ ಅವನ ಒಳ್ಳೆತನ ಮತ್ತು ಭಾವುಕತೆಗಳು ಸಮಸ್ಯಾತ್ಮಕವಾಗಿ ಮೂಡುವುದು ಬಳಿಗಾರರ ಸಂಕೀರ್ಣವಾದ ದೃಷ್ಟಿಯಿಂದ ಸಾಧ್ಯವಾಗಿದೆ. "ಎರಡು ದಾರಿ" ಕಥೆಯ ವಿರಸ ದಾಂಪತ್ಯವೂ ಇಬ್ಬರನ್ನೂ ಸಂಬಂಧಪಟ್ಟವರಲ್ಲಿ ಯಾರೊಬ್ಬರನ್ನೂ ಅತಿ ಹಳಿಯದೆ, ಅತಿ ಎತ್ತದೆ ಮನುಷ್ಯ ಸ್ವಭಾವದಲ್ಲೇ ಇರುವ ಸಣ್ಣತನದ ದರ್ಶನವಾಗಿ ಮೂಡುತ್ತದೆ. ಇಲ್ಲಿ ಹೆಣ್ಣು ಸಣ್ಣವಳಾಗುತ್ತಾಳೆ; ಆದರೆ ಇನ್ನೊಂದು ಇಂಥ ಕಥೆಯಲ್ಲಿ ಗಂಡು ಅಲ್ಪನಾಗಿರಬಹುದು, ಎನ್ನಿಸುವಂತಿದೆ ಪ್ರಸ್ತುತ ಕಥೆ. 'ಅನುಭೋಗ' ಕಥೆಯ ಕುಷ್ಠರೋಗಗ್ರಸ್ತನಾದ ಶಿವು ಒಮ್ಮೆ ಸುಂದರನೂ, ಸರಸಿಯೂ, ಭೋಗಿಯೂ, ವಿಲಾಸಿಯೂ ಆಗಿ ಗೆಳೆಯರ ಹೊಟ್ಟೆ ಉರಿಸುವಂತೆ ಇದ್ದವನು. ಈಗ ಅವನು ಕರುಣಾಜನಕನಾಗಿ ಕಾಣುತ್ತಾನೆ. ಆದರೆ ಹಾಗೆ ಅವನ ನಡತೆಯಿಲ್ಲ. ನಿರೂಪಕನಾದ ಅವನ ಗೆಳೆಯ ಶಿವೂನ ಸ್ವಸ್ಥವಾದ ದೃಷ್ಟಿಯಿಂದ ಬೆರಗಾಗುತ್ತಾನೆ. ಇಂಥ ಒಂದು ಕಥೆಯನ್ನು ಯಾರಾದರೂ ಕರುಣೆ ಹುಟ್ಟಿಸಲು ಬರೆಯಬಹುದಿತ್ತು, ಆದರೆ ಬಳಿಗಾರ್ ಹಾಗೆ ಬರೆಯುವುದಿಲ್ಲವೆಂಬುದು ಕನ್ನಡದ ಇನ್ನೊಬ್ಬ ಕಥೆಗಾರನಾಗಿ ನನಗೆ ತುಂಬ ಇಷ್ಟವಾಗಿದೆ.

ಈ ಸಂಕಲನದ ಕಥೆಗಳನ್ನು ನಾನು ಓದುವಂತೆ ಮಾಡಿ ನನ್ನ ಒಳಮನಸ್ಸನ್ನು ಹಿಗ್ಗಿಸಿದ ಬಳಿಗಾರ್‌ರನ್ನು ನಾನು ಅಭಿನಂದಿಸುತ್ತೇನೆ. ನನ್ನಂತೆಯೇ ಇವರು ಹಳ್ಳಿಯಲ್ಲಿ ಹುಟ್ಟಿಬಂದು ವಿದ್ಯಾವಂತರಾದವರು. ಜೀವನವನ್ನು ಪ್ರತಿನಿತ್ಯ ಅದರ ಕ್ಷುಲ್ಲಕತೆಯಲ್ಲೂ, ಭವ್ಯತೆಯಲ್ಲೂ ಕಾಣಬಲ್ಲ ಸರ್ಕಾರಿ ಇಲಾಖೆಯಲ್ಲಿ ಇರುವ ಬಳಿಗಾರ್ ತಮ್ಮ ಸೂಕ್ಷ್ಮಜ್ಞತೆ ಮತ್ತು ಭಾವನಾ ಪ್ರಾಮಾಣಿಕತೆಯಿಂದಾಗಿ ಇಂಥ ಕಥೆಗಳ ಜೊತೆಯೇ ನವರತ್ನ ರಾಮರಾಯರಂತೆ ಈ ಕಾಲದ ದಾಖಲಾಗಬಲ್ಲ ಬರವಣಿಗೆಯನ್ನೂ ಬರೆಯಬಲ್ಲಷ್ಟು ಇವರ ವೃತ್ತಿಜೀವನ ಹಿಗ್ಗಲಿ ಎಂದು ಹಾರೈಸಿ ಈ ಕೆಲವು ಮಾತುಗಳನ್ನು ಅಭಿಮಾನದಿಂದ ಬರೆದಿದ್ದೇನೆ.

25.01.1999 **ಯು.ಆರ್.ಅನಂತಮೂರ್ತಿ** (vii)

## ಮುನ್ನುಡಿ

### ('ಬದುಕು ಮಾಯೆಯ ಮಾಟ' ಕಥಾಸಂಕಲನ)

(2002)

ಶ್ರೀ ಮನು ಬಳಿಗಾರ್ ಅವರ ಕಥೆಗಾರಿಕೆ ನಾನು ಈತನಕ ಓದಿದ ಕಥೆಗಳಿಗಿಂತ ಭಿನ್ನವಾದ ನೆಲೆಯಿಂದ ಮನಸ್ಸನ್ನು ಆವರಿಸುತ್ತದೆ. ಓದಿಯಾದ ಮೇಲೆ ಒಂದು ಬಗೆಗಿನ ಹಿತ, ಆರೋಗ್ಯದ ಅನುಭವವಾಗಿ ಇಡೀ ಕಥೆಯನ್ನು ಪುನಃ ಸೃಷ್ಟಿಸಿಕೊಳ್ಳುವ ಹಾಗೆ ಮಾಡುತ್ತದೆ. ಇತಿಹಾಸದ ಕುತಂತ್ರಗಳಿಂದ ಭಿನ್ನವಾದ ನಿರ್ಮಲವಾದ ಸಂದರ್ಭದಲ್ಲಿದ್ದಂತೆ ಅನುಭವವಾಗುತ್ತದೆ. ಅವರ ಯಾವ ಕಥೆಯೂ ಮುಗಿಯುವುದಕ್ಕೆ ಅವಸರ ಮಾಡುವುದಿಲ್ಲ. ಅಸಹಜವಾದ ತಿರುವು, ಒತ್ತಡಗಳಿಲ್ಲ. ಮರಕ್ಕೆ ಚಿಗುರು ಮೂಡುವ ಹಾಗೆ ಕಥೆ ಹುಟ್ಟಿ, ನಿಧಾನವಾಗಿ ಬಿಚ್ಚಿಕೊಂಡು ಈ ಕಥೆಗಳ ನಡಾವಳಿಯನ್ನು ನಿಯಂತ್ರಿಸಿದೆ ಎನ್ನಿಸುತ್ತದೆ. ಈ ಕಥೆಗಳು ಭಿನ್ನವಾಗಿರುವುದಕ್ಕೆ, ಇಷ್ಟು ತಾಜಾ ಆಗಿರುವುದಕ್ಕೆ ಇದೇ ಕಾರಣವೆಂದು ನನ್ನ ಭಾವನೆ. ಇವುಗಳನ್ನು ನಾನು ಒಟ್ಟಾರೆ ಓದಿದವನಲ್ಲ. ಆಗಾಗ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ಓದುತ್ತಿದ್ದೆ. ಓದಿಯಾದ ಮೇಲೆ ಕೆಲವು ಕಥೆಗಳನ್ನು ಮರೆಯಲಾಗಲೇ ಇಲ್ಲ. ಅಲ್ಲಿನ ಘಟನೆಗಳು

ವ್ಯಕ್ತಿಗಳು ತಂತಾವೇ ನೆನಪಿಗೆ ನುಗ್ಗಿ ತಮ್ಮ ಸಂದರ್ಭಗಳನ್ನು ಪುನರರ್ಭಿಯಿಸಿ ಹೋಗುತ್ತಿದ್ದವು. ಅವುಗಳಲ್ಲಿ ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ ಒಂದು.

ನವ್ಯ ಮತ್ತು ಬಂಡಾಯಗಳ ಆರ್ಭಟದಲ್ಲಿ ನಾವೆಂಥ ಅನುಭವಗಳನ್ನು ಕಳೆದುಕೊಂಡಿದ್ದೇವೆ ಎಂದು ತಿಳಿಯಬೇಕಾದರೆ ಈ ಕಥೆಯನ್ನು ಓದಬೇಕು. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಈಗಲೂ ಇರುವ ಪೈಲ್ವಾನರು, ಉಸ್ತಾದಿಗಳು, ಅವರ ಹ್ಯಾವಗಳು, ಪೂರ್ವ ತಯಾರಿಗಳು, ಜನ ತಮಗಿಷ್ಟವಾದ ಪೈಲ್ವಾನರ ಸುತ್ತುಕಟ್ಟಿಗೊಳ್ಳುವ ಭಾವ ಪ್ರಪಂಚಗಳು ಇವೆಲ್ಲ ಕಣ್ಣಿಗೆ ಕಟ್ಟುವಂತೆ ವಿವರವಾಗಿ ವರ್ಣಿಸಿದ್ದಾರೆ ಮನು. ಮಲ್ಲಣ್ಣ ಪೈಲ್ವಾನನ ವಿಷಯವೇ ಅರ್ಧಕಥೆಯಾಗಿದೆ. ಅವನು ಮತ್ತವನ ಎದುರಾಳಿಯ ಹೇಳಿಕೆ, ಪ್ರತಿಹೇಳಿಕೆಗಳು, ಅವರ ವ್ಯಾಯಾಮ ಸಾಧನೆ, ಊಟದ ವೈಭವ, ಅವರ ಟಾಂಗುಗಳು ಇನ್ನೊಂದು ತಿಂಗಳು ಕುಸ್ತಿ ಇದೆ ಎಂದಾಗ ತರಬೇತು ನೀಡಲು ಬರುವ ಉಸ್ತಾದಿಗಳು, ಅವರ ಹಿಂದಿನ ಪ್ರತಾಪಗಳು ಇವುಗಳೊಂದಿಗೆ ಕುಸ್ತಿಯ ದಿನ ಬರುತ್ತಿದ್ದಂತೆ ವಿವರವಾದ ವರ್ಣನೆಗಳಿಂದಾಗಿ ಕ್ಷಣಕ್ಷಣವೂ ಪತ್ತೇದಾರಿ ಕಥೆಗಳಂತೆ ಕುತೂಹಲ ಕೆರಳಿಸುತ್ತ ಕಥೆ ಮುಂದುವರಿಯುತ್ತದೆ. ಕುಸ್ತಿಯ ಅನುಭವವುಳ್ಳವರಿಗೆ ಮಾತ್ರವಲ್ಲ ಹೊರಗಿನಿಂದ ನೋಡುವವರಿಗೂ ಮೈನವಿರೇಳಿಸುವ ವರ್ಣನೆಗಳಿವು. ಕೊನೆಗೂ ಒಮ್ಮೆ ಕುಸ್ತಿ ಮುಗಿದು ಎಲ್ಲರು ನಿರೀಕ್ಷಿಸಿದ್ದ ಮಲ್ಲಣ್ಣ ಬಿದ್ದು ಸೀದಾ ದೇವಳ್ಳಿ ದಾರಿ ಹಿಡಿದ. ಊರಿಗೆ ಬಂದವನು ದನದ ಮನೆಗೆ ಬಂದು ಮಲಗಿದ. ಇಲ್ಲಿಗೇ ಈ ಕಥೆ ಮುಗಿದಿದ್ದರೂ ಇದೊಂದು ರೋಮಾಂಚನಕಾರೀ ಅನುಭವದ ಕಥನವಾಗುತ್ತಿತ್ತು.

ಸೋತು ಸುಣ್ಣಾಗಿದ್ದ ಮಲ್ಲಣ್ಣನಿಗೆ ನಿದ್ದೆ ಬಾರದಿದ್ದಾಗ ಯಾರೋ ಕಾಲನ್ನು ನೆಕ್ಕಿದಂತೆ ಭಾಸವಾಯ್ತು. ಕಣ್ತೆರೆದು ನೋಡಿದರೆ ಹೋರಿ ಮುಕ್ಕಣ್ಣ! ದಡಗ್ಗನೇ ಎದ್ದವನೆ ಅದನ್ನಪ್ಪಿಕೊಂಡ..... ಬಿಕ್ಕಿ ಬಿಕ್ಕಿ ಅತ್ತ....... ಆಮೇಲೆ ಮಲ್ಲಣ್ಣ ತನ್ನನ್ನು ತಾನು ಹೋರಿಯಲ್ಲಿ ಪುನಃ ಸೃಷ್ಟಿಸಿಕೊಂಡು ತಾನು ಸೋತ ಸೋಲುಗಳನ್ನೆಲ್ಲ ಕಪ್ಪಕಾಣಿಕೆ ಸಮೇತ ಗೆಲ್ಲುತ್ತ ಹೋಗುತ್ತಾನೆ. ಕಥೆಗಾರನ ಶ್ರದ್ಧೆಯಿಂದಾಗಿ ಹೋರಿಯಂಥ ಪ್ರಾಣಿ ಕೂಡ ಮಾನವಸಹಜ ಧೀರೋದಾತ್ತ ಪಾತ್ರವಾಗಿ ಬೆಳೆಯುತ್ತದೆ. ಹಿಂದೆ ಕೆಲವು ಕಥೆ ಕಾದಂಬರಿಗಳಲ್ಲಿ ಪ್ರಾಣಿಗಳು ಪಾತ್ರಗಳಾಗುವ ಮಟ್ಟಕ್ಕೆ ಬೆಳೆದುದನ್ನು ಓದಿದ್ದೆ. ಆದರೆ ಆ ಯಾವ ಪ್ರಾಣಿಗಳೂ ಮುಕ್ಕಣ್ಣನ ಹಾಗೆ ಕಥಾನಾಯಕನನ್ನೇ ಹಿಂದೆ ಸರಿಸಿ ಬೆಳೆದುದನ್ನು ಕಂಡಿರಲಿಲ್ಲ. ತುಂಬ ಹೃದಯಸ್ಪರ್ಶಿಯಾದ ನಾನೆಂದಿಗೂ ಮರೆಯಲಾಗದ ಕಥೆಯಿದು.

"ಕಥಾವಸ್ತು"ವಿನ ಜೀವಂತಿಕೆಯಿಂದ ನಳನಳಿಸುವ ಪಾತ್ರ, ಯೋಚಿಸಿದಷ್ಟೂ ಕ್ಲಿಷ್ಟವಾಗುವ ಬಿಡಿಸದಷ್ಟೂ ಕಗ್ಗಂಟಾಗುವ ವಿಕ್ಷಿಪ್ತ ವ್ಯಕ್ತಿತ್ವ ರೇಶ್ಮಾಳದು. ಎದುರಾದವರು ಅವಳ ವ್ಯಕ್ತಿತ್ವದ ಮುಂದೆ ಸೋತರೆ ಸಾಲದು. ಸೋಲನ್ನು ಒಪ್ಪಿಕೊಳ್ಳಬೇಕು. ಕೆಲವು ವಾಗ್ವಾದ, ತಿರುಗಾಟ, ಜಗಳ ಬೆಳೆಯುತ್ತ ಹೋದಂತೆ ಈಕೆ ತಾವು ಕಂಡವಳಲ್ಲವೆ? ಅಂತ ಬಹುಬೇಗ ಪರಿಚಿತಳಾಗುತ್ತಾಳೆ. ಅವಳ ದಾಂಪತ್ಯವೂ ವಿಶಿಷ್ಟವೆ. ಗಂಡಹೆಂಡತಿ ತಂತಮ್ಮ ಗುಣಗಳನ್ನು ಅದಲು ಬದಲು ಮಾಡಿಕೊಂಡಿರಬಹುದೆಂಬ ಮಿತ್ರರ ಅಭಿಪ್ರಾಯವನ್ನು ಕಥೆಗಾರ ತಮ್ಮ ಅಭಿಪ್ರಾಯದೊಂದಿಗೆ ಹೇಳಿದ್ದಾರೆ. ಎದುರಿನವರ ಸೋಲುಗಳಿಂದಲೇ ಜೀವಶಕ್ತಿ ಪಡೆದವಳೇ ಅನ್ನಿಸುವ ಆ ಪಾತ್ರದ ಬಾಯಲ್ಲಿ ಆತ್ಮಹತ್ಯೆಯ ಮಾತು ಬಹಳ ಅಸಹಜ ಮತ್ತು ಅಸಂಗತವೆಂಬ ಅಭಿಪ್ರಾಯಕ್ಕೆ ನಾವೂ ಬರವಷ್ಟರಲ್ಲಿ ಅವಳ ಗಂಡನ ಆತ್ಮಹತ್ಯೆಯ ಆಘಾತದೊಂದಿಗೆ ಕಥೆ ಮುಗಿಯುತ್ತದೆ. ಅವನ ಆತ್ಮಹತ್ಯೆಗೇನೋ ಅವನೇ ಕೊಟ್ಟ ಕಾರಣ ಇದೆ. ರೇಶ್ಮಾಳಲ್ಲಿ ಅಜ್ಜಿ ತಾಯಿಯನ್ನೇ ಕಾಣಬಯಸಿದ ಆತ ಅದು ಸಿಕ್ಕದಾದೊಡನೆ ಆತ್ಮಹತ್ಯೆ ಮಾಡಿಕೊಂಡ, ಕಥೆ ಮುಗಿದಾದ ಮೇಲೆ ರೇಶ್ಮಾ ನಮ್ಮಲ್ಲಿ ಬೆಳೆಯತೊಡಗುತ್ತಾಳೆ. ಅವಳ ಬಗ್ಗೆ ನಾವು ಈತನಕ ತಿಳಿದುಕೊಂಡ ಲಘು ಭಾವನೆಗಳಿಗೆ ಗಾಂಭೀರ್ಯ ಮೂಡಿ ರೇಶ್ಮಾ ಬಗ್ಗೆ ಅನುಕಂಪ ಮೂಡುತ್ತದೆ.

ಆಧುನಿಕ ಮನುಷ್ಯರ ದೈವ "ರಾಜಕಾರಣ" ಮೂಲಕವೇ ಪ್ರಕಟವಾಗುವುದೆಂದು ಥಾಮಸ್‌ಮನ್ ಹೇಳಿದ್ದಾರೆ. ಬ್ರಿಟಿಷರಿಂದ ಬಳುವಳಿಯಾಗಿ ಬಂದ ರಾಜಕಾರಣಕ್ಕೆ ಮೌಲ್ಯಗಳ ಅಗತ್ಯ ಬೀಳುವುದು ವಿಲಾಸಕ್ಕಾಗಿ ಮಾತ್ರ. ತನಗೆ

ಅನುಕೂಲವಾದ ಮೌಲ್ಯಗಳಿಲ್ಲದಿದ್ದಲ್ಲಿ ನಕಲು ಮೌಲ್ಯಗಳನ್ನು ಸೃಷ್ಟಿಸಿಕೊಂಡು ಮುಂದುವರಿಯುತ್ತದೆ. 'ರಾಜಕಾರಣ' ಎಂಬ ಕಥೆ ಈ ಸಮಸ್ಯೆಯನ್ನು ಚಿತ್ರಿಸುತ್ತ ಮಜ ತೆಗೆದುಕೊಳ್ಳುತ್ತದೆ. ರಾಜಕಾರಣ ಅದೊಂದು ಹುಚ್ಚು ಕುದುರೆ, ಆದರೆ ಅದೃಶ್ಯವಾದ ಕುದುರೆ, ಪ್ರತಿಯೊಬ್ಬರ ಕೈಯಲ್ಲಿ ಲಗಾಮಿದೆ. ಆ ಕುದುರೆ ತನ್ನಬಳಿಯೇ ಇದೆಯೆಂದು ಪ್ರತಿಯೊಬ್ಬರೂ ಹೇಳುತ್ತಾರೆ. ಆದರೆ ಪ್ರತಿಯೊಬ್ಬರ ಹತ್ತಿರವೂ ಅದಿಲ್ಲ. ಲಗಾಮು ಅದಲು ಬದಲು ಮಾಡುವ ಚೇಷ್ಟೆಯೂ ನಡೆಯುತ್ತದೆ. ಇಲ್ಲಿಯ ಪ್ರತಿಯೊಬ್ಬನೂ ಒಂದೇ ಪಾತ್ರವನ್ನು ಬೇರೆ ಬೇರೆ ಥರ ಅಭಿನಯಿಸುತ್ತಾನೆ. ಕುದುರೆ ಒಬ್ಬರಿಗೆ ಮಾತ್ರ ಸಿಕ್ಕುವುದು ಸಾಧ್ಯ. ಆ ಸುದೈವಿ ಯಾರೆಂದು ತೀರ್ಮಾನಿಸುವುದೇ ಇಲ್ಲಿಯ ಆಟ. ತೀರ್ಮಾನವಾದ ಕೂಡಲೇ ಎಲ್ಲ ಬಣ್ಣ ಬದಲಾಗಿ ಬೇರೊಂದು ಪಾತ್ರದ ಸಿದ್ಧತೆಗೆ ತೊಡಗುತ್ತಾರೆ.

"ಮುತ್ತೈದೆ" ನಿಧಾನವಾಗಿ ಬಿಚ್ಚಿಕೊಳ್ಳುವ ಕಥೆ. ಡಾ|| ಸುರೇಶ್ ಹಳೆ ಪಳೆಯುಳಿಕೆ ಕಟ್ಟಡಗಳ ಅಸಮಾನ್ಯ ರಚನೆ, ಭದ್ರತೆ ಭವ್ಯತೆಗಳನ್ನು ಮೆಚ್ಚಿಕೊಳ್ಳುತ್ತ ತನ್ನಜ್ಜಿ ದೇವೀರಮ್ಮನನ್ನು ಜ್ಞಾಪಿಸಿಕೊಳ್ಳುತ್ತಾನೆ. ಆಕೆಗೆ ಆರಾಮವಿಲ್ಲವೆಂಬ ಸಂಗತಿ ಎರಡು ತಿಂಗಳು ಹಳೆಯದು. ಮುತ್ತೈದೆಯಾಗಿ ಸಾಯಬೇಕೆಂಬುದು ಅವಳ ಹಟ. ಹೆಣವಾದಾಗಲೂ 'ಹಸಿರು ಬಳೆ ಕೆಂಪು ಕುಂಕುಮ ಗಲ್ಲದ ತುಂಬ ಅರಿಶಿಣ ಈ ಸಾಮಾಗ್ರಿಗಳೇ ತನಗೆ ಸ್ವರ್ಗಕ್ಕೆ ಸೋಪಾನ ತೋರಿಸಬಲ್ಲವೆಂಬ ಮೂಢನಂಬಿಕೆ' ಆಕೆಯದು. ಅಜ್ಜಿಯ ಈ ಅಭಿಲಾಷೆಯನ್ನು ಬಿಡಿಸಿ ಗುಣಪಡಿಸಬೇಕೆಂದು ಡಾಕ್ಟರ ಮೊಮ್ಮಗನ ಸಂಕಲ್ಪ. ಅಜ್ಜ "ಬೆಂಕಿಸ್ವಾಮಿ"! ಹಿಂದೊಮ್ಮೆ ಅಜ್ಜನಿಗಾಗದ ಅಭಿಪ್ರಾಯ ಹೇಳಿದ್ದಕ್ಕೆ ಅಜ್ಜ ಹೊಡೆದು ಅವಳ ಮೈಮೇಲಾದ ಗಾಯಗಳು ಮಾಯಲಿಕ್ಕೆ ಒಂದೂವರೆ ತಿಂಗಳು ಹಿಡಿದಿತ್ತು. ಅದಕ್ಕೆ ಅಜ್ಜನ ಜೊತೆಗಿರುವುದೆಂದರೆ ಏಳುಹೆಡೆ ಸರ್ಪದ ಜೊತೆಗಿದ್ದಂತೆ ಎಂದು ದೇವೀರಮ್ಮ ಹೇಳಿದ್ದನ್ನು ಮೊಮ್ಮಗ ಜ್ಞಾಪಿಸಿಕೊಂಡು ಅಂಥವಳನ್ನು ಸಾವಿನಿಂದ ಪಾರುಮಾಡುವುದು ಹ್ಯಾಗೆಂದು ಚಿಂತೆ ಮಾಡುತ್ತಾ ಬರುತ್ತಾನೆ. ಬಂದು ನೋಡಿದರೆ ಅವನ ಕಲ್ಪನೆ ತಲೆಕೆಳಗಾಗಿದೆ. "ಏನಾರ ಮಾಡಿ ನನ್ನನ್ನು ಆರಾಮ ಮಾಡು ನಾ ಜೀವಂತ ಇದ್ದಾಗಲೇ ಅವರು ಕಣ್ಣು ಮುಚ್ಚಲಿ" ಎಂದಾಡಿದ ಅಜ್ಜಿಯ ಮಾತು ಕೇಳಿ ಬೆರಗಾಗುತ್ತಾನೆ. ಕಥೆ ಇದ್ದಕ್ಕಿದ್ದಂತೆ ಲಘು ಹಾಸ್ಯಕ್ಕೆ ತಿರುಗಿತೇ ಎಂದು ಅನುಮಾನ ಬರುವಷ್ಟರಲ್ಲಿ ಗೊತ್ತಾಗುತ್ತದೆ. ಬೆಂಕಿಯಂಥ ಅಸಹಕಾರೀ ಗಂಡ (ಅಜ್ಜ) ಹಾಸಿಗೆ ಹಿಡಿದಾಗ ಅವನ ಸೇವೆಗೆ ಯಾವ ಆಳೂ ತಯಾರಿರಲಿಲ್ಲ. ಆಗಲೇ ಅಜ್ಜಿ ನಿರ್ಧರಿಸಿದ್ದಳು. ತಾನು ಜೀವಂತವಾಗಿರದಿದ್ದರೆ ಇವರ ಹೆಣವೂ ಅನಾಥವಾಗಿ ಬಿಡಬಹುದು ಎಂದು. ಆದ್ದರಿಂದ ತಾನು ಬದುಕಲೇಬೇಕು. ಕಥೆ ಓದಿ ಮುಗಿಸಿದಾಗ ಅಜ್ಜಿಯ ಬಗೆಗಿನ ನಮ್ಮ ಗೌರವ ಇಮ್ಮಡಿಯಾಗುತ್ತದೆ. ಮಂದಹಾಸದೊಂದಿಗೆ ಕಥಾರಂಭದ ಪಳೆಯುಳಿಕೆಗಳ ನೆನಪಾಗುತ್ತದೆ. ಕಥೆ ಎಲ್ಲೂ ಆಡಂಬರ ಮಾಡದೆ ಮೌನವೇ ಅನುಭವವಾಗುವ ಈ ಪರಿ ಬಳಿಗಾರರಿಗೇ ವಿಶಿಷ್ಟವಾದುದು.

ಸಂಕಲನದ ಎಲ್ಲ ಕಥೆಗಳೂ ನನಗೆ ಸಮಾನವಾಗಿ ಇಷ್ಟವಾದವೆಂತಲ್ಲ. ಪೃಥ್ವಿಯ ಮೇಲೊಂದು ಮರಡಿ, ಘಾತ ಇವು ತೆಳುವಾದ ಅನುಭವ ನೀಡಿ ತಮ್ಮಷ್ಟಕ್ಕೆ ಹಿಂದೆ ಸರಿವ ಕಥೆಗಳು. ಹಾಗೆಂದು ಇವುಗಳನ್ನು ಲಘುವಾಗಿ ಪರಿಗಣಿಸಬೇಕೆಂದು ಅಲ್ಲ. ಜಾತಿವಂತ ಸಂಗೀತಗಾರನೆಂದೂ ಅಪಸ್ವರ ಎತ್ತಲಾರ ಅಲ್ಲವೆ? ಈ ಕಥೆಗಳ ಹಿಂದೆಯೂ ಬದುಕಿನ ನಿಗೂಢಗಳನ್ನು ಕಾಂಬ ಹಂಬಲದಿಂದ ಮಿಡಿವ ಒಂದು ಸುಸಂಸ್ಕೃತ ಮನಸ್ಸು ಕ್ರಿಯಾಶೀಲವಾಗಿರುವುದನ್ನು ಬದುಕಿನ ಗಾಢ ಕತ್ತಲೆಗಳನ್ನು ಎದುರಿಸಿ ನೋಡುವ ಉತ್ಸಾಹದ ಧೈರ್ಯ ಕಾಣುತ್ತದೆ.

ಅಣ್ಣಯ್ಯನ ಹೆಣ ಅಮೆರಿಕದಿಂದ ಬರುವ ಸುದ್ದಿಯಿಂದ ಆರಂಭವಾಗುವ "ಸಾವು ಬದುಕು ನಿರಂತರ" (ಬದುಕು ಮಾಯೆಯ ಮಾಟ) ಒಂದು ಮಹತ್ವಾಕಾಂಕ್ಷೆಯ ಕಥೆ. ಹೆಣ ಬರುವ ತನಕ ಕಾಯುತ್ತ ಕಾಲವನ್ನನುಭವಿಸುವ ಗೋಳು ಒಂದಾದರೆ, ಬಂದ ಮೇಲೆ ಅಣ್ಣಯ್ಯನ ಹೆಣ ಎದುರಿಗಿಟ್ಟುಕೊಂಡು ಬದುಕಿದ್ದಾಗ ಅವನೊಂದಿಗಿನ ಸಂಬಂಧಗಳನ್ನು ಜ್ಞಾಪಿಸಿಕೊಳ್ಳುತ್ತ ಸಾವು ಬದುಕುಗಳು ಕೈ ಕೈ ಹೆಣೆದ ಪರಿಗೆ ಬೆರಗಾಗುತ್ತ ಸಾವಿನ ಮೀಮಾಂಸೆಗೆ ಬಂದು ತಲುಪುವುದಿನ್ನೊಂದು. ಅಣ್ಣಯ್ಯನಿಗೆ ಸಾವು ಅನುಭವವಿಲ್ಲ. ಯಾಕೆಂದರೆ ಆತ ಆಗಲೇ ಸತ್ತಿದ್ದಾನೆ. ಆದರೆ ಅದರ

ಮೀಮಾಂಸೆಗೆ ತೊಡಗಿದ ಪ್ರಭುದೇವನಿಗೆ ಅದು ಅನುಭವವಾಗಿ ಅಣ್ಣಯ್ಯನ ಸಾವನ್ನು ಇವನೂ ಸತ್ತು, ಪ್ರಭುದೇವನಾದುದರಿಂದ ಆ ಅನುಭವಕ್ಕೆ ಸಾಕ್ಷಿಯಾಗುತ್ತಾನೆ. ರಾತ್ರಿ ಕನಸಿನಲ್ಲಿ ತಾನು ಸತ್ತು ಸಾವಿನ ಮೆರವಣಿಗೆಯಲ್ಲಿ ತಾನೂ ಭಾಗಿಯಾಗಿ ಹೆಣವೂ ಹೆಣಕ್ಕೆ ಸಾಕ್ಷಿಯೂ ಆಗಿ ಏಕಕಾಲದಲ್ಲಿ ಎರಡು ಪಾತ್ರಗಳನ್ನು ಅಭಿನಯಿಸುತ್ತಾನೆ. ಸಾವಿನ ಇಂಥ ಭಯಾನಕ ದರ್ಶನದಲ್ಲಿಯೇ ಕಥೆ ಮುಗಿಯಿತೆಂದಾಗ ಗೋರಿಯಿಂದ ಚಿಮ್ಮುವ ಹಸಿರಿನ ಹಾಗೆ ಚುನಾವಣೆಯ ಬಾಜಾಬಜಂತ್ರಿ ಊರನ್ನೂ ಸಾವು ತುಂಬಿದ ನಮ್ಮ ಮನಸ್ಸನ್ನೂ ಆಕ್ರಮಿಸಿ ಸಂಭ್ರಮಿಸುತ್ತದೆ. ಓದಿ ಮುಗಿಸಿದ ಮೇಲೂ ಕಥೆ ಹಿಂದೆ ಮುಂದೆ ಸರಿಯುತ್ತ ಭಯಾನಕವಾದ ಹಾಗೆಯೇ ಸಡಗರದ ದೃಶ್ಯಗಳಿಗೆ ಅರ್ಥದ ಪದರುಗಳನ್ನು ಕಟ್ಟಿಕೊಡುತ್ತ ಬೆಳೆಯುತ್ತದೆ. ಕನ್ನಡದ ಶ್ರೇಷ್ಠ ಕಥೆಗಳಲ್ಲಿ “ಸಾವು ಬದುಕು ನಿರಂತರ” ಮತ್ತು “ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ” - ಕಥೆಗಳು ನಿಲ್ಲುತ್ತವೆಂದು ನಂಬಿದ್ದೇನೆ.

ಮನು ಬಳಿಗಾರ್ ಅವರ ಕಥೆಗಳು ನನಗೆ ಇಷ್ಟವಾದ ಬಗೆಯನ್ನು ಅವು ನನಗೆ ನೀಡಿದ ಅನುಭವದ ಪುಟ್ಟ ವಿಶ್ಲೇಷಣೆ ಸಮೇತ ವಿವರಿಸಿದ್ದೇನೆ. ನನ್ನ ಹಾಗೇ ಇವರೂ ಹಳ್ಳಿಯವರು. ನನ್ನ ಪಕ್ಕದ ಜಿಲ್ಲೆಯವರು, ನಮ್ಮಿಬ್ಬರ ಭಾವಪ್ರಪಂಚ ಭಿನ್ನವಾದದ್ದಲ್ಲ. ಇಂಥ ಒಬ್ಬ ಮಿತ್ರ ಆಗಲೇ ಕನ್ನಡದ ಕಥಾ ಪ್ರಪಂಚಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಬದುಕನ್ನು ಅದರೆಲ್ಲ ಗಾಂಭೀರ್ಯ ಮತ್ತು ಹೊಳಹುಗಳೊಂದಿಗೆ ನೋಡಿ ಬೆಚ್ಚನೆಯ ಭಾವನೆಗಳಿಂದ ಅಂದಗೆಡದಂತೆ ಹಿಡಿದ ಕಥೆ ಕಟ್ಟಿ ತೋರಿಸುವ ಶ್ರೇಷ್ಠ ಕಲೆ ಮತ್ತು ಶೈಲಿ ಮಾತ್ರ ಕೇವಲ ಅವರದ್ದೇ, ಅವರೊಬ್ಬರದೇ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತ ಅವರಿಂದ ಇನ್ನೂ ಇಂತಹ ಉತ್ತಮ ಕಥೆಗಳು ಬರಲಿ, ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಲು ಎಂದು ಹಾರೈಸುತ್ತೇನೆ.

ನವೆಂಬರ್ 2002 **- ಡಾ. ಚಂದ್ರಶೇಖರ ಕಂಬಾರ**

## ಪ್ರೊ. ಕೀರ್ತಿನಾಥ ಕುರ್ತಕೋಟಿಯವರ ಅಭಿಪ್ರಾಯ

ಮನು ಬಳಿಗಾರ್ ಅವರ ಈ ಸಂಕಲನದ ಮೊದಲ ಕತೆಯಾಗಿರುವ ‘ದೇವಳ್ಳಿ ಹೋರಿಯಕತೆ' ಒಂದು ದೃಷ್ಟಿಯಿಂದ ಬಳಿಗಾರರ ಕಥನತಂತ್ರದ ಜೀವಾಳವನ್ನು ಬಯಲಿಗೆಳೆಯುವ ಕತೆಯಾಗಿದೆ. ನಮ್ಮ ಜಾನಪದ ಜೀವನದ ವಾಸ್ತವ ಚಿತ್ರವಾಗಿದೆಯೆಂಬುದೊಂದೇ ಅದರ ಹೆಗ್ಗಳಿಕೆಯಲ್ಲ. ಕುಮಾರವ್ಯಾಸನ ಕಥಾಪ್ರಸಂಗಗಳನ್ನು ನೆನಪಿಗೆ ತಂದುಕೊಡುವ ಕಥನಶೈಲಿಯೊಂದೇ ಅದರ ವೈಶಿಷ್ಟ್ಯವಲ್ಲ. ಕುಸ್ತಿಯ ಪ್ರಸಂಗ ಈ ಕತೆಯ ವಸ್ತುವಾಗಿದ್ದು ಅದೇ ಅದರ ತಂತ್ರವೂ ಆಗಿದೆ. ಕುಸ್ತಿಯೆಂದರೆ ಅದೊಂದು ನಮ್ಮ ದೊಡ್ಡಾಟಗಳಂತೆ ದೃಶ್ಯವೈಭವದಿಂದ ಕೂಡಿದ್ದಾಗಿದೆ. ಕುಸ್ತಿಯಲ್ಲಿ ಮುಖ್ಯವಾಗಿರುವುದು ಎದುರಾಳಿಗಳ ಡಾವು ಪೇಚುಗಳಲ್ಲ. ಆಡುವವರ ಅಂಗಸೌಷ್ಠವವಲ್ಲ. ಆದರೆ ನಿರ್ಣಾಯಕರು ನೀಡುವ ನ್ಯಾಯ, ಕುಸ್ತಿಯಾಡುವವರ ಅದ್ಭುತವಾದ ಅಂಗಚೇಷ್ಟಗಳೆಲ್ಲ ‘ದೃಶ್ಯ'ವಾಗಿ ನ್ಯಾಯಸಮ್ಮತವಾಗಿರಬೇಕು. ಕತೆಗಳಲ್ಲಿಯೂ ಮುಖ್ಯವಾಗಿರುವುದು ಇದೇ ನ್ಯಾಯ.

ಈ ತಂತ್ರಗಾರಿಕೆಯನ್ನು ಅನುಸರಿಸಿಯೂ ಬಳಿಗಾರ್‌ರವರ ಕತೆಗಳು ಆಧುನಿಕವಾಗುತ್ತವೆ. ‘ಮುತ್ತೆದೆ' ಕಥೆಯ ದೇವೀರಮ್ಮ ಮೊದಲಾದವರನ್ನು ಆಧುನಿಕ ಸುರೇಶರು ಹೇಗೆ ಎದುರಿಸುತ್ತಾರೆಂಬುದೇ ಇಲ್ಲಿಯ ಚಿಂತೆ. ‘ಆಶ್ರಯ' ಕತೆಯ ವಸಂತ್ ಕುಮಾರ್ ಕುಸ್ತಿಯ ನ್ಯಾಯನೀತಿಗಳಿಗೆ ವಿರುದ್ಧವಾದ ಆಧುನಿಕತೆಯನ್ನು ರೂಢಿಸಿಕೊಂಡಿರುವುದೇ ಕಥಾನಾಯಕನ ಸಂಕಟಕ್ಕೆ ಕಾರಣ......

ಬಳಿಗಾರ್‌ರವರ ಶೈಲಿ, ಅವರು ಭಾಷೆಯನ್ನು ದುಡಿಸಿಕೊಳ್ಳುವ ರೀತಿಗೆ ನೂರಾರು ವರ್ಷಗಳ ಸಂಸ್ಕಾರವಿದೆ.

## ಮರು ಮುದ್ರಣಕ್ಕೆ ಮಾತೆರಡು

ಜಾಗತೀಕರಣ ಹಾಗೂ ಆಂಗ್ಲೀಕರಣಗಳ ಅಬ್ಬರದ ಗಾಳಿಯಲ್ಲಿ ದೇಸಿ ಭಾಷೆಗಳು ನಲುಗಿ ಹೋಗಿ ಕನ್ನಡ ಓದುಗರು ಅಷ್ಟೇ ಏಕೆ, ಮಾತನಾಡುವವರೆ ಕಡಿಮೆಯಾದ ಸಂದರ್ಭದಲ್ಲಿ ಕನ್ನಡ ಕಥಾ ಸಂಕಲನವೊಂದು ದ್ವಿತೀಯ ಮುದ್ರಣ ಕಾಣುತ್ತಿರುವುದು ತುಸು ಚೇತೋಹಾರಿ ಸಂಗತಿ. ಈ ಕೊಂಚ ನೆಮ್ಮದಿ ಹಾಗೂ ಕಿಂಚಿತ್ತು ಹೆಮ್ಮೆಯಿಂದ 'ನನ್ನ ಕೆಲವು ಕತೆಗಳು' ಕೇವಲ ಐದು ವರ್ಷಗಳಲ್ಲಿ ಮರುಮುದ್ರಣವಾಗಿ ತಮ್ಮ ಕೈ ಸೇರುತ್ತಿದೆ. ಎಲ್ಲ ಪ್ರತಿಗಳು ಮುಗಿದು ಹೋಗಿ ಮೂರು ವರ್ಷಗಳೇ ಆಗಿತ್ತು, ಅದು ಬೇರೆ ಮಾತು. ವಿಚಿತ್ರವೆಂದರೆ ನನ್ನ ಆಯ್ದ ಕತೆಗಳ ಈ ಸಂಕಲನದ ಮೊದಲ ಆವೃತ್ತಿ (2005) ಹೊರ ಬಿದ್ದಾಗಿನಿಂದಲೂ ನನಗೆ ಮತ್ತೆ ಒಂದೇ ಒಂದು ಹೊಸ ಕತೆಯನ್ನು ಬರೆಯಲು ಸಾಧ್ಯವಾಗಿಲ್ಲ. ಈ ನೋವು ಎಂದು 'ಹೆರಿಗೆಬೇನೆ'ಯಾಗಿ ಪರಿವರ್ತನೆಯಾಗುತ್ತೊ ನನಗೇ ತಿಳಿಯದಾಗಿದೆ. ಇಂತಹ ಸಂಕೀರ್ಣ ಭಾವನೆಯೊಂದಿಗೇನೆ ಇದರ ಮುರುಮುದ್ರಿತ ಪ್ರತಿ ಈಗ ಪ್ರಕಾಶನಗೊಳ್ಳುತ್ತಿದೆ. ಕತೆಗಳನ್ನು ಬರೆಯುವುದು ಯಾಕೆ ನಿಲ್ಲಿಸಿದ್ದೀರಿ? ಎಂಬ ಆಪ್ತರ ಪ್ರಶ್ನೆಗೆ ಉತ್ತರಿಸಲು ಇನ್ನೊಂದಿಷ್ಟು ಸಮಯಬೇಕು ಎಂದು ಕ್ಷಮೆ ಕೋರುತ್ತ ಹಳೆಯದನ್ನೇ ಹೊಸ ಹಾಳೆಗಳ ಮೇಲೆ ಹಾಕುತ್ತಿದ್ದೇನೆ.

ಹಿಂದಿನಂತೆಯೆ ಈ ಮರುಮುದ್ರಣವನ್ನು ಕೂಡ ವಿನಾಯಕ ಆಫ್‌ಸೆಟ್ ಮಾಲೀಕರಾದ ಶ್ರೀ ಮಹಿಮಯ್ಯನವರು ಸುಂದರವಾಗಿ ನಿರ್ವಹಿಸಿದ್ದಾರೆ. ಅವರಿಗೆ, ಅವರ ಮಗನಿಗೆ ಮತ್ತು ಅವರ ಮುದ್ರಣ ಕಛೇರಿ ಸಿಬ್ಬಂದಿಗೆ ನನ್ನ ನೆನಕೆಗಳು. ಹಾಗೆಯೇ ಕನ್ನಡ ಓದುಗರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಬೆಂಗಳೂರು — ಮನು ಬಳಿಗಾರ್

27.06.2010

## ಡಾ. ಮನು ಬಳಿಗಾರ್ ಅವರ ಆಯ್ದ ಕತೆಗಳು

# ವಂಚಿತ

ಆಕಾಶದಲ್ಲಿ ಕಪ್ಪು ಮೋಡಗಳು ಒಂದರ ಹಿಂದೆ ಇನ್ನೊಂದರಂತೆ ಬೆನ್ನು ಹತ್ತಿ ಸರಸ ಸಲ್ಲಾಪವಾಡುತ್ತಿದ್ದವು. ತುಸು ಗಾಳಿ ಹೆಚ್ಚಾದಾಗ ಅವು ಒಂದರಲ್ಲೊಂದು ಬೆರೆಯತೊಡಗಿದವು. ಈ ಮಿಲನ ಗಾಢವಾದಾಗ ನೆತ್ತಿಮೇಲಿನ ನೇಸರನ ಕಿರಣಗಳೂ ಸಹ ಭೂಮಿಗೆ ತಲುಪದಾದವು. ನಡುಹಗಲು ರಾತ್ರಿಯ ರೂಪ ತಾಳುತ್ತ, ಬಾನೊಳಗಿನ ಆ ಮೈಥುನಕ್ಕೆ ಅನುಕೂಲ ಮಾಡಿಕೊಡುತ್ತಿತ್ತು. ಮಳೆರಾಜನಿಗಾಗಿ ಎದುರು ನೋಡುತ್ತಿದ್ದ ಸಸ್ಯಶಾಮಲೆಯ ವಿರಹಾಕಾಂಕ್ಷೆಯು ಬಲವಾಗತೊಡಗಿತು. ಭೂದೇವಿಯ ಬಿರುಕುಗಳು ಚಣದಲ್ಲಿಯೇ ಹೊಯ್ಯಲಿರುವ ಹನಿಹನಿಗಳಿಗಾಗಿ ವಿಸ್ತಾರಗೊಳ್ಳತೊಡಗಿದವು. ಪ್ರಾಣಿ ಪಕ್ಷಿಗಳು ಈ ಅನಿರೀಕ್ಷಿತ ಕಡುನೆರಳಿನಿಂದ ಬಿಸಿಲಿನ ತಾಪ ಮರೆತು ಚೆನ್ನಾಟವಾಡುತ್ತ ಬರಲಿರುವ ಮಳೆಗಾಗಿ ಎದುರು ನೋಡತೊಡಗಿದವು. ರಸ್ತೆಯ ಅಕ್ಕಪಕ್ಕದಲ್ಲಿ ಬಿದ್ದ ತರಗಲೆಗಳು ಸುಳಿಗಾಳಿಯಲ್ಲಿ ತೇಲುತ್ತ, ಮಳೆರಾಯನ ಬರುವಿಗಾಗಿ ಜಾಗ ಖಾಲಿ ಮಾಡಿ, ಸ್ವಚ್ಛ ಅಂಗಳದ ಕೆಂಪುಮಣ್ಣಿನ ರತ್ನಗಂಬಳಿ ಹಾಸಿದವು.

ಮೋಡಗಳ ಮಿಲನ, ಕೆಳಗೆ ಕಾಯುತ್ತಿರುವ ಬಿರುಕುಗಳ ವಿರಹದ ಆಹ್ವಾನ, ನೋಡನೋಡುವಷ್ಟರಲ್ಲಿ ಇಡೀ ಬಾನನ್ನೇ ಆರ್ದ್ರವಗೊಳಿಸಿಬಿಟ್ಟಿತು. ಮಳೆ ನೀರಿನಿಂದ ಮುಖ ತೊಳೆದ ಗಿಡಮರಗಳು ತೂಗ್ಯಾಡಿ ತಲೆಯಾಡಿಸುತ್ತ ತಮ್ಮ ಖುಷಿಯನ್ನು ವ್ಯಕ್ತಪಡಿಸತೊಡಗಿದರೆ, ಕಾಯ್ದ ನೆಲ ನೀರಿನ ತಂಪನ್ನು ತನ್ನೊಳಗೆ ಹೊಗಿಸಿಕೊಂಡು ಸಂತೃಪ್ತಿಯ ಆವಿಯನ್ನು ಚಿಮ್ಮತೊಡಗಿತು.

ಪ್ರತಿ ವರ್ಷವೂ ಹೀಗೆ ಪ್ರಥಮ ಮುಂಗಾರಿನ ಮಳೆಯಿಂದ ಹೊರಹೊರಡುವ ಭೂಮಿಯ ಬೆದೆಯ ಸಂತೃಪ್ತಿಯ ಆವಿಯನ್ನು 'ಮಣ್ಣಿನ ವಾಸನೆ' ಎಂದು ಬಣ್ಣಿಸುತ್ತಲೇ ಪುಲಕಗೊಳ್ಳುತ್ತಿದ್ದ ಮಡ್ಡೆಪ್ಪನು, ಇಂದು ಇದಾವುದರ ಪರಿವೆಯಿಲ್ಲದೇ ತನ್ನ ಕೋಣೆಯ ಕತ್ತಲಲ್ಲಿ ಕುಳಿತು ಕಿಡಕಿಯಿಂದ ಹೊರಗೆ ಶೂನ್ಯದೆಡೆ ದೃಷ್ಟಿಯನ್ನು ನೆಟ್ಟು ತದೇಕಚಿತ್ತದಲ್ಲಿದ್ದಾನೆ. ಎದುರಿಗೆ ಇಟ್ಟುಕೊಂಡ ಎರಡು ಪೂಟು ಎತ್ತರದ ರೋಜ್‌ವುಡ್‌ನಲ್ಲಿ ತಯಾರಿಸಿದ ಆನೆಯ ಮೂರ್ತಿಯೊಂದರ ಮೇಲೆ ಬಲಗೈ ಹಾಕಿ ಅಪ್ಪಿಕೊಂಡಿದ್ದಾನೆ. ಆಗೊಮ್ಮೆ ಈಗೊಮ್ಮೆ ದೃಷ್ಟಿಯನ್ನು ಮಾತ್ರ ಕದಲಿಸದೆ ಆನೆಯನ್ನು ತನ್ನ ತುಟಿಗಳಿಂದ ಮೃದುವಾಗಿ ಮುತ್ತಿಡುತ್ತಿದ್ದಾನೆ.

ಲಕ್ಷ್ಮೇಶ್ವರದ ಕಿರಿಯ ಕಾಲೇಜೊಂದರಲ್ಲಿ ಪಾಠ ಹೇಳುತ್ತಿದ್ದ ಮಡ್ಡೆಪ್ಪನ ಪೂರ್ತಿ ಹೆಸರು ಮಡ್ಡೆಪ್ಪ ದುರಗಪ್ಪ ಕೊಂಪಿ. ಆತನ ಪೂರ್ತಿ ಹೆಸರು ನಮೂದಿಸಲಿಕ್ಕೆ ಕಾರಣವಿಲ್ಲದೆಯಿಲ್ಲ. ಅದರ ಬಗ್ಗೆ ಆತನಿಗೆ ಅಪಾರ ದ್ವೇಷ ಹಾಗೂ ತಿರಸ್ಕಾರ. ಇದಕ್ಕಾಗಿ ಆತ ಎಷ್ಟು ನೊಂದಿದ್ದಾನೆಂದು ಹೇಳುವುದು ಬಲು ಕಷ್ಟ. ಪ್ರತಿದಿನ ಪ್ರತಿಸಾರಿ ಆ ಹೆಸರು ಹಿಡಿದು ಕರೆದಾಗೊಮ್ಮೆ ಆತನ ಮನಸ್ಸಿಗೆ ಸೂಜಿ ಚುಚ್ಚಿದಂತಾಗುತ್ತದೆ. ವೇಗವಾಗಿ ಹೊರಟ ದಿನದ ಉತ್ಸಾಹದ ನಿಬ್ಬಣ ಅರ್ಧಕ್ಕೆ ಮುಗಿದಷ್ಟು ನೋವಾಗಿ ವಿಚಿತ್ರ ದಳ್ಳುರಿ ಅನುಭವಿಸುತ್ತಾನೆ. ಕೆಲಸಾರೆ ಕ್ಲಾಸಿನಲ್ಲಿಯ ಕಿಡಗೇಡಿ ಹುಡುಗರು ಈ ಹೆಸರು ಹಿಡಿದು ಹುಡುಗಾಟವಾಡುತ್ತಾರೆ. ಒಮ್ಮೆಯಂತೂ 'ಹುಲ್ಲುಮಡ್ಡಿ ಹಾಳುಕೊಂಪೆ' ಎಂದು ಪಾಠದ ಕಪ್ಪು ಹಲಗೆ ಮೇಲೆ ಬರೆದಿದ್ದನ್ನು ಓದಿ, ಭಾರ ಮನಸ್ಸಿನಿಂದ ಪಾಠ ಸುರುಮಾಡಿ ಅರ್ಧದಲ್ಲೇ ಮನೆಗೆ ಬಂದುಬಿಟ್ಟಿದ್ದ. ಹೆಸರು ಬದಲಾವಣೆಗಾಗಿ ಯೋಚಿಸಿ, ಆ ಬಗ್ಗೆ ವಿಚಾರಿಸಿದಾಗ, ಇದಕ್ಕಾಗಿ ಅಫಿಡೆವಿಟ್ ಮಾಡಬೇಕು, ಸ್ಥಳೀಯ ಪತ್ರಿಕೆಗಳಲ್ಲಿ ಪ್ರಸಿದ್ಧಿಸಬೇಕು ಇತ್ಯಾದಿಗಳು ಗೊತ್ತಾಗಿ, ಅದು ಮತ್ತೊಂದು ಅಪಹಾಸ್ಯವಾದೀತೆಂದು ಕೈಬಿಟ್ಟಿದ್ದ.

ಸೂಕ್ಷ್ಮಮತಿಗಳಾದವರಿಗೆ ಜೀವನ ಮುಳ್ಳಿನ ಹಾಸಿಗೆಯಾಗಿರುತ್ತದೆಂಬಂತೆ, ಮಡ್ಡೆಪ್ಪನಂತಹ ಅತೀಸೂಕ್ಷ್ಮ ಜೀವಿಗಳಿಗೆ ಸಣ್ಣಪುಟ್ಟ ಅಡೆತಡೆಗಳೂ ಆಘಾತವನ್ನುಂಟು ಮಾಡಬಲ್ಲವಾಗಿದ್ದವು.

ಖಡ್‌ಖಡಲ್ ಖಡ್ ಖಡಲ್ ಆಕಾಶ ಹರಿಯುವಂತೆ ಭೂಮಿ ಬೆದರುವಂತೆ ಗುಡುಗು ಸಿಡಿಲುಗಳ ಆರ್ಭಟ ನಡೆದೇಯಿತ್ತು. ಧೋದೋ ಎಂದು ಸುರಿಯುತ್ತ, ಈಗ ಮಳೆರಾಯನ ಸರದಿ ತನಗಾಗಿ ಕೆಳಗೆ ಕಾಯುತ್ತಿರುವವರನ್ನು ಸಂತೈಸುವ ಅವಸರ, ಉಭಯರನ್ನೂ ತೃಪ್ತಿಗೊಳಿಸಿಕೊಳ್ಳುವ ಪರಿ.

ಚೊಚ್ಚಲು ಮಕ್ಕಳಿಗೆ ಸಿಡಿಲು ಬಡಿಯದಿರಲೆಂದು ಕಬ್ಬಿಣದ ಕುಡ, ಕೂರಿಗೆಯ ತಾಳುಗಳನ್ನು ಜನ ಅಂಗಳಕ್ಕೆ ಒಗೆಯತೊಡಗಿದರು. 'ಗುಡ್ಡಾ ಗುಡ್ಡಾ ಸ್ಥಾವರಲಿಂಗ ಅವಕೆ ಅಭ್ಯಂಗ, ಎರಿತಾವನ್ನೊಹಂಗ ಕೂಡ್ಯಾವನೋಡ ಸುತ್ತೆಲ್ಲ ಮೋಡ ಮೋಡ' ಎಂಬ ಬೇಂದ್ರೆ ಕವಿವಾಣಿಯನ್ನು ನೆನೆದು ಮುಂಗಾರಿ ಮಳೆಯ ಮೇಲೆಯೇ ತಾನೂ ಒಂದು ಕವನ ಬರೆದಿದ್ದ ಮಡ್ಡೆಪ್ಪ ಈಗ ನಿಷ್ಕ್ರಿಯನಾಗಿ ಕಲ್ಲುಬಂಡೆಯಂತೆ ಕುಳಿತುಬಿಟ್ಟಿದ್ದಾನೆ.

ಲಕ್ಷ್ಮೇಶ್ವರದಂತಹ ಸಣ್ಣ ಪಟ್ಟಣದಲ್ಲಿ ಸುದ್ದಿ ಹರಡಲು ವೇಳೆ ಬೇಕೆ? ಎರಡು ದಿನದಿಂದ ಕಾಲೇಜಿಗೆ ಬರದೇ ಗರಬಡಿದಂತೆ ಕುಳಿತ ಮಡ್ಡೆಪ್ಪನಿಗೆ, ಗಾಳಿಯ ಶಕವೆಂದು ಕೆಲವರೆಂದರೆ, ಇನ್ನೂ ಕೆಲವರು ಮತಿಭ್ರಮಣೆಯೇ ಎಂದು ನಿರ್ಣಯಿಸಿಬಿಟ್ಟಿದ್ದರು. ದೂಧಪೀರಾನ ದರ್ಗಾಕ್ಕೆ ಒಯ್ಯಬೇಕು. ಆಗಸ್ತ್ಯತೀರ್ಥದ ನೀರಿನಲ್ಲಿ ಸ್ನಾನ ಮಾಡಿಸಬೇಕು. ಮುಕ್ತಿಮಂದಿರಕ್ಕೆ ಒಯ್ದು ಅಜ್ಜನ ಗದ್ದಿಗೆಗೆ ಐದು ಸುತ್ತು ಹಾಕಿಸಬೇಕು ಇತ್ಯಾದಿ ಅಭಿಪ್ರಾಯಗಳು ವ್ಯಕ್ತವಾಗುತ್ತಿದ್ದವು.

ಅದರಲ್ಲಿಯೇ ಸ್ವಲ್ಪ ಸುಧಾರಿಸಿದವರಂತೂ "ಇದು ಮೆಂಟಲ್ ಕೇಸ್, ಧಾರವಾಡಕ್ಕೇ ಸಾಗಿಸಬೇಕು" ಎಂದೆನ್ನತೊಡಗಿದ್ದರು.

ತನ್ನ ಆರ್ಭಟದ ಸ್ಖಲನವನ್ನು ಪೂರ್ತಿಗೊಳಿಸಿಕೊಂಡ ಮಳೆ ನಿಲ್ಲುತ್ತಲೇ ಆಕಾಶ ಬೆಳ್ಳಗಾಗಿ ನವೋತ್ಸಾಹ ಬೀರತೊಡಗಿತು. ನೆಲವನ್ನಾವರಿಸಿದ ನೆರಳು ದೂರಾಗಿ ಶುಭ್ರತೆ ನೆಲೆಸಿತು. ಮನೆಯೊಳಗಿನ ಕತ್ತಲು ಮರೆಯಾಗಿ ಸೂರ್ಯಕಿರಣಗಳ ಪ್ರವೇಶವಾಯಿತು. ಎಲ್ಲೆಡೆ ಇಷ್ಟೆಲ್ಲ ಬೆಳಕು ಪಸರಿಸಿದರೂ ಮುದ್ದೆಪ್ಪನ ಮನಸ್ಸು ಮಾತ್ರ ಅಂಧಃಕಾರಮಯವಾಗಿಯೇ ಇತ್ತು. ಆತ ಇಷ್ಟೊಂದು ನಿಷ್ಕ್ರಿಯನಾಗಿ ಎಂದೂ ಕುಳಿತದ್ದೇಯಿಲ್ಲ. ಮಹಾಮಹತ್ವಾಕಾಂಕ್ಷಿ, ಹುಟ್ಟಿದ್ದೊಂದು ಮುರುಕು ಮನೆಯಲ್ಲಾದರೂ ಅರಮನೆಯನ್ನೇ ಆಳಬೇಕೆಂದು ಅಂದುಕೊಂಡವ. ನೂರಾರು ಕನಸುಗಳ ಚಿತ್ರ ಬರೆದು ಆಶೆಗಳ ಗೋಪುರ ಕಟ್ಟಿ ಭಾರೀ ಶ್ರಮದಿಂದ ಅವುಗಳಿಗೆ ಬಣ್ಣ ಹಾಕಲು ಪ್ರಯತ್ನಿಸಿದವ. ತನ್ನತನದ ಛಾಪು ಎದ್ದು ಕಾಣುವಂತೆ ಸದಾ ಜಾಗರೂಕನಾಗಿರುವವ.

ಲಕ್ಷ್ಮೇಶ್ವರದಿಂದ ಪೂರ್ವಕ್ಕಿರುವ ಬರಗಾಲ ಹಳ್ಳಿ ಹಿಂದುಳಿದ ಬಡಕುಟುಂಬವೊಂದರಲ್ಲಿ ಮುದ್ದೆಪ್ಪನ ಜನನ. ತಂದೆತಾಯಿಗಳು ಸಂಪೂರ್ಣ ಅನಕ್ಷರಸ್ಥರು. ಬೇರೆಯವರಲ್ಲಿ ಕೂಲಿನಾಲಿ ಮಾಡಿ ಇವನನ್ನು ಶಾಲೆಗೆ ಕಳಿಸಿದರು. ಓದುವುದರಲ್ಲಿ ಶಾಣ್ಯಾ ಇದ್ದುದರಿಂದ ಮುದ್ದೆಪ್ಪನಿಗೆ ಏಳನೆಯತ್ತೆ ಮುಗಿಸಿದ ಕೂಡಲೇ ಶಿಗ್ಲಿ ಹೈಸ್ಕೂಲ್ ಹಾಗೂ ಫ್ರೀ ಬೋರ್ಡಿಂಗ್‌ನಲ್ಲಿ ಪ್ರವೇಶ ಸಿಕ್ಕಿತು. ಊರಲ್ಲಿಯ ಒಂದುಪವಾಸ, ಎರಡುಪವಾಸ ದೂರಾಗಿ ಎರಡೂ ಹೊತ್ತು ಊಟಕ್ಕೆ ವ್ಯವಸ್ಥೆಯಾದಾಗ ಹಿರಿಹಿರಿ ಹಿಗ್ಗಿದ. ಮಳೆಗಾಲದಲ್ಲಿ ತಮ್ಮ ಗುಡಿಸಲು ಮನೆ ಸೋರತೊಡಗಿದಾಗಲೆಲ್ಲಾ ಊರಗೌಡರ ದನದ ಹಟ್ಟಿಯೇ ತನಗೆ ಗತಿಯಾಗುತ್ತಿದ್ದುದನ್ನು ಮರೆತು, ಶಿಗ್ಲಿಯ ಹಂಚಿನ ಛಾವಣಿಯ ಬೋರ್ಡಿಂಗ್ ಮನೆಯನ್ನೇ ಬಹಳ ಹಚ್ಚಿಕೊಂಡುಬಿಟ್ಟ. ಅಭ್ಯಾಸ ಮಾಡುವ ಹುಡುಗರಿಗೆ ಸೂಟಿ ದಿನಗಳಲ್ಲೂ ಊಟದ ವ್ಯವಸ್ಥೆ ಇದೆ ಎಂದಾಗ ತನ್ನೂರಿಗೆ ಹೋಗುವುದನ್ನು ನಿಲ್ಲಿಸಿ, ಶಿಗ್ಲಿಯಲ್ಲೇ ಉಳಿದುಬಿಡುತ್ತಿದ್ದ. ಹೈಸ್ಕೂಲ್ ಚೇರ್ಮನ್ನರ ಮಗ ಶಿವಲಿಂಗನ ದೋಸ್ತಿ ಆದಾಗ ಆಕಾಶವನ್ನೇ ಅಂಗೈಯಲ್ಲಿ ಹಿಡಿದುಕೊಂಡಷ್ಟು ಆನಂದಿಸಿದ್ದ. ಅವನೊಡನೆ ಅವರ ಎಲ್ಲ ಹೊಲಗಳಿಗೂ ಭೇಟಿ ಕೊಡುತ್ತಿದ್ದ. ಸುಗ್ಗಿಯ ದಿನಗಳಲ್ಲಂತೂ ಶಿವಲಿಂಗುನ ಜೊತೆ ತಿರುಗಾಟವೆಂದರೆ ಪಂಚಪ್ರಾಣ ಅವನಿಗೆ. ಇಡೀ ಒಂದು ತಿಂಗಳು ಪ್ರತಿ ದಿನವೂ ಒಂದಿಲ್ಲೊಂದು ನೆಪಮಾಡಿ ಕಣಕ್ಕೆ ಹೋಗಿ ದೊಡ್ಡ ಬಣವಿಯ ಪಕ್ಕ ಕುಳಿತು ಶೇಂಗಾ ತಿನ್ನತೊಡಗಿದರೆ, ಆಹಾ! ಊಟ ತಿಂಡಿ ಏನೂ ಬೇಡ, ಹನ್ನೆರಡು ತಿಂಗಳೂ ಹೀಗೆಯೇ ಸುಗ್ಗಿಯ ಬಣವಿ ಒಟ್ಟಿದ್ದೇ ಇರಲಿ ಎನಿಸುತ್ತಿತ್ತು. ಮೂರು ವರ್ಷಗಳ ಹೈಸ್ಕೂಲ್ ಜೀವನ ಮೂರು ದಿವಸಗಳಲ್ಲಿ ಹೋದಂತಾಯ್ತು. ಮೆಟ್ರಿಕ್‌ನಲ್ಲಿ ಪ್ರಥಮ ವರ್ಗದಲ್ಲಿ ಪಾಸಾದ.

ಹುಬ್ಬಳ್ಳಿಯ ಜಾಬಿನ್ ಕಾಲೇಜಿನಲ್ಲಿ ಸೀಟು ಸಿಕ್ಕರೂ ಫ್ರೀ ಬೋರ್ಡಿಂಗ್ ಇರಲಾರದ್ದಕ್ಕೆ, ನರೇಗಲ್ಲಿನ ಅಂದಾನೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಪ್ರವೇಶ ದೊರಕಿಸಿಕೊಂಡು ಅಲ್ಲಿಯೇ ಹೆಚ್ಚಿನ ಶಿಕ್ಷಣ ಮುಂದುವರೆಸಿದ. ಶಿವಲಿಂಗುಗೆ ಧಾರವಾಡದ ಕರ್ನಾಟಕ ಕಾಲೇಜ್ ಹಾಗೂ ಹಾಸ್ಟೆಲ್‌ಗಳಲ್ಲಿ ಪ್ರವೇಶ ಸರಾಗವಾಗಿ ಸಿಕ್ಕದ್ದು ಕೇಳಿ ಆನಂದವಾಗಿದ್ದರೂ, ಆ ಭಾಗ್ಯ ತನಗೆ ಬಂದೊದಗಲಿಲ್ಲವಲ್ಲ ಎಂದು ಒಳಗೊಳಗೇ ಮನಸ್ಸು ಘಾಸಿಮಾಡಿಕೊಂಡಿದ್ದ. ಊಟ ಮಾಡುವಾಗ ಇದೆಲ್ಲ ನೆನಪಾದರೆ, ಹಿಂದೆ ಗೌಡರ ದನದ ಹಟ್ಟಿಯಲ್ಲಿ ಕುಳಿತು ಅಂಗೈಯಲ್ಲಿ ರೊಟ್ಟಿ ಹಿಡಿದುಕೊಂಡು ಮುರಿದು ತಿನ್ನುವಾಗ ಪಕ್ಕದಲ್ಲಿದ್ದ ಆಕಳು ಬಾಲ ಜಾಡಿಸಿಬಿಟ್ಟರೆ, ಅದಕ್ಹತ್ತಿದ ಗ್ವಾತದ (ಉಚ್ಚೆಯ) ಹನಿಗಳು ಸೀದಾ ರೊಟ್ಟಿಯೊಳಗೇ ಬಂದು ಬೀಳುತ್ತಿದ್ದುದು ಪುನರಾವರ್ತನೆಯಾದಂತೆ ಅನಿಸುತ್ತಿತ್ತು. ತಿನ್ನುತ್ತಿದ್ದ ರೊಟ್ಟಿ ಕಾರಬ್ಯಾಳಿ ಗಂಟಲಲ್ಲೇ ಸಿಕ್ಕು ಉಸಿರು ಕಟ್ಟುತ್ತಿತ್ತು. ಕಾರ ಮಾತ್ರ ಕಣ್ಣಿಗೆ ಅಡರಿದಂತಾಗಿ ಕಣ್ಣೀರು ಸುರಿಯತೊಡಗುತ್ತಿತ್ತು. ಶಿವಲಿಂಗುಗೆ ಸಿಕ್ಕ ಎಲ್ಲ ಸವಲತ್ತು ತನಗೆ ಸಿಕ್ಕಿದ್ದರೆ! ತಾನೂ ಯಾವಾಗಲೂ ರ‍್ಯಾಂಕ್‌ನಲ್ಲೇ ಪಾಸಾಗಬಹುದಿತ್ತು! ಎಂದು ಹಲವಾರು ಆಶಾಭಾವನೆಗಳನ್ನು ತಂದುಕೊಳ್ಳುತ್ತ ಮನದ ವಾಂಛಯು ನವಿಲು

ಗರಿಗೆದರಿಸಿಕೊಳ್ಳುತ್ತಿತ್ತು. ಆದರೂ ಈ ಎಲ್ಲ ಆಶೆಗಳನ್ನೂ ಅದುಮಿ ಇಟ್ಟು, ಉತ್ತಮ ಶ್ರೇಣಿಯಲ್ಲೇ ಪದವಿ ಪರೀಕ್ಷೆ ಪಾಸಾಗಿದ್ದ.

ಈವರೆಗೆ ನಡೆದ ಮಡ್ಡೆಪ್ಪನ ಮಾರ್ಗದಲ್ಲಿ ಹೆಚ್ಚಿನ ಅಡೆತಡೆಗಳಿರಲಿಲ್ಲ. ಬಂದ ಸಣ್ಣಪುಟ್ಟ ತೊಂದರೆಗಳನ್ನು ಅದ್ಹೇಗೋ ನೀಗಿಸಿಕೊಂಡು ಬಂದಿದ್ದ. ಪದವಿ ಮುಗಿಸಿದೊಡನೆ ಬಯಲು ಸೀಮೆಯವನನ್ನು ಒಮ್ಮೆಲೇ ಹಿಮಾಲಯದೆದುರು ಒಯ್ದು ನಿಲ್ಲಿಸಿದಂತಾಗಿತ್ತವನಿಗೆ. ಜೀವನದ ಮುಂದಿನ ಹೆಜ್ಜೆಗಳನ್ನು ಎತ್ತ ಹಾಕಬೇಕು? ಸ್ನಾತಕೋತ್ತರ ಶಿಕ್ಷಣಕ್ಕೆ ಹಣದ ವ್ಯವಸ್ಥೆ ಸಾಧ್ಯವಾಗುತ್ತಿರಲಿಲ್ಲ. ಈ ನಡುವೆ ತಂದೆ ತಾಯಿಗಳು ವಯಸ್ಸಾಗಿದ್ದರಿಂದ ದುಡಿಯುವುದೂ ಕಷ್ಟವಾಗಿತ್ತು. ಏನಾದರೂ ಮಾಡಿ ತನ್ನ ಜೀವನೋಪಾಯಕ್ಕೆ ತಾನೇ ವ್ಯವಸ್ಥೆ ಮಾಡಿಕೊಳ್ಳುವ ಅನಿವಾರ್ಯ ಪರಿಸ್ಥಿತಿ ಬಂದೊದಗಿತು.

ನೌಕರಿಗಾಗಿ ಅಲೆದಾಟ ಪ್ರಾರಂಭವಾಯಿತು. ಜೀವನದ ಕಠೋರತೆಯ ಅರಿವಾಗತೊಡಗಿತು. ಮನುಷ್ಯನಿಗೆ ಏನೇ ಬಂದರೂ ಬಡತನ ಮಾತ್ರ ಯಾವ ಜನ್ಮಕ್ಕೂ ಬರಬಾರದೆನ್ನುವ ಕಟು ಸತ್ಯವನ್ನು ಕಂಡುಕೊಂಡ. ವಾಸ್ತವತೆಯ ಕ್ರೌರ್ಯ ಕಟ್ಟುಕಥೆಗಳನ್ನೂ ಮೀರಿಸಬಲ್ಲದಾಗಿತ್ತು. ಅನೇಕ ರಾತ್ರಿಗಳನ್ನು ಬರೀ ನೀರು ಕುಡಿದೇ ಕಳೆದ. ಹೊಟ್ಟೆಯ ಆರ್ತನಾದ ಒಂದೆಡೆಯಾದರೆ, ವೈಯಕ್ತಿಕ ಪ್ರತಿಷ್ಠೆಗೆ ಕುಂದು ಮತ್ತೊಂದೆಡೆ. ವಿಲವಿಲ ಒದ್ದಾಡಿದ. ಇಂತಹ ಸ್ಥಿತಿಯಲ್ಲಿಯೇ ಬೆಳೆಸುವುದಾದರೆ ದೇವರು ಹುಟ್ಟಿಸಲೇಬಾರದು ತನ್ನಂತಹವರನ್ನು, ಯಾತಕ್ಕೆ ಈ ರವರವ ನರಕದಂತಹ ಜೀವನ. ತನ್ನ ಜೊತೆಗಾರ ಶಿವಲಿಂಗು ಎಂದಿನಂತೆ ಧಾರವಾಡದಲ್ಲೇ ಹೆಚ್ಚಿನ ಶಿಕ್ಷಣ ಮುಂದುವರೆಸಿದ್ದ. ಆ ಭಾಗ್ಯ ತನಗೆಲ್ಲಿ? ಅವಶ್ಯಕತೆಯು ಸಂಶೋಧನೆಯ ಮೂಲವಾದರೆ, ಅತೀ ಅವಶ್ಯಕತೆಯು ರೆಕ್‌ಲೆಸ್‌ನೆಸ್‌ನ ತಾಯಿ ಎನ್ನಬಹುದು. ತನ್ನದು ಹಿಂದುಳಿದ ವರ್ಗವಾದರೂ ಹಾಗೇ ಹೀಗೆ ಮಾಡಿ ಪರಿಶಿಷ್ಟ ವರ್ಗ ಎಂಬ ಸರ್ಟಿಫಿಕೇಟ್ ಪಡೆದುಕೊಂಡ, ಏನಾದರೂ ಮಾಡಿ ಒಂದು ಜೀವನಮಾರ್ಗ ಕಂಡುಕೊಳ್ಳುವ ಛಲ. ಬಹಳ ಕಷ್ಟಪಟ್ಟು ಬ್ಯಾಂಕ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಹುಬ್ಬಳ್ಳಿಯಲ್ಲಿ ಕ್ಲಾರ್ಕ್ ಎಂದು ನೌಕರಿ ದೊರಕಿಸಿಕೊಂಡ. ಮತ್ತೆ ಸ್ವರ್ಗಕ್ಕೆ ಸೋಪಾನ ಸುರುವಾಯಿತು. ಆದರೆ ಆರು ತಿಂಗಳಲ್ಲೇ ಖೊಟ್ಟಿ ಸರ್ಟಿಫಿಕೇಟ್ ಮೊಕದ್ದಮೆ ದಾಖಲಾಗಿ ಮುಂದಿನ ಆರು ತಿಂಗಳಲ್ಲಿ ನೌಕರಿಯಿಂದ ವಜಾ ಮಾಡುವ ಪರಿಸ್ಥಿತಿ ಬಂದಾಗ ಅನಿವಾರ್ಯವಾಗಿ ತಾನೇ ರಾಜೀನಾಮೆ ನೀಡಿ ಹೊರಬಂದ.

ನೌಕರಿ ಏನೋ ಹೋಯಿತು, ಹಲವು ಗಾಯಗಳಾದ ಹೃದಯಕ್ಕೆ ಇದ್ಯಾವ ಲೆಕ್ಕ. ನೊಂದು ನೊಂದು ಬೆಂದ ಜೀವಕ್ಕೆ ತುಸು ಬಿಸಿ ಹೆಚ್ಚಾದರೆ ಏನು ಮಹಾ? ತಿಳಿದೂ ತಿಳಿದೂ ಆ ಸರ್ಟಿಫಿಕೇಟ್ ಪಡೆದುಕೊಂಡಿದ್ದರಿಂದ ನೌಕರಿ ಹೋದ ಆಘಾತವನ್ನು ತಡೆದುಕೊಳ್ಳುವ ತಯಾರಿ ಮನದಲ್ಲಿ ಆ ಮೊದಲೇ ಆಗಿತ್ತು. ಈ ನಡುವೆ ಆದ ಇನ್ನೊಂದುಘಟನೆ ಆತನ ಜೀವಕ್ಕೆ, ಮಾನಸಿಕ ನೆಮ್ಮದಿಗೆ ಆಸರೆಯಾಗಿತ್ತು. ಬ್ಯಾಂಕ್ ನೌಕರಿ ಪಕ್ಕಾ ಆದ ಕೂಡಲೇ ತಮ್ಮವರ್ಯಾರೋ, ಮಾಜಿ ಶಾಸಕರ ಅಣ್ಣನ ಮಗಳೊಬ್ಬಳೊಡನೆ ಈತನ ನಿಶ್ಚಯ ಕಾರಣ ಮಾಡಿಸಿದ್ದರು. ಎರಡು ಮೂರು ಸಾರೆ ಶಿಗ್ಗಾಂವಿಗೆ ಹೋಗಿ ಹುಡುಗಿಯನ್ನು ಮಾತನಾಡಿಸಿಕೊಂಡೂ ಬಂದಿದ್ದ. ನೌಕರಿ ಹೋದರೂ ಚಿಂತೆಯಿಲ್ಲ ಚೋಕರಿ ಸಿಕ್ಕಳಲ್ಲ ಎಂದು ಕೆಲವರು ಆತನಿಗೆ ಹಾಸ್ಯ ಮಾಡಿದರು. ಸಾಯುವವನಿಗೆ ಪ್ರಾಣವಾಯು ಸಿಕ್ಕಂತಾಗಿ, ಈವರೆಗೆ ಆದ ಎಲ್ಲ ಗಾಯಗಳನ್ನೂ ಮರೆಯತೊಡಗಿದ್ದ.

ತಾನೊಂದು ಬಗೆದರೆ ದೈವವೊಂದು ಬಗೆಯುವುದಿಲ್ಲವೇ? ಹುಡುಗಿಯ ಕಡೆಯವರು ಅಪಸ್ವರ ತೆಗೆದರು. ಏನೂ ಗತಿಯಿಲ್ಲದವರಿಗೆ ಮಗಳನ್ನು ಕೊಡುವುದೇ? ಹೊತ್ತಿಸಿದ ಬೆಂಕಿ ತಡವಿಲ್ಲದೇ ಮಡ್ಡೆಪ್ಪನನ್ನು ತಲುಪಿ ಸುಡತೊಡಗಿತು. ಈಗ ಆತ ಜೀವನದ ಘನಘೋರ ಆಘಾತವನ್ನೆದುರಿಸಬೇಕಾಯ್ತು. ನಿಂತ ನೆಲವೆಲ್ಲ ಉರಿಯುವ ಕೆಂಡವಾಯ್ತು. ಬೀಸುವ ಗಾಳಿ ಚುಚ್ಚುವ ವಿಷ ಬಾಣವಾಗಿ ಹೊಸ ಹೊಸ ಗಾಯ ಮಾಡತೊಡಗಿತು. ಸಹಿಸಲಾರದಷ್ಟು

ಸಂಕಟವಾಗಿ ನೆಲಕ್ಕೊರಗಿ ಉರುಳಾಡಿದ. ದೇವರು ಎಂದಿನಂತೆ ಮೂಕವಾಗಿಯೇ ಇದ್ದ. ವಿಪರೀತವಾಗಿ ದೈಹಿಕ ಹಾಗೂ ಮಾನಸಿಕ ಯಾತನೆ ಅನುಭವಿಸಿ ಆತ್ಮಹತ್ಯೆಗೂ ಯೋಚಿಸಿದ.

ಇನ್ನು ಸ್ವಲ್ಪ ದಿನ ನೋಡಿ ಅದನ್ನೇ ಆರಿಸಿಕೊಂಡರಾಯ್ತು ಎಂದು ನಿರ್ಧರಿಸಿದ.

ಸಧ್ಯಕ್ಕೆ ಸ್ಥಳ ಬದಲಾವಣೆಯನ್ನಾದರೂ ಮಾಡಿದರಾಯ್ತೆಂದು ಯೋಚಿಸಿದ. ಆತನಿಗೆ ಹೊಳೆಯುವ ಹೆಸರೊಂದೇ ತಾನೇ? ಶಿವಲಿಂಗು. ಈಗ ಆತನು ಮೈಸೂರಲ್ಲಿ ಉಪವಿಭಾಗಾಧಿಕಾರಿ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾಸಾಗಿ ನೇರವಾಗಿ ಆಯ್ಕೆ ಆಗಿದ್ದನವ. ತನ್ನೆಲ್ಲ ತುಮುಲಗಳನ್ನು ಹಾಗೂ ಭಗ್ನ ಕನಸುಗಳನ್ನು ಹೊತ್ತುಕೊಂಡೇ ಮೈಸೂರಿಗೆ ನಡೆದ ಮಡ್ಡೆಪ್ಪ.

ಗಾಯದ ಮೇಲೆ ಗಾಯ. ಗಾಯಗಳಿಗೆ ಬರೆ. ನಿರಾಶೆ ಮೇಲೆ ನಿರಾಶೆ, ಹೀಗೆಯೇ ಮಡ್ಡೆಪ್ಪನ ಮೃದು ಮನಸ್ಸಿಗೆ ಆಘಾತಗಳ ಸರಮಾಲೆಯೇ ಸರಮಾಲೆ. ಬಡಪಾಯಿಯ ಉಸಿರುಗಳೆಲ್ಲವೂ ನಿಟ್ಟುಸಿರುಗಳಾದವು. ಅವಕಾಶಗಳೆಲ್ಲ ವಂಚಿಸಿ ಆಯತಪ್ಪಿಸಿದವು. ಸಾಧನೆಗೆ ಫಲ ಮರೀಚಿಕೆಯಂತೆ ಕೈಗೆಟುಕದೇ ದಿಕ್ಕುತಪ್ಪಿಸುತ್ತಿತ್ತು. ನೀರಡಸಿದ ಬೇಟೆಗಾರ ನೀರ್ಗುದುರೆಯನ್ನು ಬೆನ್ನಟ್ಟಿ, ಬಾಯಾರಿಕೆ ಹೆಚ್ಚಾಗಿ ದಾಹ ದಾಹವೆಂದು ಪರಿತಪಿಸುತ್ತ ಮರಣಾಂತಿಕ ನೋವನ್ನು ಅನುಭವಿಸುವಂತಾಯ್ತು. ಮೈಮೇಲಿನ ರೋಮಗಳು ಮುಳ್ಳಾಗಿ ನಡತೊಡಗಿದವು. ಸಮಸ್ಯೆಗಳ ಕಬಂಧಗಳಲ್ಲಿ ಸಿಕ್ಕು ನರಳುತ್ತಲೇ ಕೊನೆಯಾಸೆಯೆಂದು ಗೆಳೆಯನ ಕಡೆ ನಡೆದಿದ್ದ.

ಮೈಸೂರಿನ ಶಿವಲಿಂಗುನ ದೊಡ್ಡಮನೆ, ಕೆಂಪುಲೈಟಿನ ಕಾರು, ಕೈಯಲ್ಲಿನ ಆಳುಕಾಳುಗಳನ್ನು ನೋಡಿ, ನೋವು ಆನಂದಗಳೆರಡನ್ನೂ ಒಟ್ಟಿಗೇ ಅನುಭವಿಸಿದ. ಹುಟ್ಟಿದರೆ ಅವನಂತಹ ತಂದೆಯ ಮಗನಾಗಬೇಕು, ಸಿರಿವಂತಿಕೆಯಲ್ಲಿ ಬೆಳೆಯಬೇಕು. ಇಲ್ಲವಾದರೆ ಹುಟ್ಟುವುದೇ ಬೇಡ. ಸಾಕು ತನ್ನಂತಹ ನಿರರ್ಥಕ ಜೀವನ. ಯಾವುದಕ್ಕೆ ಈ ಬದುಕು, ನೆಲೆಯಿಲ್ಲ ಬೆಲೆಯಿಲ್ಲ.

ಆ ವೇಳೆಯಲ್ಲೇ ಅಲ್ಲಿ ದಸರಾದ ವೈಭವ. ಮೇಲುಸ್ತುವಾರಿಯಲ್ಲಿ ಶಿವಲಿಂಗುನದೇ ಸಿಂಹಪಾಲು. ಅರಮನೆ ಅಂಗಳದಲ್ಲಿ ಆಸನಗಳ ವ್ಯವಸ್ಥೆ, ಗಣ್ಯರಿಗೆ ವಿಶೇಷ ಏರ್ಪಾಟು, ವಾಹನಗಳ ಪೂರೈಕೆ, ಅತಿಥಿಗೃಹದ ಮೇಲುಸ್ತುವಾರಿ. ಒಂದೇ ಎರಡೇ ಎಲ್ಲದಕ್ಕೂ ಆತ ಅನಿವಾರ್ಯ. ನಾಲ್ಕು ತಾಲೂಕು ತಹಸೀಲ್ದಾರರು, ಬಿ.ಡಿ.ಓ.ಗಳು, ಇಂಜಿನೀಯರುಗಳು, ನೂರಾರು ಜನ ಸಿಬ್ಬಂದಿ ಆತನ ಆದೇಶಕ್ಕಾಗಿ ಸದಾ ಕಾಯುವವರು, ಇದ್ದರೆ ಹೀಗಿರಬೇಕು. ತಾನು? ತಾನೊಂದು ನಿರರ್ಥಕ ಜೀವಿ, ಯಾರಿಗೂ, ಕೊನೆಗೆ ದೇವರಿಗೂ ಬೇಡವಾದ ಒಬ್ಬ ನಿಷ್ಪ್ರಯೋಜಕ. ಮನದೊಳಗಿನ ಹೊಯ್ದಾಟವನ್ನು ಅದುಮಿಡುವುದೇ ಒಂದು ಪ್ರಯಾಸದ ಕೆಲಸವಾಯಿತವನಿಗೆ, ಹೊಟ್ಟೆಯೊಳಗಿನ ದಳ್ಳುರಿ ಜ್ವಾಲಾಮುಖಿಯಂತೆ ಪುಟಿದೇಳುತ್ತಿದ್ದರೂ ಮುಖದಲ್ಲಿ ಮಂದಹಾಸ ಹೆಣೆದುಕೊಂಡೇ ಇದ್ದ.

ದಸರಾದ ದಿನ ಮುಖ್ಯಮಂತ್ರಿಗಳಿಂದ ತಾಯಿ ಭುವನೇಶ್ವರಿಯ ಫೋಟೋ ಹಾಗೂ ನಂದಿ ಧ್ವಜಗಳಿಗೆ ಪೂಜೆ. ಎತ್ತರದ ಆನೆ ದ್ರೋಣನ ಮೇಲೆ ಚಿನ್ನದ ಅಂಬಾರಿಯಲ್ಲಿ ಭುವನೇಶ್ವರಿ ಪವಡಿಸಿದ್ದಾಳೆ. ಮೊದಲು ಮೈಸೂರರಸರೇ ಅಲ್ಲಿ ಕೂಡುತ್ತಿದ್ದರಂತೆ. ಅದೇನು ವೈಭವ! ಮುಂದಿನ ಸಾಲಿನಲ್ಲೇ ಕುಳಿತಿದ್ದ ಮಡ್ಡೆಪ್ಪ ಉದ್ರೇಕಗೊಂಡ. ಪಾರಜದಂತಹ ಮನಸ್ಸು ನೆಲಕ್ಕೆ ಬಿದ್ದು ಪುಡಿಯಾಗಿ ಕಣಕಣಗಳಲ್ಲಿ ವಿಭಾಗಿಸಲ್ಪಟ್ಟು ತೀವ್ರ ಓಡಾಡತೊಡಗಿತು. ಇಡೀ ದೇಹಕ್ಕೆ ಒಮ್ಮೆಲೇ ರೆಕ್ಕೆಗಳು ಬಂದುಬಿಟ್ಟವು. ಮೇಲೆದ್ದು ಗಾಳಿಯಲ್ಲಿ ತೇಲತೊಡಗಿದ. ಹಾರುತ್ತ ಹಾರುತ್ತ ಅರಮನೆಯನ್ನೆಲ್ಲ ಸುತ್ತಾಡಿದ, ಸಮಾಧಾನವಾಗಲಿಲ್ಲ. ನೇರವಾಗಿ ಬಂದು ಅಂಬಾರಿಯೊಳಗೇ ಕುಳಿತ. ಆನೆ ಐರಾವತವಾಯಿತು. ಐದೈದು ಸೊಂಡಿಲುಗಳನ್ನೆತ್ತಿ ನಮಿಸತೊಡಗಿತು. ಇಂದ್ರಲೋಕಕ್ಕೆ ಪಯಣಿಸಿದ. ಸಕಲೈಶ್ವರ್ಯ ಸುಖಭೋಗಗಳು ಕೈಗೆಟುಕಿದವು. ರಾಜ ಗಾಂಭೀರ್ಯದಲ್ಲಿ ಭೂಸಾಮ್ರಾಜ್ಯಕ್ಕೆ ಮರಳಿದ. ಮೈಸೂರರಸರಿಗೆ ಸಾಧ್ಯವಾಗಲಾರದ್ದನ್ನು ಈತ ಸಾಧಿಸಿಬಿಟ್ಟಿದ್ದ. ಸೀದಾ ಪೇಟೆಗೆ ನಡೆಯೆಂದು ಅಂಬಾರಿಯೊಳಗಿಂದಲೇ ಆಜ್ಞಾಪಿಸಿದ. ಆಜ್ಞಾಪಾಲನೆ ಆಗುತ್ತಿದ್ದಂತೆಯೇ ಕುಂತ

ಕುರ್ಚಿಯಿಂದ ಎದ್ದುನಿಂತ. ಜನರನ್ನು ಸೀಳುತ್ತ ಸೀಳುತ್ತ ನಿನ್ನೆ ಪೇಟೆಯಲ್ಲಿ ನೋಡಿದ ಟಾಯ್ಸ್ ಸೆಂಟರ್ ಒಂದಕ್ಕೆ ನಡೆದ. ಅಂಗಡಿಯೊಳಗಿನ ಎಲ್ಲಾ ಆನೆಗಳನ್ನೂ ಪರೀಕ್ಷಿಸಿದ. ಐರಾವತ ಇದೆಯೇ ಎಂದು ಕೇಳಿದ. ಇಲ್ಲವೆಂದಾಗ, ಐರಾವತದ ಮಹತ್ವ ಪಾಪ ಅಂಗಡಿಯವನಿಗೇನು ಗೊತ್ತು ಎಂದು ಅವನ ಮೇಲೆ ಕರುಣೆ ತೋರಿದ. ಕೊನೆಗೆ ಎಲ್ಲಕ್ಕೂ ಎತ್ತರದ ಆನೆಯೊಂದನ್ನು ತನ್ನಲ್ಲಿ ಇದ್ದ ಹಣವನ್ನೆಲ್ಲಾ ಹಾಕಿ ಖರೀದಿ ಮಾಡಿದ. ರಾತ್ರಿ ಶಿವಲಿಂಗುಗೂ ಹೇಳದೇ ನೇರವಾಗಿ ಲಕ್ಷ್ಮೇಶ್ವರದ ಗಾಡಿ ಹಿಡಿದು ಬಂದುಬಿಟ್ಟ.

ಹೀಗೆ ಬಂದಿಳಿದ ಮಡ್ಡೆಪ್ಪ ಆನೆಯ ಮೂರ್ತಿಯನ್ನು ಅಪ್ಪಿಕೊಂಡು ಕುಳಿತ. ಅಂಬಾರಿಯೊಳಗೆ ಮೆರೆಯುತ್ತಿದ್ದ ಆಶೆಗಳು ಅಲ್ಲಿಯೇ ನೆಲೆಯೂರಿಬಿಟ್ಟಿವೆ. ಶೂನ್ಯದೆಡೆ ನೆಟ್ಟ ದೃಷ್ಟಿಗೆ ಕೊನೆಗೂ ಯಾವ ಅಂಕಿಗಳೂ ಸಿಗದಾಗಿವೆ. ಐರಾವತದ ಬೆನ್ನೇರಿ ಅಲೆಯುವ ಮನಸ್ಸು ಕೆಳಗಿಳಿಯಲು ಒಪ್ಪದಾಗಿದೆ.

❖

# ಗಂಗಮ್ಮನ ಜೀವನ ದೃಷ್ಟಿ

ಮುಂಜಾನಿ ಇಷ್ಟೊತ್ತಿನ್ಯಾಗ ಮನಿ ಬೆಲ್ ಯಾರು ಹೊಡೆದ್ರು ಅಂತ ವಿಚಾರ ಮಾಡ್ತಾ ಹೋಗಿ ಬಾಗಲಾ ತೆಗದರ ಒಬ್ಬಾಕಿ ಹಣ್ಣ ಹಣ್ಣ ಮುದುಕಿ ಮತ್ತ ಇಪ್ಪತ್ತ ಇಪ್ಪತ್ತೈದರ ಯುವಕ ನಿಂತಾರ. ನೀವ್ಯಾರು ಅಂತ ನಾ ಪ್ರಶ್ನಾ ಕೇಳಬೇಕು ಅನ್ನುದರೊಳಗ, ಆ ಮುದುಕಿ ಹೀ ಹೀ ಅಂತ ನಗಾಕಹತ್ತಿತ್ತು. ಒಂದೂ ಹಲ್ಲಿಲ್ಲದ ಬಚ್ಚಬಾಯಿ ದುಂಡಗೇ ಚಿಕ್ಕ ಕಪ್ಪು ಚಂದ್ರನಂತೆ ಕಂಡಿತು. ಹಣೇಗೆ ಎಡ ಅಂಗೈ ಹಚಿಗೊಂಡು ನನ್ನ ಮಕಾ ದಿಟ್ಟೇಸಿ ನೋಡಿ 'ಮೋನಪ್ಪ ಅಲ್ಲ?' ಅಂತ ನೇರವಾಗಿ ಕೇಳಿಬಿಟ್ಲು. ಹೌದು ನೀವ್ಯಾರು ಅಂತ ಅನ್ನಬೇಕೆನ್ನುದರಷ್ಟರಾಗ, 'ಎಪ್ಪಾ ಮ್ಯಾಲಿನಮನಿ ಗಂಗಮ್ಮಾ, ಗೊತ್ತು ಹತ್ಯಾ. ನನ್ನ ಮಮ್ಮಗನ' ಅಂದ್ಲು. ನೆನಪಿನ ಬಾವ್ಯಾಗ ಕಲ್ಲು ಒಗದಂಗಾಗಿ ಗಕ್ಕನ ನಮ್ಮೂರಿನ, ನಾ ಸಣ್ಣಾವ ಇದ್ದಾಗಿನ ನೆಪ್ಪು ತೆರಿ ತೆರಿ ಹಂಗ ತೇಲಿ ಬಂದ್ವು, "ಹೂಂ, ಗೊತ್ತಾತು ಬಾರಬೇ ಒಳಗ" ಅಂತಂದು ಕೈಹಿಡದು ಕರಕೊಂಡು ಬಂದ್ಯಾ. ಅಷ್ಟ ಸಾಕಾತು ಅಂತ ಕಾಣತೈತಿ, ಮುದುಕಿಗೆ ಭಾಳ ರೋಮಾಂಚನ ಆದಂಗ ಮೈ, ಕೈ, ತುಟಿ ಎಲ್ಲಾ ಸ್ವಲ್ಪ ಸ್ವಲ್ಪ ನಡಗಾಕ ಹತ್ತಿದ್ವು, ನಿರಿಗಿ ಬಿದ್ದು ಸುಕ್ಕುಗಟ್ಟಿದ ಮಕದ ಮ್ಯಾಲ ಮುಗುಳು ನಗಿ ನಲಿದಾಡಾಕ ಸುರುವಾತು. ಯಾಕ ಬಂದ್ಲೋ ಮುದುಕಿ ಈ ಬ್ಯಾಸಗ್ಯಾಗ, ಅಟ್ಟಂಬಟ್ಟ ಅಡವ್ಯಾಗ ಗುಬ್ಬಿ ತಲಿ ಚಟ್ ಅಂತ ಒಡೀತು ಅಂತ ಹತ್ತಿಕಾಯಿ ಬೀಸಲೀಗೆ ಒಡದು ಬಾಯಿ ಬಿರುಕು ಬಿಡಮುಂದ ನಮ್ಮೂರಾಗ ಅನತಿದ್ದು ನೆನಪಿಗೆ ಬಂತು. ಸಣ್ಣ ಸಣ್ಣ ಹೆಜ್ಜೆ ಹಾಕ್ಕೊಂತ ಮುದುಕಿ ನನ್ನ ಹಿಂದ ಬರಬೇಕಾರ 'ಹೆಜ್ಜೆಯ ಮೇಲೊಂದ ಹೆಜ್ಜೆಯ ಹಾಕುತ ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮ ನೀ...' ಅಂತ ಪುರಂದರದಾಸರ ಪದಾ, ಭೀಮಸೇನ್ ಜೋಷಿಯವರು ಕಿವ್ಯಾಗ ಗುನುಗುನಿಸಿದಂಗಾಗಿ ನಾನೂ ಒಮ್ಮೆಲೆ ಅಕೀ ಕೂಡನ ಪುಳಕಗೊಂಡ್ಯಾ..

ಸೀದಾ ಸೋಫಾಕ್ಕ ಒಯ್ದು, 'ಕುತಗಾ ಕುತಗಾ' ಅಂದ್ಯಾ. ಏನು? ಅನ್ನಂಗ ಬಾಜೂಕ ಇದ್ದ ಹುಡುಗನ್ನ ನೋಡಿದ್ಲು. 'ಕುಂದ್ರಾಕ ಹೇಳತಾರಾ' ಅಂತ ಅವಾ ತುಸು ಜೋರಾಗಿ ಚೀರಿ ಹೇಳಿದಾ. ಮುದುಕೀಗೆ ಸರಿಯಾಗಿ ಕಿವಿ ಕೇಳಸಾಂಗಿಲ್ಲ ಅನ್ನೂದು ಅರಿವಿಗೆ ಬಂತು. 'ಯಾವಾಗ ಬಂದಿಬೇ ಊರಿಂದಾ' ಅಂತ ಕ್ಷೇಮಸಮಾಚಾರಾ ಕೇಳಿದ್ಯಾ. ಆದ್ರ ಮುದುಕಿ ಮಾತ್ರ 'ಎಪ್ಪಾ ನೆಪ್ಪೈತಿ ಇಲ್ಲೊ, ನಿಮ್ಮ ಮನೀಗೆ ನೀವು ಸಣ್ಣಾವ್ರು ಇದ್ದಾಗ ಶ್ಯಾವಗಿ ಹೊಸ್ಯಾಕ ಬರತಿದ್ದೆನಲ್ಲಪ, ನೀನೂ ಸೈತ ನಿಮ್ಮವ್ವ ಬ್ಯಾಡಬ್ಯಾಡಾ ಅಂದ್ರೂ ಶ್ಯಾವಗಿ ಹಿಡ್ಯಾಕ ಕುಂದರತಿದ್ದಿ.' ಅಂತ ಇನ್ನೂ ಪರಿಚಯ ಭಾಷಣದಾಗ ಇದ್ಲು. ಮೊದಲ ಹೇಳಿದ್ದು ಹಂಗಾರ ಇಕೀಗೆ ಕೇಳೇಯಿಲ್ಲ ಅನ್ನೋದು ಖಾತ್ರಿ ಆಗಿ, 'ಗೊತ್ತಾತು ಅಂದ್ಯನಲ್ಲಬೆ ಆಗ್ಲೆ.'

‘ಕಿವಿ ಸರಿಯಾಗಿ ಕೇಳೋದಿಲ್ಲಾ, ಎರಡೂ ಅಪೂಟ ಇಲ್ಲಾ' ಅಂತ ಕೈಸನ್ನಿ ಮಾಡಿ ತೋರಿಸಿದ್ಲು. ಅದಕ ಇಕೀ ಆ ಹುಡಗೂನ್ನ ತನ್ನ ಮೈಕ್ ಮಾಡಿಕೊಂಡ ಬಂದಾಳ. ಮೈಕ್ ಅಷ್ಟ ಯಾಕ ಅವ್ನs ಊರುಗೋಲು, ಅವ್ನs ಅಕೀ ಕಣ್ಣು ಎಲ್ಲಾ. ಬಾಳ ಬೆರ್ಕಿ ಮುದುಕಿ ಅಂತ ಅನಬೇಕಂದ್ರs ವಯಸ್ಸಾದ ಮ್ಯಾಲ್ ಎಲ್ಲಾರ್ ಹಣೇಬರಾನೂ ಇಷ್ಟ, ಇಕೀ ವಯಸ್ಸಿಗೆ ನಮ್ಮನ್ನ ಹೊತಗೊಂಡ ಅಡ್ಯಾಡೋರು ಬೇಕಾಕೈತೋ ಏನೋ, ಆವಾಗ ಮಂದಿ ನಮ್ಮನ್ನ ನೋಡಿ 'ಇವಾ ತನ್ನ ಜೊತಿಗಿ ಕಾಲುನೂ ತಂದಾನ್ವಳ್' ಎಂದು ಅಪಹಾಸ್ಯ ಮಾಡಬಹುದು ಅಂತ ಮನಸಿನಾಗ ಅನಕೋತ “ಇಲ್ಲಿ ಬಿಡು ಎಮ್ಮಾ, ಏನ್ ಬಾಳ ದಿವಸದ ಮ್ಯಾಲ ಏಕಾಏಕಿ ಬಂದೀ, ಊರಾಗ ಎಲ್ಲಾರು ಆರಾಮಾ?” ಎತ್ತರಿಸಿದ ದನಿಯಿಂದ ಕೇಳಿದೆ. ಬಾಳ ಖುಷಿಯಿಂದ “ಎಲ್ಲಾ ಸರಿಯಾಗಿ ಐತಿ ಎಪಾ ದೇವ್ರ ದಯದಿಂದಾ ನಿಮ್ಮಪ್ಪಾ ನಿಮ್ಮವ್ವಾ ಮತ್ತ ಎಲ್ಲಾರು ಆರಾಮ ಅದಾರ.” “ವಯಸ್ಸು ಎಷ್ಟಬೇ ಇನ್ನೂ ಹಿಂಗs ಅಡ್ಯಾಡತೀ ಅಲ್ಲs ಗಟ್ಟಿ ಅದೀ ಬಿಡು” ಅಂದಿದ್ದಕ್ಕೆ “ಏನ್ ಗಟ್ಟಿ ಎಪ್ಪಾ, ಗುರುವಿನ ಆಶೀರ್ವಾದದಿಂದ ಎಲ್ಲಾ ಬರೋಬರಿ ಅದಾವು, ಆದ್ರ ಕಣ್ಣ ಮಂಜಾಗಿ ಬಿಟ್ಟಾವು, ಪರಿ ಬಂದಾವು ಅಂತಾರ. ಆಪರೇಶನ್ನಿಗೇ ಬೇಕಲ್ಲಪ್ಪ” ಎಂದು “ಕಾಂಚಾಣಂ ಕಾರ್ಯಸಿದ್ಧಿ” ಎಂಬುದನ್ನು ಕೈಸನ್ನೆ ಮಾಡಿ ತೋರಿಸಿದ್ಲು. ಅದೂ ಇದೂ ಮಾತಾಡಿ ಕೊನೆಗೆ ಆಕೆ ಬಂದ ಕಾರಣಕ್ಕೆ ಮಾತು ಬಂತು.

ಗಂಗಮ್ಮ ಬಂದ ಉದ್ದೇಶ ಅವಳ ಮೊಮ್ಮಗನಿಗೆ ನೌಕರಿ ಕೊಡಿಸುವುದಾಗಿತ್ತು 'ಹೆಂಗರ ಮಾಡಿ ಒಂದ್ ದಾರಿ ತೋರಸಬೇಕು ತಮ್ಮಾ, ಇವರ ಅವ್ವಾ ಚಿಂತೀ ಹಿಡದಾಳಾ. ಇವನ ಮ್ಯಾಲ ಎಲ್ಡು ಹುಡುಗೇರ ಅದಾವು. ಅವರದೂ ಮದವಿ ಮಾಡಬೇಕು. ಇವರ ಅಪ್ಪಗ ಈಗ ದುಡೇ ಶಕ್ತಿ ಕಡ್ಮಿ ಆಗೇತಿ. ವಯಸ್ಸಿನ್ಯಾಗೆಲ್ಲಾ ಕುಸ್ತಿಗಿಸ್ತಿ ಅಂತ ಮೆರದಾ, ಈಗ ಮಂಡಿನೋವು ಅಂತ ಮನಿ ಹಿಡದ್ ಕುಂತಾನ. ಎಲ್ಲಾ ನನ ಮಗಳದ ಜಬಾಬದಾರಿ. ಇವರ ಅವ್ವಂದು ನಿನಗ ಗುರ್ತು ಇರಬೇಕಲ್ಲಾ ನಿಮ್ಮ ದೊಡ್ಡ ಅಕ್ಕನ ಕೂಡ ನಾಲ್ಕ ಎತ್ತಾ ಸಾಲಿ ಕಲತಾಳ.... ಶಾರವ್ವಾ.....” “ಹಾಂ ಗೊತ್ತಾತು ಬಿಡಬೆ, ಅಕೀ ಲಗ್ನಕ್ಕೂ ನಾ ಹೋಗಿದ್ಯಾ ಕಮಡೊಳ್ಳಿಗೆ. ಆರನೇಯತ್ತಾ ಕಲೀತಿದ್ಯಾ ಆವಾಗ, ನಮ್ಮ ಟ್ರ್ಯಾಕ್ಟರ್‌ನ್ಯಾಗ ಹೋಗಿದ್ವಿ, ಚೊಲೋ ನೆನಪೈತಿ ನನಗ” ಅಂದ್ಯಾ. ಮುದುಕಿ ಬಹಳ ಪ್ರಸನ್ನವಾದಂತೆ ಕಂಡಿತು. ಕಣ್ಣೊಳಗ ಸಣ್ಣ ಸಣ್ಣ ಸೂರ್ಯಾನ್ನ ಮಿಂಚು ಹೊಳಸಾಕಹತ್ತಿದ್ಲು. ಹಂಗs ತುಸು ಕಣ್ಣೀರೂ ಬಸ್ಯಾಕ ಸುರುವಾದವು. ಭಾವಪರವಶಳಾಗಿ ಬಿಟ್ಟಳು. ‘ಎಷ್ಟ ನೆಪ್ಪ ಇಟ್ಟೀಯಪ್ಪಾ, ನಿಮ್ಮವ್ವ ಹೇಳತಿರತಾಳ್, ಮೋನಪ್ಪ ಎಲ್ಲಾರಿಗಿಂತ ಚಿಕ್ಕಾವ ಆದ್ರೂ ಭಾಳ ಹೆಣ್ಣಗಳ್ಳಿನವಾ ಅಂತ, ಈಗ ನನಗ ಅದು ಖಾತ್ರಿ ಆತ ನೋಡು’ ಅಂದಳು. ಅಷ್ಟರಾಗ ಮೂರು ಕಪ್ಪು ಚಾ ಬಂತು. ನನ್ನ ಹೆಂಡ್ತಿನ್ನ ನೋಡಿ “ಏನ್ ರೂಪವಂತೇ ನಮ್ಮವ್ವ, ನೆನಪೈತೇನು? ನಿನಗ ಕುಬಸಾ ಮಾಡೋವಾಗ ನಾನs ಪದಾ ಹಾಡಿದ್ದೆ. ಬಾಳ್ ದಿವಸ ಆತು. ಮರ್ತಿಯೋ ಏನೋ?”. “ಇಲ್ಲೆಮ್ಮಾ, ಎರಡು ತಾಸು ನೀ ಒಬ್ಬಾಕೇ ಹಾಡಿದ್ದಿ ಹೆಂಗ ಮರೀತಾರಾ” ಎಂದು ನನ್ನವಳೂ ನನಗೆ ಹೊಂದಿಕೊಂಡು ಮಾತಾಡಿದ್ಲು. ಆಮೇಲೆ ಹೇಳಿದ್ಲು “ನನಗ ಯಾರೋ ಹಾಡಿದ್ದು ನೆನಪೈತ್ರಿ ಆದ್ರ ಇಕೀನ ಅಂತ ಗೊತ್ತಿಲ್ಲ. ಮುದಕಮ್ಮ ಏನು ತಿಳಿಕೊಂತೈತೋ ಅಂತ ಹೊಡದ್ಯಾ ನಾನೂ” ಎಂದು ತನ್ನ ತನ್ನೊಪ್ಪಿಕೊಂಡಿದ್ದು ಆ ಮಾತು ಬ್ಯಾರೆ.

ಖುಷಿಯಲ್ಲಿ ತೇಲುತ್ತಿದ್ದ ಗಂಗಮ್ಮ ಎಲ್ಲಿಲ್ಲದ ಕಾಳಜಿಯಿಂದ ತನ್ನ ಹಾಗೂ ಊರಿನ ಇತಿಹಾಸವನ್ನೆಲ್ಲಾ ವಿವರಿಸಾಕ ಸುರುಮಾಡಿದಳು. ತನಗೆ ಮದವಿ ಆದಾಗ ತಾ ಇನ್ನೂ ತೊಟ್ಟಿಲದಾಗ ಇದ್ದು, ಗಂಡ ನಿಂಗಪ್ಪಜ್ಜನಿಗೆ ಕೇವಲ ಆರು ವರ್ಷ. ಕಣ್ಣು ತೆರೆಯುತ್ತಲೇ ತನಗೆ ಗಂಡನದೇ ಮೊದಲ ದರ್ಶನ, ಆವಾಗಿಂದ ಈಗ ನಾಲ್ಕು ವರ್ಷದ ಹಿಂದ ಅವಾ ತೀರಿಕೊಳ್ಳುವಾಗ 70-75 ವರ್ಷ, ಅವನ ಸಂಗಾಟ ಬಾಳ್ವೆ ಮಾಡಿದ್ದು ಒಂದು ದೊಡ್ಡ ಸಾಹಸಗಾಥೆ ಅನ್ನೋ ಹಂಗ ಹೇಳತೊಡಗಿದಳು. “ಏನರ ತಿಳಕೋ ತಮ್ಮಾ ಸಂಸಾರದಾಗ ಸುಖಾ ಅನ್ನೋದು ರೊಕ್ಕ ಒಂದರಿಂದಾನ ಬರೋದಿಲ್ಲಾ ಅನ್ನೋದನ್ನ ಖರೇ ಮಾಡಿ ಜೀವನಾ ಸಾಗಿಸೀದ್ವಿ. ಒಂದಿತ್ತು ಒಂದಿಲ್ಲ. ಆದ್ರ ಒಂದೀನಾನೂ ನಮ್ಮೆಜಮಾನ ನನಗೆ ಹಿಂಗ್ ಸರಿದು ನಿಲ್ಲು ಅನಲಿಲ್ಲ. ಬಾಳ ದೊಡ್ಡ ಮನಶ್ಯಾ, ಸಿಟ್ಟು ಅನ್ನೋದು

ಅವನ ಸನ್ಯಾಕ ಸುಳೀತಿದ್ದಿಲ್ಲ; ಹಂಗೇನರ ಬಂದ್ರೂ ಸೀದಾ ಹೋಗಿ ದ್ಯಾಮವ್ವನ ಗುಡಿ ಕಟ್ಟೀಗೆ ಒಂದಿಷ್ಟು ಹೊತ್ತು ಕೂತು ಬರಾವಾ. ಒಮ್ಮೀನೂ ನನ್ನ ಮನಸು ನೂಸಲಿಲ್ಲಾ. ಅವನ ದುಡಿತಾ ಅಂದ್ರ ಏನಂತಿ. ರಾಚಪ್ಪಶೆಟ್ಟರ ಮನಿಯಾಗ ಹದನಾರ ವರ್ಷ ದುಡದ್ರ ಒಂದೀನಾನೂ ಉಳಿದಿನಾ ಅಂತ ಮಾಡಲಿಲ್ಲಾ, ಮನ್ಯಾಗ ಕುಂದರಲಿಲ್ಲ. ಈಗಿನವರಿಗಿ ಹಿಂಗ ದುಡ್ಯಾಕ ಆಗತೈತೇನು? ದುಡೀಲಾರದನ ಗಳಸಬೇಕಂತಾವು. ಮತ್ತ ನಾನರೆ ಏನ್ ಕಮ್ಮೀ ಅಂತೀ. ನಾನೂ ಅಷ್ಟು ಎಂದೆಂದೂ ಬಾಯಿತಪ್ಪಿ ಸೈತ್ ಅವನ ಕೂಡಾ ಜಗಳಾಡಿದ್ದಿಲ್ಲ. ಮನ್ಯಾಗ ಏನೂ ಇರಲಿಲ್ಲಾ ಅಂದ್ರೂ ಅವಗ ಹೇಳಾಕ ಹೋಗತಿದ್ದಿಲ್ಲ. ಸುಮ್ನ ಕೌದಿ ಹೊತಗೊಂಡು ಮಕ್ಕೊಂಬಿಡತಿದ್ಯಾ. ಚೊಲೋ ದುಡ್ಯೋ ಮನಶ್ಯಾ ಅವಾ, ಅಮ್ಮ ಅಪ್ಗ ಇಲ್ಲಾ ಅದೂ ಇಲ್ಲಾ ಇದೂ ಇಲ್ಲಾ ಅಂತಾ ಹೇಳಿ ಮನಸ ಯಾಕ ಗಾಸಿಮಾಡಬೇಕು?". ನನಗ ಒಮ್ಮೆ ನಾನು ಬಡವಿ, ಆತ ಬಡವ, ಒಲವೇ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು' ಎಂದು ಬೇಂದ್ರೆ ಕಿವ್ಯಾಗ ಉಸಿರಿದಂಗಾತು. ತಿಂಗಳಿಗೆ ಹತ್ತು ಸಾವಿರ ಪಗಾರ ಕೈಯಲ್ಲಿಟ್ಟರೂ ಮನೆಯಲ್ಲಿ ಅದಿಲ್ಲ ಇದಿಲ್ಲ ಎಂದು ಟೀಕಿಸುವವರು, ನಾ ಹೆಚ್ಚು ನೀ ಹೆಚ್ಚು ಎಂದು ವಾದಿಸುತ್ತ ಸದಾ ಜಗಳಾಟವಾಡುವವರು ಮನಸ್ಸಿನಲ್ಲಿ ಸುಳಿದುಹೋದರು. ಇಂಥವರಿಗೆ ಸುಖಸಂತೋಷ ಎನ್ನುವವು ಬರೀ ನಿಲುಕಲಾರದ ನೆರಳುಗಳಾಗಿ ಹೋಗುತ್ತವೆ ಅನಿಸಿತು. "ಸುಖವು ಬರಲು ಹಿಗ್ಗನವನು ದುಃಖ ಬರಲು ಕುಗ್ಗನು. ಪ್ರೀತಿ ಭೀತಿ ಕೋಪವಿಲ್ಲದವನೇ ಸ್ಥಿತಪ್ರಜ್ಞನು" ಎಂಬ ಗೀತೋಪದೇಶದ ಮಾತುಗಳನ್ನು ಗಂಗಮ್ಮ ಸರಳೀಕರಿಸಿ ಹೇಳುತ್ತಿದ್ದಾಳೆನಿಸಿತು.

ಆಕೆ ಮುಂದುವರೆಸಿದ್ದಳು 'ಇಲ್ನೋಡು ಎಪ್ಪಾ ನಾ ಎಮ್ಮಿ ಮೇಸಿ, ಬ್ಯಾರ್ಯಾದವರ ಹೊಲದಾಗ ಕೂಲಿನಾಲಿ ಮಾಡಿಬಂದು ಆರಮಂದೀಗಿ ನಮ್ಮ ಮನ್ಯಾಗ ಅಡಗೀ ಮಾಡಿ ಹಾಕತಿದ್ಯಾ. ಭಾಳ ಕಷ್ಟಪಟ್ಟೀನೆಪ್ಪಾ, ಏನ್ಮಾಡೋದು ಮಕ್ಕಳು ಬಾಳ (ಐದು ಜನ), ದುಡಿದಿದ್ದೆಲ್ಲಾ ಹೋಟ್ಟೀಗೆ ಹೋಗತಿತ್ತು. ಈಗಿನಂಗ ಮಕ್ಕಳನ್ನ ಕಡಿಮೀ ಹಡೇದು ಗೊತ್ತಿದ್ರ ನಾವೂ ಏನರ ಒಂದೀಟು ಗಳಿಸಿದ್ರಾಗ ಉಳಿಸಬೌದಾಗಿತ್ತು.... ಹಾಂ ಇಲ್ಲಿ ಬಿಡು, ಉಳಿಸ್ಯಾದ್ರೂ ಏನ್ಮಾಡೋದೈತಿ?.... ಮತ್ತೆ ನಿನಗ ನೂಲ್ವಿಯವರ ಸೀಮವ್ವ ಗೊತ್ತಲ್ಲ? ನನ್ನ ಹಿರೇಮಗಳ ವಾರಿಗಿ, ಮನ್ನಿಮನ್ನೆ ಸತ್ತಳು. ಸಾಯೋ ವಯಸ್ಸಲ್ಲ. ಏನ್ಮಾಡೋದು ಹೇಳು. ಇರೋತನಾ ಎಷ್ಟ ಜೀನತನಾ ಮಾಡಿದ್ಲು ಅಂತೀ. ಮನ್ಯಾಗ ಹೊಳಿ ಹರದಂಗ ಹಾಲುಹೈನಾ ಇದ್ರೂ ಮಸರು, ಬೆಣ್ಣೆ, ಹಾಲು ಎಲ್ಲಾ ಮಾರಿ ಮಾರಿ ರೊಕ್ಕಾ ಕೂಡಿಸಿಬಿಟ್ಲು. ಬೇಕಾದ್ದಂಗ ದೇವರು ಆಸ್ತಿ ಕೊಟ್ಟಿದ್ದಾ, ಆದ್ರೂ ಉಂಡುತಿಂದು ಸುಖಾಪಡಲಿಲ್ಲಾ ಜೀವಾ, ಹೋಗಿಬಿಡ್ತು. ಏನ್ ಒಯ್ದಳು ಹೋಗುಮುಂದ? ನಾನೂ ಒಂದ್ ಎಮ್ಮಿ ಯಾವಾಗ್ಲೂ ಕಟ್ಟಿದ್ಯಾ, ಮಕ್ಕಳುಮರಿ ಉಂಡು ಉಳದ್ರ ಅಷ್ಟ ಹೈನಾ ಮಾರತಿದ್ಯಾ. ಇಲ್ಲಾಂದ್ರ ಇಲ್ಲಾ. ಏನ್ ಕಟಿಗೊಂಡ ಹೋಗುದೈತಿ ತಮ್ಮಾ, ಎಲ್ಲಾರೂ ಎದೀಮ್ಯಾಲ ಕಲ್ಲು ಹೇರಿಕೊಂಡ ಹೋಗ್ತಾರ. ಲೋಭಿ ಜೀವಾ ಎಷ್ಟ ಹಪಾಪಸ್ತೈತಿ ನೋಡು ಅಂತೇನಿ' ಎಂದು ತನ್ನ ಸಿದ್ಧಾಂತ ಮಂಡಿಸಿದಳು. ಅದರೊಳಗ ನನಗ ಅಕೀ ಆಳ ಅನುಭವ ಮತ್ತ ಜ್ಞಾನ ಎರಡೂ ಎದ್ದಕಾಣತಿದ್ದವು.

ಸಾಲೀ ಕಲೀದಿದ್ರೂ ಮುದುಕಿ ಭಾಳ ಶಾಣ್ಯಾಕಿ ಅದಾಳ, ಅಡ್ಡಿಯಿಲ್ಲ. ಇನ್ನೂ ಸಡಲಬಿಟ್ರ ಭಾಳ ಭಾಳ ಸುದ್ದೀ ಹೇಳತಾಳ ಅನಿಸಿ 'ನಮ್ಮ ಓಣಿಯೊಳಗ ಊರಿನ ಹಳೇ ಸರಪಂಚ ನಾಗಪ್ಪಜ್ಜ ಹೆಂಗದಾನಬೇ ಮತ್ತ ಅವನ ಹೆಂಡ್ತಿ ಆರಾಮ ಅದಾಳಾ' ಕೇಳಿದೆ. ಅಷ್ಟೇ ಸಾಕಾತು ಗಂಗಮ್ಮಗ, ಸುರುಮಾಡಿದಳು. "ನಸೀಬಾ ಅನ್ನೋದು ಭಾಳ ದೊಡ್ಡದು. ನಾಗಪ್ಪನ ಹೆಂಡ್ತಿ ದೇವರ ಇದ್ದಂಗ ದೇವರು. ನಿನಗಂತೂ ಗೊತ್ತೈತಿ. ಅಕೀ ಹಿರೇಮಗ ಪರದೇಶದಾಗ ಅದಾನ. ಮನ್ಯಾಗಿರೋ ಸಣ್ಣಾವ ಏನೂ ಉಪಯೋಗಯಿಲ್ಲಾ. ಎಲ್ಲಾ ನೀತಿ ಬಿಟ್ಟಾನಾ, ತಂದೀ ತಾಯಿ ದೀಕ್ಷಾ ತೂಗೊಂಡಾರ, ಏನ್ ಪೂಜಾ ಏನ್ ಪುನಸ್ಕಾರಾ, ನಡತಿ, ಮೆಚ್ಚಬೇಕು ಇಬ್ರೂನು. ಆದ್ರ ಮಗಾ ಹಿಂಗ. ಈಗೊಂದಿಷ್ಟು ದಿನದ ಹಿಂದ ಕುಡದಬಂದು ದೇವಿ ಅಂತಾ ಅವರ ಅವ್ವನ್ನ ಹೊಡದಬಿಡಬೇಕಾ ಮೂಳಾ... ನೀ ಏನರ ತಿಳಕೋಪಾ ಮುದುಕಿ ಎಷ್ಟ ನಿಷ್ಠೂರ ಅದಾಳ ಅನಕೋಬೇಕಾರ, ನನಗೆ ಇದು ಪಾಪದ ಕೆಲಸಾ ಅನಸ್ತದ ನೋಡು. ಇವರು ಕಲಿತ

ಸಾಲಿ ವಿದ್ಯಾ ಇದ ಏನು? ಹಿರೇರು ಪರೇರು ಅಂದ್ರ ಮರ್ಯಾದಿ ಬ್ಯಾಡಾ? ಹೊಡದ ಕೈಯಾಗ ಹುಳಾ ಬಿಳ್ತಾವು ಎಪ್ಪಾ ಹುಳಾ. ತಾಯಿ ದೇವರು ಅಂತ ಕಲಿತಿದ್ದು ಕೇಳಿದ್ದು ಎಲ್ಲಾ ಬುರ್ ಬುಶ್ ಆತೇನು? ಎಂತಾ ಕಾಲ ಬಂತಪ್ಪಾ ಅಂತೀನಿ..... ಇಲ್ನೋಡು ಎಪ್ಪಾ ನನಗೂ ಮೂರ್ ಮಂದಿ ಗಂಡ್ಮಕ್ಕಳು ಅದಾರ. ಹೆಂಗದಾರಾ ಅಂತೀ, ಸುದ್ದಿ ತಗದ್ರ ಹೊಟ್ಟಿ ತುಂಬತೈತಿ. ಯವ್ವಾ ಅಂತ ಒಳಗ ಬಂದ್ರ ಶ್ರೀರಾಮಚಂದ್ರ ಬಂದಾಂಗ ಆಗತೈತಿ. ಏನ್ ಪಿರೂತಿ ಏನ್ ಕಕ್ಕಲಾತಿ ಹೇಳಿದ್ರ ತಂದ ತಾ ಹೇಳಿಕೊಂತಾಳ ನಮ್ಮಮ್ಮ ಅಂದೀ. ಖರೇವಂದೂ ಮಕ್ಕಳಂದ್ರ ನನ್ನ ಮಕ್ಕಳು....." ಮೈಯಲ್ಲೆಲ್ಲಾ ಖುಷಿ ಉಕ್ಕಿಸಿಗೊಂಡು ಹಾವಭಾವ ಮಾಡುತ್ಥಾ ಲೋಕವನ್ನೇ ಮೈಮರೆತಿದ್ದಳು ಗಂಗಮ್ಮ. ಮಕ್ಕಳನ್ನು ಹಡೆದು ಬೆಳೆಸಿದ ಸಾರ್ಥಕ ಜೀವದ ತೃಪ್ತಿ ಅಕೀ ಮಕದ ಮ್ಯಾಲ ಎದ್ದು ಕಾಣುತ್ತಿತ್ತು. ಅಭಿಮಾನದ ಕಳೆ ಹೊರಸೂಸುತ್ತಿತ್ತು. 'ಅವರು ಕೊಟ್ಟಷ್ಟು ಬೆಣ್ಣೆ ತುಪ್ಪದ ಸುಖಾ ನಾ ನನ್ನ ಮಕ್ಕಳೀಗಿ ಕೊಟ್ಟಿರಲಿಕ್ಕಿಲ್ಲಾ. ಎಷ್ಟೋ ಸಲಾ ರೊಟ್ಟಿ ಮಾಡತಾ ಹಸೀ ಹಿಟ್ಟು ತಿಂದು ದಿನಾ ಕಳದೀನಿ. ಊರಾಗೆಲ್ಲಾ ಮಂದಿ ಹಿಟ್ಟ ತಿನ್ನೋ ಗಂಗವ್ವ ಅಂತ ನನಗ ಹಂಗಸ್ತಿದ್ರು, ಏನ್ಮಾಡುದ ಹೇಳು. ಎಲ್ಲಾ ಹಿಟ್ಟಿಂದೂ ರೊಟ್ಟಿ ಮಾಡಿ ಮ್ಯಾಲಾ, ಮಕ್ಕಳು ಮತ್ತು ನನ್ನ ಹಿರಿಯಾ ಉಂಡ್ರು ಅಂದ್ರ ನನಗ ಏನೇನೂ ಉಳೀತಿದ್ದಿಲ್ಲಾ, ಮತ್ತ ಸಂಜೀಕ ರೊಟ್ಟಿ ಮಾಡಕ ಸಗತಿ ಬೇಕು ಹೌದಲ್ಲೋ? ಅದಕ್ಕೆ ರೊಟ್ಟಿ ಬಡಕೋಂತನ ಹಿಟ್ಟು ತಿಂತಿದ್ಯಾ?". ಆಗ ನನಗೂ ಈ ವಿಷಯ ಸಣ್ಣಾವ ಇದ್ದಾಗ ಕೇಳಿದ ನೆನಪು ಮರುಕಳಿಸಿತು. ಆದ್ರ ನಮ್ಮವ್ವ ಬಡವರು ಹೊಟ್ಟಿತುಂಬಿಕೊಳ್ಳಾಕ ಹಂಗೆಲ್ಲ ಮಾಡ್ತಾರಾ, ಮಂದಿ ನಗಚ್ಯಾಟಗಿ ಮಾಡ್ತಾರಾಂತಾ ನೀನೂ ಮಾಡಬ್ಯಾಡಾ ಅಂತ ತೆಲಿ ಕೈಯಾಡಿಸಿ ಹೇಳಿದ್ದು ಮತ್ತೊಮ್ಮೆ ತಲ್ಯಾಗ ಸುಳಿದುಹೋತು. ಹಂಗs ಮನಸಿನ್ಯಾಗ ಇನ್ನೂ ಒಂದು ಘಟನಾ ಸರಕ್ ಅಂತ ಮಿಂಚು ಹೊಡೀತು.

ಅದೇನಂದ್ರ ಈ ಗಂಗಮ್ಮನ ಒಬ್ಬ ಮಗಾ ನಮ್ಮ ಮನಿಯಾಗ ದುಡೀತಿದ್ದಾ, ಅವಾ ಹೊಲಕ್ಕ ಗಳೆ ಹೊಡ್ಯಾಕ, ಬಿತ್ತಾಕ, ತೆನಿಕೊಯ್ಯಾಕ ಹಿಂಗೆಲ್ಲಾ ಹೋದಾಗ ನಾನು ಆಳುಗಳಿಗೆ ರೊಟ್ಟಿ ಬುತ್ತಿ ಕೊಡಾಕ ಹೋಗತಿದ್ಯಾ. ಈ ರೊಟ್ಟಿಗಂಟು ತರಾಕ ಗಂಗಮ್ಮನ ಮನೀಗೆ ಹೋಗಬೇಕಾಗಿತ್ತು. ಮಳಿಗಾಲ ಬಂತಂದ್ರ ಒಲೀಗೆ ಹಾಕಿದ ದಂಟು ಹತ್ತೀಕಟಿಗಿ ಹಸಿಯಾಗಿರ್ತಿದ್ರಿಂದಾ ಮನಿಯೆಲ್ಲಾ ಹೊಗಿ ಅಡರಿ ಗಂಗಮ್ಮ ಕಾಣಸ್ತಿರ್ಲಿಲ್ಲ, ಆದ್ರ ಅಕೀ ರೊಟ್ಟಿ ಬಡೆ ಶಬ್ದಾ ಕೇಳಿಸ್ತಿತ್ತು. ಇದನ್ನ ನೆನಸಿಗೋಂತ ನಾನು ಆವಾಗ ಇವಾಗ, ಧ್ವನಿಗಿಂತ ಪ್ರಕಾಶ ವೇಗವಾಗಿ ಚಲಿಸೋದನ್ನ ನಾ ಒಪ್ಪೊಂಗಿಲ್ಲ ಯಾಕಂದ್ರ ಈ ಪ್ರಕರಣದಾಗ, ಗಂಗಮ್ಮ ಕಾಣೋದಿಲ್ಲಾ ಆದ್ರ ಅಕೀ ರೊಟ್ಟಿ ಮಾಡೋ ಶಬ್ದಾ ಕೇಳತೈತಿ, ಅಂಧ್ರ ಪ್ರಕಾಶಕ್ಕಿಂತ ಶಬ್ದಾ ಕೇಳತೈತಿ, ಅಂದ್ರ ಪ್ರಕಾಶಕ್ಕಿಂತ ಶಬ್ದಾ ಜೋರಾಗಿ ಚಲಸ್ತೈತಿ ಅಂದಂಗಾತು ಅಂತಾ ವಿವರಿಸಿ ಹಾಸ್ಯಾ ಮಾಡತಿದ್ಯಾ. ಇಂತಾ ಗಂಗಮ್ಮ ಸೃಷ್ಟಿಯ ನಿಯಮ, ಭೌತಶಾಸ್ತ್ರದ ತತ್ವಾ ಎಲ್ಲಾ ಸುಳ್ಳು ಮಾಡ್ಯಾಳ ಅಂತ ಅಕೀ ಬಗ್ಗೆ ಮತ್ತ ಈಗ ಅಭಿಮಾನಾ ಮೂಡ್ತು. ಇಂತಾ ಗಂಗಮ್ಮನ್ನ ಮಂದೀ ಹಾಸ್ಯಾ ಮಾಡೋದು ಅಂದ್ರ ಏನು? ಒಂದೊಂದು ಸಲಾ, ಈ ಹೊಗಿದೆಶಿಂದ ನಾ ಮನಿ ಹೊರಗ ದೂರ ನಿತುಗೊಂಡು 'ಎಮ್ಮಾ ಹೊಲಕ್ಕೆ ಹೋಗೋ ರೊಟ್ಟಿ ಕೊಡಬೆ' ಅಂತ ದನಿ ಎತ್ತರಿಸಿ ಹೇಳಿದರ, ಕರೀ ಮಾಡದೊಳಗಿನ ಹುಣವಿ ಚಂದ್ರಾ ಹೊರಗ ಬಂದಂಗ ಬರತಿದ್ಲು. ಕಣ್ಣು ಕೆಂಪಡರಿ ನೀರು ದಳಾದಳಾಂತ ಅಗಲಗಲ್ಲದ ಮ್ಯಾಲ ಇಳೀತಿದ್ವು, ಅಷ್ಟು ಎತ್ತರಿದ್ದ ಗಂಗಮ್ಮ ನನ್ನ ಕೈಯಾಗ ರೊಟ್ಟಿಗಂಟು ಇಡೋಮುಂದ ಎಷ್ಟಬಾಗತಿದ್ಲು. ಹಿಂಗ ಹಗಲೆಲ್ಲ ಆವಾಗ ಬಾಗಿಬಾಗೀನ ಈಗ ಇಕೀ ನಡಾ ಹಿಂಗ್ ಬಾಗೈತ್ಯೋ ಏನೋ. ಅಥವಾ ನಾ ಎತ್ತರ ಬೆಳದಿದ್ದರಿಂದಾ ಅಕೀ ನನಗ ಗಿಡ್ಡ ಕಾಣಸ್ತಿರಬಹುದು. ಅರವತ್ತು ವರ್ಷ ಆದಮ್ಯಾಲ ಮನಶ್ಯಾ ಹತ್ತುವರ್ಷಕ್ಕೊಮ್ಮೆ ಅರ್ಧಾ ಇಂಚೆನಂಗ ಎತ್ತರದಾಗ ಕಡಿಮಿ ಅಕ್ಕೊಂತ ಹೋಗ್ತಾನಂತ..... ಹಂಗುನು ಆಗಿರಬಹುದು. ಇಷ್ಟೆಲ್ಲಾ ಈ ಜನರೀಗಿ ಎಲ್ಲಿ ತಿಳಿಬೇಕು? ಮಾತು ಬದಲಿಸಲಿಕ್ಕಾಗಿ 'ಹೋಗ್ಲಿ ಬಿಡಬೇ ಅದೆಲ್ಲಾ ಇರೋದ. ನಿನ್ನ ಎಲ್ಲಾ ಮಕ್ಕಳರ ಸುಖವಾಗಿ ಅದಾರಾ?" ಇಷ್ಟೊಂದು ಮಕ್ಕಳ ಬಗ್ಗೆ ಹೇಳತಾಳ ಮುದುಕಿ ನೋಡೋಣ ಅಂತ ಮನಸು ಚೌಕಾಶಿ ಮಾಡತಿತ್ತು. ಈಗ ಎಲ್ಲಾರೂ ಏನೇನ್ ಮಾಡತಾರಾ,

ಎಲ್ಲೆಲ್ಲಿ ಅದಾರ ವಿಚಾರಿಸಿದೆ. ಸಾವರಿಸಿಕೊಂಡು ಗಂಗಮ್ಮಾ "ಹಿರೇವಾ ಕಾಗವಾಡದಾಗ ಬೀಗರು ಅದಾರ, ಅವರ ಕಮತಾ ನೋಡಿಕೊಂತ ಅಲ್ಲೇ ಅದಾನ. ನಡುವಿನವಾ ಸಂಶಿ ಸಾಲ್ಯಾಗ ಸಿಪಾಯಿ ಅದಾನ, ಮೂರನೇದವಾ ಅಲ್ಲೇ ನಮ್ಮೂರಾಗ ಒಬ್ಬರ ಮನ್ಯಾಗ ಸಂಬಳಾ ಅದಾನ. ಇನ್ನ ಹೆಣ್ಮಕ್ಕಳು ಇಬ್ಬರ, ದೊಡ್ಡಾಕಿ ಇವರ ಅವ್ವಾ' ಅಂತ ಪಕ್ಕದಲ್ಲಿಯ ಹುಡುಗನ ತೋರಿಸಿದ್ಲು. ಎರಡನೇದಕೀದು ಸ್ವಲ್ಪ  ಅಧ್ವಾನ ಆಗೇತಿ. ಮಾಡಿಕೊಂಡ ಗಂಡಾ ದೇಶಾವರಿ ಹೋಗ್ಯಾನಾ, ಐದು ವರ್ಷಾ ಆತು. ಎಲ್ಲೆದಾನ್ಯ ಗೊತ್ತಿಲ್ಲ. ಈಗ ನನ್ನತ್ರ ಬಂದು ಅದಾಳ. ಆಕೀಗೆ ನಾ ಗತಿ, ನನಗ ಅಕೀ ಗತಿ...' ನಡುವೆ ಬಾಯಿ ಹಾಕಿದೆ "ಅಲ್ಲದೇ ಊರಾಗ ಇರೋ ಮಗಾ ನಿನ್ನ ನೋಡಿಕೊಳ್ಳೋದಿಲ್ಲೇನು ಮತ್ತ? ಭಾಳ ಚೋಲೋ ಅದಾರ ಅಂತೀದಿ ಮತ್ತ ಹಿಂಗ ಒಬ್ಬಾಕೆ ಇರತೇನು ಅಂತೀದಿ. ವಿಚಿತ್ರ ಐತಲ್ಲಾ ಇದು" ಕೆಣಕಿದೆ, ಇನ್ನೂ ಏನೇನೋ ಹೊಸ ಹೊಸ ಸುದ್ದಿ ಹೊರಹೊಮ್ಮಬಹುದುನ ಅಂತ. ನನ್ನ ತಿಳುವಳಿಕಿ ಸರಿಯಾಗಿತ್ತು. ಮಾತು ನೇರವಾಗಿ ನೆಟ್ಟಿತ್ತು ಮುದುಕಿ ಮನಸೀಗೆ. "ಖರೇ ಐತಿ ಎಪ್ಪಾ ನೀ ಅನ್ನೋದು. ಆದ್ರ ಈ ಪಿರುತಿ ಪ್ರೇಮ ಅನ್ನೋದು ಬಾಳದಿನಾ ಉಳೀಬೇಕಂದ್ರ ಅವರವರು ಸೋತಂತ್ರ ಇರಬೇಕು. ಕೂಡೀ ಇದ್ದು ಜಗಳಾಡೋದ್ಕಿಂತ ಬಾರ್ಯಾ ಇದ್ದು ಒಬ್ಬರಿಗೊಬ್ಬರು ಬೇಕಾಕ್ಕೊಂಡು ಇರೋದು ಚೋಲೋ ಹೌದಲ್ಲೋ" ನಡುವೆ ಸ್ವಲ್ಪ ವಿಶ್ರಮಿಸಿ ಪುನಃ "ನಾನೂ ಅವರಿಗೆ ಬಾಳ ಸಾಲಿ ಕಲಿಸ್ಬೇಕು ನಿನ್ನಂಗ ಅಂತ ಎಲ್ಲಾ ಪ್ರಯತ್ನ ಮಾಡಿದ್ನಿ. ಆದ್ರ ಅವ್ರ ಹಣ್ಯಾಗ ವಿದ್ಯಾ ಬರಿಲಿಲ್ಲಾ ಏನ್ ಮಾಡೋದು. ಒಬ್ನಾರು ಓದಿ ದೊಡ್ಡ ಸಾಯೇಬ ಆಗಿದ್ರ ನಾನೂ ಗಾಡ್ಯಾಗ ಅಡ್ಯಾಡತಿದ್ಯಾ. ಆದ್ರ ಏನ್ಮಾಡೋದು ಸರಸೋತಿ ಎಲ್ಲಾರಿಗೂ ಒಲೀಬೇಕಲ್ಲಾ. ವಿದ್ಯಾ ಅಂದರ ಅದೇನು ಸಾಮಾನ್ಯ ಏನು? ನಸೀಬ ಬೇಕು ನಸೀಬಾ. ನಾವು ಒಂದು ಬಗದರ ದೈವ ಇನ್ನೊಂದು ಬಗೀತೈತಿ. ನಾನೂ ಬಾಳ್ ಕಟಿಬಿಟಿ ಬಿಟ್ಟೇನಿ ಅವರನ್ನ ಓದುಸಬೇಕು ಅಂತ, ಆದ್ರ ಕೆಲಸ ಆಗ್ಲಿಲ್ಲಾ. ಇರ್ಲಿ ದೇವರು ಇಷ್ಟರೇ ಕೊಟ್ಟಾನಲ್ಲಾ. ಎಲ್ಲಲ್ಲದಾರಾ ಅಲ್ಲೇ ಸುಖವಾಗಿ ಅದಾರ. ಮುಂಜಾನಿಂದ ಸಂಜೀತನಾ ದುಡೀತಾರಾ, ಯಾರ ಗೊಡವಿಗೂ ಹೋಗಾವರಲ್ಲಾ, ನಾಕಮಂದಿ ಸೈ ಅನ್ನೋ ಹಂಗ ಬಾಳೆ ಮಾಡತಾರಾ ಸಾಕಪ್ಪಾ" ಮುದುಕಿ ದಣಿದಂತೆ ಕಂಡಿತು. ನನ್ನ ಕರ್ತವ್ಯ ಪ್ರಜ್ಞಾ ಮ್ಯಾಲಕ್ಕ ಬಂತು. ಬರೀ ಹಂಗ ಕೇಳಿಕೊಂತ ಕುಂತ್ರ ಮುಗೀದ ಪುರಾಣ ಇದು ಅಂತ ಅನಸಾಕಹತ್ತಿತು. ಇಲ್ಲೀತನಾ ಬಾಯಿ ಬಿಕ್ಕೊಂಡು ಕುಂತ ಪಕ್ಕದ ಅಕೀ ಮೊಮ್ಮಗನ ಹೆಸರೇನು ಅಂದಾಗ, "ಹೇಳಲಾ" ಅಂತ ಮುದುಕಿ ಅವನ್ನ ತಿವೀತು. ಅವಾ ಹೆಸರು ಅಡ್ಡೆಸರು ಹೇಳಿ ಕಿಸೇದಾಗಿಂದಾ ಒಂದ್ ಚೀಟಿ ತಗದು ಆ ಇಂಟರ್‌ವ್ಯೂ ವಿವರ ಎಲ್ಲಾ ಇದ್ದದ್ದನ್ನ ನನ್ನ ಕೈಯಾಗ ಕೊಟ್ಟ. ಮತ್ತ ಮುದುಕಿ ಮಾತು ಸುರು ಮಾಡಿಗೀಡ್ಯಾಳು ಅಂತ ನಾನ ಏರಿದ ದನಿಯಲ್ಲಿ "ಆತು, ನೀ ಏನ್ ಚಿಂತೀ ಮಾಡಬ್ಯಾಡಾ. ಆದಷ್ಟು ಪ್ರಯತ್ನಾ ಮಾಡತೀನಿ" ಆಶ್ವಾಸನಾ ಕೊಟ್ಯಾ. ಹಂಗರ ಇನ್ನ ನಾ ಬರ್‍ಲ್ಯಾ ಎಪ್ಪಾ, ಒಂದೀಟು ಕರುಣಾ ಇರ್ಲಿ. ಉಪಕಾರ ಮಾಡಿದ ಪುಣ್ಯಾ ಮುಂದ ನಿನ್ನ ಮಕ್ಕಳು ಮೊಮ್ಮಕ್ಕಳೀಗೆ ಹತ್ತತೈತಿ' ಎಂದು ಹೇಳಿ ಹೊರಟಳು. ಹೋಗುವಾಗ ಮೊಮ್ಮಗನ ಕೆಲಸದ ಬಗ್ಗೆ ಪುನಃ ನೆನಪಿಸಿದಳು. ಹೇಗಾದರೂ ಮಾಡಿ ನೌಕರಿ ಕೊಡಿಸಲೇಬೇಕೆಂದು ಆಶ್ವಾಸನಾ ಪಡಕೊಂಡಂತೆ ಭಾವಿಸಿ ಹೊರನಡೆದಳು.

ಗಂಗಮ್ಮನನೋ ಹೋದಳು. ಆದರ ಅಕೀ ಎಬ್ಬಿಸಿದ ಗಾಳಿ ನನ್ನ ಮನಸಿನ್ಯಾಗ ಬೆಳದು ಬಿರುಗಾಳ್ಯಾಗಿ ಎಲ್ಲಾ ಕದಲಬಿದಲ ಮಾಡಾಕತ್ತು. ಮನಸು ವಿಚಾರಕ್ಕ ತೆಕ್ಕೀ ಬಿದ್ದು ಒಳಗೊಳಗ ಗುದಮುರಗಿ ಸುರುವಾತು. ಏನೈತಿ ಗಂಗಮ್ಮಗ? ಸಿರಿವಂತಿಕ್ಯಾ? ಮಕ್ಕಳ ಆಶ್ರೇನಾ? ಗಂಡನ ಸುಖಾನಾ? ಆದ್ರೂ ಅಕೀ ಎಷ್ಟು ಹೌಸನ್ಯಾಗ ಅದಾಳಾ. ಅಕೀ ಜೀವನ ಸಿದ್ಧಾಂತ ಬಿಡಿಸಿಬಿಡಿಸಿ ನೋಡಾಕ ಹತ್ತಿದ್ರ, ಮೈಯಾಗೆಲ್ಲಾ ರಕ್ತಾ ಜೋರಾಗಿ ಓಡಾಡಿದಂಗ ಆಗ್ಯೈತಿ. ಎಂತಾ ಸಾದಾಸೀದಾ ಜೀವನ ಏನತಾನ. ವಾಹ್! ಬಾಳ ಕಲೀಬೇಕು ಇಕೀ ಕಡೀಂದಾ.

ಅಲ್ಲಾ ತನಗ ನೋಡಿದ್ರ ಇರಾಕ ಒಂದು ಚೋಲೋ ಮನೀ ಇಲ್ಲಾ, ಎರಡ ಹೊತ್ತಿನ ಊಟ ಸರಿಯಾಗಿ ಸಿಗಾಂಗಿಲ್ಲ. ಗಂಡಮಕ್ಕಳೂ ಯಾರೂ ನೋಡೋದಿಲ್ಲಾ, ಮ್ಯಾಲ ಗಂಡಬಿಟ್ಟ ಮಗಳೊಬ್ಬಳು ಕೊಳ್ಳಿಗೆ ಬಿದ್ದಾಳ,

ಏನಂತೀನಿ ವಿಚಿತ್ರ ಈ ಮುದುಕೀದು. ಇಷ್ಟಿದ್ರೂ ಇಕೀಗೆ ಹೊಲಾಮನೀ ಯಾವದೂ ದೊಡ್ಡದಲ್ಲಾ, ಪರದೇಶಕ್ಕೆ ಮಗನ್ನ ಕಳಿಸಿ ತಿಂಗಳಾ ತಿಂಗಳಾ ಐದಾರು ಸಾವಿರ ರೂಪಾಯಿ ತೊಗೊಂಡು ಅರಾಮ ಇರೋ ನಾಗಪ್ಪಜ್ಜ ಮತ್ತ ಅವನ ಹೆಂಡತಿ ಮ್ಯಾಲ ಇಕೀಗೆ ಕರುಣಾ ಅದ ಹೊರ್ತು ಅದು ದೊಡ್ಡದು ಅನಸವಲ್ಲದು. ಏನ್ ಜೀವನದೃಷ್ಟಿ ಇಕೀದು! ಹಣಾ, ದಾಗೀನಾ, ಹೊಲಾ ಎಲ್ಲಾ ಅರ್ಥ ಇಲ್ಲದವು ಅಂತ ಸಾಬೀತ ಮಾಡಿ ಬಿಟ್ಲಲ್ಲಾ ಬೆರ್ಕಿಮುದುಕಿ. ಪ್ರೀತಿ ಪ್ರೇಮದ ಮುಂದ ಎಲ್ಲಾ ಸಣ್ಣವು, ಕರುಣಾ ಕಳ್ಳು ಇತ್ತಂದ್ರ ಏನ್ ಬೇಕಾರು ಕ್ಷಮಾ ಮಾಡಬಹುದು, ಮರೀಬಹುದು, ಮರ್ರು ಆರಾಮಾಗೇ ಇರಬಹುದು ಅನ್ನೋದನ್ನ ತೋರಿಸಿ ಹೋಗಿಬಿಟ್ಟು.

ಸುಮ್ಮಸುಮ್ಮನ ಬಾಳ ವಿದ್ಯಾ ಕಲ್ತಂಥ ನಾವು ಸಣ್ಣ ಸಣ್ಣ ವಿಷಯಾ ಎತಿಗೊಂಡ ಮುಂಜಿನಿಂದಾ ಸಂಜಿತನಕಾ ಸಿಡಿಮಿಡಿ ಮಾಡಿಕೊಂತ, ಬರೋ ಸುಖನೆಲ್ಲಾ ಕಳಕೊಂಡ ಬಿಡ್ತೀವಲ್ಲ. ಅವರು ಇರ್ಲಿ ಇವರು ಇರ್ಲಿ ಅಂತ ಎಲ್ಲಾರೂ ಕೂಡಿಹಾಕ್ಕೊಂಡು ಒಟ್ಟಿಗೇ ಇದ್ದು, ಒಬ್ಬರಿಗೊಬ್ಬರು ಬೈದಾಡಿ ಜಗಳ್ಯಾಡಿ ಒಬ್ಬರ ಮುಖಾ ಇನ್ನೊಬ್ಬರು ನೋಡದಂಗ ಮಾಡಿ ಕೊಳ್ಳೋದು ಯಾವ ಪುರುಷಾರ್ಥಕ್ಕ?. ಒಬ್ಬ ಮಗನ ಕೂಡಾನೂ ಕೂಡಿ ಇಲ್ಲ. ಆದ್ರೂ 'ಮಕ್ಕಳಂದ್ರ ನನ್ನ ಮಕ್ಕಳೇ' ಅಂತ ಹೆಮ್ಮೆ ಪಡತಾಳ. ಅವರವರದು ಅವರs ಮಾಡಿಕೋಂತ ಇದ್ರ ಬಾಳ್ ಚಂದ ಅಂತಾಳ, ಹಳೇ ಜಮಾನಾದಾಕಿ ಆದ್ರೂ ಗಂಡಾ ಹೆಂಡ್ತಿ ಸರಿಸಮಾ ಅನ್ನೋದನ್ನ ಬಾಳೆ ಮಾಡಿ ತೋರಿಸ್ಯಾಳ. ಈಗಿನವರು ನಾಚಬೇಕು ಅಕೀ ತನ್ನ ಗಂಡನ ಮ್ಯಾಲ ಇಟ್ಟ ಪ್ರೀತಿ ಮತ್ತ ನಿಗಾ ನೋಡಿದರ. “ಅವಾ (ಗಂಡ) ಸತ್ತ ಮ್ಯಾಲೆ ನಾ ಜುಗ್ಗಾದೆ ತಮ್ಮ. ಇರ್ಲಿಲ್ಲಾಂದ್ರ ನನಗ ಮುಪ್ಪ ಬರ್ತಿತ್ತೋ ಇಲ್ಲೋ” ಎಂದು ಖಾಡಾಖಂಡಿತ ಹೇಳಿದ್ಲು. ಎಷ್ಟೊಂದು ಸ್ಪಷ್ಟವಾದಿ. ನಡೆನುಡಿಯಲ್ಲಿ ಸಹಜತೆ. ಯಾವು ಮುಚ್ಚುಮರೆ ಇಲ್ಲವೇಯಿಲ್ಲ. ಇಡುವ ಹೆಜ್ಜೆಗಳೆಲ್ಲಾ ಪ್ರಾಕ್ಟಿಕಲ್ ಮೂವ್ಹ್, ಅಸ್ಥಿರತೆ ಅಸ್ಪಷ್ಟತೆಗೆ ಅವಕಾಶವೇಯಿಲ್ಲ. ಅವಳ ವಿಚಾರ ಎಲ್ಲವೂ ಅವಳ ಸ್ವಂತಿಕೆಯದು.

ಈಗ ಗಂಗಮ್ಮ ಹೋಗಿ ಬಹಳ ದಿನಗಳಾದವು. ಆದ್ರ ಅಕೀ ನನ್ನ ಮ್ಯಾಲೆ ಒಗೆದ ಛಾಪು ಖಾಯಂ ಆಗಿ ಮನಸಿನ ಮ್ಯಾಲ ಉಳದs ಬಿಟೈತಿ.

ಗಂಗಮ್ಮನ ಜೊತಿ ನಾ ಇಷ್ಟೆಂಗ್ ನನ್ನನ್ನು ಬಿಚ್ಚಿಕೊಂಡು ಬಿಟ್ಯಾ ಅಂತ ನನಗ ಆಶ್ಚರ್ಯ ಆಗೇತಿ. ಬಾಳ ದಿವಸದಿಂದ ನನಗೂ ನನ್ನ ಬಾಲ್ಯದ ದಿನಗಳನ್ನ ನೆನಪಿಸಾಕ ಆಗಿರಲಿಲ್ಲ. ಇಕೀ ಆ ಖಜಾನಿಗೆ ಕನ್ನಾ ಹಾಕಿ ಎಲ್ಲಾ ಭಾವನೆಗಳನ್ನು ಹೊರಗೆಳೆದು ಬಿಟ್ಲು. ಎಲ್ಲಾ ಗೊತ್ತೈತಿ ಮೂಬೆರಕಿ ಮುದುಕೀಗೆ. ಸೋಜಿಗಾ ಅಂದ್ರsಶಿಕ್ಷಣಾ, ಸಾಲಿ ಅಂದ್ರ ಎಷ್ಟ ಗೌರವ ಕೊಡತಾಳ. ಇಕೀಗೇನರ ಅಂಥಾ ಅವಕಾಶ ಸಿಕ್ಕಿದ್ರ ಕೊಡಗಿನ ಗೌರಮ್ಮನಂಗ, ಲಿಗಾಡೆ ಜಯದೇವಿ ತಾಯಿ ಹಂಗ ದೊಡ್ಡ ಸಾಹಿತಿ ಆಗಿಬಿಡತಿದ್ಲೋ ಏನೋ.....

ಗಂಗಮ್ಮ ಬಂದುಹೋಗಿ ಈಗ ವರ್ಷಾತು. ಆ ಹುಡುಗೂನ ಇಂಟರ್‌ವ್ಯೂ ಬಗ್ಗೆ ಯಾವ ಸುದ್ದೀನೂ ಇಲ್ಲಾ. ಬಂದಾಗ ನೋಡಿದ್ರಾತು ಅಂತ ಸುಮ್ಮಗಿರಬೇಕಾದ್ರ.... ಒಂದ ದಿನ.... ನಮ್ಮೂರಿಂದ ರಾಚಪ್ಪ ಶೆಟ್ರು ಬಂದ್ರು, ಬಾಳ ಮುಖ್ಯ ವಿಷಯಾ ಐತಿ ಅಂತ ಹೇಳಿ ಕಿಸೆದಾಗಿಂದಾ ಒಂದ ಕಾಗದಪತ್ರಾ ತಗದ್ರು. ಅದು ಗಂಗಮ್ಮನ ಉಯಿಲು ಅಂತ ಹೇಳಿ ಅದರ ಬಗ್ಗೆ ವಿವರಿಸಾಕ ಹತ್ತಿದ್ರು, ಗಂಗಮ್ಮನ ಹತ್ತಿರ ಇದ್ದ ಸಣ್ಣಮಗಳು ಸ್ವಲ್ಪ ದಿವಸದ ಹಿಂದೆ ಬಾವಿ ಹಾರಿಕೊಂಡು ಸತ್ಲಂತ. ಅವಾಗಿಂದ ಹಾಸಿಗಿ ಹಿಡಿದಾಕಿ ಗಂಗಮ್ಮ ಇವತ್ತಿಗೂ ಎದ್ದಿಲ್ಲ. ದ್ಯಾದವಾರ ಓಣ್ಯಾನ ಹಿರೇರನ್ನೆಲ್ಲಾ ಕರಿಸಿ ಉಯಿಲು ಬರೀಸಿಟ್ಟಾಳಾ, ಏನ್ ಬರಸ್ಯಾಳಾ ಅಂದ್ರ ನಂಬಾಕ ಆಗವಲ್ದು. ತನಗ ಇದ್ದ ಮೂರ ಎಕರೆ ಹೊಲಾ, ಊರಿಗೆ ಮಂಜೂರಾದ ಸರಕಾರಿ ಹೈಸ್ಕೂಲಿಗೆ ದಾನಾ ಅಂತ ಕೊಟ್ಟಾಳಾ. ಹಿರೇರು ಬ್ಯಾಡಾ ನೋಡವಾ ಇನ್ನೊಮ್ಮೆ ಇಚಾರಾ ಮಾಡು ಅಂದಿದ್ದಕ್ಕೆ ಅದನ್ನ ಇಟಗೊಂಡು ಏನ್ಮಾಡೋದೈತಿ, ಮಕ್ಕಳೀಗೆ ಹಂಚೀದ್ರೂ ಒಂದೊಂದು ಎಕರೆ ಬರೋಂಗಿಲ್ಲಾ. ಅವರು ಕೂಲಿ ಮಾಡೋದೂ ತಪ್ಪೊಂಗಿಲ್ಲಾ, ಹೊಸಾ ಸಾಲಿ ಬಂತಂದ್ರ ಹಿಂಗ್

ದಾನಾ ಕೊಟ್ಟಿದ್ದಕ್ಕ ತನ್ನ ಹಿರ್‍ಯಾನ ಹೆಸರ ಇಡತಾರಂತ. ಅಷ್ಟರ ತಮ್ಮ ಮನೆತನದ ಹೆಸರು ಉಳೀಲಿ ಅಂತ ಹಟಾ ಹಿಡಿದು ಉಯಿಲು ಬರಿಸ್ಯಾಳಂತ.

ವಾರೆವಾ ಗಂಗಮ್ಮ! ಇದ್ದರ ನಿನ್ನಂಗ ಇರಬೇಕು ನೋಡು, ಒಂದು ವರ್ಷದ ಹಿಂದ ಗಿಡ್ಡಕಾಗಿ ಕಂಡ ಗಂಗಮ್ಮ ಈಗ ಒಮ್ಮೆಲೇ ಗೋಮಟೇಶ್ವರನಂಗ ಆಕಾಶಕ್ಕೂ ಬೆಳೆದು ಅಕೀ ಪಾದಾನ ನನ್ನಷ್ಟು ಎತ್ರಾ ಕಾಣಾಕ ಹತ್ತಿದವು. ಕಷ್ಟದ ಕೆಸರಿನ್ಯಾಗ ಅರಳಿದ ಒಂದು ಅಪರೂಪದ ಆದರ್ಶ ಜೀವಾ ಈ ಮುದುಕಿ ಅಂತ ನಾ ಅನಕೋಬೇಕಾದ್ರ ಶೆಟ್ರು, "ಈಗ ಒಂದ ಸಣ್ಣ ಸಮಸ್ಯಾ ಬಂದೈತಿ. ಸಾಲೀಗೆ ಹಂಗ ಯಾರ್‍ದರ ಹೆಸರ ಇಡಬೇಕಂದ್ರ ಜಮೀನು ಕೊಟ್ಟು ಮ್ಯಾಲೆ ಇಪ್ಪತ್ತೈದು ಸಾವಿರ ರೂಪಾಯಿ ಕೊಡಬೇಕಂತ ಕಾಯ್ದೆ ಐತಿ, ಓಣಿಯವರೆಲ್ಲಾ ಹಂಗಹಿಂಗ ಮಾಡಿ ಹದಿನೈದು ಸಾವಿರ ಕೂಡಿಸೀವಿ. ಇನ್ನ ಹತ್ತ ಸಾವಿರಕ್ಕ, ಯಾಕೋ ಗಂಗಮ್ಮ ನಿಮ್ಮನ್ನ ಭಾಳ ನೆನಸಿದಳು ಅಂತ, ಅಕೀಯೇನೂ ನಿಮ್ಮ ಹತ್ತ ಕೇಳ್ರಿ ಅಂದಿಲ್ಲ ಖರೆ, ಆದ್ರೂ ನಾವಾಗೆ ನಿಮ್ಮ ಕಡೇ ಬಂದೀವಿ' ಅಂದರು. ನನಗೆ ಮೈಯಾಗ ದೇವರು ಬಂದಂಗ ಅನಸಾಕ ಹತ್ತಿತು. ಬ್ಯಾರೇ ಯಾವ ವಿಚಾರಾ ಮಾಡಲಾರದನ ಸೀದಾ ಒಳಗ ಹೋಗಿ ಹತ್ತು ಸಾವಿರ ತಂದು ಶೆಟ್ಟರ ಕೈಯಾಗ ಹಾಕಿದ್ಯಾ, ನನಗರಿವಿಲ್ಲದಂಗ, "ನಿವೇನೂ ಬಾಳ ಚೊಲೋ ಕೆಲಸಾ ಮಾಡಾಕತ್ತಿರಿ ಶೆಟ್ರ ಆದ್ರ ಸಾಲೀಗೆ ನಿಂಗಪ್ಪಜ್ಜನ ಬದಲಾಗಿ ಗಂಗಮ್ಮನ ಹೆಸರು ಇಡತೀರೆನ ನೋಡ್ರಿ ವಿಚಾರ ಮಾಡ್ರಿ" ಅನ್ನೋ ಮಾತು ನನ್ನ ಬಾಯಾಗಿಂದ ಹೊರಗೆ ಬಿತ್ತು.

❖

# ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ

"ಮದಬಂದ ಗೂಳಿಯಂತೆ ಮೆರೆದಾಡುವ ಬಸವಣ್ಣೆಪ್ಪ ಪೈಲ್ವಾನ್ ಮಂಟೂರ ಈತನಿಗೆ ಮುಗಲ ಮೇಲಿನ ಚಿಕ್ಕೆಯನ್ನು ತೋರಿಸದಿದ್ದರೆ ನಾನು ದೇವಳ್ಳಿ ಮಲ್ಲಣ್ಣನೇ ಅಲ್ಲ" ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದ ಆಖಾಡದಲ್ಲಿ ನಡೆಯಲಿರುವ ನಾಲ್ವತ್ತು ಜೋಡಿ ಕುಸ್ತಿಗಳಲ್ಲಿ ಎರಡನೇ ನಂಬರ್ ಕುಸ್ತಿಯ ಬಗೆಗಿನ ಈ ಹೇಳಿಕೆಯನ್ನು ಹ್ಯಾಂಡ್‌ಬಿಲ್‌ನಲ್ಲಿ ದಪ್ಪ ಅಕ್ಷರಗಳಲ್ಲಿ ಮುದ್ರಿಸಿದ್ದನ್ನು ಸುತ್ತಮುತ್ತಲಿನ ಊರಿನ ಹುಡುಗರೆಲ್ಲ ಓದಿ ಬಾಯಪಾಠ ಮಾಡಿ ಆಗಾಗ ಇದನ್ನೇ ಗುನುಗುತ್ತ ಅಡ್ಡಾಡುತ್ತಿದ್ದರು. ಮೊದಲನೇ ನಂಬರ್ ಕುಸ್ತಿ ದಾವಣೇರಿಯ ಚಾರ್ಲಿ ಪೈಲ್ವಾನನಿಗೂ ಮತ್ತು ಅಮರಗೋಳದ ಮನ್ನಪ್ಪ ಪೈಲ್ವಾನನಿಗೂ ನಡೆಯಲಿತ್ತು. ಆದರೆ ಎಲ್ಲರ ಕಣ್ಣೂ ಎರಡನೇ ನಂಬರ್ ಕುಸ್ತಿ ಮೇಲೆಯೇ! ಅದೇ ಹ್ಯಾಂಡ್ ಬಿಲ್‌ನಲ್ಲಿಯ ಇನ್ನೂ ಒಂದು ವಾಕ್ಯ ಎಲ್ಲರ ಬಾಯಲ್ಲೂ ತೇಲುತ್ತಿತ್ತು; ಎರಡನೇ ನಂಬರ್ ಕುಸ್ತಿ ಒಗೆದವರನ್ನು ಆನಿಯ ಮೇಲೆ ಮೆರವಣಿಗೆ ಮಾಡಲಾಗುವುದು ಹಾಗೂ ಒಂದು ಬೆಳ್ಳಿ ಗದೆ ಕೊಡಲಾಗುವುದು ಎಂಬುದು.

ದೇವಳ್ಳಿ ಮಲ್ಲಣ್ಣ ರಾಣೆಬೆನ್ನೂರಿನ ಮರೆಡೆಪ್ಪ ಪೈಲ್ವಾನನ ಶಿಷ್ಯ. ಡಾಕ್, ಟಾಂಗ್‌ಗಳಲ್ಲಿ ಎತ್ತಿದ ಕೈ. ಆದರೆ ಈ ಹಿಡಿತಗಳಿಗೆ ತೋಡಿ ಡಾವ್ ಪೇಚುಗಳಾದ ನಿಕಾಲ್ ಹಾಗೂ ಥೋಬಿಚಾಟ್ಗಳಲ್ಲಿ ಮಂಟೂರ್ ಬಸವಣ್ಣೆ ನಿಸ್ಸೀಮ, ಕೊಲ್ಲಾಪುರಕ್ಕೆ ಹೋಗಿ ಆರು ತಿಂಗಳ ತಾಲೀಮು ಮಾಡಿಕೊಂಡು ಭರ್ತಿಭಾರಿ ತಯಾರಿ ಎನಿಸಿಕೊಂಡಿದ್ದಾನೆ. ಬೆಳಗಾವಿ, ಸಂಕೇಶ್ವರ, ಬೈಲಹೊಂಗಲ್, ಸವದತ್ತಿ, ಧಾರವಾಡ ಸುತ್ತಮುತ್ತಲಿನ ನಾ ನೀ ಎನ್ನುವ ಪೈಲ್ವಾನರೆಲ್ಲ ಚಿತ್‌ಮಾಡಿ ಒಗೆದಿದ್ದಾನೆ. ಈ ವರ್ಷದ ಕರ್ನಾಟಕ ಕೇಸರಿ ಸ್ಪರ್ಧೆಗೂ ಲಗ್ಗೆ ಹಾಕಿದ್ದಾನೆ. ಅನೇಕರನ್ನು ಒಂದೆರಡು ಮಿನಿಟುಗಳಲ್ಲಿಯೇ ಮಣ್ಣು ಮುಕ್ಕಿಸಿದ್ದಾನೆ. ಇಂತಹವರಿಬ್ಬರ ಜೋಡಿ ಕಾದಾಟ ಶ್ರೀ ಸೋಮೇಶ್ವರ ಕುಸ್ತಿಗಾರ ಸಂಘದ ಎಲ್ಲ ಟಿಕೇಟುಗಳನ್ನೂ ಮುಂಗಡವಾಗಿಯೇ ಖಾಲಿಮಾಡಿ ಅಖಾಡ ಹೌಸ್ ಫುಲ್ ಆಗುವುದು ನಿಕ್ಕಿ, ಇದಕ್ಕಾಗಿ ತಾವು

ಇನ್ನೆಂತಹ ಜೋಡಿಗಳನ್ನು ಮುಂದೆ ಬರುವ ಉಗಾದಿಗೆ ಆರಿಸಬೇಕೋ ಎಂದು ಗುಡಿಗೇರಿ, ಅಗಡಿ, ಕುಂದಗೋಳ ಮುಂತಾದ ಊರುಗಳ ಕುಸ್ತಿಗಾರ ಸಂಘಟನೆಗಳು ತೀವ್ರ ವಿಚಾರಕ್ಕೊಳಗಾಗಿವೆ.

ಈ ಜಂಗೀ ನಿಕಾಲಿ ಕುಸ್ತಿಗಳನ್ನು ಆಡಿಸಲಿಕ್ಕೂ ಗಟ್ಟಿ ಮುಟ್ಟಾದ ಹಳೆಯ ಹುಲಿಗಳನ್ನೇ ಹಾಕಿದ್ದಾರೆ. ಶಿಗ್ಲಿಯ ಪರಮೇಶ್ವರಪ್ಪನವರೂ, ಲಕ್ಷ್ಮೇಶ್ವರದ ಸಿ.ಪಿ. ಪಾಟೀಲರೂ ಒಂದಾನೊಂದು ಕಾಲದಲ್ಲಿ ಆ ಭಾಗದಲ್ಲಿಯೇ ಸುಪ್ರಸಿದ್ಧ ಪೈಲ್ವಾನರು. ಇವರು ನಿರ್ಣಾಯಕರಿದ್ದರೆ ಯಾರು ಕುಂಯಿಕ್ ಅನ್ನುವ ಹಾಗಿಲ್ಲ. ನಿರ್ಭೀತ, ನಿಷ್ಪಕ್ಷ, ನಿರ್ಭಿಡೆಯ ನಿರ್ಣಯ ನೀಡುವವರು ಅವರು. ಕಾಟಾ (ಸಮತೂಕದ) ಕುಸ್ತಿ, ಹ್ಯಾವದ ಕುಸ್ತಿ, ಖಡೇದ ಕುಸ್ತಿ ಯಾವುದೇ ಇರಲಿ ಎಲ್ಲರೂ ಸೈ ಅನ್ನಬೇಕು ಹಾಗೆಯೇ ನ್ಯಾಯನಿರ್ಣಯ. ಪೈಲ್ವಾನರಿಗೆಲ್ಲ ಇದೂ ಒಂದು ಸಮಾಧಾನದ ವಿಷಯವೇ.

ಮಲ್ಲಣ್ಣ ಹೇಳಿಕೆಯನ್ನೇನೂ ಕೊಟ್ಟುಬಿಟ್ಟ. ಆದರೆ ಕುಸ್ತಿ ನಿಕಾಲ್ ಮಾಡಿಕೊಳ್ಳುವುದು ಅಷ್ಟೇನೂ ಸುಲಭದ ಮಾತಲ್ಲ. ತಾನು ಟಾಂಗ್ ಹಾಕುವ ಭರದಲ್ಲಿ ಎದುರಾಳಿ ಬಸವಣ್ಣಿಗೆ ತನ್ನ ನಡವೇನಾದರೂ ಸಿಕ್ಕಿಬಿಟ್ಟರೆ..... ದೊಡ್ಡ ಅನಾಹುತವೇ ಆದೀತು. ಮಲ್ಲ್ಯಾನ ನಡ ಸಿಕ್ಕರೆ ನಿಕಾಲ್ ತೆಗೆದುಕೊಂಡು ಅನಾಮತ ಎತ್ತಿ ನೆಲಕ್ಕೆ ಹಾಕಿ ಕುಸ್ತಿ ಮುಗಿಸುತ್ತೇನೆ; ಅಷ್ಟೇ ಅಲ್ಲ ಅವನ ನಡವನ್ನೇ ಮುರಿಯುತ್ತೇನೆ ಎಂದು ಬಸವಣ್ಣಿಯೂ ತನ್ನ ಭೆಟ್ಟಿಯಾದವರ ಎದುರಿಗೆಲ್ಲಾ ಹೇಳುತ್ತಾ ತಿರುಗಾಡುತ್ತಿರುವುದೂ ಮಲ್ಲಣ್ಣನ ಕಿವಿಗೆ ಬಿದ್ದಿದೆ. ಯಾವುದಕ್ಕೂ ಆತ ಬಹಳ ಹುಷಾರಾಗಿಯೇ ಕುಸ್ತಿ ಆಡಬೇಕಾಗಿದೆ. ಒಗೆದರೆ ಪ್ರಖ್ಯಾತಿ, ಬಿದ್ದರೆ ಅಪಖ್ಯಾತಿ ಅಷ್ಟೇ ಅಲ್ಲ ಅವನ ಕುಸ್ತಿ ಭವಿಷ್ಯವೂ ಮಣ್ಣುಗೂಡಿದಂತೆಯೇ. ದನದ ಮನೆಯ ಕಟ್ಟೆಯ ಮೇಲೆ ಕುಳಿತು ತನ್ನ ನೆಚ್ಚಿನ ಹೋರಿ ಮುಕ್ಕಣ್ಣನಿಗೆ ಜೋಳದ ತೆನೆಗಳನ್ನು ತಿನ್ನಿಸುತ್ತಿದ್ದ ಮಲ್ಲಣ್ಣ ಇನ್ನು ಮೂರು ತಿಂಗಳ ಮುಂದೆ ಬರಲಿರುವ ತನ್ನ ಕುಸ್ತಿ ಸ್ಪರ್ಧೆಯ ಬಗ್ಗೆ ಗಾಢ ವಿಚಾರದಲ್ಲಿದ್ದಾನೆ. ಹೋರಿ ಮುಕ್ಕಣ್ಣ ಎರಡೆರಡು ತೆನೆಗಳನ್ನು ಒಮ್ಮೆಲೆ ಬಾಯಿಗೆ ಹಾಕುತ್ತ, ಅವುಗಳನ್ನು ಇಡುವುದು ತುಸು ತಡವಾದರೂ ದೇವಣ್ಣನ ಅಂಗೈ ಮುಂಗೈಗಳನ್ನೆಲ್ಲ ನೆಕ್ಕಿ ಪ್ರೀತಿಯ ಬೇಡಿಕೆ ಸಲ್ಲಿಸುತ್ತಿತ್ತು. ಯಾಂತ್ರಿಕವಾಗಿ ಮಲ್ಲಣ್ಣ ಪುನಃ ಪುನಃ ಹಸಿ ತೆನೆಗಳನ್ನು ಎತ್ತಿಕೊಂಡು ಮುಕ್ಕಣ್ಣನ ಬಾಯಿಗೆ ಕೊಡುತ್ತಲೇಯಿದ್ದ, ಮನಸ್ಸು ಮಾತ್ರ ಬಸವಣ್ಣೆಪ್ಪನನ್ನು ಹೇಗಾದರೂ ಮಾಡಿ ಒಗೆಯಲೇಬೇಕೆಂದು ತಂತ್ರಗಳನ್ನು ರೂಪಿಸುತ್ತಿತ್ತು. ಹೀಗೆ ವಿಚಾರಿಸುತ್ತಲೇ ಆತ ಗರಡಿ ಮನೆ ಕಡೆ ನಡೆದ.

ಅಲ್ಲಿ ತನ್ನ ವಾರಿಗೆಯ ನಾಲ್ಕು ಪೈಲ್ವಾನರ ಜೊತೆ ಕುಸ್ತಿ ಆಡುವುದು, ಒಬ್ಬೊಬ್ಬರೊಡನೆ ಕನಿಷ್ಟ ಅರ್ಧ ತಾಸು ಕಾದಾಟ. ದೊಡ್ಡ ಸಲಿಕೆಯಿಂದ ನೆಲ ಕೊಚ್ಚುವುದು ನಂತರ ಎರಡೂ ಹೆಗಲಿಗೆ ಹಗ್ಗ ಹಾಕಿಕೊಂಡು ಕೊಚ್ಚಿದ ಮಣ್ಣಿನ ಮೇಲೆ ಮಣೆ ಹಾಕಿ ಅದರ ಮೇಲೆ ಒಬ್ಬರನ್ನು ಕೂಡ್ರಿಸಿ ಸುತ್ತೆಲ್ಲ ಮಣೆ ಎಳೆಯುವುದು, ಕಾಲಿಗೆ ಸಾವಿರ ಕೈಯಿಗೆ ಎಂಟುನೂರು ಸಾಮು ತೆಗೆಯುವುದು, ಎಷ್ಟೋ ಸಾರೆ ಹೀಗೆ ಸಾಮು ತೆಗೆಯುವಾಗ ಮೈಯಲ್ಲಿಯ ಬೆವರು ಪಾದದ ಕೆಳಗಿಳಿದು ಅಲ್ಲಿ ಕೆಸರು ನಿರ್ಮಾಣವಾಗಿ ಪಚ್ ಪಚಲ್, ಪಚ್ ಪಚಲ್ ಶಬ್ದ ಹೊರಟು ಕೆಸರಿನ ಹನಿಗಳು ಬೆನ್ನಿನವರೆಗೂ ಬಂದು ಬಡಿಯುತ್ತಿದ್ದವು. “ತಾಲೀಮು ಅಂದರೆ ಮೈಯಾನ್ ಬೆವರು ನೆಲಕ್ಕೆ ಬಿದ್ದು ಕೆಸರಾಗಿ ಹೊಳ್ಳಿ ಬೆನ್ನಿಗೆ ಸಿಡಿದರ ಸೈ. ಇಲ್ಲಾಂದ್ರ ಅದೆಂತಾ ತಾಲೀಮು?” ಎಂದು ಆಳ್ಳಳ್ಳಿ ಗದಿಗೆಪ್ಪಜ್ಜ ತನ್ನ ಹರೆಯದಲ್ಲಿ ತಾನು ಮಾಡಿದ ಕುಸ್ತಿ ತಯಾರಿ ಬಗ್ಗೆ ಆಗಾಗ ಹೇಳುತ್ತಲೇಯಿದ್ದ, ಗದಿಗೆಪ್ಪ ಕುಳ್ಳ ಆದರೆ ಅವನ ಕುಸ್ತಿ ಬಲು ಎತ್ತರದ್ದು, ಎಂತಾ ಹುದ್ದರಿ ಇದ್ದರೂ ಸೈ ಆತ ತಯಾರಿ. ತನ್ನ ಪೈಲ್ವಾನಕಿಯ ಇಪ್ಪತ್ತು ವರ್ಷಗಳಲ್ಲಿ ಮೂವತ್ತು ಖಡೇದ ಕುಸ್ತಿ ಆಡಿ ಅದರಲ್ಲಿ ಇಪ್ಪತ್ತೈದು ಒಗೆದಿದ್ದನು. ಕುಸ್ತಿ ಒಗೆದು ಊರಲ್ಲಿ ಮೆರವಣಿಗೆ ಮಾಡುವಾಗ ನಿಂತ ನಿಂತಲ್ಲೇ ನಡು ರಸ್ತೆಯಲ್ಲಿಯೇ (ಜಿಮ್ನಾಸ್ಟಿಕ್‌ನಲ್ಲಿ ಮಾಡುವ ಹಾಗೆ ಗಾಳಿಯಲ್ಲಿ ಮೇಲೆ ಹಾರಿ ಸಂಪೂರ್ಣ ಒಂದು ತಿರುವು ಲಾಗ ಹಾಕಿ ಮತ್ತೆ ಮೊದಲಿನಂತೆ ನಿಲ್ಲುವುದು. ಮುಮ್ಮುಖವಾಗಿ ತಿರುಗಿದರೆ ಮುಂಗಣ್ಣಿ, ಹಿಂದಕ್ಕೆ ತಿರುಗಿ ಹಾರಿ ನಿಂತರೆ ಹಿಂಗಣ್ಣಿ) ಹೇಗೆ ಹಿಂಗಣ್ಣಿ ಮುಂಗಣ್ಣಿ ಹಾರುತ್ತ ನೋಡುಗರನ್ನು ಚಕಿತಗೊಳಿಸಿಬಿಡುತ್ತಿದ್ದ. ದೇವಳ್ಳಿಯ ಈ ಗರಡಿಮನೆ ಇಂದಿಗೂ

ಗದಿಗೆಪ್ಪಜ್ಜನ ನೆನಪನ್ನು ಎಲ್ಲ ಪೈಲ್ವಾನರಿಗೂ ಕೊಡುತ್ತಲೇ ಇರುತ್ತಿತ್ತು. ಇಲ್ಲಿಯೇ ಮಲ್ಲಣ್ಣನ ತಯಾರಿ. ಈ ಗರಡೀ ಮನೆಯಲ್ಲಿ ಇನ್ನೂ ಅನೇಕ ಸುಪ್ರಸಿದ್ಧ ಪೈಲ್ವಾನರು ಆಡಿ ಹೋಗಿದ್ದಾರೆ. ಅಕ್ಕೂರ ಹಾಲಪ್ಪನ ಕುಸ್ತಿಯಂತೂ ಎಂಥಾ ಹರಿತ! ತನ್ನ ಎರಡೆರಡು ಪಟ್ಟು ತೂಕದ ಪೈಲ್ವಾನರನ್ನೆಲ್ಲ ನೀರು ನೀರು ಅನಿಸಿ ಬಿಡುತ್ತಿದ್ದ! ಕುಸ್ತಿ ಬೀಳಬಾರದೆಂದು ಗಟ್ಟಿಯಾಗಿ ನೆಲಕಚ್ಚುವ ಎದುರಾಳಿಯ ಮೇಲೆ ಕುಳಿತು ಒಂಟಿಸವಾರಿ ಹಾಕಿ ಹೀಚಿಬಿಟ್ಟನೆಂದರೆ ಆತನ ಮೈಯಲ್ಲಿಯ ಎಲುವುಗಳು ಲಟಲಟ ಎನ್ನಬೇಕು. ಬಾಯಲ್ಲಿ ಮೂಗಲ್ಲಿ ಮಣ್ಣುಹೋಗಿ ಸಾಕಪ್ಪಾ ಸಾಕು ಎಂದು ಆತ ಕುಸ್ತಿ ಮುಗಿಸಿಕೊಳ್ಳಬೇಕು. ಕುಸ್ತಿ ಒಗೆದಾಗ, "ಯಾ ಅಲೀ ಮದಾತ್ ಶಿಗ್ಗಿ ಪರಮೇಶಣ್ಣನ ಶಿಷ್ಯಾ" ಎಂದು ತನ್ನ ಉಸ್ತಾದನ ಹೆಸರು ಹೇಳುತ್ತ ಒಂಟಿಕಾಲ ಮೇಲೆ ಕುಣಿಯುತ್ತ ಇಡೀ ಕುಸ್ತೀ ಕಣವನ್ನು ಹಾಲಪ್ಪ ಸುತ್ತಾಡುವ ದೃಶ್ಯ ನೋಡುಗರನ್ನೆಲ್ಲ ಪುಳಕಗೊಳಿಸಿ ಹರೆಯದ ಕಿರಿ ಪೈಲ್ವಾನರ ಮೈಯನ್ನೆಲ್ಲ ಬಿಸಿಮಾಡಿ ಬಿಡುತ್ತಿತ್ತು. ಇನ್ನು ಕಳ್ಳಳ್ಳಿ ನಿಂಗಪ್ಪನ ಕುಸ್ತಿಯಂತೂ ಇಡೀ ಧಾರವಾಡ ಜಿಲ್ಲೆಗೇ ಪ್ರಸಿದ್ಧ. ಮೈಸೂರ ಹುಲಿ ದಾವಣಗೇರಿ ಚಾರ್ಲಿ ಪೈಲ್ವಾನನಿಗೇ ಸಾಕು ಸಾಕನೆಸಿದವನವನು. ಅಜಾನುಬಾಹು, ಚಾರ್ಲಿ ಟಾಂಗ್ ಹಾಕಿದಾಗೊಮ್ಮೆ ನಿಂಗಪ್ಪ ನಿಕಾಲ್ ಒಗೆಯುವವನು. ಎರಡು ಸಾರೆ ಒಗೆದರೂ ಕುಸ್ತಿ ಕಣದ ಹೊರಗೇ ಒಗೆದದ್ದರಿಂದ ಊರಲ್ಲಿಯ ಹಿರಿಯಪಂಚರ ನಿರ್ಣಯದಂತೆ ಕುಸ್ತಿ ಸಮವಾಗಿತ್ತು. ಹೀಗೆಯೇ ಕಟಗಿ ಯಲ್ಲಪ್ಪ, ತೋಟದ ದೊಡ್ಡಬಸಣ್ಣ, ಕಟಗರ ಚಂದ್ರು, ಬಡಿಗೇರ ತುಕಾರಾಂ ಒಬ್ಬರೇ ಇಬ್ಬರೆ ಸುದೀರ್ಘ ಇತಿಹಾಸದ ದೇವಳ್ಳಿ ಗರಡೀಮನೆಯಲ್ಲಿ ಈಗಾಗಲೇ 10-12 ವರ್ಷದಿಂದ ಮಲ್ಲಣ್ಣನ ತಾಲೀಮು ನಡೆದಿದೆ. ಈವರೆಗೆ ಅನೇಕ ಸಣ್ಣಪುಟ್ಟ ಕುಸ್ತಿ ಒಗೆದದ್ದು ಬಿಟ್ಟರೆ ಹೇಳಿಕೊಳ್ಳುವಂತಹ ದೊಡ್ಡ ಕುಸ್ತಿ ಆತನದು ಆಗಿಯೇಯಿಲ್ಲ. ಪ್ರಥಮಬಾರಿ ಹ್ಯಾಂಡ್‌ಬಿಲ್‌ನಲ್ಲಿ ಎರಡನೇ ನಂಬರ್‌ಗೆ ಏರಿದ್ದಾನೆ. ಎರಡೂ ಕೈಗಳನ್ನು ನಡೆದ ಮೇಲೆ ಇಟ್ಟು ನಿಂತುಕೊಂಡ ಈತನ ಫೋಟೋವನ್ನೂ ಅದರಲ್ಲಿ ಹಾಕಿದ್ದಾರೆ. ಆತನ ಎದುರಾಳಿ ಮಂಟೂರ ಬಸವಣ್ಣೆಯಂತೂ ಕೈಗಳೆರಡನ್ನೂ ಮೇಲೆತ್ತಿ ಬಲಗಾಲೊಂದರ ಮೇಲೆಯೇ ನಿಂತುಕೊಂಡ ಪೋಜಿನ ಫೋಟೋ ಹಾಕಿಸಿದ್ದಾನೆ. ನೋಡುಗರಿಗೆ ಒಳ್ಳೆ ಕಾಟಾ ಜೋಡಿಯೇ ಇದು.

ಮೈಯಿಗೆ ಕ್ಯಾವಿ (ಕೆಂಪು ನುಣುಪಾದ ಮಣ್ಣು) ಹಚ್ಚಿಕೊಂಡು ತುಸು ಕೊಬ್ಬರಿ ಎಣ್ಣೆ ಸವರಿಕೊಂಡು, ಗೋಡೆಯ ಮೂಲೆಯಲಿರುವ ಹನುಮಂತನ ಫೋಟೋಕ್ಕೆ ಹಾಗೂ ಮೌಲಾಲಿಯ ಮೂರ್ತಿಗೆ ಕೈಮುಗಿದು ಎಡಗೈ ಮಡಚಿ ಎದೆಗ ಹಚ್ಚಿಕೊಂಡು ಬಲಗೈ ಬೊಗಸೆಯಿಂದ ಎಡರಟ್ಟೆಯ ಮೇಲೆ ಫಟ ಫಟ್ ಎಂದು ನಾಲ್ಕೈದು ಸಾರೆ ಸಡ್ಡು ಹೊಡೆದು ತಾಲೀಮು ಸುರು ಮಾಡುವ ಮಲ್ಲಣ್ಣ, ಮೂರು ನಾಲ್ಕು ತಾಸು ಮುಂಜಾನೆ, ಮೂರು ತಾಸು ಸಂಜೆ, ಗರಡಿ ಮನೆಯಲ್ಲೇ ಇರುತ್ತಾನೆ. ಮನೆಗೆ ಬರುವ ಮೊದಲು ದುಂಡನ್ನ ಬಾವಿಯಲ್ಲಿ ಅರ್ಧತಾಸು ಈಸ್ಯಾಡುತ್ತಾನೆ. ಬೆಳಗಿನ ಊಟದಲ್ಲಿ ಮೊದಲು ಹಿಂದಿನ ರಾತ್ರಿ ತುಪ್ಪದಲ್ಲಿ ನೆನೆ ಹಾಕಿದ ಕೊಬ್ಬರಿ ಚೂರು, ಉತ್ತತ್ತಿ, ಗೋಡಂಬಿ, ಬಾದಾಮಿಗಳನ್ನು ನುರುಸಿ ನುರಿಸಿ ತಿನ್ನುತ್ತಾನೆ. ನಂತರ 10-12 ದಪ್ಪನೆಯ ಗೋಧಿರೊಟ್ಟಿ (ಚಪಾತಿ), ಅಚ್ಚೇರು, ಬೆಣ್ಣೆ ಅಥವಾ ತುಪ್ಪ ಅದರಲ್ಲಿ ಬೆಲ್ಲ, ಕೊನೆಗೆ ದೊಡ್ಡ ತಂಬಿಗೆ ಹಾಲು, ಇಷ್ಟು ಹೊಡೆದು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದು ಪೂರ್ವಾಹ್ನದ ದಿನಚರಿ. ಮಧ್ಯಾಹ್ನದೂಟಕ್ಕೆ ಮತ್ತೆ ಅಚ್ಚೇರು ಬೆಣ್ಣೆ ಬಿಸಿಬಿಸಿ ಸಜ್ಜಕ, ಮೇಲೆ ಒಂದು ತಂಬಿಗೆ ಕಸಕಸಿ ಹಾಲು; ಇದಕ್ಕಾಗಿ ಬೆಳಿಗ್ಗೆಯೇ ಅಚ್ಚೇರು ಕಸಕಸಿ ಇಪ್ಪತ್ತು ಬಾದಾಮಿ ಬೀಜ ನೀರಲ್ಲಿ ನೆನೆಹಾಕಿ ನಂತರ ಒರಳಲ್ಲಿ ತಿರುವಿ ಹಾಲು ಸೋಸಿ ಬೆಲ್ಲ ಕೂಡಿಸಿ ಕೊಡಬೇಕು ಆತನ ಅತ್ತಿಗೆ. ಉಳಿದ ಚಟ್ಟವನ್ನು ಬಾನಿಗೆ ಹಾಕಿದರೆ ಪ್ರೀತಿಯಿಂದ ಹೋರಿ ಮುಕ್ಕಣ್ಣ ತಿನ್ನುತ್ತದೆ. ಮತ್ತೆ ಬೆಳಗಿನಂತೆಯೇ ರಾತ್ರಿ ಊಟ; ಅದರ ಮೇಲೆ 8-10 ಬಾಳೆಹಣ್ಣು.

ಕುಸ್ತಿ ಹೊಂದಿದರೆ ಅನ್ನಾ, ರೊಟ್ಟಿ ಮುಖಾ ನೋಡೋ ಹಂಗಿಲ್ಲ. ಬರೀ ಸಜ್ಜಕ ಚಪಾತಿ, ಬೆಣ್ಣೆ ತುಪ್ಪ ಹಾಲು ಹಣ್ಣು, ಸುಕ್ಕಾಮೇವಾ (ಅಂದರೆ ಉತ್ತತ್ತಿ ಬಾದಾಮಿ ಕೊಬ್ಬರಿ ಕೇರಬೀಜ, ಗೋಡಂಬಿಗಳ ಮಿಶ್ರಣ) ಇಂತಹವುಗಳನ್ನು

ಮಾತ್ರ ಉಣ್ಣುವುದು. ತಿನ್ನುವುದು ಪೈಲ್ವಾನ ಮಲ್ಲಣ್ಣ, ಮಾಂಸಾಹಾರಿಗಳಾಗಿದ್ದರೆ ತತ್ತಿ, ಮಾಂಸ, ಮೀನು ಇತ್ಯಾದಿಯೂ ಇರುತ್ತದೆ. ಆದರೆ ಮಲ್ಲಣ್ಣನಿಗೇಕೋ ಅವು ಹಿಡಿಸುವುದಿಲ್ಲ. ಆತ ಶುದ್ಧ ಶಾಖಾಹಾರಿ.

ಇನ್ನೊಂದು ತಿಂಗಳು ಕುಸ್ತಿ ಇದೆ ಅಂಬುವಾಗ ರಾಣಿಬೆನ್ನೂರಿನ ಮರಡೆಪ್ಪ ಪೈಲ್ವಾನನು ದೇವಳ್ಳಿಗೇ ಬಂದ, ಮಲ್ಲಣ್ಣನಿಗೆ ವಿಶೇಷ ತರಬೇತಿ ನೀಡಲು. ಆಗಲೇ ಅರವತ್ತರ ಸಮೀಪವಿರುವ ಮರಡೆಪ್ಪ ಹಳದಿ ಬಣ್ಣದ ಜರೀ ರುಮಾಲು ಸುತ್ತಿ ದಪ್ಪ ಚಪ್ಪಲಿ ಮೆಟ್ಟಿಕೊಂಡು ಓಣಿಯಲ್ಲಿ ಹೊರಟನೆಂದರೆ ಯಾರಾದರೂ ಸೈ ನಿಂತು ನೋಡಬೇಕು. ಚೂಪು ಕೋರೆ ಮೀಸೆಯ ದುಂಡು ಮುಖದ ಆತನ ಅಂಗೈಗಳೂ ಬೆರಳುಗಳೂ ಕೈ ಸಾಮು ಮಾಡಿ ಮಾಡಿ ಮರದಂತೆ ಒರಟಾಗಿ ಅಗಲವಾಗಿವೆ. ಕಿವಿಗಳು ಕುಸ್ತಿ ಆಡುವಾಗ ತಿಕ್ಕಿ ತಿಕ್ಕಿ ಚಪ್ಪಟೆಯಾಗಿ ಊದಿಕೊಂಡಿವೆ. ಪಾದಗಳೂ ಕಾಲಬೆರಳುಗಳೂ ಸಾವಿರಗಟ್ಟಲೇ ಹಾರಿಕೆ ಸಾಮು ಮಾಡಿದ್ದರಿಂದ ಒಡೆದು ಬಿರುಸಾಗಿ ವಿಸ್ತಾರಗೊಂಡಿವೆ. ಈಗಲೂ ಆತ ನಡೆದರೆ ನೆಲ ಧಗಧಗ ಎನ್ನಬೇಕು. ಜಗತ್ಪ್ರಸಿದ್ಧ ಗಾಮಾ ಗುಂಗಾಗಳ ಕುಸ್ತಿಯನ್ನು ಆತ ನೋಡಿದ್ದಾನೆ. ಮಹಾರಾಷ್ಟ್ರ ಕೇಸರಿಯೊಡನೆ ಹುಬ್ಬಳ್ಳಿ ನೆಹರೂ ಮೈದಾನದಲ್ಲಿ ಕುಸ್ತಿ ಸಮ ಮಾಡಿಕೊಂಡಿದ್ದಾನೆ. ಅನಿಗೋಳ ಸಹದೇವ, ರಾಯಭಾಗ ನಿಜಾಮ, ನೀರಲಗಿ ಕರೀಮ ಮುಂತಾದ ಖ್ಯಾತ ವಿಖ್ಯಾತರನ್ನು ಒಗೆದಿದ್ದಾನೆ. ಈಗಲೂ ರಾಣಿಬೆನ್ನೂರ, ಹಾವೇರಿ, ಮೋಟೆಬೆನ್ನೂರ ದೇವಿ ಹೋಸೂರುಗಳಲ್ಲಿ ಕುಸ್ತಿ ಕಲಿಸಲು ಒಂದೊಂದು ಎರಡೆರಡು ತಿಂಗಳು ಒತ್ತಾಯದ ಮೇರೆಗೆ ಹೋಗುತ್ತಿರುತ್ತಾನೆ. ಈ ತಿಂಗಳು ಪೂರ್ತಿ ಆತ ದೇವಳ್ಳಿ ಕ್ಯಾಂಪಿನಲ್ಲಿ ಮಲ್ಲಣ್ಣನ್ನು ತಯಾರ ಮಾಡಬೇಕಿದೆ. ತನ್ನ ವಿಶೇಷ ಹಿಡಿತವಾದ ಬಗಲಿಮುಳಿಗಿ ನಿಕಾಲ ತೆಗೆದುಕೊಳ್ಳುವುದನ್ನು ಮತ್ತೆ ಮಂಟೂರ್ ಬಸವಣ್ಣಿಯು ನಿಕಾಲ್ ಎತ್ತುವಾಗ ಕೈಯನ್ನು ಹರಿದು (ಬಿಡಿಸಿ)ಕೊಂಡು ಹೋಗುವುದನ್ನು ಹಾಗೂ ಬಗ್ಗಿ ಆತನ ಕಾಲನ್ನೇ ಬಿಗಿಯಾಗಿ ಹಿಡಿದು ಎತ್ತುವುದನ್ನೂ ಇತ್ಯಾದಿಯಾಗಿ ಮಲ್ಲಣ್ಣನಿಗೆ ಕಲಿಸಬೇಕಾಗಿದೆ. ಯಾವುದೇ ಪ್ರಸಂಗಕ್ಕೂ ನಡ ಬಸವಣ್ಣಿಗೆ ಸಿಗದಂತೆ ಬಹಳ ಹುಷಾರಿಯಿಂದಲೇ ಮಲ್ಲಣ್ಣ ಕುಸ್ತಿ ಕಾಯ್ದುಕೊಂಡು ಆಡಬೇಕಿದೆ. ಇದನ್ನು ಕಲಿಸುವ ಗುರುತರ ಜವಾಬ್ದಾರಿಯೆಲ್ಲ ಮರಡೆಪ್ಪ ಪೈಲ್ವಾನನ ಮೇಲಿದೆ.

ಬಾಯಲ್ಲಿಯ ಎಲೆಯಡಿಕೆ ಉಗುಳಿ ಕಿರುಬಾಗಿಲಲ್ಲಿ ಬಗ್ಗಿ ಒಳನುಸುಳಿ ಹಗ್ಗ ಹಿಡಿದು ಗರಡಿಮನೆಯ ಅಖಾಡಕ್ಕೆ ಇಳಿದ ಮರಡೆಪ್ಪ ಮೂಲೆಯಲ್ಲಿ ಹಚ್ಚಿದ ಮಿಣುಕು ದೀಪದಲ್ಲೇ ಎಲ್ಲರನ್ನೂ ನಿಂತುಕೊಂಡು ನೋಡುವಷ್ಟರಲ್ಲೇ ಮಲ್ಲಣ್ಣ ಇತ್ಯಾದಿ ನಾಲ್ಕೈದು ಪೈಲ್ವಾನರು ಬಂದು ಆತನ ಕಾಲುಮುಟ್ಟಿ ನಮಸ್ಕರಿಸಿದರು. “ಇರ್ಲಿ ತಮ್ಮ ಗುಳ್ರಾ ಇರ್ಲಿ” ಎಂದು ಅವರನ್ನೆಲ್ಲ ಆಶೀರ್ವದಿಸುತ್ತಾ ಕಿರುಗಟ್ಟೆಯ ಮೇಲೆ ಮರಡೆಪ್ಪ ಆಸೀನನಾದ. ಪಟಗ ತೆಗೆದು ತೊಡೆ ಮೇಲಿಟ್ಟು ಅರ್ಧ ಬೋಳಾದ ತನ್ನ ತಲೆಯನ್ನು ಕೈಯಾಡಿಸುತ್ತ ಸುತ್ತಲೂ ವೀಕ್ಷಿಸತೊಡಗಿದ. ವಾಹ್! ಮಲ್ಲಣ್ಣ ಎಷ್ಟು ಬದಲಾಗಿದ್ದಾನೆ. ಹೋದ ದೀಪಾವಳಿಯಲ್ಲಿ ಬಂಕಾಪುರದ ಕಣದಲ್ಲಿ ನೋಡಿದಕ್ಕೂ ಈಗಿನದಕ್ಕೂ ಎಷ್ಟೊಂದು ಫರಕು! ಭರ್ತಿ ತಯಾರಿ ಅನ್ನಲು ಅಡ್ಡಿಯಿಲ್ಲ. ಆದರೆ ತುಸು ಮೈ ಹೆಚ್ಚಾಯಿತೇನೋ: ಬಹುಶಃ ತಿನ್ನಾಟ ಹೆಚ್ಚಾಗಿ ದುಡಿತ (ತಾಲೀಮು) ಕಡಿಮೆ ಆಗಿರಬೇಕು. ಮರಡೆಪ್ಪನಿಗೆ ತಡೆಯಲಾಗಲಿಲ್ಲ. “ಮಲ್ಲಣ್ಣಾ ಬಾ ಇಲ್ಲೆ, ದಿನ್ ಸಾವ (ದಿನಾಲೂ) ಕೈ ಸಾಮು ಕಾಲ್ ಸಾಮು ಎಷ್ಟೆಷ್ಟು ಮಾಡ್ತೀಪಾ ಮತ್ತೇನೇನು ತಾಲೀಮು?” ಕೇಳಿದ.

“ಕೈಗೆ ಎಂಟನೂರು, ಕಾಲಿಗೆ ಸಾವಿರ ಸಾಮು ಮಾಡ್ತೀನಿ ಕಾಕಾ" ಎಂದು ಹೇಳಿ ಮತ್ತೆ ತನ್ನ ವ್ಯಾಯಾಮದ ವಿವರವನ್ನೆಲ್ಲ ಮಲ್ಲಣ್ಣ ಕೊಟ್ಟ, ಮರಡೆಪ್ಪನಿಗೆ ಏನೋ ಸ್ವಲ್ಪ ಕೊರತೆ ಅನಿಸಿತೇನೋ ಆತನೆಂದ. “ಕೈಗೆ ಎಷ್ಟು ಮಾಡ್ತೀಯೋ ಕಾಲಿಗೆ ಅದರ ದುಪ್ಪಟ್ಟು ಸಾಮು ಮಾಡಬೇಕು. ಕೈಗೆ ಎಂಟನೂರು ಅಂತೀದಿ ಅಂದ್ರ ಕಾಲಿಗೆ ದೀಡ್ ಸಾವಿರದಷ್ಟಾದರೂ ಮಾಡಬೇಕು. ಆಮ್ಯಾಲೆ ಬೆಳಿಗ್ಗೆ ಗರಡೀಮನೀಗೆ ಇಳಿಯೋ ಮೊದಲು ಕನಿಷ್ಟ ಮೂರು ನಾಲ್ಕು ಮೈಲು ಓಡಿ ಬರಬೇಕು. ಈಗ ಸ್ವಲ್ಪ ಹೊಟ್ಟೆ ಬಂದೈತಿ ಅದು ಇಳೀಬೇಕು. ಸುಖದ ಹೊಟ್ಟೇ ಅಂತ ಸ್ವಲ್ಪ ಇದ್ದ ಇರತೈತಿ ಅಷ್ಟೀದ್ರ ಅಡ್ಡೀಯಿಲ್ಲ" ಹೀಗೆ ಹೇಳುತ್ತಲೇ ಅರಿವೆ ಬಿಚ್ಚಿ ತಾನೂ ಚೆಡ್ಡಿ ಹಾಕಿದ ಮರಡೆಪ್ಪ,

ಅತ್ತ ಮಲ್ಲಣ್ಣನ ತಯಾರಿ ಹೀಗೆ ನಡೆದಿದ್ದರೆ ಇತ್ತ ಬಸವಣ್ಣಿಯ ತಾಲೀಮೂ ಜೋರಾಗಿಯೇ ಸಾಗಿತ್ತು. ಚಂಬಾ ಪೈಲ್ವಾನ್ ಮುತ್ನಾಳ್ ಹಿಂದ್ ಕೇಸರಿ ಪ್ರಶಸ್ತಿ ಗೆದ್ದುಕೊಂಡು ಬಂದ ವಾರವೇ ಬಸವಣ್ಣಿ ಮುತ್ನಾಳಕ್ಕೆ ಸ್ವತಃ ಹೋಗಿ ಆತನ ಪಾದಮುಟ್ಟಿ ನಮಸ್ಕರಿಸಿ ಕನಿಷ್ಟ ಒಂದು ತಿಂಗಳಾದರೂ ತನ್ನೂರಿಗೆ ಬಂದು ತರಬೇತಿ ಕೊಡಬೇಕೆಂದು ಕೇಳಿಕೊಂಡಿದ್ದಕ್ಕೆ ಚಂಬಾ ಪೈಲ್ವಾನ್ ಕೂಡಾ ಇರಲಿ ನಮ್ಮ ಬಾಜು ಊರಿನ ಹುಡುಗ ಎಂದು ಒಪ್ಪಿಕೊಂಡು ಇಲ್ಲಿಗೆ ಬಂದಿದ್ದ. ತನ್ನ ಪ್ರೀತಿಯ ಪಟ್ಟಾದ ಬೈಸಗಿಯನ್ನು ಬಸವಣ್ಣಿಗೆ ಕಲಿಸಿ ಜೊತೆಗೆ ಟಾಂಗ್, ಡಾಕ್ ನಿಕಾಲ್‌ಗಳಲ್ಲಿ ಹೇಗೆ ಉಳಿದುಕೊಳ್ಳಬೇಕೆಂಬುದನ್ನೂ ಹೇಳಿಕೊಡುತ್ತಿದ್ದ. ಆತನ ಕಲಿಯುವ ಆಸಕ್ತಿ ತದೇಕಚಿತ್ತತೆ ಚಂಬಾ ಪೈಲ್ವಾನನಿಗೂ ಆಶ್ಚರ್ಯವನ್ನುಂಟು ಮಾಡಿದ್ದವು. ಹಾಗೆ ನೋಡಿದರೆ ಬಸವಣ್ಣಿ ಕುಸ್ತಿಗಾಗಿ ಬಂದದ್ದೇ ಒಂದು ಆಕಸ್ಮಿಕ. ತನ್ನೂರಿನ ಹನುಮಂತ ದೇವರ ಜಾತ್ರೆಯಲ್ಲಿ ಹನ್ನೆರಡು ವರ್ಷಗಳ ಹಿಂದೆ ಆಗ ಆತನಿನ್ನೂ ಕೇವಲ ಹನ್ನೆರಡು ವರ್ಷದ ಹುಡುಗ, ತನ್ನ ಅಣ್ಣ ಪಶುಪತಿಹಾಳದ ಹುಡುಗನಿಗೆ ಬಿದ್ದು ಬಿಟ್ಟಾಗ ಆತನಲ್ಲಿ ಏಕಾಏಕಿ ದುಃಖ, ರೋಷ ಉಕ್ಕಿ ಅಳುತ್ತ ಬಂದ ತನ್ನಣ್ಣನನ್ನು ಒಗೆದವನ ಜೊತೆ ತಾನೇ ಆಡುವುದಾಗಿ ಸವಾಲು ಹಾಕಿದಾಗ, ಹಿರಿಯ ಶಿವಣ್ಣ ಕಾಕಾ "ಬೇಡ ಬಸವಣ್ಣಿ ಆಸಾಮಿ ನಿನಗೆ ನೀಗಲಿಕ್ಕಿಲ್ಲ" ಎಂದಿದ್ದಕ್ಕೆ "ಕಾಕಾ ಏನಾದಾರಾಗಲಿ ನನ್ನಣ್ಣನನ್ನು ಒಗೆದವನನ್ನು ನಾನು ಬಿಡುವುದಿಲ್ಲ" ಎಂದು ತನ್ನ ಭಾತೃ ಪ್ರೇಮದ ಆವೇಶ ತೋರಿದ್ದ. ಈತನಲ್ಲಿ ಅದಮ್ಯ ಹುರುಪು, ಹುಮ್ಮಸ್ಸು, ಹ್ಯಾಂವ ಉಕ್ಕುತ್ತಿರುವುದನ್ನು ನೋಡಿ ಆಗಲಿ ಆದರೆ ಬಾಳಹುಷಾರಿಂದ ಆಡು ಎಂದಾಗ ತನ್ನಣ್ಣನ ಹನುಮಾನ ಚಡ್ಡಿಯನ್ನೇ ಹಾಕಿಕೊಂಡು ಕುಸ್ತಿಕಣಕ್ಕೆ ಇಳಿದಿದ್ದ.

ಅದ್ಯಾವ ದೇವರು ಬಂದಿತ್ತೋ ಆತನ ಮೈಯಲ್ಲಿ, ಹನ್ನೆರಡು ವರ್ಷದ ಬಾಲಕ ಬಸವಣ್ಣಿ ಕುಣಿಯುತ್ತ, ಕುಣಿಯುತ್ತ ಅಖಾಡ ಸುತ್ತು ಹಾಕತೊಡಗಿದ. ಇವನ ಅಣ್ಣನನ್ನೇ ಒಗೆದವನಿಗೆ ಇವನ್ಯಾವ ಲೆಕ್ಕ ಎಂಬ ಉದಾಸೀನತೆ ಹಾಗೂ ಗರ್ವದಲ್ಲೇ ಬಂದ ಎದುರಾಳಿಯನ್ನು ಸೀದಾ ಹೋಗಿ ರೊಂಡಿಕೊಟ್ಟು (ಆಗ ಆತನಿಗೆ ಬರುತ್ತಿದ್ದುದು ಅದೊಂದೇ ಪಟ್ಟು) ಒಗೆದೇಬಿಟ್ಟ. ನೋಡ ನೋಡುವಷ್ಟರಲ್ಲಿಯೇ ಕುಸ್ತಿ ನಿಕಾಲ್ ಆಗಿ ಮುಗಿದುಹೋಗಿತ್ತು. ಅದೇ ಪ್ರಾರಂಭ! ಹೈಸ್ಕೂಲಿಗೆ ಹೋಗಬೇಕಾಗಿದ್ದ ಬಸವಣ್ಣಿ ಗರಡೀ ಮನೆಗೆ ದಾಖಲಾದ. ಆತನ ಅಣ್ಣ ಗರಡಿಮನೆ ಬಿಟ್ಟು ನಾಲ್ಕೆತ್ತಿನ ಕಮತದ ಕಡೆ ನಡೆದ. ತನ್ನಿಂದ ಆಗಲಾರದ್ದನ್ನು ತನ್ನ ತಮ್ಮ ಬಸವಣ್ಣ ಸಾಧಿಸಿ ತೋರಿಸಿದ್ದಕ್ಕೆ ಆತನ ಮೇಲೆ ಆಗಾಧ ನಂಬಿಕೆ ಹಾಗೂ ಪ್ರೀತಿಯಿಟ್ಟು ತಾನೇ ಕಮತದ ಎಲ್ಲ ಕೆಲಸವನ್ನೂ ನೋಡಿಕೊಂಡು ಬಸವಣ್ಣಿ ಕೇವಲ ತಾಲೀಮು ಮಾಡಿ ತಮ್ಮ ಮನೆಯ ಹೆಸರನ್ನು ಸುತ್ತೂರುಗಳಲ್ಲೆಲ್ಲ ಎತ್ತಿ ಹಿಡಿಯಲೆಂದು ಆತನ ಅಣ್ಣ, ಬಸವಣ್ಣಿಗೆ ಯಾವ ಕೆಲಸವನ್ನೂ ಹಚ್ಚುತ್ತಿರಲಿಲ್ಲ. ಈಗ ನಾಲ್ಕು ವರ್ಷಗಳಿಂದಂತೂ ಆತ ಗರಡೀ ಮನೆಯನ್ನೇ ತನ್ನ ವಾಸದ ಮನೆಯೆನ್ನುವಷ್ಟು ಹಚ್ಚಿಕೊಂಡುಬಿಟ್ಟಿದ್ದ. ಕೇವಲ ಊಟ, ನಿದ್ದೆ ಇತ್ಯಾದಿ ಅವಶ್ಯಕತೆಗಳಿಗೆ ಮಾತ್ರ ಮನೆ ಕಡೆ ಬರುತ್ತಿದ್ದ. ಒಲಂಪಿಕ್ಸ್‌ನಲ್ಲಿ ಈಜು ಸ್ಪರ್ಧೆಯಲ್ಲಿ ಆರು ಸ್ವರ್ಣ ಪದಕ ಗೆದ್ದ ಮಾರ್ಕ್ ಸ್ಪಿಜ್‌ನ ಬಗ್ಗೆ ಯಾರು ಓದಿ ಹೇಳಿದ್ದರೋ ಆತ ಸ್ಪರ್ಧೆಯಿರುವ ಆರು ತಿಂಗಳ ಮೊದಲು ತನ್ ಕೋಚ್ ಒಬ್ಬನ ಜೊತೆ ಬಿಟ್ಟು ಬೇರಾರ ಜೊತೆಗೂ ಮಾತು ಕೂಡಾ ಆಡುತ್ತಿರಲಿಲ್ಲವಂತೆ. ಅರ್ಜುನನಿಗೆ ಹೊಡೆಯಬೇಕಾದ ಹಕ್ಕಿಯ ಕಣ್ಣು ಮಾತ್ರ ಕಾಣುತ್ತಿದ್ದಂತೆ ಬಸವಣ್ಣಿಗೆ ತಾನೂ ಹಿಂದ್ ಕೇಸರಿ, ಭಾರತ ಕೇಸರಿ ಆಗಬೇಕೆಂದು ಮಾತ್ರ ಕಣ್ಣೆದುರು ಇತ್ತು. ತಿನ್ನು ಉಣ್ಣುವುದಕ್ಕಂತೂ ಆತನ ಅಣ್ಣ ಏನೂ ಕಡಿಮೆ ಮಾಡಿರಲಿಲ್ಲ. "ದಿಡಿಯಾಕ ಅಷ್ಟೆ ಯಾಕ ನಾ ಉಪಾಸ ಇರಾಕೂ ತಯಾರು ನನ್ನ ತಮ್ಮನ ಸಲುವಾಗಿ" ಎಂದು ಅನೇಕರೆದುರು ಆತ ಆಗಾಗ ಉಬ್ಬುಬ್ಬಿ ಹೇಳುತ್ತಲೇ ತನ್ನ ತಮ್ಮನ ಮೇಲಿನ ಅಭಿಮಾನವನ್ನು ಅಭಿವ್ಯಕ್ತಿಸುತ್ತಿದ್ದ. ಆ ನಿಷ್ಕಪಟ ಪ್ರೀತಿ ಪ್ರೋತ್ಸಾಹ ಬಸವಣ್ಣಿಗೆ ರಕ್ಷಾ ಕವಚದಂತೆ ಸದಾ ಮನದಲ್ಲಿ ಸುಳಿಯುತ್ತಲೇ ಇದ್ದವು. ಕುಸ್ತಿ ಸೆಣೆಸುವಾಗ ತನ್ನ ಪ್ರಾಣವನ್ನೇ ಪಣಕ್ಕಿಟ್ಟವನಂತೆ ಹೋರಾಡುತ್ತಿದ್ದ. ಆತನ ತಾಲೀಮು ನಡೆದಾಗ ಹಂಯ್ ಹುಂಯ್ ಎಂಬ ಉಸಿರಿನ ಶಬ್ದ ಮೂಡಗಾಳಿ ಬಿಟ್ಟಾಗ ಗರಡೀ ಮನೆಯ ಚಿಕ್ಕ ಕಿಟಕಿಯಿಂದ ಹೊರಬಂದು ತುಸು ದೂರಲ್ಲಿರುವ

ಕಂಬಾರ ಮನೆವರೆಗೂ ಕೇಳುತ್ತಿತ್ತು. ಕಂಬಾರ ರಾಮಣ್ಣನ ಕುಲುಮೆಗೆ ಬಂದ ರೈತರಲ್ಲಿ ಕೆಲ ಪೈಲ್ವಾನರು ಅದನ್ನು ಆಲಿಸುತ್ತ ಪುಳಕಗೊಳ್ಳುತ್ತಿದ್ದರು. ಈ ಸಾರೆಯ ಲಕ್ಷ್ಮೇಶ್ವರದಲ್ಲಿಯ ಕುಸ್ತಿಗೆ ಆತ ತಯಾರಿ ನಡೆಸಿದ್ದನ್ನು ಮನದಲ್ಲಿಯೇ ಮೆಚ್ಚುತ್ತಿದ್ದರು.

ಬಹುದಿನಗಳಿಂದ ಕಾತರದಿಂದ ಕಾಯುತ್ತಿದ್ದ ಆ ಜಂಗೀ ನಿಕಾಲಿ ಕುಸ್ತಿಗಳ ದಿನ ಬಂದೇ ಬಿಟ್ಟಿತು. ಸೋಮೇಶ್ವರ ಜಾತ್ರೆ ಆಗುವುದು ನಡು ಬೇಸಿಗೆಯಲ್ಲಿ, ಉತ್ತರಿ ಬಿಸಿಲಿಗೆ ಎತ್ತು ಬಾಯಿ ತೆಗೆದಿತ್ತು ಎಂಬ ಗಾದೆಯನ್ನು ಊರಲ್ಲಿ ಹತ್ತಾರು ಜನರಾದರು ಹೇಳಲೇಬೇಕು. ಅದರಂತೆಯೇ ವರ್ಷಾದಕಿಂತಾ ಈ ವರ್ಷ ಉಮುರು (ಶೆಕೆ) ಜಾಸ್ತಿ ಐತಿ ನೋಡ ಎನ್ನುತ್ತಲೇ ಧೋತರದ ಚುಂಗಿನಿಂದ ಗಾಳಿ ಹೊಡೆದುಕೊಳ್ಳುತ್ತ ಹಣೆಯ ಮೇಲಿನ ಬೆವರು ಒರೆಸಿಕೊಳ್ಳುತ್ತ ಅನೇಕ ಹಿರಿಯರು ಹಳೆಯ ಚಾವಡಿಯ ಕಟ್ಟೆಯ ಮೇಲಿನ ದೊಡ್ಡ ಬೇವಿನ ಮರದ ನೆರಳಲ್ಲಿ ಕುಳಿತು ಎಲೆಯಡಿಕೆಯ ಚೆಂಚಿಯೊಳಗಿಂದ ಕರಿ ಎಲೆ, ಗೊರಸು ಅಡಿಕೆ, ಬೆಣ್ಣೆಯಂತ ಸುಣ್ಣ ಮೇಲೆ ತಂಬಾಕು ಹೊರತೆಗೆದು ಬಾಯಿಗೆ ಹಾಕುತ್ತ ಲಘು ಹರಟೆಯಲ್ಲಿ ತೊಡಗುವ ಸಮಯದಲ್ಲಿ ಈ ಕುಸ್ತಿಯ ಬಗ್ಗೆ ಪ್ರಸ್ತಾಪ ಬರದಿರುತ್ತದೆಯೇ? ಎಲ್ಲರೂ ನಾಳೆಯ ಕುಸ್ತಿಗೆ ಹೋಗಲೇಬೇಕೆಂದು ಹೇಳುವವರೆ...

ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಸೂರ್ಯ ನೆತ್ತಿಯ ಸುಡುತ್ತಿರುವಾಗ ಕುಸ್ತಿಗಳು ಪ್ರಾರಂಭ. ಮಹಾತಪಸ್ವಿ ಮುಕ್ತಿ ಮಂದಿರ ಅಜ್ಜನವರು ಬಂದು ಉದ್ಘಾಟಿಸಿ ಕೆಲ ಪೈಲ್ವಾನರ ಇನ್ನು ಕೆಲ ಸಂಘಟಕರ ಬೆನ್ನು ಚಪ್ಪರಿಸಿ ತಮ್ಮ ಖರ್ಜು ಧ್ವನಿಯಲ್ಲಿ ಶುಭ ಹಾರೈಸಿದರು. ಕೇವಲ ಹನುಮಾನ ಚಡ್ಡಿ, ಹೆಗಲ ಮೇಲೊಂದು ಕಾವಿ ಬಣ್ಣದ ಗೋಣಿ ಚೀಲದ ಶಲ್ಯ, ಕೊರಳ ತುಂಬಾ ರುದ್ರಾಕ್ಷಿ ಮಾಲೆ, ಗೋಧಿ ಗೆಂಪಿನ ಸ್ಫುರದ್ರೂಪದ ಕಟ್ಟುಮಸ್ತಾದ ಸ್ವಾಮಿಗಳ ಶರೀರ ನೋಡಿ ಎಲ್ಲರೂ ಇಪ್ಪತ್ತೈದು ವರ್ಷಗಳಿಂದ ಅವರೊಬ್ಬರೆ ಆ ಕಾಡಿನಲ್ಲಿ ತಪೋಗೈಯಬೇಕೆಂದರೆ ಅವರೂ ಕೂಡಾ ಸಾಕಷ್ಟು ತಾಲೀಮು ಮಾಡಿದ್ದನ್ನು ನೆನಪಿಸಿಕೊಳ್ಳುತ್ತಲೇ ಖಾನ ಸಾಹೇಬ್ ಸುಂಕದ್ ಮಾಸ್ತರರು ಮೈಕಿನಲ್ಲಿ, ಪ್ರಾರಂಭದ ಜೋಡಿ ಕುಸ್ತಿಗಾರರ ಹೆಸರುಗಳನ್ನು ಒದರಿ ಹೇಳಿದರು. ಎಂದಿನ ತಮ್ಮ ನಾಟಕದ ಹಾಸ್ಯ ಶೈಲಿಯಲ್ಲಿ “ಬರೀ ಬಿಸಿಲಿಗೆ ಮೈಯಾಗ ನೀರಬರಬಾರದು, ಕುಸ್ತಿ ಆಡಿ ಬರಬೇಕು. ಆದ್ರ ಕೆಲವೊಂದು ಹುದ್ದರಿಗಳಿಗೆ ಬರೀ ತಮ್ಮ ಎದುರಾಳಿಯ ಮೈಕಟ್ಟು ನೋಡಿಯೇ ಬೆವರು ಇಳಿಯತೊಡಗುತ್ತದೆ....” ಇತ್ಯಾದಿ ಅಂದಾಗ ಇಡೀ ಅಖಾಡದಲ್ಲಿ ತುಂಬಿದ ಜನ ಖೊಳ್ಳ ಎಂದು ನಕ್ಕಾಗ, ಸುರುವಾತಿನ ಸಣ್ಣ ಎರಡು ಜೋಡಿಗಳು, ತಮ್ಮ ಬಲಗೈಯಿಂದ ಬಲ ತೊಡೆಯ ಒಳಭಾಗಕ್ಕೆ ಪಟ ಪಟ ಎಂದು (ಸದ್ದು) ಹೊಡೆಯುತ್ತ ಕೈಗೆ ಕೈ ಜೋಡಿಸತೊಡಗಿದರು. ಇಂತಹ ಮೂವತ್ತೆಂಟು ಜೋಡಿಯ ಕುಸ್ತಿಗಳು ಆಗಬೇಕು. ಆಮೇಲೆ ಕೊನೆಯ ಆ ಎರಡು ಜೋಡಿಗಳದ್ದು, ನಂಬರ್ ಒಂದು ಹಾಗೂ ನಂಬರ್ ಎರಡನೇ ಕುಸ್ತಿಗಳು. ವಾಡಿಕೆಯಂತೆ ಎಲ್ಲರ ಗಮನ ಒಂದನೇ ನಂಬರ್ ಕುಸ್ತಿಯ ಕಡೆ ಇರಲೇಯಿಲ್ಲ. ಈ ಸಾರೆಯ ಹ್ಯಾಂಡ್ ಬಿಲ್‌ನಲ್ಲಿಯ ಹೇಳಿಕೆ ಪ್ರತಿ ಹೇಳಿಕೆ ಆನೆಯ ಮೇಲಿನ ಮೆರವಣಿಗೆ, ಬೆಳ್ಳಿ ಗದೆ, ಖಡೆ ಇತ್ಯಾದಿಗಳು ಎರಡನೇ ನಂಬರ್ ಕುಸ್ತಿಯನ್ನೇ ಒಂದನೇಯದಕ್ಕಿಂತ ಹೆಚ್ಚು ಆಕರ್ಷವಾಗಿ ಮಾಡಿದ್ದವು. ಥೇಟರ್ ಹೌಸ್ ಫುಲ್ ಆಗಿದ್ದೂ ಅಲ್ಲದೇ ಅನೇಕರು ಪೌಳಿಯ ಹೊರಗಡೆ ಇರುವ ಹುಣಸಿ ಬೇವಿನ ಮರಗಳನ್ನೇರಿ ತಿಕೀಟು ಇಲ್ಲದೇ (ಸಿಗದೇ) ಕುಸ್ತಿಯನ್ನು ದೂರದಿಂದಲೇ ನೋಡತೊಡಗಿದ್ದರು. ತಮ್ಮ ಗಲ್ಲಾಪೆಟ್ಟಿಗೆಯೂ ತುಂಬಿದ್ದರಿಂದ ಸಂಘಟಕರು ಆ ಬಗ್ಗೆ ತಕರಾರು ತೆಗೆಯಲಿಲ್ಲ. ಏನಾದರಾಗಲೀ ಕುಸ್ತಿ ಸಾಂಗವಾಗಿ ನೆರವೇರಿದರೆ ಸಾಕೆಂದು ಮನದಲ್ಲಿಯೇ ದೇವರನ್ನು ನೆನೆಯುತ್ತಿದ್ದರು.

ಮೊದಲನೇ ನಂಬರ್ ಕುಸ್ತಿಯನ್ನು ಕಟ್ಟ ಕಡೆಗೆ ಆಡಿಸುವ ವಾಡಿಕೆಯನ್ನು ಮುರಿದು ಜನಾಗ್ರಹದ ಮೂಲಕ ಎರಡನೇ ನಂಬರ್ ಕುಸ್ತಿಯನ್ನೇ ಕೊನೆಗೆ ಆಡಿಸುವುದಾಗಿ ಮೈಕಿನಲ್ಲಿ ಬಿತ್ತರಿಸಲಾಯಿತು. ಒಂದ್ ಹೋಗಿ ಎರಡಾಗೈತಿ, ಎರಡು ಹೋಗಿ ಒಂದ್ ಆಗ್ಯೆತಿ ಯಾಕಂದ್ರ ಬೆಳ್ಳಿ ಖಡೇ ಒಂದ ಐತಿ ಮತ್ತ ಆನಿಮ್ಯಾಲಿನ ಮೆರವಣಿಗೀನೂ ಒಬ್ಬರದ

ಐತಿ.... ಎಂದು ನಗೆಗಡಲಲ್ಲಿ ಜನರನ್ನು ತೇಲಿಸುತ್ತ ಸುಂಕದ ಮಾಸ್ತರರು ಜಾಹಿರ್ಪಡಿಸಿಯೇ ಬಿಟ್ಟರು. ಆರು ಗಂಟೆಗೆ ಪ್ರಾರಂಭವಾದ ಈ ಜೋಡಿಯ ಕುಸ್ತಿ ಎಲ್ಲರ ನರನಾಡಿಗಳನ್ನು ಬಿಗಿಗೊಳಿಸಿತ್ತು. ಕಣ್ಣು ಕಿವಿಗಳನ್ನು ಮಾತ್ರ ಜಾಗ್ರತವಿಟ್ಟು ಉಳಿದೆಲ್ಲ ಅಂಗಾಂಗಗಳು ತಮ್ಮ ಕೆಲಸವನ್ನು ಸ್ಥಗಿತಗೊಳಿಸಿದ್ದವು. "ಹುಲಿಯೊಡನೆ ಹುಲಿ, ಸಿಂಹದೊಡನೆ ಸಿಂಹ ಆನೆಯೊಡನೆ ಮದ್ದಾನೆ, ಗೂಳಿಯೊಡನೆ ಗೂಳಿ.... ಬಸವಣ್ಣೆಪ್ಪ ಪೈಲ್ವಾನ ಮೂರು ತಲೆಯ ಮನುಷ್ಯ.... ನೋಡ್ರಿ ನೋಡ್ರಿ ಏನ್ ಅವನ ಏರಿದ ಭುಜಗಳು, ಅವು ಎರಡೂ, ತಾಲೀಮು ಮಾಡಿ ಮಾಡಿ ಉಬ್ಬಿ ಬಿಟ್ಟಾವು. ತಲೀಗೆ ಸರೀಸಮಾ ಆಗಿ ಹಿಂದಿಂದ ನೋಡಿದರೆ ಮೂರುತಲಿ ಕಂಡಾಂಗ್ ಆಗತಾವು. ತೊಡಿ ನೋಡ್ರಿ ಹೆಂಗ್ ಉಬ್ಯಾವು, ಅವಾ ಬಗ್ಗಿ ನೋಡಿದ್ರ ಅವನ ಪಾದ ಅವಗs ಕಾಣೋ ಹಂಗಿಲ್ಲ ಯಾಕಂದ್ರ ಅವನ ಎದಿ ಅಷ್ಟೊಂದು ಉಬ್ಬಿಹೋಗಿದೆ. ಆಹಾ ಏನ್ ಭರ್ತಿ ತಯಾರಿ ಕೊಲ್ಹಾಪುರ ತಾಲೀಮು, ಹಿಂದ್ ಕೇಸರಿ ಚಂಬಾ ಮುತ್ನಾಳನ ಶಿಷ್ಯಾ.... ಇನ್ನ ಮಲ್ಲಣ್ಣನ್ನ ನೋಡಿ, ಮಲ್ಲಾ ಅಂದ್ರ ಇವನ ಖರೇ ಮಲ್ಲ, ಜಟ್ಟಿ ನೋಡ್ರಿ ಅವರ ರಟ್ಟಿ ಸಾಮು ತಗದು ತಗದು ಆಗೇವು ಭಾಳ ಗಟ್ಟಿ, ಆ ಉಬ್ಬಿದ ತಗ್ಗಿದ ಮಾಂಸ ಖಂಡದ ತಗ್ಗಿನೊಳಗೆ ರಟ್ಟೆಗೆ ಲಿಂಬಿಹಣ್ಣು ಕಟ್ಟಿದ್ರ ಕಾಣುಹಂಗ ಇಲ್ಲ..... ಸುಪ್ರಸಿದ್ಧ ಪೈಲ್ವಾನ್ ಮರಡೆಪ್ಪನ ಶಿಷ್ಯಾ.... ಇದು ಬಹಳ ಕಾಟಾ (ಸಮ ಶಕ್ತಿಯ, ತೂಕದ) ಕುಸ್ತಿ, ಗುಲ್ಲಾ ಗಲಾಟೆ ಮಾಡದನ ಕೂಡ್ರಿ, ನೋಡ್ರಿ ಆನಂದ ಪಡ್ರಿ, ಎಲ್ಲಾ ಮುಗದ ಮ್ಯಾಲೆ ತಿರುಗಿ ಹೋಗಲಾಕ ವ್ಯವಸ್ಥಾ ಐತಿ, ಈ ಕಾಟಾ ಕುಸ್ತ್ಯಾಗ ಬೇರೆ ಯಾವ ಚಿಂತಿ ಕಾಟಾ ಬ್ಯಾಡಾ. ಆರಾಮ ಶಾಂತರೀತಿಯಿಂದ ನೋಡ್ರಿ. "ಕುಸ್ತಿ ಮುಗಿದ ಮೇಲಿನ ಕೇಕೆ ಸೀಟಿ ಧಾಂದಲೆಗಳು ತಮ್ಮ ಮಾತನ್ನು ಯಾರಿಗೂ ಕೇಳಿಸಲಾರವೆಂಬುದನ್ನು ಮನಗಂಡು ಈಗಲೇ ಎಲ್ಲರಿಗೂ ಧನ್ಯವಾದಗಳನ್ನು ಮೈಕಿನಲ್ಲಿ ಹೇಳಲಾಯ್ತು.

ಫಡ್, ಫಡಲ್, ಫಡ್ ಫಡಲ್ ಬಲ ಮುಂಗೈ ಬೊಗಸೆಯಿಂದ ಎದೆಯ ಮೇಲೆ ಮಡಚಿಟ್ಟ ಎಡಗೈನ ರಟ್ಟೆಯ ಮೇಲೆ (ಸದ್ದು) ಹೊಡೆಯುತ್ತ ಬಸವಣ್ಣಿ ಮಲ್ಲಣ್ಣ ಅಖಾಡಕ್ಕೆ ಬರುತ್ತಲೇ ಕಿವಿಗಡಚಿಕ್ಕುವಂತೆ ಚಪ್ಪಾಳೆಯ ಸದ್ದೆದ್ದಿತು. ದೂರದ ಗಿಡಗಳ ಮೇಲೆ ಕುಳಿತ ಹಕ್ಕಿಪಕ್ಷಿಗಳು ಪುರ್ರನೆ ಹಾರಿ ಆಕಾಶಕ್ಕೆ ನಗೆದವು. ಬಹುಶಃ ಅಲ್ಲಿಂದಲೇ ಅವೂ ಕುಸ್ತಿಯನ್ನು ನೋಡುತ್ತಿವೆಯೇನೋ ಎಂಬಂತೆ ಕೆಲ ಹದ್ದುಗಳು ತೀರ ಮೇಲಿಂದ ನೇರ ಕುಸ್ತಿ ಕಣಕ್ಕೇ ದೃಷ್ಟಿಯನ್ನು ನೆಟ್ಟು ಆಗಸದಲ್ಲಿ ತೇಲುತ್ತಿದ್ದವು.

ಇಬ್ಬರೂ ಪೈಲ್ವಾನರು ಒಂದೆರಡು ಸುತ್ತುಹಾಕಿ ಕಣದ ಮಧ್ಯಕ್ಕೆ ಬಂದಾಗ ಶಿಗ್ಲಿಯ ಪರಮೇಶಣ್ಣ ಇಬ್ಬರದೂ ಕೈ ಜೋಡಿಸಿ, ನಂತರ ಚಕ್ಕನೆ ಬಿಡಿಸಿ, ಇಬ್ಬರನ್ನೂ ಅಗಲಿಸಿ ತಮ್ಮ ಮುಂಗೈಯಿಂದ ಕೆಳಕ್ಕೆ ಸಂಜ್ಞೆ ಮಾಡಿ ಸುರು ಎಂದರು. ಅವರು ಹಿಂದೆ ಸರಿಯುತ್ತಲೇ ಮುಂಗೈ ಮುಷ್ಠಿಗಳಿಂದ ತುಸು ತುಸು ಅಖಾಡದ ಮಣ್ಣನ್ನು ಎತ್ತಿಕೊಂಡು ಪರಸ್ಪರ ವಿನಿಮಯಿಸಿಕೊಳ್ಳುತ್ತ ಉಳಿದಿದ್ದನ್ನು ತಮ್ಮ ಎದೆ ಭುಜಗಳಿಗೆ ಸವರುತ್ತ ಮತ್ತೆ ರಟ್ಟೆ ತೊಡೆಗಳಿಗೆ ಫಡ್ ಫಡ್ ಎಂದು ಸದ್ದು ಹೊಡೆಯುತ್ತ ಮುಂದೆ ಬಂದು ಕೈ ಕೈ ಜೋಡಿಸಿ ಕುಸ್ತಿ ತೀವ್ರ ಪ್ರಾರಂಭಿಸಿದರು.

ಬೇಸಿಗೆಯ ಸೂರ್ಯ ಅಸ್ತವಾಗಿ ಕೆಲಹೊತ್ತು ಇದ್ದ ಆತನ ಬೆಳಕೂ ಕಡಿಮೆಯಾಗುತ್ತಾ ಬಂತು, ಆದರೆ ಕುಸ್ತಿ ಮುಗಿಯುವ ಲಕ್ಷಣ ಕಾಣಲಿಲ್ಲ. ಪಟ್ಟಿಗೆ ಪ್ರತಿ ಪಟ್ಟು ಹಿಡಿತಕ್ಕೆ ಪ್ರತಿ ಹಿಡಿತ, ಒಬ್ಬ ಹಾಕುವ ಡಾವ್ ಪೇಚುಗಳಿಗೆ ಮತ್ತೊಬ್ಬನ ತೋಡಿ ಡಾವ್ ಪೇಚುಗಳು, ಒಂದು ತಾಸಾದರೂ ಕುಸ್ತಿ ನಡೆದೇಯಿತ್ತು. ಇನ್ನೇನು ಕತ್ತಲಾಗಬಹುದೆಂದು ಗ್ಯಾಸ್‌ಗಳನ್ನು ತರಲೂ ಹೇಳಿಕಳಿಸಲಾಯಿತು. ಮೊದಲ ಸಾಲಿನಲ್ಲೇ ಕುಳಿತು ಕುಸ್ತಿ ನೋಡುತ್ತಿದ್ದ ಮರಡೆಪ್ಪನಿಗೆ ಏನೋ ಕಸಿವಿಸಿ ಆಗತೊಡಗಿತು. ಪ್ರಖರ ಬೆಳಕು ಕಡಿಮೆ ಆಗಿದ್ದರಿಂದ ಬಲ ಅಂಗೈಯನ್ನು ಹಣೆಯ ಮೇಲಿಟ್ಟು ಏನನ್ನೋ ದಿಟ್ಟಿಸಿ ನೋಡತೊಡಗಿದ. ಹೌದು, ಮಲ್ಲಣ್ಣನ ಹೊಟ್ಟೆ ಉಸಿರಾಟದ ಜೋರಿನಿಂದಾಗಿ ಹಿಂದಕ್ಕೆ ಮುಂದಕ್ಕೆ ಸರಿದಾಡುತ್ತಿದೆ. ಅಂದರೆ ಆತನಿಗೆ ದಮ್ಮು ಹತ್ತಿದೆ, ಮರಡೆಪ್ಪ ತೀವ್ರ ಕಳವಳಕ್ಕೊಳಗಾದ. ತಾನು ಮಲ್ಲಣ್ಣನಿಗೆ ಎಷ್ಟೊಂದು ಸಾರೆ ಹೇಳಿಲ್ಲ? ಈ ಮೈಯನ್ನು ಕಡಿಮೆ ಮಾಡು, ಇನ್ನೂ ಹೆಚ್ಚೆಚ್ಚು ತಾಲೀಮು ಮಾಡು ಎಂದು. ಆದರೆ

ಆತನು ತಾನು ಮಾಡುತ್ತಿರುವುದೇ ಹೆಚ್ಚೆಂದುಕೊಂಡುಬಿಟ್ಟ. ತಿನ್ನುಣ್ಣುವ ಸುಖಕ್ಕೇನೂ ಕಡಿಮೆಯಾಗಲಿಲ್ಲ. ಅದೇ ಈಗ ಮುಳುವಾಗಿದೆ. ಮಲ್ಲಣ್ಣ ದಣಿದು ಹೋಗಿದ್ದಾನೆ. ಆದರೆ ಬಸವಣ್ಣಿ ಇನ್ನೂ ಚುರುಕಾಗಿಯೇ ಇದ್ದಾನೆ. ಹೀಗೆ ಇನ್ನೂ ತುಸುಹೊತ್ತು ನಡೆದರೆ..... ಎಂದಂದುಕೊಳ್ಳುವಾಗಲೇ ಮತ್ತೆ ಸೆಣಸಾಟ ಜೋರು ಮಾಡಿದ ಬಸವಣ್ಣಿ, ತುಸು ಕತ್ತಲಾಗುತ್ತಿದೆ ಕುಸ್ತಿ ನಿಲ್ಲಿಸಿ ಎಂದು ಮರೆಡೆಪ್ಪ ಹೇಳಬೇಕೆಂದು ಏಳುವುದರಲ್ಲಿದ್ದ ಆದರೆ ಅಷ್ಟರಲ್ಲಿಯೇ ನಾಲ್ಕೈದು ಪೆಟ್ರೋಮಾಕ್ಸ್ ಗ್ಯಾಸ್ ಹೊತ್ತಿಸಿಕೊಂಡು ಹುಡುಗರು ಸಮೀಪ ಬಂದೇಬಿಟ್ಟರು. ಅಖಾಡಕ್ಕೆ ಬೆಳಕೇನೋ ಬಿತ್ತು ಆದರೆ ಮಲ್ಲಣ್ಣನ ಎದೆಯಲ್ಲಿ ಕತ್ತಲಾವರಿಸಿಬಿಟ್ಟಿತು. ನೋಡ ನೋಡುವಷ್ಟರಲ್ಲಿ ಆತನು ನೆಲಕಚ್ಚಿದ. ಕಪ್ಪೆಯಂತೆ ಕುಳಿತ ಆತನ ಪಕ್ಕಕ್ಕೆ ಬಂದ ಬಸವಣ್ಣಿ ತನ್ನ ಬಲ ಮೊಳಕಾಲನ್ನು ಮಲ್ಲಣ್ಣನ ತೊಡೆಯ ಮೇಲಿಟ್ಟು ಬಲಗೈಯನ್ನು ಆತನ ಎರಡೂ ತೊಡೆಯೊಳಗೆ ಸೇರಿಸಿದ. ಎಡಗೈಯನ್ನು ಎಡರಟ್ಟೆಯ ಒಳ ಸೇರಿಸಿ ಕುತ್ತಿಗೆಯ ಮೇಲೆ ಹಾಕಿದ. ಮಲ್ಲಣ್ಣ ತೇಕುತ್ತಿದ್ದ. ಆತನ ಇಡೀ ದೇಹವನ್ನು ತನ್ನ ಎದೆ ಎಡೆಗೆ ಎಳೆದ ಬಸವಣ್ಣಿ ತನ್ನ ಎಡ ಮಂಡಿ ಊರಿ ಮಲ್ಲಣ್ಣನ್ನು ಚಿತ್ತ ಮಾಡಿಬಿಟ್ಟ! ಇಡೀ ಕುಸ್ತಿ ಕಣದಲ್ಲಿ ಒಮ್ಮೆಲೇ ಸೀಟಿ, ಕೇಕೇ ಚಿಮ್ಮತೊಡಗಿದವು. ಇದಕ್ಕಾಗಿಯೇ ಕಾಯುತ್ತಿದ್ದ ಮಂಟೂರ ಜನ ತಮ್ಮ ಪಟಗಗಳನ್ನು ತೂರಿ ಕುಣಿದಾಡತೊಡಗಿದರು. ಹೊರಗಡೆ ಓಡಿದ ಹುಡುಗರು ಒಮ್ಮೆಲೇ ಪಟಾಕಿಗಳನ್ನು ಹಾರಿಸತೊಡಗಿದರು. ಆನೆಯ ಮೇಲೆ ಕುಳಿತ ಮಾವುತ ಇದಕ್ಕಾಗಿಯೇ ಕಾಯುತ್ತಿದ್ದುದರಿಂದ ತಕ್ಷಣ ಅದರ ಕಿವಿಗೆ ತನ್ನ ತುದಿಗಾಲಿನಿಂದ ತಿವಿದು ಆಜ್ಞೆ ಕೊಟ್ಟ. ಅದೂ ತನ್ನ ಸೊಂಡಿಲನ್ನು ಮೇಲೆತ್ತಿ ಓಯ್ ಎಂದು ಘೀಳಿಟ್ಟಿತು.

ತನ್ನ ಮಹಾತ್ವಾಕಾಂಕ್ಷೆಯ ಕುಸ್ತಿಯಲ್ಲಿ ಬಿದ್ದ ಮಲ್ಲಣ್ಣ ಸೀದಾ ದೇವಳ್ಳಿ ದಾರಿ ಹಿಡಿದ. ಊರಿಂದ ಬಂದ ಒಂದೆರಡು ಟ್ರಕ್ಕುಗಳು, ಎಂಟ್ಹತ್ತು ಚಕ್ಕಡಿಗಳು ಇದ್ದರೂ ಐದು ಕಿಲೋಮೀಟರ್ ದೂರದ ಊರೆಡೆಗೆ ಕಾಲ್ ನಡಿಗೆಯಿಂದಲೇ ಒಳದಾರಿ ಹಿಡಿದ. ಅಷ್ಟೊತ್ತಿಗಾಗಲೇ ಆತನ ದುಃಖಕ್ಕೆ ಇಡೀ ನಿಸರ್ಗವೂ ಸ್ಪಂದಿಸಿದಂತೆ ಗಾಢ ರಾತ್ರಿ ಆವರಿಸಿ ಬಿಟ್ಟಿತ್ತು. ನಡೆವ ದಾರಿ ಕಾಣದಂತೆ ಅದನ್ನು ಕತ್ತಲು ಅಪ್ಪಿಕೊಂಡಿತ್ತು. ಆ ಆಲಿಂಗನವನ್ನು ಭೇದಿಸಿ ನಡೆಯತೊಡಗಿದ. ಕಣ್ಣಲ್ಲಿ ಸಣ್ಣಗೇ ಬಸಿಯುವ ನೀರಿನಿಂದಾಗಿ ರಸ್ತೆ ಇನ್ನೂ ಮಬ್ಬಾಗಿತ್ತು. ಆದರೆ ಆತ ಆ ಬಗ್ಗೆ ಎಳ್ಳಷ್ಟೂ ಗಮನಕೊಡಲಿಲ್ಲ. ಹಾಗೆಯೇ ಸುಳುವು ಹಿಡಿದು ಮುಂದೊರೆಯತೊಡಗಿದ. ನೋವು ಹೆಚ್ಚಾದಾಗ ಎಲ್ಲೋ ಸ್ವಲ್ಪ ಕೂಡಬೇಕೆನ್ನಿಸಿದರೂ ಥಕ್ಕನೆ ಇಲ್ಲ ತಾನು ಕೂಡಲು ನಾಲಾಯಕ್ಕು ತನ್ನಂತಹವ ಕೂಡಲೇ ಬಾರದು, ನಿಂತೇ ಇರಬೇಕು. ನಡೆಯುತ್ತಲೇ ಇರಬೇಕು ಎಂದು ನಡಿಗೆ ತೀವ್ರಗೊಳಿಸಿದ. ಆಕಾಶದಲ್ಲಿ ಮಿನುಗುವ ಅಸಂಖ್ಯಾತ ನಕ್ಷತ್ರಗಳೂ ಪಿಳಿ ಪಿಳಿ ಎಂದು ಅಳುತ್ತಿದ್ದವೇ ಹೊರತು ಎಳ್ಳಷ್ಟೂ ಬೆಳಕು ಚೆಲ್ಲದಾಗಿದ್ದವು. ಕಾರಿರುಳೊಳು ಆಗಸದಿ ತಾರೆ ನೂರಿದ್ದರೇನು ದಾರಿಗನ ಕಣ್ಗೆ ಬೇಕೊಂದು ಮನೆ ಬೆಳಕು ಎಂಬ ಡಿ.ವಿ.ಜಿ.ಯವರ ಮಾತಿನಂತಾಗಿತ್ತು ಆ ಸ್ಥಿತಿ. ಆದರೆ ಯಾರ ಕೈ ಬೆಳಕೂ ಮಲ್ಲಣ್ಣನಿಗೆ ಬೇಡವಾಗಿತ್ತು. ಕತ್ತಲಲ್ಲಿ ತನ್ನ ಮುಖ ಯಾರಿಗೂ ಕಾಣದಿರಲಿ ಎಂದೇ ಆತ ಹೀಗೆ ಎಲ್ಲ ಬಿಟ್ಟು ನಡೆಯುತ್ತ ಹೋಗುವುದನ್ನು ಆಯ್ದುಕೊಂಡಂತಿತ್ತು.

ಊರಿಗೆ ಬಂದ ಮಲ್ಲಣ್ಣ ಮನೆಗೆ ಹೋಗದೇ ಸೀದಾ ದನದ ಮನೆ ಕಡೆ ಹೆಜ್ಜೆ ಹಾಕಿದ, ಕಟ್ಟೆಯ ಮೇಲಿದ್ದ ಕಂಬಳಿಯೊಂದನ್ನು ಎಳೆದುಕೊಂಡು ಹಾಗೆಯೇ ಅಡ್ಡಾದ. ಕಣ್ಣು ಮುಚ್ಚಿದ. ಇಲ್ಲ ನಿದ್ದೆ ಬಾರದು ಅತ್ತಿತ್ತ ಹೊರಳಾಡಿದ ಪ್ರಯೋಜನವಾಗಲಿಲ್ಲ. ಹಾಗೆಯೇ ತುಸು ಹೊತ್ತು ಸರಿಯಿತು. ಯಾರೋ ಕಾಲನ್ನು ನೆಕ್ಕಿದಂತೆ ಭಾಸವಾಯ್ತು. ಕಣ್ಣೆರೆದು ನೋಡಿದರೆ ಹೋರಿ ಮುಕ್ಕಣ್ಣ. ಧಡಗ್ಗನೇ ಎದ್ದವನೇ ಅದನ್ನಪ್ಪಿಕೊಂಡ. ತಡೆಹಿಡಿದ ದುಃಖ ಹಂಚಿಕೊಳ್ಳಲು ಬಂದವರು ಸಿಕ್ಕಂತಾಗಿ ತನಗರಿವಿಲ್ಲದಂತೆಯೇ ಅಳುವಾಗಿ ಹೊರಬಿತ್ತು. ಬಿಕ್ಕಿ ಬಿಕ್ಕಿ ಅತ್ತ ಮೂಕ ಮುಕ್ಕಣ್ಣನೊಂದಿಗೆ ತನ್ನ ನೋವು ಸಂಕಟವನ್ನೆಲ್ಲ ಅದೆಷ್ಟೋ ಹೊತ್ತು ಹೀಗೆಯೇ ಹೊರಗೆಡಹಿದ ಮಲ್ಲಣ್ಣ. ಮಧ್ಯರಾತ್ರಿ ಸರಿಯುತ್ತಿದ್ದಂತೆ ಅದ್ಯಾವದೋ ನಿರ್ಣಯಕ್ಕೆ ಬಂದ, ಆಗ ಹೃದಯ ತುಸು ಹಗುರವಾಯಿತು, ಹಾಗೆಯೇ ನಿದ್ರೆ ಹೋದ.

ಮರುದಿನ ಇಡೀ ವಿಶ್ವಕ್ಕೆಲ್ಲ ಎಂದಿನ ಸೂರ್ಯೋದಯವಾಗಿದ್ದರೆ ಅಂದು ಮಲ್ಲಣ್ಣನಿಗೆ ಹೊಸ ಜೀವನೋದಯವಾಗಿತ್ತು. ಮುಕ್ಕಣ್ಣನಿಗೆ ಮಕ್ಕಾಡಹಾಕಿಕೊಂಡು ನಾಲ್ಕೂ ಎತ್ತುಗಳನ್ನು ಹೊಡೆದುಕೊಂಡು ವಡ್ಡರ ಗುಂಡಿ ಕಡೆ ನಡೆದ. ಅವೆಲ್ಲವುಗಳ ಮೈಯನ್ನು ತಿಕ್ಕಿ ತಿಕ್ಕಿ ತೊಳೆದ. ತನ್ನಣ್ಣ ಬೇಡಬೇಡವೆಂದರೂ ಗಳೆ ಕಟ್ಟಿಕೊಂಡು ಅವನೊಡನೆ ತಾನೂ ಹೋಲದ ಕೆಲಸಕ್ಕೆ ನಡೆದ. ಅಂದಿನಿಂದಲೇ ತನ್ನ ಇಡೀ ದಿನಚರಿಯನ್ನೇ ಬದಲಿಸಿಕೊಂಡ. ತಾನು ತನ್ನ ಹೊಲದ ಕೆಲಸ, ಇದಷ್ಟಕ್ಕೆ ತನ್ನೆಲ್ಲ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡ. ಈತ ಯಾವಾಗಲೂ ಹೋರಿಯ ಜೊತೆ ಇರುವುದನ್ನು ನೋಡಿ ಓಣಿಯ ಕೆಲವರು ಮಲ್ಲಣ್ಣ ಜನ ಬಿಟ್ಟ ದನ ಹಿಡಿದ ಎಂದು ಹಾಸ್ಯಮಯವಾದರೂ ಎಲ್ಲೋ ತುಸು ಖೇದದಿಂದಲೇ ಹೇಳುತ್ತಿದ್ದರು. ತಮ್ಮೂರಿನ ಒಂದು ಭರವಸೆಯ ಭಾಗ್ಯ ಕೈ ತಪ್ಪಿದಂತಾಗಿ ಎಲ್ಲರೂ ಸ್ವಲ್ಪವಿಲ್ಲಾ ಸ್ವಲ್ಪವಾದರೂ ನೋವು ಅನುಭವಿಸಿಯೇ ಅನುಭವಿಸುತ್ತಿದ್ದರು.

ಜನರು ಆಡಿಕೊಳ್ಳುತ್ತಿದ್ದ ಆ ಮಾತಿನಲ್ಲಿ ಯಾವ ಉತ್ಪ್ರೇಕ್ಷೆಯೂ ಇರಲಿಲ್ಲ. ಮಲ್ಲಣ್ಣ ತನ್ನ ಹೋರಿ ಮುಕ್ಕಣ್ಣನ ಜೊತೆ ತನ್ನೆಲ್ಲ ಸಮಯ ಕಳೆಯುತ್ತ ಎಲ್ಲ ಸಂಕಟ ಅಪಮಾನ ಮರೆಯುತ್ತ ಯಾವುದೊ ಒಂದು ವಿಭಿನ್ನ ಜೀವನ ಶೈಲಿಗೆ ಬಂದಿದ್ದ. ತನ್ನಿಂದಾಗದ್ದನ್ನು ಅದರಿಂದ ಮಾಡಿಸಬೇಕೆಂದು ಹಠತೊಟ್ಟ, ಆ ಹಠ ಸಹಜವೇ ಆಗಿತ್ತು. ತನ್ನ ಹೋರಿಯಂತಹ ಹೋರಿ ಎಲ್ಲೂ ಇರಬಾರದು. ಅದನ್ನು ಇಡೀ ದೇಶದಲ್ಲೇ ಸುಪ್ರಸಿದ್ಧ ಮಾಡಬೇಕು. ಯಾರೇ ನೋಡಿದರೂ ಸೈ ಸೈ ಅನ್ನಬೇಕು. ಅದಕ್ಕಾಗಿ ಆತ ಅದಕ್ಕೂ ವ್ಯಾಯಾಮ ತಾಲೀಮು ಸುರುಮಾಡಿಸಿದ. ಊರ ಮುಂದಿನ ಹೊಳಿಯ ಮರಳಿನಲ್ಲಿ ಓಡಾಡಿಸತೊಡಗಿದ. ಬಂಡಿ ಬಂಡಿಗಳಲ್ಲಿ ಉಸುಕಿನ ಚೀಲ ಹೇರಿ ಎಳೆಯಿಸತೊಡಗಿದ. ಅದಕ್ಕೆ ತಕ್ಕಂತೆಯೇ ಹೋರಿಗೆ ಚಿತ್ರವಿಚಿತ್ರವಾದ ಆಹಾರ ಕೊಡತೊಡಗಿದ. ಮೂರು ವರ್ಷದ ಮುಕ್ಕಣ್ಣ ಬಿದಿಗೆ ಚಂದ್ರನಂತೆ ಬೆಳೆಯುತ್ತಿದ್ದ. ಅದರ ಕೆನೆ ಬಿಳಿಯ ಬಣ್ಣ, ನೆಟ್ಟ ಮಧ್ಯದಲ್ಲಿ ತುಸು ಹಿಂದೆ ಸರಿದ ಕೋಡುಗಳು ತಿದ್ದಿ ಮಾಡಿದಂತಹ ಮುಖ ಮೈಮಾಟ ಬಲು ಸುಂದರವಾಗಿದ್ದವು. ಕೊರೆದು ಅಚ್ಚು ಹಾಕಿದಂತಹ ಕಾಲಿನ ಕೊಳಗಗಳು, ನೀಟಾದ ತೆಳುವಾದ ಉದ್ದನೆಯ ಬಾಲ ಅದರ ತುದಿಗೆ ಗೊಂಡೆಯಂತಹ ಕೂದಲರಾಶಿ, ಅದು ನಡೆದಾಗ ಅತ್ತಿತ್ತ ಚಾಮರ ಬೀಸಿದಂತೆನಿಸುತ್ತಿತ್ತು. ಬಾಲದ ಕೆಳಗೆ ಎರಡು ತೊಡೆಗಳ ನಟ್ಟ ನಡುಭಾಗದಲ್ಲಿ ಕಾಣುವ ತೆಳ್ಳನೆಯ ಕೆಂಪುಗೆರೆ, ಆ ಗೆರೆ ಹೋಗಿ ಕೆಳಗೆ ಕೂಡುವಲ್ಲಿ ತಳಕ್ಕೆ ಜೋತುಬಿದ್ದ ಮಾಟವಾದ ತರಡು. ಇವೆಲ್ಲವುಗಳಿಗೆ ನೋಡಿದವರ ದೃಷ್ಟಿ ನಾಟದಿರಲಿ ಎಂದು ಮುಂದಿನ ಎಡಕಾಲಿಗೆ ಕರಿ ಕಂಬಳಿಯ ಕೋರಿಯನ್ನು (ದಾರ) ಕಟ್ಟಲಾಗಿತ್ತು.

ಪ್ರಾರಂಭದಲ್ಲಿ ಹೀಗೆ ಸುರುವಾದ ಮುಕ್ಕಣ್ಣನ ಈ ತಯಾರಿ ಬರಬರುತ್ತ ಹೆಚ್ಚು ಹೆಚ್ಚು ಶಿಸ್ತುಬದ್ಧವಾಗಿ ಸಾಗಿತು. ತಾನು ಮಾಡಿದ್ದನ್ನು ತನ್ನಿಂದಾಗಲಾರದನ್ನು ಮುಕ್ಕಣ್ಣನಿಂದ ಮಾಡಿಸಬೇಕಲ್ಲವೇ? ಎಲ್ಲ ಒಂದು ಅಲಿಖಿತ ಆದರೆ ಸ್ಪಷ್ಟ ವೇಳಾಪತ್ರಿಕೆಯಂತೆ ನಡೆಯತೊಡಗಿತು. ಬೆಳಿಗ್ಗೆ ಶಿಗ್ಗಿ ರಸ್ತೆಯ ಮೇಲೆ ಆರು ಕಿಲೋಮೀಟರ್ ಓಟ, ಒಂದೊಂದು ಕಿಲೋಮಿಟರ್‌ಗೆ ಒಬ್ಬರಂತೆ ಹೋರಿಯ ಜೊತೆ ಓಡಲು ಆಳುಗಳನ್ನು ನೇಮಿಸಲಾಯಿತು. ಊರ ಮುಂದಿನ ನದಿಯ ದಂಡೆಯ ಮೇಲಿನ ಮರಳಿನಲ್ಲಿ ತೇರಿನ ಗಾಲಿಗಳ ಬಂಡಿಯಲ್ಲಿ ಮೊದಲು ಮೂವತ್ತು, ನಂತರ ಐವತ್ತು, ಅರವತ್ತು ಹೀಗೆ ಉಸುಕಿನ ಚೀಲ ಹೇರಿಸಿ ಕೇವಲ ಮುಕ್ಕಣ್ಣನೊಬ್ಬನಿಗೇ ನೊಗಹೇರಿ (ಹೂಟಕಟ್ಟಿ) ಎಳೆದಾಡಿಸುವ ದೃಶ್ಯ ನೋಡಲು ಇಡೀ ದೇವಳ್ಳಿಯೇ ನೆರೆಯುತ್ತಿತ್ತು. ವಾರಕ್ಕೊಂದೆರಡು ಸಾರೆ ಮಾತ್ರ ಈ ಎಳೆದಾಟ. ಎರಡು ವರ್ಷಗಳ ಈ ತಯಾರಿ ಆಗುತ್ತಲೇ ಮಲ್ಲಣ್ಣ ತನ್ನ ಹೋರಿಗಾಗಿ ಸ್ಪರ್ಧೆಗಳನ್ನು ಏರ್ಪಡಿಸತೊಡಗಿದ. ಮೊದಲು ದೇವಳ್ಳಿಯ ಬಸವಣ್ಣನ ಜಾತ್ರೆ, ಕಾರಹುಣ್ಣಿಮೆ, ದಸರಾ ಹಬ್ಬಗಳಲ್ಲಿ ಐದಾರು ಚಕ್ಕಡಿಗಳಲ್ಲಿ ಒಂದೊಂದರಲ್ಲಿ ಹತ್ತತ್ತು ಚೀಲ ಜೋಳ ಹೇರಿ ಅದೊಂದರಿಂದಲೇ ಎಳೆದಾಡಿಸತೊಡಗಿದ. ಮುಂದೆ ಶಿಗ್ಗಿ, ಗುಡಗೇರಿ, ಶಿಸುನಾಳಗಳಲ್ಲಿ ನಂತರದ ವರ್ಷದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಗದಗದಲ್ಲಿ 101 ಜೋಳದ ಚೀಲಗಳನ್ನು ಹತ್ತು ಬಂಡೆಗಳಲ್ಲಿ ಅರ್ಧ ಕಿಲೋಮೀಟರ್ ಜಗ್ಗಿಕೊಂಡು ಮುಕ್ಕಣ್ಣ ಒಯ್ದಾಗ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತು.

ಮಲ್ಲಣ್ಣ ತನ್ನ ಹೋರಿಗೆ ತಿನ್ನಿಸುವುದನ್ನು ಕಾಳಜಿ ಮಾಡುವುದನ್ನು ನೋಡಿದವರು ಕೇಳಿದವರು ಅಬ್ಬಾ ಎಂದು ಬಾಯಿಯ ಮೇಲೆ ಬೆರಳಿಟ್ಟುಕೊಳ್ಳಬೇಕು! ಇದು ಹೋರಿಯೋ ಮನುಷ್ಯನೋ ಎನ್ನುವಷ್ಟು ವಿಚಿತ್ರವಾಗಿತ್ತು. ಅದರ ಆಹಾರ ಉಪಹಾರ. ಒಂದೊಪ್ಪತ್ತಿಗೆ ಅರ್ಧಪಡಿ ಹತ್ತಿಕಾಳು ಅರ್ಧಪಡಿ ಹುರುಳಿಯನ್ನು ಕಲಿಸಿ ತಿನ್ನಿಸುವುದು. ಜೋಳದ ಮೇವು ಸೇಂಗಾದ ಹೊಟ್ಟು, ಗೋಧಿ ಹೊಟ್ಟು ಬುಟ್ಟಿ ಬುಟ್ಟಿ ಗಟ್ಟಲೇ ಗೋದಲಿಯನ್ನು ತುಂಬುವುದು ಅದು ಮನೇಚ್ಛೆ ತಿನ್ನಲಿ ಎಂದು, ಒಂದೊಂದು ಸಾರಿಗೂ ನೂರು ನೂರು ಬಾಳೆಹಣ್ಣು ದಿನವೊಂದಕ್ಕೆ ಹತ್ತು ತತ್ತಿಗಳನ್ನು ಒಡೆದು ಗೊಟ್ಟದಲ್ಲಿ ಹಾಕಿ ಬಾಯೊಳಗೆ ಇಳಿಸುವುದು.... ಹಾ! ಮುಕ್ಕಣ್ಣ ಬಾಯಿಚಪ್ಪರಿಸುತ್ತ ನಾಲಿಗೆ ಹೊರಗೆ ಹಿರಿಯುತ್ತ ಗೋಣನ್ನು ಅಲ್ಲಾಡಿಸಿ ಸಂತೃಪ್ತಿ ಸೂಚಿಸುವ ದೃಶ್ಯ ನೋಡುಗರ ಮನ ಸೆಳೆಯುತ್ತಿತ್ತು. ಮತ್ತೊಂದಂದು ದಿನ ಎರಡೆರಡು ಕಿಲೋ ಒಳ್ಳೇ ಎಣ್ಣೆ (ಶೇಂಗಾ ಎಣ್ಣೆ) ಗೊಟ್ಟ ಹಾಕಿದರೆ, ಮತ್ತೆ ಕೆಲಸಾರೆ ಶೇಂಗಾ ಬೀಜ, ಹಸಿ ಜೋಳದ ಮೇವು ಹೆಸರು ಹುರುಳಿ ಬಳ್ಳಿ ತೆನೆಗಳು, ಮನುಷ್ಯನ ಆಹಾರಕ್ಕೂ ಇದಕ್ಕೂ ಸಾಮ್ಯವೇನೋ ಎನ್ನಿಸುವಷ್ಟು ಮಲ್ಲಣ್ಣ ಅದಕ್ಕೆ ತಿನ್ನಿಸುತ್ತಿದ್ದ. ಇದರಿಂದಾಗಿ ಮುಕ್ಕಣ್ಣ ಶೆಗಣಿ ಹಾಕಿತೆಂದರೆ ಇಡೀ ದನದ ಮನೆಯೇ ಹೊಲಸು ನಾರುತ್ತಿತ್ತು. ಮನುಷ್ಯನ ಮಲದಂತೆಯೇ ಆ ವಾಸನೆ.

ಇಷ್ಟೊಂದು ಪರಿಯಿಂದ ಮೇಯುತ್ತಿದ್ದ ಮುಕ್ಕಣ್ಣ ವರ್ಷ ತುಂಬುವುದರಲ್ಲಿ ನೋಡಿದವರಿಗೆ ಗುರುತು ಸಿಗದಂತಾಗಿ ಬಿಟ್ಟಿತು. ಕೊರಳ ಕೆಳಗಿನ ಗಂಗೆದೊಗಲು ದಪ್ಪವಾಗುತ್ತಲೇ ಕೆಳಗಿಳಿದು ಜೋತಾಡತೊಡಗಿತು. ಕೋಡ್ಗಗಳ ಹಿಂದೆ ಭುಜಗಳ ಮೇಲೆ ಎದ್ದುನಿಂತ ಮಾಟವಾದ ಇಣಿ ದಷ್ಟಪುಷ್ಟವಾಗಿ ಇನ್ನೂ ಮೇಲೇರಿ ಮುಕ್ಕಣ್ಣ ನಡೆದಾಡಿದಾಗ ಅತ್ತಿತ್ತ ಹೊರಳಾಡುತ್ತ ಭರತನಾಟ್ಯ ಮಾಡಿದಂತೆನಿಸುತ್ತಿತ್ತು. ಬರಬರುತ್ತ ಅದರ ಎದೆ ಅಗಲವಾಗಿದ್ದರಿಂದ ಎದುರಗಡೆಯಿಂದ ನೋಡಿದವರಿಗೆ ಅದರ ಇಡೀ ಹಿಂಭಾಗ ಕಾಣದಂತಾಯಿತು. ಈಗ ಮುಕ್ಕಣ್ಣನಿಗೆ ಎರಡೆರಡು ಮೂಗುದಾಣ (ದಾರ) ಹಾಕಲಾಯ್ತು. ಬಾಯಿಯ ಮೇಲ್ಭಾಗದ ಮೂಗಿನ ಹೊರಳೆಗಳು ಅಗಲಗೊಂಡು ಸದಾ ಹಸಿಯಿಂದಾಗಿ ಕೆಂಪನೆ ಮಿರಿ ಮಿರಿ ಮಿಂಚುತ್ತಿದ್ದವು. ಅದರಂತೆಯೇ ಅದರ ಒಂದೊಂದು ತೊಡೆಯೂ ದಪ್ಪನಾಗಿ ಒಬ್ಬನ ಇಡೀ ತೆಕ್ಕೆಗೆ ಸಿಗಲಾರದಷ್ಟು ದೊಡ್ಡದಾಗಿ ಬಿಟ್ಟವು. ಮುಕ್ಕಣ್ಣ ನಡೆವಾಗ ಅವು ಇಣಿಯ ಜೊತೆಗೆ ಪೈಪೋಟಿಗಿಳಿದಿವೆಯೇನೋ ಎಂಬಂತೆ ಟಣ್ ಟಣ್ ಎಂದು ಕುಣಿದಾಡುತ್ತಿದ್ದವು. ಓಣಿಗಳಲ್ಲಿ ಅದು ಬರುವ ಸುಳಿವು ಬಹುದೂರದಿಂದಲೇ ತಿಳಿಯುತ್ತಿತ್ತು. ಯಾಕೆಂದರೆ ಎಡಕ್ಕಿಬ್ಬರು ಬಲಕ್ಕಿಬ್ಬರು ಹಗ್ಗ ಹಚ್ಚಿ ಹಿಡಿದುಕೊಂಡು ಬರುವಾಗ ಅದು ಜೋರಾಗಿ ಉಸಿರಾಡಿಸುವುದು ಆಗ ಬುಸ್ ಬುಸ್ ಎನ್ನುವ ಸದ್ದು ಊರ ಆಗಸಿಯಿಂದಲೇ ಕೇಳತೊಡಗುತ್ತಿತ್ತು. ಜನ ಸರಿದು ಸರಿದು ದಾರಿ ಬಿಡುತ್ತಿದ್ದರು. ದನಕರುಗಳಂತೂ ಹೆದರಿ ಅದನ್ನೇ ನೋಡುತ್ತ ತಟಸ್ಥವಾಗುತ್ತಿದ್ದವು. ಮುಕ್ಕಣ್ಣ ತನ್ನ ಚೂಪು ಕೋಡುಗಳಿಂದ ತುಸುವೇ ತಿವಿದರೂ ಸಾಕು ಅವು ಸತ್ತೇ ಹೋಗಬಹುದಾಗಿತ್ತು. ಆದರೆ ಹಾಗೆಂದು ಮುಕ್ಕಣ್ಣ ಎಂದೂ ಯಾರನ್ನೂ ಯಾವ ದನವನೂ ತಿವಿದಿದ್ದಾಗಲೀ ಹಾಯ್ದದ್ದಾಗಲೀ ಇಲ್ಲವೇ ಇಲ್ಲ. ತನಗೆ ಒದಗುತ್ತಿರುವ ಕಾಳಜಿ ಉಪಚಾರಗಳಿಂದಾಗಿಯೋ ಅಥವಾ ತನ್ನ ಕಣ್ಣಲ್ಲಿ ಇತರೆಲ್ಲವೂ ಸಣ್ಣಗಾಗಿಯೋ ಆಶಕ್ತವಾಗಿಯೋ ಕಾಣುತ್ತಿದ್ದುದರಿಂದಲೋ ಮುಕ್ಕಣ್ಣ ಬೇರೆಯವರ ಗೊಡವೆಗೆ ಹೋದದ್ದೇ ಇಲ್ಲ. ನಮ್ಮ ಶ್ರೀಮಂತ ಜನರೂ ಅದರಿಂದ ಪಾಠ ಕಲಿಯಬೇಕು.

ಗದಗದ ನಂತರ ಹುಬ್ಬಳ್ಳಿ ಹರಿಹರ ದಾವಣಗೇರಿ ಬೆಂಗಳೂರಲ್ಲಿಯೂ ಮುಕ್ಕಣ್ಣನ ಎಳೆದಾಟದ ಪ್ರದರ್ಶನ ಏರ್ಪಟ್ಟವು. ಹತ್ತು ಟನ್ನಿನ ಟ್ರಕ್ ಲೋಡ್ ಅನ್ನು ಮುಕ್ಕಣ್ಣನೊಂದೇ ಎಳೆದು ಹೊಸ ದಾಖಲೆ ಸ್ಥಾಪಿಸಿತು. ಪೇಪರಗಳಲ್ಲೆಲ್ಲ ಅದರದೇ ಸುದ್ದಿ, ದೇವಳ್ಳಿ ಹೋರಿ ಎಂದು ಎಲ್ಲೆಡೆ ಹೆಸರಾಯಿತು. ಒಬ್ಬರು ಮಲಗಿ ಬಿಡಬಹುದಾದಷ್ಟು ಅಗಲವಾಗಿದ್ದ ಅದರ ಬೆನ್ನ ಮೇಲೆ ಮಲ್ಲಣ್ಣ ಕೈ ಇಟ್ಟು ಹಾ ನಡೀ ಮುಕ್ಕಣ್ಣಾ ನಡೀ ಎಂದು ಜೋರಾಗಿ ಚೀರಿ ಬಿಟ್ಟರೆ ಸಾಕು ತನ್ನ ಶಕ್ತಿಯನ್ನೆಲ್ಲ ಶೇಖರಿಸಿ ಬಾಲ ನಗರಸಿ ಗೋಣನ್ನು ಕೆಳಗಿನಿಂದ ಮೇಲೆತ್ತಿ ಎದೆಯನ್ನು ಮುಂದೆ ತಂದು,

ಬಲಗಾಲನ್ನು ಮುಂದಿಟ್ಟು ಹೆಜ್ಜೆ ಹಾಕತೊಡಗಿದರೆ ಹಿಂದೆ ಸರಿದದ್ದೇ ಇಲ್ಲ. ಮೈಯಲ್ಲಿಯ ನರನಾಡಿಗಳನ್ನೆಲ್ಲ ಉಬ್ಬಿಸಿಕೊಂಡು ಮುನ್ನುಗ್ಗುವ ಅದರ ಏಕಾಗ್ರತೆ ಅಗಾಧವಾದದ್ದು, ನಿಷ್ಠೆ ಅಪ್ರತಿಮವಾದದ್ದು, ಮಲ್ಲಣ್ಣನ ತಪಸ್ಸಿನ ಫಲವೋ ಎಂಬಂತೆ ತನ್ನ ಸರ್ವಸ್ವವನ್ನೇ ಆತನಿಗೆ ಅರ್ಪಿಸಿ ಮುಕ್ಕಣ್ಣ ತನಗೆ ಹೇರಿದ ಎಲ್ಲವನ್ನೂ ಎಳೆಯುತ್ತಿದ್ದ. ದೊಡ್ಡ ದೊಡ್ಡ ಜಾತ್ರೆ, ವಸ್ತು ಪ್ರದರ್ಶನಗಳಲ್ಲಿ ಮುಕ್ಕಣ್ಣನಿದ್ದರೆ ಮುಗಿಯಿತು. ಅಲ್ಲಿ ಬೇರೆಯದೊಂದೇ ಪರೀಷೆ ನೆರೆಯುತ್ತಿತ್ತು. ಹೀಗೆಯೇ ನಂತರದ ನಾಲ್ಕೈದು ವರ್ಷಗಳು ಜಿಲ್ಲೆಯಾದ್ಯಂತ ದೇವಳ್ಳಿ ಹೋರಿಯ ವರ್ಷಗಳೇ ಎನಿಸಿದವು. ಮಲ್ಲಣ್ಣ ಪೈಲ್ವಾನನ ಹೆಸರಿಗಿಂತ ಮೊದಲು ದೇವಳ್ಳಿ ಹೋರಿಯ ಹೆಸರು ಎಲ್ಲೆಡೆ ಹರಡತೊಡಗಿತು.

ಈ ನಡುವೆ ಮಲ್ಲಣ್ಣ ಮದುವೆಯಾದ, ಎರಡು ಮಕ್ಕಳೂ ಆದವು. ಆದರೆ ಆತನ ಹೋರಿಯ ಮೇಲಿನ ಪ್ರೀತಿಗೆ ಕಿಂಚಿತ್ತೂ ಧಕ್ಕೆ ಬರಲಿಲ್ಲ. ಪ್ರೀತಿ ಪ್ರೇಮದ ಋಣ ತೀರಿಸಲೋ ಎಂಬಂತೆ ಹೋರಿಯೂ ಎಳೆದಾಟದಲ್ಲಿ ಎಂದೂ ಹಿಂದೆ ಮುಂದೆ ಮಾಡಿದ್ದಿಲ್ಲ. ದಪ್ಪನೆಯ ಮಾಂಸಖಂಡಗಳ ಕೊರಳ ಮೇಲೆ ನೊಗ ಇಟ್ಟು ಬ್ಯಾಂಡ್ ಬಾಜಾ ಡೊಳ್ಳು ಬಾರಿಸುವುದ ಸುರುವಾಗಿ ಬಿಟ್ಟರೆ, ನನ್ನ ಬೇಗ ಕೈ ಬಿಡಿರಿ ನಾನು ಇದನ್ನು (ಅದೆಷ್ಟು ಭಾರ ಹೇರಿದ್ದರೂ) ಎಳೆದೇ ತೀರುತ್ತೇನೆಂಬ ಛಲದಿಂದ ಮುಸುಗುಡುತೊಡಗುತ್ತಿತ್ತು. ಹೀಗೆಯೇ ತನ್ನೊಡನೆ ತನ್ನೊಡೆಯನ ಕೀರ್ತಿ ಪತಾಕೆಯನ್ನೂ ಎಲ್ಲೆಡೆ ಹಾರಿಸತೊಡಗಿತು.

ಮುಕ್ಕಣ್ಣನಿಗೆ ಹೊಂದಿಕೊಂಡು ತನ್ನ ನೋವು ನಲಿವುಗಳನ್ನೆಲ್ಲ ಬೆಸೆದುಕೊಂಡ ಮಲ್ಲಣ್ಣನ ಈ ಜೀವನವೂ ಆ ದೇವರ ಮನಸ್ಸಿಗೆ ಬರಲಿಲ್ಲವೇನೋ. ಕೆಲ ವರ್ಷಗಳ ಎಳೆದಾಟದ ದಾಖಲೆಯ ನಂತರ ಒಮ್ಮೆ ಮುಕ್ಕಣ್ಣ ಮುಂಗಾಲು, ಕೊಳಗದ ಕೆಳಗೆ ಸಿಕ್ಕಿಕೊಂಡ ರಸ್ತೆಯ ಮೇಲಿನ ದುಂಡನೆಯ ಕಲ್ಲೊಂದು ಉರುಳಿದ್ದರಿಂದ ಜಾರಿ ಬಿಟ್ಟಿತು. ಅಷ್ಟೇ ತಡ ಹೆಗಲ ಮೇಲೆ ಹೇರಿದ ಭಾರದಿಂದಾಗಿ ಜಾರಿದ ಕಾಲು ಮುರಿದೇ ಹೋಯಿತು. ಅಂಬಾ ಎಂದು ಜೋರಾಗಿ ಚೀರಿದ ದೇವಳ್ಳಿ ಹೋರಿ ನೆಲಕಚ್ಚಿ ಬಿಟ್ಟಿತು. ನೋಡ ನೋಡುವಷ್ಟರಲ್ಲಿ ಎಲ್ಲ ತಲೆಕೆಳಗಾಯಿತು. ಕಕ್ಕಾವಿಕ್ಕಿಯಾದ ಮಲ್ಲಣ್ಣ ಹಾಗೂ ದೇವಳ್ಳಿಯ ಎಂಟತ್ತು ಜನ ಬಂದು ಹೋರಿಯ ಕುತ್ತಿಗೆಗೆ ಕಟ್ಟಿದ ಜತಿಗೆಗಳನ್ನು ಬಿಚ್ಚಲು ಯತ್ನಿಸಿದರು ಆದರೆ ಅದು ಬಿಗಿಯಾಗಿತ್ತು ಗಂಟಲಕ್ಕೆ ಉರುಲಾದಂತಾಗಿ ಹೋರಿ ದೀರ್ಘ ಶ್ವಾಸೋಚ್ಛಾಸ ಮಾಡುತ್ತ ತೇಕುತ್ತ ಮಲಗಿಕೊಂಡಿತ್ತು. ಯಾರೋ ಓಡಿ ಹೋಗಿ ಕುಡಗೋಲೊಂದನ್ನು ತಂದರು. ಕಗ್ಗಂಟಾಗಿದ್ದ ಜತಿಗೆಗಳನ್ನು ಕೊಯ್ದು ಕೊರಳು ಹರಿದು ಹೋರಿಯನ್ನು ಮುಕ್ತಗೊಳಿಸಲಾಯ್ತು ನೊಗ ಹಿಡಿದು, ಕೂಡಿದ ಜನವೆಲ್ಲ ಕೈಹಚ್ಚಿ, ಭಾರ ತುಂಬಿದ ಬಂಡಿಗಳನ್ನು ಹಿಂದೆ ಸರಿಸಿದಾಗ ಹೋರಿ ಮೇಲೇಳಲು ಯತ್ನಿಸಿತು. ಆದರೆ ಒಮ್ಮೆಲೇ ಏಳದಾಯ್ತು. ಮತ್ತೆ ಮತ್ತೆ ಮೇಲೇಳಲು ಪ್ರಯತ್ನಿಸುತ್ತಿದ್ದ ಅದರ ಚಿಂತಾಜನಕ ಪರಿಸ್ಥಿತಿ ನೋಡಿ ಮಲ್ಲಣ್ಣ ಎದೆ ಜೋರಾಗಿ ಬಡೆಯತೊಡಗಿದ್ದಲ್ಲದೇ ಕಣ್ಣಲ್ಲಿ ನೀರೂ ತುದಿಕುಳುಸತೊಡಗಿತು. ಕಠಿಣ ಮನಸ್ಸಿನಿಂದ ಅದನ್ನೆಲ್ಲ ನುಂಗಿಕೊಂಡ. ಈಗ ದುಃಖಿಸುವ ಸಮಯವಲ್ಲ ಹೇಗಾದರೂ ಮಾಡಿ ಹೋರಿಯನ್ನು ಬೇಗ ಮನೆಗೆ ಒಯ್ಯಬೇಕೆಂದು ಅದರ ವ್ಯವಸ್ಥೆ ಮಾಡತೊಡಗಿದ.

* * *

ಹೋರಿಯನ್ನು ಹೇರಿಕೊಂಡು ಬಂದ ಟ್ರಕ್ಕು ದೇವಳ್ಳಿಯ ಅಗಸಿಗೆ ಬರುವಷ್ಟರಲ್ಲಿ ಸುದ್ದಿ ತಿಳಿದ ಜನ ತಂಡೋಪ ತಂಡವಾಗಿ ಬಂದು ದುಃಖ ಕಾತರದಿಂದ ಕಾಯತೊಡಗಿದರು. ಯಾರ ಮುಖದಲ್ಲಿಯೂ ಕಳೆಯಿರಲಿಲ್ಲ. ಅದರಲ್ಲಿಯೇ ತಸು ಹಿರಿಯರು ಹೋರಿಯ ವರ್ಣನೆಯೊಂದಿಗೆನೇ ಮಲ್ಲಣ್ಣನ ಜೀವನಶೈಲಿಯ ಬಗ್ಗೆಯೂ ಮಾತನಾಡತೊಡಗಿದ್ದರೆ ಕಿರಿಯರಿಗೆ ಬೇಗ ಹೋರಿಯನ್ನು ನೋಡಬೇಕೆಂಬ ತವಕ, ಅದರ ಕಾಲು ಮುರಿಯುವುದೆಂದರೆ.. ಅದು ಅವರಿಂದ ಊಹಿಸಲೂ ಅಸಾಧ್ಯವಾಗಿ ಏನೇನೋ ಉದ್ಗಾರಗಳನ್ನು ಎತ್ತತೊಡಗಿದ್ದರು. ಹೋರಿ ನೋವಿನಿಂದ ಅಂಬಾ.... ಎಂದು ಕೂಗಿದ ಆರ್ತನಾದ ಇಡೀ ಕರಜಗಿ ಗ್ರಾಮಕ್ಕೇ ಕೇಳಿತೆಂತಲೂ, ಕಾಲಲ್ಲಿಯ ರಕ್ತ ಒಂದು ಬಕೆಟ್ಟಿಗೂ ಹೆಚ್ಚು ಹರಿದಿತ್ತೆಂದೂ ಮಲ್ಲಣ್ಣ ಗೊಳೋ ಎಂದು ಉರುಳಾಡಿ ಅತ್ತನೆಂದೂ ಹಾಗೆಯೇ ಅವರ ಮಾತಿನಲ್ಲಿ ಕೊಂಚ ಸಹಜ

ಉತ್ಪ್ರೇಕ್ಷೆಯಿದ್ದರೂ ದೇವಳ್ಳಿ ಹೋರಿಯಂತಹ ಹೋರಿ ಭಾರ ಎಳೆದಾಟದಲ್ಲಿ ವಿಕ್ರಮ ಸಾಧಿಸಿದಂತಹ ಹೋರಿ, ಎಳೆಯರ ಕನಸುಗಳಲ್ಲೂ ಬರುವ ಹೋರಿ, ಇಡೀ ಜಾನುವಾರ ಕುಲವೆ ದಿಙ್ಮೂಢರಾಗಿ ನಿಂತು ನೋಡಬೇಕಾದಂತಹ ಹೋರಿಯ ಗಟ್ಟಿಮುಟ್ಟಾದ ಕಾಲುಗಳು ಮುರಿದೇ ಹೋಗುವುದೆಂದರೆ.... ಕಿರಿಯರಿಗಷ್ಟೇ ಏಕೆ ಯಾರಿಗಾದರೂ ತುಸು ಅಪನಂಬಿಕೆ ಆಗುವುದು ಸಹಜವೇ ಆಗಿತ್ತು.

ಬೇರೆಯವರ ಸ್ಥಿತಿಯೇ ಹೀಗಾಗಿದ್ದರೆ ಮಲ್ಲಣ್ಣನದು ಏನಾಗಿರಬೇಡ? ಊಹಿಸಲು ಅಸಾಧ್ಯ ಆತನ ಗೋಳು ಹಾಗೂ ದಳ್ಳುರಿ. ಮುಕ್ಕಣ್ಣ ಮಲ್ಲಣ್ಣನ ಜೀವನದ ನೋವನ್ನು ಮರೆಸಿತ್ತಷ್ಟೇ ಅಲ್ಲದೆ ಆತನಿಗೊಂದು ಎಲ್ಲೆಡೆ ವಿಶೇಷ ಗೌರವ ಸ್ಥಾನಮಾನ ದೊರಕುವಂತೆಯೂ ಮಾಡಿತ್ತು. ಆತನ ಜೀವನದ ಅವಿಭಾಜ್ಯ ಸಂಗಾತಿಯಾಗಿತ್ತು. ಈಗ ಆತನಿಗೆ ನಿಂತ ನೆಲ ಮೇಲಿನ ಆಕಾಶ ಎರಡೂ ಒಮ್ಮೆಲೇ ಕುಸಿದು ಮೈಮೇಲೆ ಬಿದ್ದಂತಾಗಿತ್ತು. ನಡುಹಗಲಲ್ಲಿ ಖಗ್ರಾಸ ಗ್ರಹಣವಾಗಿ ಗಾಢ ಕತ್ತಲಾವರಿಸಿದಾಗ ಕಂಗಾಲಾಗಿ ದಿಕ್ಕೆಟ್ಟು ಓಡಾಡುವ ಪಶು ಪಕ್ಷಿಗಳಂತಾಗಿದ್ದನವನು. ಒಲೆಹತ್ತಿ ಉರಿದರೆ ನಿಲಬಹುದಲ್ಲದೇ ಧರೆಹೊತ್ತಿ ಉರಿದರೆ ನಿಲಲಾಗದು ಎಂಬ ವಚನದಂತೆ ಆತನ ಜೀವನ ಭೂಮಿಕೆಯೇ ಧಗ ಧಗಿಸಿ ಉರಿದಂತಾಗಿತ್ತು. ತನಗೆಷ್ಟೇ ಸಂಕಟವಾದರೂ  ಮಲ್ಲಣ್ಣ ಕರ್ತವ್ಯದಿಂದ ವಿಮುಖನಾಗಲು ತಯಾರಿರಲಿಲ್ಲ. ಎಲ್ಲ ನೋವು ತಳಮಳವನ್ನು ಹತ್ತಿಕ್ಕಿಟ್ಟು ತಜ್ಞ ಪಶುವೈದ್ಯರನ್ನು ಕರೆತಂದ. ಎಷ್ಟು ಖರ್ಚಾದರೂ ಚಿಂತೆಯಿಲ್ಲವೆಂದು ನೇರವಾಗಿ ಹೇಳಿದ. ಔಷಧ, ಗುಳಿಗೆ ಆರೈಕೆ ಇತ್ಯಾದಿಗಾಗಿ ತನ್ನ ಇಡೀ ಆಸ್ತಿಯನ್ನೇ ಪಣಕ್ಕಿಟ್ಟವನಂತೆ ಉಪಚರಿಸತೊಡಗಿದ. ದುಃಖ ಹೆಚ್ಚಾದಾಗ ಕೆಳಗೆ ಕುಳಿತು ಹೊರಿಯ ಕೊರಳಿಗೆ ತೆಕ್ಕೆ ಹಾಕಿ ಕಣ್ಣೀರು ಸುರಿಸುತ್ತಿದ್ದ. ಈತನ ಸಂಕಟ ಅರ್ಥೈಸಿಕೊಂಡಂತೆಯೇ ಹೋರಿಯೂ ನಾಲಿಗೆಯಿಂದ ಮಲ್ಲಣ್ಣನ ಕೈ ಮುಖಗಳನ್ನೆಲ್ಲ ನೆಕ್ಕುತ್ತಲೇ ತನ್ನ ಕಣ್ಣಲ್ಲೂ ನೀರು ಸುರಿಸುತ್ತಿತ್ತು. ಯಾರಿಗೆ ದುಃಖ ಹೆಚ್ಚು ಎಂಬ ಪ್ರಶ್ನೆಗೆ ಉತ್ತರಿಸುವುದು ಯಾರಿಂದಲೂ ಸಾಧ್ಯವಾಗದ ಮಾತಾಯಿತು. ನೆಲದ ಮರೆಯ ನಿಧಾನದಂತೆ ಸಮುದ್ರದೊಳಗಿನ ಬೆಂಕಿಯಂತೆ ಇಬ್ಬರ ನೋವೂ ಅಗಾಧವಾಗಿದ್ದರೂ ಅಗೋಚರವಾಗಿದ್ದಿತು. ಆಣೆಕಟ್ಟೆಯ ಹಿಂದಿನ ವಿಶಾಲ ನೀರಿನ ಒತ್ತಡ ಮೇಲಿನವರಿಗೆ ಕಾಣುವುದು ಸಾಧ್ಯವೇ? ಹಾಗಾಗಿತ್ತು ಆ ಜೋತಿಯ ಸ್ಥಿತಿ. ನಿನಗಾದ ನೋವನ್ನು ನಾನ್ಹೇಗೆ ನೋಡಲಿ? ನಿನ್ನಪಕಾರವನು ನಾನ್ಹೇಗೆ ತೀರಿಸಲಿ? ಎಂದು ಅವರಿಬ್ಬರೂ ಅಂತರಂಗದಲ್ಲಿ ಅಂದುಕೊಳ್ಳುತ್ತ ಪರಸ್ಪರ ಸಂಕಟ ಸಹನೆಯ ಮೌನ ಸ್ಪರ್ಧೆಯಲ್ಲಿದ್ದಂತಿತ್ತು.

ನಾಲ್ಕೈದು ತಿಂಗಳ ಸುಶ್ರೂಶೆಯ ನಂತರ ದೇವಳ್ಳಿ ಹೋರಿಯ ಮುರಿದ ಕಾಲು ಜೋಡಣೆಯಾಯಿತು. ಆದರೆ ಆ ಕಾಲನ್ನು ಪೂರ್ತಿಯಾಗಿ ಊರಿ ಹೋರಿ ನಡೆದಾಡದಾಯಿತು. ತುಸು ತುಸುವೇ ಕೊಳಗದ ತುದಿಯನ್ನು ನೆಲಕ್ಕೆ ಹಚ್ಚಿ ತಕ್ಷಣ ಬೇರೆ ಕಾಲಿಗೆ ತನ್ನ ಭಾರ ಬದಲಾಯಿಸುತ್ತ ಅದು ನಡೆಯಬೇಕಾಯಿತು. ಕುಂಟುತ್ತ ಕುಂಟುತ್ತ ನಡೆಯುವ ಹೋರಿಯನ್ನು ನೋಡಿ ಕಪ್ಪೆಯು ಜಿಗಿದು ಜಿಗಿದು ಹಾರಿದಂತೆನಿಸಿದರೆ..... ಈ ಹಿಂದೆ ಇದೇ ಹೋರಿ ಟುಣಕ್ಕ ಟುಣಕ್ಕ ಎಂದು ಪುಟಿಯುತ್ತ ಬರುವುದು ಆಗ ಆನೆಯ ಗಂಭೀರ ನಡೆಗೆಯನ್ನು ನೆನಪಿಗೆ ತರುತ್ತಿತ್ತು. ಅಂದು ಗಜಗಮನ ಮುಕ್ಕಣ್ಣ ಇಂದು ಮಂಡೂಕ ಮೂರ್ಕಾಲಣ್ಣ! ಯಾರಿಗೆ ತಾನೇ ಸಹ್ಯ ಈ ದೃಶ್ಯ? ಆದಾಗ್ಯೂ ಇಷ್ಟಾದರೂ ಆಯಿತಲ್ಲ ಎಂದು ಮಲ್ಲಣ್ಣ ಸಮಾಧಾನದ ಉಸಿರುಬಿಟ್ಟ. ಮುಕ್ಕಣ್ಣನಿಂದ ತುಸು ದೂರಾಗಿ ಕಮತದ ಇನ್ನಿತರ ಹ್ವಾರೆಗಳಿಗೆ ಮನಸ್ಸು ಹರಿಸತೊಡಗಿದ.

ಅದೊಂದು ದಿನ ಆಷಾಢದ ಗಾಳಿ ಬೀಸ್ಯಾಡಿ ಹೊಡೆವಾಗ ಹೇಸಿ ನನ್ನ ಜೀವ ಹೆಣ್ಣ್ಯಾಕೆ ಆಗಲಿಲ್ಲ ಎಂದು ದೇವಳ್ಳಿಯ ರೈತರು ಅಂದುಕೊಳ್ಳುವ ಕರುನಸುಕಿನಲ್ಲಿ ಹಾವೇರಿ ಪೇಟೆಯಲ್ಲಿ ಹೊಸದಾಗಿ ತಂದ ಜೋಡು ಹೋರಿಗಳಲ್ಲೊಂದು ಮುಕ್ಕಣ್ಣ ಮಲಗಿಕೊಂಡಾಗ ತನ್ನ ಚೂಪು ಕೋಡುಗಳಿಂದ ತಿವಿದು ಸಣ್ಣ ಗಾಯವೊಂದನ್ನು ಮಾಡಿ ಹೋಗಬೇಕೆ? ಮೈ ಮೇಲಾದ ಗಾಯ ಅಲ್ಪವಾಗಿದ್ದರೂ ದೇವಳ್ಳಿ ಹೋರಿಯ ಮನಸ್ಸಿನ ಮೇಲಾದ ಗಾಯ ಹೇಳಲಾರದಷ್ಟಾಗಿತ್ತು. ಕೇವಲ ಅದರ ಬುಸುಗುಡುವ ಉಸಿರಿಗೆ ಚಕಿತರಾಗಿ ನಿಂತು ನೋಡುತ್ತಿದ್ದ ದೇವಳ್ಳಿಯ ಇತರ

ದನಕರು ಎತ್ತು ಹೋರಿಗಳೆಲ್ಲಿ? ಏನೂ ಇತಿಹಾಸ ಗೊತ್ತಿರದ ಈ ಹೊಸ ಹೋರಿ ಎಲ್ಲಿ? ಆ ಕಾಲದಲ್ಲಾಗಿದ್ದರೆ ಕೇವಲ ಮುಕ್ಕಣ್ಣ ಜೋರಾಗಿ ಸೀತರೇ ಸಾಕಿತ್ತು ಹೊಸ ಹೋರಿಗಳ ಎದೆಯಲ್ಲಿ ನಡುಕ ಪ್ರಾರಂಭವಾಗುತ್ತಿತ್ತು. ಅಂದು ಹಾಗೆ ಇಂದು ಹೀಗೆ, ಕಾಲಯ ತಸ್ಮೈನಮಃ, ಮುಕ್ಕಣ್ಣನ ಶಕ್ತಿ ಸಂಪೂರ್ಣ ಸಾತ್ವಿಕಶಕ್ತಿ. ಎಂದೂ ಯಾರನ್ನೂ ಹಾಯ್ದಿಲ್ಲ. ನೋಯಿಸಿಲ್ಲ. ಆದರೆ ಈ ಹೊಸಹೋರಿ ಮಾಡಿದ ಗಾಯ ಮುಕ್ಕಣ್ಣನಿಗೆ ಎಂದೂ ಮಾಯದ ಗಾಯ, ತನ್ನ ಚಕ್ರಾಧಿಪತ್ಯದ ಪತನದ ಪ್ರತೀಕ. ತಾನು ಸುಮ್ಮನೇ ಇದ್ದರೂ ಹಾಯ್ದು ಹೋಗುವುದೆಂದರೆ, ಅಂದರೆ ತನ್ನ ಅವನತಿ ಸನ್ನಿಹಿತವಾದಂತೆಯೇ?

ಮುಕ್ಕಣ್ಣ ಮತ್ತು ನೆಲಹಿಡಿಯಿತು. ಕೇವಲ ನೀರು ಕುಡಿಯಲು ಮಾತ್ರ ಬಲು ಪ್ರಯಾಸಪಟ್ಟು ಎದ್ದು ಬಾನಿಯವರೆಗೂ ಹೋಗಿ ಬರುತ್ತಿತ್ತು. ಕೂಳು ತಿನ್ನುವುದನ್ನೂ ಕಡಿಮೆ ಮಾಡಿತು. ದಿನದಿನವೂ ಕೃಶವಾಗತೊಡಗಿತು. ಮಾಂಸ ಖಂಡಗಳಿಂದ ತುಂಬಿದ ಮೈಯಲ್ಲಿ ಅಲ್ಲಲ್ಲಿ ಕ್ರಮೇಣ ಎಲುವುಗಳು ಕಾಣತೊಡಗಿದವು. ತುಂಬಿಕೊಂಡ ಗಂಗೆದೊಗಲು ಖಾಲಿ ಚೀಲದಂತೆ ಮುರುಟಿಗೊಂಡು ಜೋತಾಡತೊಡಗಿತ್ತು. ಫಳ ಫಲನೇ ಹೊಳೆಯುವ ಕೆಂಗಣ್ಣುಗಳು ನಿಸ್ತೇಜವಾಗತೊಡಗಿದವು. ಉಬ್ಬಿ ಮುಂಚಾಚಿದ ಎದು ಕರಗಿ ಗೂಡುಗಟ್ಟಿದಂತಾಯಿತು. ಈ ನಡುವೆಯೇ ಪಕ್ಕದ ಮನೆಯ ನೀಲನಗೌಡನ ಮದುವೆ ನಡೆಯಿತು. ಒಟ್ಟು ಐದು ದಿನದ ಕಾರ್ಯಕ್ರಮ ನಿರಂತರವಾಗಿ ಬ್ಯಾಂಡ್ ಬಾಜಾ, ಸನಾದಿ ಸಂಬಾಳ ಬಾರಿಸುವುದು ನಡದೇಯಿತ್ತು. ತನ್ನ ಕಿವಿಗೆ ಬಿದ್ದ ಈ ಸಂಗೀತದಿಂದ ತನ್ನ ಹಿಂದಿನ ಮೆರವಣಿಗೆ ದಿನಗಳನ್ನು ನೆನೆದು ಮೆಲುಕು ಹಾಕಿದ ಹೋರಿ ಅಪಾರ ನೋವು ಸಂಕಟದಿಂದ ಒದ್ದಾಡಿತು. ಆ ಐದು ದಿನದ ಕಾರ್ಯಕ್ರಮ ನಿರಂತರವಾಗಿ ಬ್ಯಾಂಡ್ ಬಾಜಾ, ಸನಾದಿ ಸಂಬಾಳ ಬಾರಿಸುವುದು ನಡದೇಯಿತ್ತು. ತನ್ನ ಕಿವಿಗೆ ಬಿದ್ದ ಈ ಸಂಗೀತದಿಂದ ತನ್ನ ಹಿಂದಿನ ಮೆರವಣಿಗೆ ದಿನಗಳನ್ನು ನೆನೆದು ಮೆಲಕು ಹಾಕಿದ ಹೋರಿ ಅಪಾರ ನೋವು ಸಂಕಟದಿಂದ ಒದ್ದಾಡಿತು. ಆ ಐದು ದಿನವೂ ಮೇವು ನೀರನ್ನು ಬಿಟ್ಟು ಬ್ಯಾಂಡ್ ಬಾಜಾ ಸಪ್ಪಳಕ್ಕೆ ತನ್ನ ಗೋಣನ್ನು ಅಲ್ಲಾಡಿಸುತ್ತ ಅಲ್ಲಾಡಿಸುತ್ತ ತನ್ನ ಕೊನೆಯುಸಿರನ್ನೆಳೆಯಿತು.

* * *

ಹೋರಿಯ ಹಿಂದೆ ಹೋಗಿ, ಹಾಳಾಗಿ ಹೋದ ಮಲ್ಲಣ್ಣ, ಎಂದು ಕೆಲವರಾದರೂ ಆಡಿಕೊಂಡಿದ್ದರೂ ಅದ್ಯಾವುದನ್ನೂ ಕಿವಿಗೆ ಹಾಕಿಕೊಳ್ಳದೇ ಮಲ್ಲಣ್ಣ ಸತ್ತ ಹೋರಿಯ ದೊಡ್ಡ ಮೆರವಣಿಗೆಯನ್ನೇ ಮಾಡಿ ಊರ ಮುಂದಿನ ತನ್ನ ಹೊಲದಲ್ಲಿ ಹೂತ, ಹೋರಿ ಏನೋ ಹೋಯಿತು ಆದರೆ ಅದರೊಡನೆಯ ಕರುಳ ಸಂಬಂಧ? ಇಲ್ಲ! ಎಳ್ಳಷ್ಟು ಕಡಮೆ ಆಗಲೇ ಇಲ್ಲ. ನಿಸರ್ಗದಲ್ಲಿಯ ಅತ್ಯಂತ ಅಪ್ಯಾಯಮಾನವಾದ ಸಂಬಂಧಗಳು ಎಲ್ಲ ಕಟ್ಟು ಕಟ್ಟಳೆಗಳನ್ನೂ ಮೀರಿಯೇ ಇರುತ್ತವಲ್ಲವೇ? ಅಂತೆಯೇ ಮಲ್ಲಣ್ಣ ಹುಗಿದ ಹೋರಿಯ ಕುಣಿಯೆಡೆಗೆ ಆಗೀಗ ಹೋಗಿ ಬರುತ್ತಲೇ ಇದ್ದ. ಹುಗಿದ ಜಾಗೆಯ ಗುರುತು ಸಿಗಲೆಂದೂ ಹಾಗೂ ಗಳೆಗಳು ಅದರ ಮೇಲೆ ತಿರುಗಾಡಿದಾಗ ಅದು ಮಾಸಿಹೋಗದಿರಲೆಂದೂ, ಮನೆಯ ಆಳುಮಗ ಸಿದ್ಧ ಅದರ ಮೇಲೆ ದೊಡ್ಡದೊಂದು ದುಂಡಾದ ಕಲ್ಲೊಂದನ್ನು ಇಟ್ಟ, ತೀಕ್ಷ್ಣವಾಗಿ ನೋಡಿದವರಿಗೆ ಅದು ಕಾಲಮಡಚಿಕೊಂಡು ಕುಳಿತುಕೊಂಡ ಹೋರಿಯೊಂದರಂತೆ ಕಾಣುತ್ತಿತ್ತು. ತಿಂಗಳು ತುಂಬುವುದರಲ್ಲಿ ಬಂದ ಮಣ್ಣೆತ್ತಿನ ಅಮಾವಾಸ್ಯೆಗೆ ಸಿದ್ಧ ಮಲ್ಲಣ್ಣ ಕೂಡಿಕೊಂಡು ಆ ದುಂಡಿ ಬಸವನ (ಕಲ್ಲಿನ) ಪೂಜೆ ಮಾಡಿ ಸಣ್ಣದೊಂದು ಹಂದರವನ್ನೂ ಹಾಕಿದರು. ಅಮಾವಾಸ್ಯೆಯ ಪೂಜೆಯ ನಂತರ ಊರಲ್ಲಿಯ ಮಣ್ಣೆತ್ತುಗಳನ್ನು ಊರ ಮುಂದಿನ ಹೊಳೆಯ ಗುಂಡಿಯಲ್ಲಿ ಒಗೆಯಲು ಬಂದ ಜನ ದೇವಳ್ಳಿ ಹೋರಿಯ ಸಮಾಧಿಯ ಮೇಲಿನ ಹಂದರವನ್ನೂ ಅಲ್ಲಿಟ್ಟ ದುಂಡುಗಲ್ಲಿನ ದುಂಡಿ ಬಸವಣ್ಣನನ್ನೂ ನೋಡಿ ಸೀದಾ ಅಲ್ಲಿಗೂ ಬಂದು ತಾವೂ ಪೂಜೆ ಮಾಡಿ ಹೋಗತೊಡಗಿದರು.

ಇಂತಹ ಸುದ್ದಿ ಹರಡಲು ಸಮಯಬೇಕೆ? ದೇವಳ್ಳಿ ಹೋರಿ ದೇವರೇ ಆಗಿದ್ದು ಈಗ ಅಲ್ಲಿ ದಿನನಿತ್ಯ ಪೂಜೆ ನಡೆಯುತ್ತಿರುವುದು ಸುತ್ತಲಿನ ಹಳ್ಳಿಗಳಿಗೆ ಗೊತ್ತಾಗಿ ದಾರಿಯಲ್ಲಿ ಹೋಗುವ ಜನ ತಮ್ಮ ವಿಶ್ರಾಂತಿಗೆಂದೋ ಕುತೂಹಲಕ್ಕೆಂದೊ ದೇವಳ್ಳಿ ಹೋರಿಯ ಸಮಾಧಿ ಹತ್ತಿರ ಬಂದು ದರ್ಶನ ಮಾಡಿಕೊಂಡು ಮುನ್ನಡೆಯತೊಡಗಿದರು. ಹಾಗೆ ಬರಬರುತ್ತ ದುಂಡಿ ಬಸವಣ್ಣದೇವರು, ಎತ್ತು ಮತ್ತಿತರ ದನಕರುಗಳಿಗೆ ಬರುವ ಕಾಲುಬೇನೆ, ಬಾಯಿ ಬೇನೆ ಚಪ್ಪೆರೋಗ ಇತ್ಯಾದಿ ತೊಂದರೆಗಳನ್ನು ಕಡಿಮೆಮಾಡುತ್ತದೆಂದು, ಅವುಗಳನ್ನು ಕರೆತಂದು ಪ್ರದಕ್ಷಿಣೆ ಹಾಕಿಸತೊಡಗಿದರು. ಅಷ್ಟಿಷ್ಟು ದಕ್ಷಿಣೆಯನ್ನೂ ಹಾಕತೊಡಗಿದರು. ಹಾಗೆಯೇ ಅಲ್ಲೊಂದು ಹುಂಡಿಯನ್ನೂ ಇಡಲಾಯಿತು. ಮುಂದೆ ಕೆಲದಿನಗಳಲ್ಲಿ ಬಂದ ಬಸವ ಜಯಂತಿಯಂದು ಅಲ್ಲೊಂದು ಬಸವಣ್ಣನ ಗುಡಿ ಕಟ್ಟಬೇಕೆಂದೂ ನಿರ್ಧರಿಸಲಾಯಿತು. ಊರ ಯುವಕ ಮಂಡಳದವರು ತಮ್ಮ ಭಜನಾ ಸಂಘಕ್ಕೆ ದೇವಳ್ಳಿಯ ಶ್ರೀ ದುಂಡಿ ಬಸವೇಶ್ವರ ಭಜನಾ ಮೇಳ ಎಂದು ನಾಮಕರಣವನ್ನೂ ಮಾಡಿದರು. ಪೈಲ್ವಾನ ಮಲ್ಲಣ್ಣ ಪೂಜಾರಿ ಮಲ್ಲಣ್ಣನಾದ, ಅಂತೂ ಇಂತೂ ಆತನ ಹಾಗೂ ಹೋರಿಯ ಅವಿನಾಭಾವ ಸಂಬಂಧ ಅನೂಚಾನವಾಗಿ ಹೀಗೆಯೇ ಮುಂದೊರೆದುಕೊಂಡೇ ಹೋಯಿತು, ಕೃತಘ್ನ ಮಾನವ ಪರಂಪರೆಗೆ ಒಂದು ಸವಾಲಿನಂತೆ ಎದುರಾಗಿ ನಿಂತಿತು.

ಮಯೂರ - ಮೇ 2000

ಡಾಕ್, ಟಾಂಗ್ = ಕುಸ್ತಿಪಟ್ಟುಗಳ ಹೆಸರು

ಚಿತ್ ಮಾಡಿ = ಅಂಗಾತ ಮಾಡಿ

ಹ್ಯಾವ = ಜಿದ್ದು Competitive Spirit

ಒಗೆ = ಕೆಡಹು, ಸೋಲಿಸು

ಆಖಾಡ = ಕುಸ್ತಿಕಣ

ತೋಡಿ ಡಾವ್ ಪೇಚು = ಪ್ರತಿಪಟ್ಟು

ಖಡೆ = ಬೆಳ್ಳಿ / ಬಂಗಾರದ ಬಳೆ, ಪಾರಿತೋಷಕ

ಒಳ್ಳೆ ಕಾಟ = ಸಮತೂಕದ

ಬಾನಿ = ನೀರು ಅಥವಾ ಮುಸುರೆ ಹಾಕಲು ಮಾಡಿದ (ಕಲ್ಲಿನ) ದೊಡ್ಡ ಪಾತ್ರೆ

ಫರಕು = Difference

ಕಮತ = ಒಕ್ಕಲುತನ

ಖರ್ಜು = ಗಡಸು

ಒದರಿ = ಕೂಗಿ

ಖಡೆ = (ವಾಚಿಗೆ ಕಟ್ಟುವಂತೆ) ಮುಂಗೈಗೆ ಗಂಡಸು ಹಾಕುವ ಬಳೆ (ಬೆಳ್ಳಿ ಪಾರಿತೋಷಕ)

ತೋಡಿ = ಪ್ರತಿಪಟ್ಟು

ಡಾವ್ ಪೇಚುಗಳ = ಹಿಡಿತಗಳು (Tricks, Skills)

ದಮ್ಮು ಹತ್ತು = ದಣಿವಿನಿಂದ ತೇಕುವದು

ಮಕ್ಕಾಡ = ಕನದ ಬಾಯಿಸುತ್ತ ಹಾಕುವ ಹಗ್ಗ

ಗೋದಲಿ = ದನಗಳಿಗೆ ಮೇವು ಹಾಕುವ ಸ್ಥಳ

ಗೊಟ್ಟ = ದನಗಳಿಗೆ ಮೊಟ್ಟೆ ಮುಂತಾದ ದ್ರವ ಪದಾರ್ಥ ಬಾಯೊಳಗೆ ಹಾಕಲು ಉಪಯೋಗಿಸುವ ಪರಿಕರ

ಗಂಗೆದೊಗಲು = ಹೋರಿಗಳ ಕೊರಳ ಕೆಳಗೆ ತೂಗಾಡುವ ಅಂಗಾಂಗ

ಇಣಿ = ಹೋರಿಯ ಭುಜನ ಮೇಲೆ ಉಬ್ಬಿರುವ ಅಂಗಾಂಗ

❖

# ಕಥಾವಸ್ತು

ಕಥೆಗಾರನಾದವನಿಗೆ ಕೆಲಸಾರೆ ಕಥಾವಸ್ತುಗಳು ತಂತಾನೆ ಕೈಗೆಟುಕುತ್ತವೆ ಎಂದು ಎಲ್ಲೋ ನೀನೊಮ್ಮೆ ಹೇಳಿದ್ದೆಯಲ್ಲ. ತೊಗೊ ನಿನ್ನ ಮುಂದಿನ ಕಥೆಗೆ ನಾನೇ ಕಥಾ ವಸ್ತು ಎಂದು ರೇಷ್ಮಾ ಅಂದಾಗ ನನಗೆ ನಾನೇ ನಂಬದಾದೆ, ಹನ್ನೆರಡು ವರ್ಷಗಳ ದಾಂಪತ್ಯ ಜೀವನದಲ್ಲಿ ತನಗೆ ಜಿಗುಪ್ಸೆ ಬಂದಿದೆಯೆಂದೂ ಹೀಗೆಯೇ ಇನ್ನೂ ಕೆಲಕಾಲ ಮುಂದುವರೆದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುವುದು ಖಂಡಿತವೆಂದೂ ಎಂದಿನ ತನ್ನ ಧಾರ್ಷ್ಟ್ಯದ ಧ್ವನಿಯಲ್ಲಿ ಸಾರಿ ಬಿಟ್ಟಿದ್ದಳು. ಹಾಗೆ ಹೇಳುವಾಗ ಒಳಗಿನ ಕೊಠಡಿಯೊಂದರಲ್ಲಿ ಆಕೆಯ ಗಂಡನಿರುವುದು ಆಕೆಗೆ ಹಾಗೂ ನನಗೆ ತಿಳಿದ ವಿಷಯವೇ ಆಗಿತ್ತು. ಅವನಿಗೆ ಕೇಳಲಿ ಎಂದೇ ಅವಳು ಎತ್ತರದ ಧ್ವನಿಯಲ್ಲಿ ಸಾರಿ ಬಿಟ್ಟಿದ್ದಳು. ಹಾಗೆ ಹೇಳುವಾಗ ಒಳಗಿನ ಕೊಠಡಿಯೊಂದರಲ್ಲಿ ಆಕೆಯ ಗಂಡನಿರುವುದು ಆಕೆಗೆ ಹಾಗೂ ನನಗೆ ತಿಳಿದ ವಿಷಯವೇ ಆಗಿತ್ತು. ಅವನಿಗೆ ಕೇಳಲಿ ಎಂದೇ ಅವಳು ಎತ್ತರದ ಧ್ವನಿಯಲ್ಲಿ ಹೇಳಿರಲಾರಳು ಆದರೂ ಆತನಿದ್ದನೆಂದು ಸಣ್ಣಗೇ ಮಾತನಾಡಿ ಅವನ ಅಸ್ತಿತ್ವವನ್ನು ಒಪ್ಪಿಕೊಳ್ಳುವಾಕೆಯೂ ಅವಳಲ್ಲ ಎಂಬುದು ನನಗೂ ವಿಧಿತವಾಗಿಯೇ ಇತ್ತು. ಇಪ್ಪತ್ತು ವರ್ಷಗಳ ಹಿಂದಿನ ಆಕೆಯ ಧೈರ್ಯ, ಗಡುಸುತನ ಇತ್ಯಾದಿ ಇಂತಹ ಯಾವ ಗುಣಗಳೂ ದಾಂಪತ್ಯದ ಸಖ್ಯದಲ್ಲಿ ಮರೆಯಾಗೇಯಿಲ್ಲ. ಅನೇಕ ವಿಷಯಗಳಲ್ಲಿ ಬದಲಾವಣೆಯು ಪ್ರಗತಿಯ ಪ್ರಮುಖ ಲಕ್ಷಣ ಎಂದು ಹೇಳುತ್ತಿದ್ದ ರೇಷ್ಮಾ ಯಾಕೆ ತನ್ನ ವ್ಯಕ್ತಿತ್ವವನ್ನು ಕೊಂಚವಾದರೂ ತಿದ್ದಿಕೊಳ್ಳಲಿಲ್ಲ. ಬಹುಶಃ ತಾನು ಮಾಡುತ್ತಿರುವುದೇ ಸರಿಯಾದದ್ದೆಂದು ಬಲವಾಗಿ ನಂಬಿದವಳಿಗೆ ಆ ಅವಶ್ಯಕತೆಯೇ ಕಾಣಲಿಲ್ಲವೇನೋ. ಇದರಿಂದ ತಾನು ಜೀವನದ ಬಲು ಸುಂದರ ಅವಕಾಶದಿಂದಲೇ ವಂಚಿತೆಯಾಗುತ್ತಿರುವುದೂ ಅವಳಿಗೆ ಹೊಳೆಯಲಿಕ್ಕಿಲ್ಲ. ಇವಳಂತಹವರ ಹಣೆಬರಹವೇ ಇಷ್ಟು ಸುಗಮ ಮಾರ್ಗದಲ್ಲಿ ಸುರಂಗ ತೋಡಿಕೊಳ್ಳುವವರು ಇವರು. ಆದರೆ ಆತ್ಮಹತ್ಯೆಯಂತಹ ಪಲಾಯನವಾದದೆಡೆಗೆ ರೇಷ್ಮಾ ಮಾರುಹೋಗುತ್ತಿರುವುದು ನನಗೆ ಒಂದಿಷ್ಟು ಮುಜುಗರವನ್ನುಂಟು ಮಾಡಿತ್ತು. ಇಷ್ಟಾದರೂ ಅವಳು ಮಾಗಿದ್ದಳೊ ಎಂದು ಒಳಗೊಳಗೆ ನನಗೆ ಒಮ್ಮೆ ಎಲ್ಲೋ ಒಂದಿಷ್ಟು ಖುಷಿಯಾಯಿತಾದರೂ ಹಾಗೆ ಅವಘಡವೆಂದೂ ಆಗದಿರಲಿ ಎಂದೇ ದೇವರಲ್ಲಿ ಪ್ರಾರ್ಥಿಸುತ್ತಾ ಅವಳನ್ನು ಸಂತೈಸುವ ಪ್ರಯತ್ನ ಮಾಡಿ ಎದ್ದು ಹೊರಬಂದೆ. ತಲೆಯ ತುಂಬಾ ರೇಷ್ಮಾಳ ಚಿತ್ರ ಹಳೆಯ ನೆನಪುಗಳು, ಇಂದಿನ ಘಟನಾವಳಿಗಳೇ ತುಂಬಿಕೊಂಡು ತಲೆ ಭಾರವಾದಂತಾಗತೊಡಗಿತು.

ಸ್ವಲ್ಪ ದೂರ ಬಂದ ಮೇಲೆ ಸಿಕ್ಕ ಹೋಟೇಲ್ ಒಂದರ ಒಳಹೊಕ್ಕು ಫಸ್ಟ್‌ಕ್ಲಾಸ್ ಕೆ.ಟಿ.ಯೊಂದಕ್ಕೆ ಆರ್ಡರ್ ಮಾಡಿ ಕುಳಿತುಕೊಂಡೆ. ಕಿಟಕಿಯೊಳಗಿಂದ ಕಾಣುವ ನೇರ ರಸ್ತೆ ಸೀದಾ ಹೋಗಿ ರೇಷ್ಮಾಳ ಮನೆಯ ಕತ್ತರಿಗೇ ಕೊಡುತ್ತದೆ. ತಲೆಯೊಳಗಿನ ವಿಚಾರಗಳು ಅಲ್ಲಿಗೂ ಆ ಮನೆಯೊಳಗಿನ ಘಟನೆಗಳು ಇಲ್ಲಿಗೂ ಪುನಃ ಕೊಡುಕೊಳ್ಳುವಿಕೆ ಪ್ರಾರಂಭಿಸಿದವು. ಅಷ್ಟೇನು ಜನನಿಬಿಡವಲ್ಲದ ದಾರಿಯ ಮೇಲೆ ರೇಷ್ಮಾ, ಅವಳ ಮನೆ, ಗಂಡ ಸುಧೀರ ಜೀವಂತವಾಗಿಯೇ ನಡೆದಾಡತೊಡಗಿದಂತೆನಿಸಿತು. ಎಂತಹ ರೇಷ್ಮಾ ಏನಾಗಿಬಿಟ್ಟಿದ್ದಾಳೆ. ತನ್ನ ಭ್ರಮಾಲೋಕದಿಂದ ಕೆಳಗಿಳಿದಿರುವಳೇ? ಒಳಗಿನ ಮನಸು ಯಾಕೊ ಇದಕ್ಕೆ ಸಂಪೂರ್ಣ ಒಪ್ಪಲೊಲ್ಲದು. ಅವಳ ವಿಕ್ಷಿಪ್ತ ವ್ಯಕ್ತಿತ್ವ ಕೇವಲ ಪ್ರಶ್ನೆಯಾಗಬಲ್ಲದೇ ಹೊರತು ಉತ್ತರವನ್ನೆಂದೂ ಪಡೆಯಲಾರದೇನೊ. ಹುಡುಗರೊಡನೆ ವಾಗ್ವಾದ, ಜಗಳ, ತಿರುಗಾಟ, ಹರಟೆ ಒಂದೆಡೆಯಾಗಿದ್ದರೆ, ನಾಟಕ, ಚರ್ಚಾಕೂಟ, ಕವಿಗೋಷ್ಠಿ ಮತ್ತೊಂದೆದೆ. ಹೌದು ಈ ಗಯ್ಯಾಳಿಯಂತಹವಳು ಒಮ್ಮೆ ರ್‍ಯಾಂಕ್ ಕೂಡಾ ಗಿಟ್ಟಿಸಿದ್ದಳು. ಆದರೆ, ಅದರ ಬಗ್ಗೆಯೇ ಜಂಭ ಕೊಚ್ಚುತ್ತಾ ಮುಂದಿನ ವರ್ಷ ಕೇವಲ ಪಾಸ್

ಕ್ಲಾಸ್ ದೊರಕಿಸಿಕೊಂಡದ್ದು ನನಗೆ ಅವಳ ಬಗ್ಗೆ ಆಗಲೇ ಕುತೂಹಲವನ್ನುಂಟುಮಾಡಿತ್ತು. ಕೇವಲ ಅವಳ ವ್ಯಕ್ತಿತ್ವದ ಅಭ್ಯಾಸ ದೃಷ್ಟಿಯಿಂದ. ರ್‍ಯಾಂಕ್ ಬಂದಾಗ, ನಾಟಕದಲ್ಲಿಯ ಪಾತ್ರಾಭಿನಯಕ್ಕಾಗಿ ಬಹುಮಾನ ಬಂದಾಗ ಉಬ್ಬುಬ್ಬಿ ಬಡಾಯಿ ಕೊಚಿಕೊಳ್ಳುವ ರೇಶ್ಮಾ ಮೂರನೇ ವರ್ಗದಲ್ಲಿ ಮಾತ್ರ ತೇರ್ಗಡೆಯಾದಾಗ ಅಥವಾ ಇನ್ನೆಲ್ಲೋ ತನಗೆ ಸೋಲಾದಾಗ ಯಾಕೆ ಒಂಚೂರು ಖಿನ್ನಳಾಗಿ, ಡಿಪ್ರೆಸ್ ಆಗುವುದೇಯಿಲ್ಲ ಎಂಬ ವಿಷಯ ನನ್ನನ್ನು ಅಂದಿನಿಂದ ಇಂದಿನವರೆಗೂ ಕಾಡುತ್ತಾ ಬಂದಿದೆ. ಅನೇಕ ಸಾರಿ ಈ ಎದೆಗಾರಿಕೆ ಅಥವಾ ಉದಾಸೀನ ಭಾವ ಯಾಕೆ ನನಗೂ ಸಾಧ್ಯವಾಗುತ್ತಿಲ್ಲ ಎಂದು ಅಂದುಕೊಂಡಿದ್ದೇನೆ.

ನಗುವ ಮುಖದ ಹಿಂದಿರುವ ದುಃಖವನ್ನು, ಕಣ್ಣೀರಿನ ಹಿಂದಿನ ವಂಚನೆಯನ್ನೂ ಗ್ರಹಿಸಲು ಸಾಧ್ಯವಾದಾಗಲೇ ಕಥೆಗೆ ಒಂದು ಸತ್ವ ಬರುತ್ತದೆ. ಮುಖವಾಡಗಳನ್ನು ಕಳಚಿ ನೈಜ ಚಿತ್ರಣ ಮಾಡಲಾಗದವ ಅದೆಂಥ ಕತೆಗಾರ? ಎಷ್ಟು ಪ್ರಯತ್ನಿಸಿದರೂ ನನ್ನೊಳಗಿನ ಕಥೆಗಾರನಿಗೆ ರೇಷ್ಮಾ ವಿರುದ್ಧ ಜಯ ದಕ್ಕುತ್ತಿಲ್ಲ. ಅವಳ ನಿಜವಾದ ಭಾವನೆಗಳನ್ನು ಗ್ರಹಿಸಲಾಗದೇ, ಅವಳು ಅಳುತ್ತ ಚೀರುತ್ತ ವಿವರಿಸುತ್ತಿದ್ದರೂ ಆ ನೋವನ್ನು ನಿಜ ನೋವೆಂದು ಪರಿಗಣಿಸಲು ನಾನೇಕೆ ಪೂರ್ತಿ ತಯಾರಾಗಲಿಲ್ಲ? ಇಲ್ಲಾ ಇವಳು ಕೇವಲ ಉಢಾಫೆ ಎಂದು ತಳ್ಳಿ ಹಾಕಲೂ ಸಾಧ್ಯವಾಗಲಿಲ್ಲವಲ್ಲ. ವಿಶ್ಲೇಷಿಸಿದಷ್ಟೂ ಕ್ಲಿಷ್ಟವಾಗುವ ಅವಳು, ವಿಚಾರಿಸಿದಷ್ಟು ಕಗ್ಗಂಟಾಗುತ್ತಾಳೆ. ಎಂಥವಳ ಬಾಯಲ್ಲಿ ಎಂಥ ಮಾತು, ಇವಳ ಹಿಂದೆ ಹಿಂದೆ ತಿರುಗುತ್ತಿದ್ದ ಆ ಚಿದಂಬರನನ್ನು ಶುದ್ಧ ಮೂರ್ಖನನ್ನಾಗಿ ಮಾಡಿರಲಿಲ್ಲವೇ ಆಗ? ಯುವಜನ ಮೇಳಕ್ಕೆ ಕಾರವಾರಕ್ಕೆ ಹೋದ ತಂಡದಲ್ಲಿದ್ದ ಈ ಇಬ್ಬರು ಯಾರಿಗೂ ಗೊತ್ತಾಗದಂತೆ ಎರಡು ಸಂಜೆ ಎಲ್ಲೆಲ್ಲೋ ಹೋಗಿ ತಿರುಗಾಡಿ ಬೆಳಗಿನ ಜಾವವೇ ಬಂದದ್ದು ಎಲ್ಲರಿಗೂ ತಿಳಿದ ವಿಷಯವೇ. ಆದರೂ ಮುಂದೊಂದು ತಿಂಗಳಲ್ಲೇ ಆತನ ಜೊತೆ ಮಾತು ಬಿಟ್ಟು ಬಿಟ್ಟಿದ್ದಳಲ್ಲ! ಏನನ್ನಬೇಕು ಇದಕ್ಕೆ. ತದನಂತರ ಆತ ಫೈನಲ್ ಇಯರ್ ಫೇಲಾಗಿ ಸ್ನಾತಕೋತ್ತರ ಪದವಿಗೆ ಬರಲೇಯಿಲ್ಲ. ವಿಶ್ವವಿದ್ಯಾಲಯದಲ್ಲಿದ್ದಾಗಲಂತೂ ನೇರವಾಗಿ ಅವಿವಾಹಿತ ಪ್ರೊಫೆಸರ್ ಒಬ್ಬರ ಜೊತೆ ಚಕ್ಕಂದ ಮಾಡಿದ್ದಳೊ ಅಥವಾ ಹಾಗೆ ಸುದ್ದಿ ಹರಡುವಂತೆ ಮಾಡಿದ್ದಳೊ ಅಂತೂ ಇಂತೂ ಓದದೇ ಹೈಯರ್ ಸೆಕೆಂಡ್ ಕ್ಲಾಸ ಗಿಟ್ಟಿಸಿದ್ದಳು.

ಕಾಲ ಎಂತಹವರನ್ನೂ ಮಾಗಿಸುತ್ತದಲ್ಲವೇ? ಆದರೆ ರೇಷ್ಮಾ ಕೇಳಿದ್ದ ಪ್ರಶ್ನೆಗಳು ಆಕೆಯ ಮಾಗುವಿಕೆಗೆಯಾಗಲಿ ಅಥವಾ ದ್ವಂದ್ವವೆಂಬಂತೆ ಇನ್ನೂ ಹೆಚ್ಚು ಹೆಚ್ಚು ಕಚ್ಚಾ ಆಗಿದ್ದಕ್ಕೆ ಆಗಲಿ ಸಾಕ್ಷಿ ಎಂಬಂತಿರಲೇ ಇಲ್ಲ ಅಲ್ಲವೇ? ದಾಂಪತ್ಯದ ಜವಾಬ್ದಾರಿ ನಿಭಾಯಿಸುವ ಯಾವ ಲಕ್ಷಣವೂ ಕಾಣಲಿಲ್ಲ ಆದರೆ ಅದರಿಂದ ಬೇಸತ್ತ, ವಿಷಣ್ಣವಾದ ಮತುಗಳು ಮಾತ್ರ ಓತಪ್ರೋತವಾಗಿ ಹೊರಬೀಳುತ್ತಿದ್ದವು. ಆ ಎರಡೂ ಗಂಟೆಗಳ ಸಂವಾದದಲ್ಲಿ ಕಥೆಗಾರನಾದ ನನಗೆ ಕಥೆಯ ರಚನೆ, ವಿನ್ಯಾಸ, ಮುಕ್ತಾಯ ಇತ್ಯಾದಿ ಶಾಸ್ತ್ರೀಯ ಅಂಶಗಳ ಬಗ್ಗೆ ಕೇಳುತ್ತ ಮತ್ತೆ ಮತ್ತೆ ನನ್ನನ್ನು ಸೋಲಿಸುತ್ತ ನಡೆದಿದ್ದಳು. ಕಥೆಗಳನ್ನು ಬರೆಯುವ ನಾನು ಆ ಶಸ್ತ್ರ ಸಂಬಂಧವಾಗಿ ಅಷ್ಟಾಗಿ ಅಭ್ಯಾಸ ಮಾಡದಿದ್ದುದನ್ನು ಎತ್ತಿ ತೋರಿಸಿದ್ದಳು. ವಿಕಾನರ್‌ನು ಸಣ್ಣ ಕತೆಯನ್ನು ಕುರಿತು ಬರೆದ ಪುಸ್ತಕ ಓದಿದೆಯೇನೊ? ನೇರವಾಗಿ ಕೇಳಿದ್ದಳು. ನನಗೆ ಆತನ ಹೆಸರಲ್ಲದೇ ಪುಸ್ತಕದ ನೆನಪೆಲ್ಲಿ ಬರಬೇಕು. "ಓದೋ ಒಂಟಿ ದನಿ ಎಂಬ ಅವನ ಕೃತಿ. ಆ ಮೇಲೆ ಬರ್ನಾರ್ಡ್ ಬರ್ಗೊಂಜಿ ಮಾತೂ ನಿನಗೆ ಗೊತ್ತೆ ಇರಲಿಕ್ಕಿಲ್ಲ. ಅವನನ್ನು ಓದಿ ಕತೆ ಬರೆಯಬೇಕು ನೀನು. ನೋಡು, ಸಣ್ಣ ಕತೆಯ ಪತ್ರಗಳು ಬದುಕಿನ ಬಲಿಪಶುಗಳು, ಅವಮಾನಿತರು, ನೊಂದವರು, ಹತಾಶರು ಎನ್ನುತ್ತಾನವನು. ಪರಿಸರದ ಹಿಡಿತದಲ್ಲಿ ಸಿಕ್ಕು ಸೋತ ಮಾನವೀಯ ಆಶೋತ್ತರಗಳ ಚಿತ್ರಣ ಈ ಸಣ್ಣ ಕತೆಗಳು...." ಹೀಗೆಯೇ ತನಗೆ ಗೊತ್ತಿದ್ದ ಅಥವಾ ಎಂದೋ ಎಲ್ಲೋ ಓದಿದ್ದ ಅಂಶಗಳನ್ನು ಅ ಬಗ್ಗೆ ಹೆಚ್ಚು ತಿಳಿದಿರದಿದ್ದ ನನಗೆ ತುಸು ಚುಚ್ಚವಂತೆಯೇ ಹೇಳಿದ್ದಳು. ಕೇಳಿದ್ದಳು. ಒಂದು ರೀತಿಯಲ್ಲಿ ನೋಡಿದರೆ ರೇಷ್ಮಾಳ ಸಹಜ ನಡೆನುಡಿಗಳೆಲ್ಲವೂ ಈ ತೆರನವೇ. ಯಾರನ್ನಾದರೂ ಎಷ್ಟಾದರೂ ನೋಯಿಸಲೇಬೇಕವಳು. ಇಲ್ಲವಾದರೆ ಅವಳಿಗೆ ಮಾತನಾಡಲೇ

ಬರುವುದಿಲ್ಲವೇನೋ. ಯುವರ್ ರೈಟ್ ಎಂಡ್ಸ್ ವ್ಹೇರ್ ಅದರ್ಸ್ ಸ್ಟಾರ್ಟ್ಸ್ ಎಂಬ ತತ್ವದಲ್ಲಿ ಅವಳಿಗೆ ನಂಬಿಕೆಯೇ ಇಲ್ಲ. ಆದರೆ, ಅವಳನ್ನು ತುಸು ಹೊಗಳಿದರೂ ಇಲ್ಲ ಅವಳೆದುರು ತಕ್ಷಣ ಸೋಲೊಪ್ಪಿಕೊಂಡರೂ ಬಲು ಖುಷಿ ಅವಳಿಗೆ. ಅವಳ ರೀತಿ ಎಷ್ಟೊಂದು ಫಾಸ್ಟ್ ಹಾಗೂ ರೆಕ್‌ಲೆಸ್ ಎಂದರೆ ಬೇರೆಯವರನ್ನು ತಿಳಿಯುವಷ್ಟೂ ವ್ಯವಧಾನವಿಲ್ಲ ಅವಳಿಗೆ. ಒಮ್ಮೊಮ್ಮೆ ಇವಳೆಷ್ಟು ಭೋಳೆ ಸ್ವಭಾವದವಳು ಎಂದು ತೀವ್ರ ಅನಿಸಿದ್ದೂ ಉಂಟು ನನಗೆ. ಅಪರಿಚಿತರನ್ನೂ ಒಮ್ಮೆಲೇ ನಂಬುವುದು. ತುಸು ಹೆಚ್ಚು ಪರಿಚಯವಾಗಿಬಿಟ್ಟರಂತೂ ಮುಗಿಯಿತು ಹೃದಯದೊಳಗಿನ ಎಲ್ಲವನ್ನೂ ತೋಡಿಕೊಂಡು ಬಿಡುವಾಕೆ.

ಸಾಕಾಗಿ ಹೋಗಿದೆಯೋ ನನಗೆ ಎಂದು ಹೇಳುತ್ತಾ ಉತ್ತರಾರ್ಧದ ವೈಯಕ್ತಿಕ ಜೀವನದ ವಿವರಣೆಗೆ ಬರುವ ಮೊದಲು, "ಹೇಳು ಚೆಕಾವ್, ಮೊಪಾಸಾ, ಹೇಮಿಂಗ್ ವೇ, ಟಲ್ ಸ್ಟಾಯ್, ಓ ಹೆನ್ರಿ ಇವರಲ್ಲಿ ಯಾರ ಕಥೆಗಳು ನಿನಗಿಷ್ಟ? ನನಗಂತೂ, ಹೆನ್ರಿಯ ಗಿಫ್ಟ್ ಆಫ್ ದಿ ವೇಜ್‌ಯ್, ಮೊಪಾಸಾನ ದಿ ನೆಕ್ಲೇಸ್ ಕಥೆಗಳು ತುಂಬ ಇಷ್ಟವಾಗಿವೆ. ಇಂದಿಗೂ ಮನಸ್ಸಿನಲ್ಲಿ ಅಚ್ಚೊತ್ತಿದಂತಿವೆ....." ನಾನು ಸುಧಾರಿಸಿಕೊಳ್ಳಬೇಕಾಯಿತು. ಈ ಎಲ್ಲ ಹೆಸರುಗಳನ್ನು ಕೇಳಿದ್ದು ಮಾತ್ರ ಒಬ್ಬಿಬ್ಬರ ಕನ್ನಡಾನುವಾದಗಳನ್ನು ಓದಿದ್ದೇನೆಯೇ ಹೊರತು ಮೂಲ ಕಥೆಗಳನ್ನಂತೂ ಒಂದೂ ಓದಿರಲಿಲ್ಲ. ಖುಷಿಯಾಗಿರಬೇಕವಳಿಗೆ ತೀರ ಉತ್ಸಾಹಿತಳಾಗಿ ವಿವರಣೆ ಮುಂದೊರೆಸಿದ್ದಳು. "ನಿಜವಾದ ಕಥೆ' ತನ್ನ ಅಸಲಿ ಸ್ವರೂಪವನ್ನು ತನ್ನುದ್ದಕ್ಕೂ ಮುಚ್ಚಿಟ್ಟುಕೊಂಡು ಕೊನೆಯಲ್ಲಿ ಆಶ್ಚರ್ಯವಾಗುವ ರೀತಿಯಲ್ಲಿ ತೀರ ಅನಿರೀಕ್ಷಿತ ಕೊನೆಯೊಂದನ್ನು ತೋರಿಸಿಬಿಡುತ್ತದೆ. ಹೀಗೆ ತೆರೆದುಕೊಳ್ಳುವ ಅರ್ಥ ವಿಸ್ತಾರದಲ್ಲಿ ಹೆಚ್ಚಾಗಿ ಜೀವನದ ಕ್ರೂರವ್ಯಂಗ್ಯ, ಅವಸಾನ, ಸೋಲು, ದೈವದಾಟ, ನಿರಾಶೆ ಇತ್ಯಾದಿಗಳೇ ಇರುತ್ತವೆ.

---

ಡಾ. ಗಿರಡ್ಡಿ-ಸಾತತ್ಯ

ಆದರೆ ಕೆಲವೊಂದರಲ್ಲಿ ಮಾತ್ರ. ನಾವು ಕೊನೆಯಲ್ಲಿ ಸುಖಾಂತ, ಗೆಲುವು ಇತ್ಯಾದಿಗಳನ್ನು ಕಾಣುತ್ತೇವೆ....." ಹೀಗೆಯೇ ಇನ್ನೂ ಏನೇನೋ ಹೇಳುತ್ತಲೇ ಇದ್ದಳು.

ರೇಷ್ಮಾ ತನ್ನ ವೈಯಕ್ತಿಕ ಜೀವನ ವಿವರಗಳಿಗೆ ಬಂದಾಗಲಂತೂ ನಾನು ಎದ್ದು ಬಿಡಬೇಕೆಂದುಕೊಂಡಿದ್ದೆ. ಆದರೆ ಅವಳೇನು ತಿಳಿದುಕೊಳ್ಳುತ್ತಾಳೊ ಎಂದು ತಡೆದೆ, ಆ ನಡುವೆ ಆಕೆಯ ಗಂಡನೂ ಒಮ್ಮೆ ಬಂದು ನನಗೆ ಗ್ರೀಟ್ ಮಾಡಿ ಹೋಗಿದ್ದ. ಅದು ಬೇರೆ ನನ್ನ ಮುಜುಗರವನ್ನು ಹೆಚ್ಚಿಸುತ್ತಲೇಯಿತ್ತು. ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಕ್ಯಾಶಿಯರ್ ಆಗಿದ್ದ ಆತ ನನಗೆ ಭೆಟ್ಟಿಯಾಗಿದ್ದು ಕೇವಲ ಒಂದೆರಡು ಸಾರೆ ಮಾತ್ರ. ಆತನ ಪೂರ್ತಿ ವ್ಯಕ್ತಿತ್ವ ಗುಣಾವಗುಣಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಗಿಲ್ಲದಿದ್ದರೂ ಆತನೊಬ್ಬ ತೀರಾ ಸೂಕ್ಷ್ಮಮತಿ ಎಂದು ಅನಿಸಿತ್ತು. ಆತನ ನಯವಿನಯ, ಕೋಮಲಧ್ವನಿ, ಹಾವಭಾವಗಳಲ್ಲಿ ಎದ್ದು ಕಾಣುವ ಮೃದುತ್ವ ಎಲ್ಲ ನೋಡಿದರೆ ರೇಷ್ಮಾಳಲ್ಲಿಯ ಗಡಸುತನ ಆಕೆಯ ಗಂಡನಲ್ಲಿಯ ಹೆಣ್ತನಗಳೇ ಒಂದಕ್ಕೊಂದು ಆಕರ್ಷಣೆಗೆ ಒಳಪಟ್ಟಿರಬೇಕು ಎಂದು ಮಿತ್ರ ರೆಹಮಾನ್ ಪಾಶಾ ಎಂದೂ ಹೇಳಿದ ಮಾತೊಂದು ಪುನಃ ನನಗೆ ನೆನಪಾಯಿತು. ಆ ಮಾತು ಆಗ ಹಾಸ್ಯಕ್ಕಾಗಿ ಅನಿಸಿದ್ದರೂ ಈಗ ಅದೇ ಈ ದಂಪತಿಗಳಿಬ್ಬರ ಬದುಕಿನ ಬಗೆಗಿನ, ನಿಜ ವ್ಯಾಖ್ಯಾನವಾಗಿ ತೋರತೊಡಗಿತು. ಆತ ಕೇವಲ ನನಗೆ ಹಲೋ ಹೇಳಿ ಒಳಹೋದಾಗ ನನಗೆ ಆತನು ತನ್ನಲ್ಲೇ ಕೊರಗುವ ಒಳಮುಚುಗನಂತೆ ಅಂತರ್ಧ್ಯಾನಿಯಾಗುವವನಂತೆ ಕಂಡ. ರೇಷ್ಮಾ ಇಷ್ಟೆಲ್ಲಾ ಹೇಳುತ್ತಿದ್ದರೂ ಆತ ಸ್ಥಿತಪ್ರಜ್ಞನಾಗೇ ಇದ್ದದ್ದು ಯಾಕೋ ನನಗೂ ಹಿಡಿಸಲಿಲ್ಲ. ಇವಳ ತೀವ್ರತರ ಭಾವನೆಗಳಿಗೆ ನಿರ್ಲಿಪ್ತನಾಗಿರುವ ಆತ ಕಠೋರ ಮನಸ್ಸಿನವ ಇಲ್ಲಾ ಕಲ್ಲು ಹೃದಯಿ ಆಗಿರಬೇಕೆಂದೂ ನನಗೆ ಭಾಸವಾಗತೊಡಗಿತ್ತು. ಅದಿಲ್ಲದಿದ್ದರೂ ಆತ ಅರಸಿಕನಂತೂ ಆಗಿರಲೇಬೇಕೆಂದು ಖಾತ್ರಿಯಾಗತೊಡಗಿತ್ತು. ತಕ್ಷಣ ಮತ್ತೆ ರೇಷ್ಮಾಳಂತಹವಳ ಜೊತೆ ಯಾರು ತಾನೆ ಸಮಸಮ ರಸಿಕರಾಗಿರಲು ಸಾಧ್ಯ? ಎಂಬ ಪ್ರಶ್ನೆ ಎದುರಾಯಿತು. ನಾನೇ

ಒಮ್ಮೆ ವಿಶ್ವವಿದ್ಯಾಲಯದಲ್ಲಿ ಕ್ಲಾಸ್‌ಡೇ ಆಚರಣೆಯಲ್ಲಿ ರೇಷ್ಮಾ ನನ್ನ ತಮ್ಮನಿದ್ದಂತೆ ಎಂದು ಹಾಸ್ಯ ಮಾಡಿರಲಿಲ್ಲವೇ? ಆಗ ಆಕೆ ತಕ್ಷಣವೇ ಓಹ್ ನಿನ್ನ ತಮ್ಮ ನನ್ನ ಹಾಗೆಯೇ ಸುಂದರಿಯೇ ಎಂದು ಎದುರುತ್ತರ ನೀಡಿ ನನ್ನನ್ನು ಸೋಲಿಸುವುದರ ಜೊತೆಗೇ ತಾನು ರೂಪವಂತೆ ಎನ್ನುವುದನ್ನೂ ಸಾರಿದ್ದಳು. ನನ್ನ ಮಿತ್ರರನೇಕರು ನಾನು ಒಳ್ಳೆ ವಾಗ್ಮಿಯೆಂದೂ ವಾದಕ್ಕೆ ಬಿದ್ದರೆ ನನ್ನನ್ನ ಸೋಲಿಸುವವರು ಇಲ್ಲವೆಂದೂ ಆಗಾಗ ಹೇಳುತ್ತಿದ್ದರೂ ಈ ಬುಲ್‌ಡೋಜರ್ ರೇಷ್ಮಾಳ ರಭಸದ ಹಾಗೂ ಚಾಟಿ ಹೊಡೆದಂತಹ ಮಾತಿನ ಮುಂದೆ ನಾನು ಮೊಣಕಾಲು ಊರಬೇಕಾಗುತ್ತಿತ್ತು. ಒಂದೊಂದು ಸಾರೆ ಏನಿವಳ ಜೊತೆ ಚರ್ಚೆ ಮಾಡುವುದು ಎಂದು ನಾನು ಒಳಗೊಳಗೆ ಅಂದುಕೊಂಡು ಸೋಲನ್ನೊಪಿಕೊಳ್ಳುತ್ತಿದ್ದೆ. ಹೀಗೆಯೇ ಅನೇಕರೂ ಮಾಡುತ್ತಿರಲೂ ಸಾಕು. ಆದರೆ ಹಾಗೆಂದು ಗಂಡನಾದವನೂ ತನ್ನೆದುರು ಯಾವಾಗಲೂ ಎಸ್ ಮ್ಯಾಡಂ ಎಂದು ಅಂದುಕೊಂಡಿರುತ್ತ ಇರಬೇಕೆಂದು ಬಯಸಿದಳೋ! ಕೆಲವು ಸಾರೆ, "ಕೇವಲ ನನ್ನ ಮಾತಿನ ಜೋರಿಗೆ ನೀನು ಹಿಂದೆ ಸರಿಯುವುದು ಬೇಡ, ಹೇಳು, ಅದರಲ್ಲಿ ತಾರ್ಕಿಕ ಶಕ್ತಿಯಿಲ್ಲವೇ? ವಾದಸರಣಿ ಸಕಾರಣ ತಳಹದಿ ಮೇಲಿಲ್ಲವೇ?" ಎಂದು ಕೇಳುತ್ತಿದ್ದಳು. ಅವಳು ಕೇಳುವುದರಲ್ಲಿ ಕೆಲ ಸಾರೆ ಸತ್ಯವೂ ಇದೆಯೆನಿಸುತ್ತಿತ್ತು. ಹಾಗೆಂದು ಒಟ್ಟಾರೆ ದಾಂಪತ್ಯವನ್ನೇ ಕೇವಲ ತರ್ಕಶಾಸ್ತ್ರದಂತೆ ನಡೆಸಲು ಸಾಧ್ಯವೇ? ಜೀವನವೆಂಬುದು ಕೇವಲ ಗ್ರಾಂಥಿಕ ಅಂಶಗಳ ಮೇಲೆ ನಡೆಯದು. ವೈಚಾರಿಕ ಸರಣಿಯೊಂದೇ ಅದಕ್ಕೆ ಸಾಲದು. ಅದು ಎಲ್ಲಾ ಶಾಸ್ತ್ರ, ನಿಯಮಗಳ ಮೇರೆಗಿಂತಲೂ ಹೆಚ್ಚಿನದು. ಯಾವುದೊಂದು ಅಷ್ಟೇಯೇಕೆ ವಿಶ್ವದ ಎಲ್ಲ ಗ್ರಂಥಗಳೂ ಅದನ್ನು ವ್ಯಾಖ್ಯಾನಿಸಲಾರವು ಎಂಬುದನ್ನು ನಾವೆಲ್ಲ ತಿಳಿಯಲೇಬೇಕು. ಆದರೆ ಅದೇ ಬದುಕು ಪರಸ್ಪರ ತಿಳುವಳಿಕೆ ಹಾಗೂ ಹೊಂದಾಣಿಕೆಯಂತಹ ಸಾಮಾನ್ಯ ಜ್ಞಾನದ (ಕಾಮನ್ ಸೆನ್ಸ್) ಮೇಲೆ ಮಾತ್ರ ನಿಂತಿರುವುದೂ ಅಷ್ಟೇ ನಿಜವಾದುದಲ್ಲವೇ?

ರೇಷ್ಮಾಳ ಮನೆಯಿಂದ ಹೊರಬೀಳುವಾಗ ತಲೆ ಮೇಲೆಲ್ಲಾ ಹೂ ಮುಡಿದುಕೊಂಡಿದ್ದ ಸಾಲು ವೃಕ್ಷಗಳ ಈ ಏಳೆಂಟು ತಿಂಗಳ ಅಂತರದಲ್ಲೇ ಅವನ್ನೆಲ್ಲ ಕಳಚಿ ಬೋಳು ಬೋಳಾಗಿವೆ. ಚಳಿ ತನ್ನ ಛಾಪನ್ನು ಇಡೀ ನಿಸರ್ಗದ ಮೇಲೆ ಒತ್ತಿದಂತಿದೆ. ಎಲೆಗಳು ಗಿಡಗಳಿಂದುದುರಿದಂತೆ ಆಕೆಯ ನೆನಪೂ ಮನಸಿನಿಂದ ಕಳಚಿ ದೂರವಾಗಿದೆ. ನಿಸರ್ಗದಾಟದಂತೆ ಮನಸಿನ ಪ್ರಕ್ರಿಯೆಯೂ ವಿಚಿತ್ರವೇ. ಡಿ.ಎಫ್.ಓ. ನಾಡಗೌಡ, "ನಡಿಯೋ ಒಂದೆರಡು ದಿನ ನಾಗರ ಗಾಳಿಯಲ್ಲಿ ಇದ್ದು ಬರೋಣ. ನಮ್ಮ ಇಲಾಖಾ ಐ.ಬಿ. ತೋರಿಸುತ್ತೇನೆ. ನಡಿ, ನಿನಗೆ" ಅನ್ನುವಾಗ ಮತ್ತೆ ಅಲ್ಲಲ್ಲಿ ಹಸಿರೆಲೆಗಳು ಬಂದು ಕೆಲವೊಂದು ಗಿಡಗಳಲ್ಲಿ ಅಲ್ಪಸ್ವಲ್ಪ ಹೂಗಳೂ ಹಣಿಕಿ ಹಾಕುತ್ತಿದ್ದವು. ನನಗೆ ನನ್ನ ದಿನನಿತ್ಯದ ನೌಕರಿಯೂ ಇದ್ದದ್ದೇ ಅಲ್ಲವೇ? ಒಂದೆರಡು ದಿನ ರಜೆ ಹಾಕಿ ವಿಭಾಗೀಯ ಮ್ಯಾನೇಜರ್‌ರವರ ಅನುಮತಿ ಪಡೆದು ನಾಡಗೌಡನ ಜೊತೆಗೂಡಿದೆ.

ಧಾರವಾಡದಿಂದ ಅಂದಾಜು ಐವತ್ತು ಕಿಲೋಮೀಟರ್ ದೂರದ ದಟ್ಟ ಅಡವಿಯಲ್ಲಿ ಪಣಜಿ ಮುಖ್ಯರಸ್ತೆಯ ತುಸು ಒಳಗೆ ಈ ಐ.ಬಿ. ಇರುವುದು ನನಗೆ ಅಲ್ಲಿಗೆ ಹೋದಾಗಲೇ ಗೊತ್ತಾದದ್ದು. ಮತ್ತೆ ಮತ್ತೆ ಹೋಗಬೇಕೆನಿಸುವ ದಟ್ಟಾರಣ್ಯ. ಎದುರಿನ ಕೊಳದಿಂದಲೇ ಗುಂಪುಗುಂಪಾಗಿ ಮೇಲೆದ್ದು ಆಕಾಶ ಚುಂಬಿಸುವ ಗಿಡಗಳು, ಪೊದೆಗಳು, ಕಟ್ಟಡದ ಸ್ವಲ್ಪ ಮೇಲೆ ಏರಿ ನೋಡಿದರೆ ಕಾಣುವ ಹಂಡಿಬಡಗನಾಥ ದೇವಸ್ಥಾನ, ನಿರೀಕ್ಷಣಾ ಮಂದಿರದಿಂದ ಸೀದಾ ನಾಲ್ಕು ಕಿ.ಮೀ. ಕಾಡುರಸ್ತೆಯಲ್ಲಿ ನಡೆದುಹೋದರೆ ಅಲ್ಲಿಗೇ ಹೋಗಿ ಸೇರಬಹುದು. ನಡುವೆ ಹರಿಯುವ ಸಣ್ಣ ಸಣ್ಣ ಝರಿಗಳು, ಜೀಂಯ್‌ಗುಡುವ ಮೆಳೆಗಳು, ಒಂದು ಕ್ಷಣ ಯಾವುದಾದರೂ ಕಾಡು ಪ್ರಾಣಿ ಬಂದರೆ ಹೇಗೆಂದು ಹೆದರಿಕೆಯೂ ಆವರಿಸಿಬಿಡುತ್ತದೆ. ಆ ದೇವಸ್ಥಾನದ ಹಿಂಭಾಗದಲ್ಲಿಯ ಒಂದೆರಡು ಬೃಹದಾಕಾರದ ಬಂಡೆಗಲ್ಲುಗಳಲ್ಲಿ ಕೊರೆದು ಮಾಡಿದ ಗವಿಯೊಂದು ಇದೆ. ಅಲ್ಲಿ ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಕಿತ್ತೂರ ಚನ್ನಮ್ಮ ನಡೆಸಿದ ಯುದ್ಧದ ನಂತರದ ದಾಳಿಗಾಗಿ ತನ್ನ ಸೈನ್ಯ ಶೇಖರಣೆ ಮಾಡುವ ಕಾಲದಲ್ಲಿ ಅವಿತುಕೊಂಡು, ವೇಷ ಮರೆಸಿಕೊಂಡು

ಕೆಲಕಾಲ ವಾಸವಾಗಿದ್ದನಂತೆ. ಈಗಲೂ ಗವಿಯೊಳಗೆ ಒಳಗೋಗಬೇಕೆಂದರೆ ನುಸುಳಿಕೊಂಡು ತೆವಳಿಕೊಂಡು ಹೋಗಬೇಕು. ಒಳಹೋದ ಮೇಲೆ ನಾಲ್ಕಾರು ಜನ ಕುಳಿತುಕೊಳ್ಳಬಲ್ಲಷ್ಟು ಒಂದು ಕಡೆ ಜಾಗ ಇದೆ. ಅಲ್ಲಿಯೂ ಒಂದು ಈಶ್ವರನ ಮೂರ್ತಿಗೆ ಪೂಜೆ ನಡೆಯುತ್ತದೆ. ಒಂದು ಕಡೆಯಿಂದ ಒಳಹೋಗಿ ಮತ್ತೊಂದು ಕಡೆಯಿಂದ ಹೊರಬರಬಹುದಾದ ಸಣ್ಣಬಾಗಿಲುಗಳಿವೆ. ಗುಪ್ತ ಸಮಾಲೋಚನೆಗೆ ಹೇಳಿ ಮಾಡಿಸಿದ ಜಾಗ. ರಾಯಣ್ಣ ಬರೀ ಶೂರನಷ್ಟೇ ಅಲ್ಲ ತೀಕ್ಷ್ಣ ಬುದ್ಧಿಯ ಚಾಣಾಕ್ಷಮತಿಯೂ ಆಗಿದ್ದುದು ಗವಿಯನ್ನು ನೋಡಿದ ಯಾರಿಗಾದರೂ ಅನಿಸುತ್ತದೆ. ಈ ಎಲ್ಲ ತಿರುಗಾಟ ಮುಗಿಸಿಕೊಂಡು ಬಂದಾದ ಮೇಲೆ ಮಧ್ಯರಾತ್ರಿಯವರೆಗೂ ಮದ್ಯಪಾನದ ಪಾರ್ಟಿ. ನಾನು ಹನ್ನೊಂದು ಗಂಟೆಗೆ ಮಲಗಬೇಕೆಂದರೂ ಇವತ್ತೊಂದು ದಿನ ನಿದ್ದೆಗೆಡೋ ಸಾಹಿತಿ. ಇಲ್ಲಂದ್ರ ನೀ ಯೇನ್ ಸಾಯಿತಿ? ಎಂದು ನೇರವಾಗಿ ಗೆಳೆಯರು ಕೇಳಿದ್ದರಿಂದ ಆಗಲಿ ನಿಮ್ಮ ಮದ್ಯಪಾನಕ್ಕೆಂದೇ ಇರುವ ಸಮಯವೆಂದೇ ಇದಕ್ಕೆ ಮಧ್ಯರಾತ್ರಿ ಎಂದಿರಬೇಕೆ ಎಂದುಕೊಳ್ಳುತ್ತಾ ಕಂಪನಿಗಾಗಿ ಹಾಗೆಯೇ ಕುಳಿತುಕೊಂಡೆ.

ಬೆಳಗಿನ ಜಾವ ಆರು ಗಂಟೆಗೆ ಎದ್ದು ಹೊರಬಂದರೂ ರಾತ್ರಿಯ ಕತ್ತಲು ಮಾತ್ರ ಸರಿದು ನೀರವತೆ ಹಾಗೆಯೇ ಇನ್ನೂ ಮಡುಗಟ್ಟಿ ನಿಂತಂತೆ ಭಾಸವಾಗತೊಡಗಿತ್ತು. ಅದೇಕೆ ಇಲ್ಲಿ ಯಾವ ಪಕ್ಷಿಗಳೂ ಚಿಲಿಪಿಲಿಗುಟ್ಟುತ್ತಿಲ್ಲವಲ್ಲ ಎಂದು ಆಶ್ಚರ್ಯಚಕಿತನಾದೆ. ಐ.ಬಿ.ಯಿಂದ ತುಸು ಹೊರಬಂದು ತಿರುಗಾಡಿದೆ. ಇಲ್ಲಿ ಎಲ್ಲೂ ಇಲ್ಲ ಕೋಗಿಲೆಯ ಕುಹೂ ಆಗಲಿ ಗೊರವಂಕನ ಕೊರಕೊರವಾಗಲಿ, ಕಾಗೆ ಗುಬ್ಬಿಗಳ ಚೆಂವ್ ಕಾಕಾ ಆಗಲಿ ಇನ್ನಿತರ ಯಾವ ಖಗಮೃಗದ ಗದ್ದಲವಾಗಲಿ ಇಲ್ಲವೇಯಿಲ್ಲ. ಅಷ್ಟರಲ್ಲಿ ಫಾರೆಸ್ಟ್ ಗಾರ್ಡ್ ಬಿಸಿ ಬಿಸಿ ಚಹ ತಂದುಕೊಟ್ಟ. ಅಲ್ಲೇ ಗಿಡದ ಬುಡದಲ್ಲಿಯ ಹಾಸುಗಲ್ಲಿನ ಮೇಲೆ ಕುಳಿತು ಚಹ ಹೀರತೊಡಗಿರುವಾಗ ಮೂಗಿಗೆ ಸಿಗರೇಟಿನ ಹೊಗೆ ತಾಗಿ ಈಗ ನಾಡಗೌಡ ಎದ್ದಿರಬೇಕೆಂದು ಒಳಗೆ ಬಂದೆ. ನಿದ್ದೆ ಹೇಗಾಯಿತೆಂದು ಕೇಳುತ್ತಾ ಒಂದು ಗುಟುಕು ಚಹಕ್ಕೆ ಒಂದು ಜುರಿ ಹೊಗೆಯನ್ನು ಒಳಗೆ ಎಳೆದುಕೊಳ್ಳುತ್ತಿದ್ದ. ಮನಸ್ಸಿನಲ್ಲಿದ್ದ ಕುತೂಹಲದ ಪ್ರಶ್ನೆಯನ್ನು ಕೇಳಿಯೇ ಬಿಟ್ಟೆ. “ಇಷ್ಟು ಬೆಳಕು ಹರಿತಿದ್ದರೂ ಎಲ್ಲೆಲ್ಲೂ ಪಕ್ಷಿಗಳ ಸದ್ದೇ ಇಲ್ಲವಲ್ಲ?”. ಖುಷಿಯಾಯಿತವನಿಗೆ ಕೇನ್ ಚೇರ್ ಮೇಲೆ ಹಿಂದೆ ಒರಗಿ ಕಾಲಮೇಲೆ ಕಾಲುಹಾಕಿ ಪಾದವನ್ನು ಅಲುಗಾಡಿಸುತ್ತ “ಭಾಳ ಬರೀತಿ ಅಂದ್ರ ಭಾಳ ಶಾಣ್ಯಾ ಅಂತ ತಿಳಿದೀಯೇನು? ಇಷ್ಟು ಸಣ್ಣ ವಿಷಯ ತಿಳಿಯೋ ಹಂಗಿಲ್ಲವೇನು ನಿನಗ?” ತಕ್ಷಣ ನನಗೆ ಹೌದು ಅದಕ್ಕೆ ಕಾರಣ ನಿಮ್ಮ ಇಲಾಖೆ ಇರಬಹುದು. ಅವೆಲ್ಲವನ್ನೂ ಬೇಟೆಯಾಡಿ ತಿಂದು ಹಾಕಿರಬೇಕು ಎಂದು ಅನ್ನಬೇಕೆಂದರೂ ಆತನ ಮನಸ್ಸನ್ನು ಬೆಳಿಗ್ಗೇನೆ ಘಾಸಿ ಮಾಡಬಾರದೆಂದು ಹಾಗೆಯೇ ಮೌನವಾಗಿ ಏನು ತಿಳಿಯದವನಂತೆ ಆತನ ಮುಖ ನೋಡಿದೆ. ಏನು ಖುಷಿ ಅವನಿಗೆ! ಮುಖದ ತುಂಬಾ ನಗೆ ತಂದುಕೊಂಡ, ವಿಜಯದ ಸಂಕೇತ ಮೈಯನ್ನೆಲ್ಲಾ ಆವರಿಸಿದಂತೆ ಪುಲಕಗೊಂಡು, “ಅಲ್ಲೋ ಈ ನಮ್ಮ ಫಾರೆಸ್ಟ್‌ನ್ಯಾಗ ಹೂವು ಹಣ್ಣು ಕಾಯಿ ಇತ್ಯಾದಿ ಪಕ್ಷಿಗಳಿಗೆ ಬೇಕಾಗುವಂತಹವು ಬೆಳೆಯುವುದಿಲ್ಲ. ಅವುಗಳಿಗೆ ಇವೆಲ್ಲಾ ಬಹಳ ಅವಶ್ಯ. ಇಲ್ಲ ಆ ಸವಲತ್ತು ಇಲ್ಲ. ಅದಕ್ಕೆ, ಅವುಗಳ ಹಾವಳೇನೂ ಇಲ್ಲಿ ಇಲ್ಲ....” ನಾನು ತದೇಕಚಿತ್ತದಿಂದ ಅವರ ಮುಖ ನೋಡುತ್ತಾ ಹೌದೆಂದು ನನ್ನ ಮೌಢ್ಯವನ್ನು ಒಪ್ಪಿಕೊಂಡೆ. ಅಷ್ಟೇ ತಡ ಆತನ ನಗು ಈಗ ಗಹಗಹಿಕೆಗೆ ದಾರಿ ಮಾಡಿಕೊಟ್ಟಿತು. ಇಷ್ಟೊಂದು ಸಣ್ಣ ವಿಷಯವೂ ನನಗೆ ತಿಳಿದಿಲ್ಲವೆಂಬ ಸಂಗತಿಯಿಂದ ಆತ ಹರ್ಷಗೊಂಡಿದ್ದ. “ಗೊತ್ತಾಯ್ತು ಬಿಡು, ನಿನ್ನ ಬರಹಗಾರನ ಬುದ್ಧಿ” ಎಂದು ಮತ್ತೆ ಮತ್ತೆ ನಗತೊಡಗಿದ.

ನನ್ನ ಅತ್ಯಲ್ಪ ಅಜ್ಞಾನದ ಮೇಲಿನ ಆತನ ವಿಜಯೋತ್ಸಾಹದ ಗಹಗಹಿಕೆ ನನ್ನನ್ನು ತಕ್ಷಣ ಎಲ್ಲಿಗೋ ತೇಲಿಸಿಕೊಂಡು ಹೋಯಿತು. ಹತ್ತು ತಿಂಗಳಿಂದ ಮರೆಯಾದ ರೇಷ್ಮಾಳ ಮಾತು ಒಮ್ಮೆಲೆ ಆತನ ಮುಖರೇಖೆಗಳಲ್ಲಿ ಮೂಡಿ ಬರತೊಡಗಿತು. ಒಂದು ಕ್ಷಣ ನಾನು ಅಂತರ್‌ಮುಖಿಯಾಗಿಬಿಟ್ಟೆ. ಆತನೇ, “ಯಾಕೋ ಎಲ್ಲಿ ಹೋದಿ? ಆಂ ಮುಂಜಾಲೆನೆ ಸುರುವಾತೇನು ನಿನ್ನ ವಿಚಾರಲಹರಿ?” ಎಂದು ನನ್ನನ್ನು ಎಚ್ಚರಿಸಿ ಸ್ನಾನಕ್ಕೆ ಎಬ್ಬಿಸಿದ.

ತಿಕ್ಕಿ ತಿಕ್ಕಿ ಮೈತೊಳೆದುಕೊಳ್ಳುವಾಗ ಮೈಮನದಲ್ಲೆಲ್ಲ ರೇಷ್ಮಾ ನೆನಪು ಕಾಡತೊಡಗಿತು. ಈಗಾಗಲೇ ಆಕೆಗೆ ಆತ್ಮಹತ್ಯೆಯ ವಿಚಾರ ಮರೆತುಹೋಗಿರಬೇಕು, ಹೋಗಿರದಿದ್ದರೂ ಹೋಗಿರಲಿ ಎಂದು ಹಾರೈಸುತ್ತ ಸ್ನಾನ ಮುಗಿಸಿ ಹೊರಬಿದ್ದೆ.

ನಾಗರಗಾಳಿಯಿಂದ ತಿರುಗಿ ಬಂದ ಕೆಲದಿನಗಳಲ್ಲಿ ತುಮಕೂರಿನಿಂದ ಪತ್ರವೊಂದು ಬಂದಿತು. ಮೇಲಿನಿಂದಲೇ ಅದು ಗೊತ್ತಾಗಿದ್ದರಿಂದ ರೇಷ್ಮಾಳದೇ ಇರಬೇಕೆಂದು ಕುತೂಹಲದಿಂದಲೇ ಒಡೆದು ಓದತೊಡಗಿದರೆ ಅದನ್ನು ಆಕೆಯ ಗಂಡ ಬರೆದಿದ್ದ. ಮುದ್ದು ಮುದ್ದಾದ ಅಕ್ಷರಗಳು, ಅಲ್ಲಿಯೂ ಆತನ ಕೋಮಲತೆ (ಹೆಣ್ತನ?) ಎದ್ದು ಕಾಣುತ್ತಿತ್ತು. ಪ್ರಿಯರೆ ಎಂದು ಸಂಬೋಧಿಸಿದ ಪತ್ರದ ಒಕ್ಕಣೆ ಹೀಗಿತ್ತು:

ನನ್ನ ಪತ್ರ ನೋಡಿ ನಿಮಗೆ ಆಶ್ಚರ್ಯವೇ ಆಗಬಹುದು. ಅದು ಸಹಜವೇ. ಪರಿಚಯವಾಗಿ ಹದಿಮೂರು ವರ್ಷಗಳಲ್ಲಿ ನಾನಾಗಿಯೇ ನಿಮ್ಮನ್ನು ಮಾತಾಡಿಸಿಲ್ಲ ಕೂಡ. ಆದರೂ ಈಗ ಅನಿವಾರ್ಯವಾಗಿದೆ ಬರೆಯುವುದು. ನನ್ನ ಬಗ್ಗೆ ನಿಮಗೆ ಅತ್ಯಲ್ಪವೇ ಗೊತ್ತಿರಬೇಕೆಂದೂ ನನಗೆ ಖಾತ್ರಿಯಿದೆ. ಆದ್ದರಿಂದ ಈ ಪತ್ರ ಮುಗಿಸುವ ಮುನ್ನ ತುಸು ನನ್ನ ಜೀವನ ವೃತ್ತಾಂತವನ್ನು ಹೇಳಿಕೊಳ್ಳಬಯಸುತ್ತೇನೆ. ಒಟ್ಟು ಹದಿನಾಲ್ಕು ಹುಟ್ಟಿ ಜೀವಂತವಿದ್ದ ಎಂಟು ಮಕ್ಕಳಲ್ಲಿ ಎರಡನೆಯವನು ನಾನು. ಅವ್ವ ಕೇವಲ ಹೆರಿಗೆ ಮೆಷಿನ್ ಆಗಿದ್ದರಿಂದ ನಮ್ಮ ಮನೆಯಿಂದ ಕೇವಲ ಎರಡು ನಿಮಿಷದ ದೂರದಲ್ಲಿದ್ದ ಅಜ್ಜಿಯ ಮನೆಯಲ್ಲೆ ಬೆಳೆದವ ನಾನು, ಕೇವಲ ಊಟ ತಿಂಡಿಗಾಗಿ ಮನೆಗೆ ಬರುತ್ತಿದ್ದೆ. ಯಾವಾಗಲೂ ಬಾಣಂತಿಯಾಗಿರುತ್ತದೆ ಅವ್ವ ಹೊರಸಿನ ಮೇಲಿಂದಲೇ ನನ್ನ ಯೋಗಕ್ಷೇಮ ವಿಚಾರಿಸುತ್ತ ತಾಯಿಯ ಕರುಳನ್ನು ಹಬ್ಬಿಸುತ್ತಿದ್ದಳು. ನಾನು ಆಕೆಯ ತಾಯಿಯ ಮನೆಯಲ್ಲಿ ಇರುತ್ತಿದ್ದುದು ತುಸು ಸಮಾಧಾನ ತಂದಿರಬೇಕವಳಿಗೆ, ನನ್ನ ಪಡೆದವಳಿಂದ ಪೂರ್ತಿಯಾಗಿ ದೊರಕದ ಮಾತೃ ವಾತ್ಸಲ್ಯಕ್ಕಿಂತಲೂ ಹೆಚ್ಚಿನ ಪ್ರೀತಿ ಮಮಕಾರ ನನಗೆ ಅಜ್ಜಿಯಿಂದ ದೊರೆಯುತ್ತಿದ್ದವು. ಎಲ್ಲದಕ್ಕೂ ಅಜ್ಜಿಯ ಆಶ್ರಯ ಪಡೆಯುತ್ತಿದ್ದೆ. ಆದರೆ ನಾನು ಆರನೇ ಕ್ಲಾಸಿನಲ್ಲಿರುವಾಗಲೇ ಅಜ್ಜಿ ತೀರಿಹೋಗಿದ್ದರಿಂದ ನನಗೆ ದಿಕ್ಕೇ ತೋಚದಂತಾಗಿ ತಬ್ಬಲಿಯೆಂಬ ಭಾವನೆ ತೀವ್ರ ಕಾಡತೊಡಗಿತ್ತು. ಅಜ್ಜಿ ಸತ್ತಾಗ ಹಾಗೆ ನೋಡಿದರೆ ನಿಜವಾದ ದುಃಖದಿಂದ ಅತ್ತವನು ನಾನೊಬ್ಬನೇ ಎಂದು ಈಗಲೂ ನನಗೆ ಅನಿಸುತ್ತದೆ. ನಾನು ಹೈಸ್ಕೂಲು ಮುಗಿಸಿ ಊರು ಬಿಡುವರೆಗೂ ಅವ್ವನೊಡನೆ ಅಷ್ಟಿಷ್ಟು ಸಂಪರ್ಕ ಬಂದರೂ ಅವಳದೇ ಆದ ಕೆಲಸ ಕಾರ್ಯಗಳಿಂದಾಗಿ ಹೇಳಿಕೊಳ್ಳುವಂತ ಗಾಢ ಸಂಬಂಧ ಬೆಳೆಯಲೇಯಿಲ್ಲ. ಬಹುಶಃ ತಾಯಿಯೊಬ್ಬಳ ಅವಶ್ಯಕತೆಯ ಹಂಬಲವೇ ನನ್ನನ್ನು ರೇಷ್ಮಾಳಲ್ಲಿಯೂ ಅಜ್ಜಿ ತಾಯಿಯವರನ್ನೇ ನಾನು ಬಯಸುವಂತೆ ಮಾಡಿತ್ತೇನೋ. ಎಲ್ಲದಕ್ಕೂ ಅವಳ ಮೇಲೆಯೇ ಆಶ್ರಯಿಸತೊಡಗಿದೆ. ನಾನೊಬ್ಬ ಪರಾವಲಂಬಿ ಜೀವಿಯಂತಾದೆ. ನನ್ನ ಪ್ಯಾಸ್ಸಿವ್ ವ್ಯಕ್ತಿತ್ವ ಅವಳ ಆ್ಯಕ್ಟಿವ್ ಮನೋಧರ್ಮಕ್ಕೆ ಹೊಂದಾಣಿಕೆಯಾಯಿತೇನೋ ಬಲು ಖುಷಿಯಾಗಿದ್ದಳು. ಕೆಲವೇ ಕೆಲ ದಿನ. ನಂತರದಲ್ಲಿ ಸುರುವಾಯಿತು ಅನಾವಶ್ಯಕ ಮೇಲಾಟ, ಸ್ಪರ್ಧೆ, ಚುಚ್ಚುಮಾತು ಇತ್ಯಾದಿ. ಅವಳ ಮೇಲಿನ ನನ್ನ ಅನನ್ಯ ಅವಲಂಬನೆ ನನ್ನ ಬಲಹೀನತೆಯೆಂದು ತಿಳಿದಳೇ ಹೊರತು ಅದು ನನ್ನ ಗಾಢ ಪ್ರೀತಿ ಅಕಳಂಕ ಒಲವು ಎಂದು ಅರ್ಥಮಾಡಿಕೊಳ್ಳದಾದಳು. ಅವಳ ಸ್ವಭಾವದ ಬಗ್ಗೆ ನನಗಿಂತಲೂ ನೀವು ಹೆಚ್ಚು ತಿಳಿದವರೆಂದು ಅಂದು ನೀವು ನಮ್ಮ ಮನೆಯಲ್ಲಿ ಅವಳಿಗೆ ಹಾಕಿದ ಕೆಲ ಪ್ರಶ್ನೆಗಳಿಂದ ನನಗೆ ಗೊತ್ತಿದೆ. ಹನ್ನೆರಡು ವರ್ಷಗಳೆಂದರೆ ಒಂದು ಪಟ್ಟವಾದಂತಂತೆ. ಕೆಲಸಾರೆ ಅನಂತರ ಬದಲಾವಣೆಗಳು ಸಹಜವಾಗಿಯೇ ಆಗುತ್ತವೆಂದು ನಂಬಿ ಕಾಯ್ದೆ, ತಡೆದೆ. ಅನುಭವಿಸಿದೆ ನೋವನ್ನು ಗೋಳನ್ನು. ಆದರೆ, ಇಲ್ಲಿಯವರೆಗೂ ಸುಧಾರಣೆಯ ಯಾವ ಲಕ್ಷಣವೂ ಕಾಣಲಿಲ್ಲ ಅಷ್ಟೇ ಅಲ್ಲ ದಿನೇ ದಿನೇ ಕಠೋರತೆ, ವ್ಯಂಗ್ಯ, ಮೊನಚು ಹೆಚ್ಚುತ್ತಲೇ ಬಂದಿವೆ. ಏನನ್ನು ಬಯಸಿದವನಿಗೆ ಏನೇನು ದೊರಕಿತಲ್ಲವೇ? ದಿನಾಲೂ ಸಾಯತೊಡಗಿದೆ ನಾನು ಎನಿಸಿತು ನನಗೆ. ಇದು ಹೇಡಿಗಳ ಲಕ್ಷಣವಲ್ಲವೇ? ಆದ್ದರಿಂದ ಆತ್ಮಹತ್ಯೆಯ ವಿಚಾರ ಮಾಡಿದೆ. ಹೌದು ಆತ್ಮಹತ್ಯೆಯೂ ಅಪೌರುಷರ ದಾರಿಯೇ ಅಲ್ಲದೇ ಮಹಾಪಾಪದ ಕೆಲಸವೇ. ನನ್ನಂತಹವನ

ಸ್ಥಿತಿಯಲ್ಲಿ ಯಾವ ಪಾಪ ಪ್ರಜ್ಞೆಯಾಗಲಿ ಶೂರತನ - ಹೇಡಿತನಗಳ ಭೇದಭಾವಗಳ ಬಾಧೆಯಾಗಲಿ ಯಾರನ್ನು ಕಾಡಲಾರವೆಂದೇ ನನ್ನ ನಂಬಿಕೆ. ಈ ನಂಬಿಕೆಯೇ ಗಟ್ಟಿಗೊಳ್ಳುತ್ತಾ ಬಂದು ಬಂದು ಈಗ ಇಂದೇ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ಈ ಪತ್ರ ನಿಮಗೆ ಮುಟ್ಟುವಷ್ಟರಲ್ಲಿ ನನ್ನ ಇಹಲೋಕ ಯಾತ್ರೆಯೂ ಮುಗಿದು ಹೋಗಿರುತ್ತದೆ.

ನಿಮಗೆ ತೊಂದರೆ ಕೊಟ್ಟಿದ್ದಕ್ಕೆ ಕ್ಷಮೆ ಇರಲಿ.

ಇತಿ ನಿಮ್ಮ

**ಸುಧೀರ**

❖

# ಸಾವು ಬದುಕು ನಿರಂತರ

When the body is strong and sturdy allow it to make progress; when it is afflicted by diseases, cure it with treatment and help it re-cover, when it reaches terminal point and disintegrates so much as not to be fit enough to serve the cause of piety, make up your mind to renounce it, the way you would desire to disassociate yourself from the company of a cruel villain'

- Ya sastilaka - Campu VI - 860

ಅಮೇರಿಕಾದಿಂದ ಅಣ್ಣಯ್ಯನ ಹೆಣ ಹನ್ನೊಂದನೆ ತಾರೀಖಿಗೆ ಬರುವುದೆಂದು ತಿಳಿದಾಗ ಪ್ರಭುದೇವ ಪಾಟೀಲ್ ಸಹಜವಾಗಿಯೇ ತನ್ನ ಕೈಗಡಿಯಾರದ ಕಡೆ ನೋಡಿಕೊಂಡ. ಅಯತಾಕಾರದ ಪುಟ್ಟ ವಾಚು ಆರನೇ ತಾರೀಖು ತೋರಿಸುತ್ತಿತ್ತು. ಬಾಡಿ ಬರಲು ಇನ್ನೂ ಐದು ದಿನ ಬಾಕಿ ಇದೆ. ಆದರೆ ಅಣ್ಣಯ್ಯ ತೀರಿಕೊಂಡು ಆಗಲೆ ಐದು ದಿನ ಆಗಿ ಹೋಗಿದೆಯಲ್ಲವೇ? 25-30 ಗಂಟೆಗಿಂತ ಹೆಚ್ಚು ಹೊತ್ತು ಇಟ್ಟರೆ ಮೃತದೇಹ ಕ್ಷೀಣಿಸಲು ಪ್ರಾರಂಭಿಸಿ ಅದರ ದುರ್ವಾಸನೆ ಸಹಿಸಲು ಅಸಾಧ್ಯವಾಗುತ್ತದೆ ಎಂಬುದನ್ನು ಹಲವಾರು ಬಾರಿ ಕಂಡು ಕೇಳಿದ್ದ ಪ್ರಭುದೇವಗೆ ಇದೇನು ವಿಚಿತ್ರ ಎಂದೆನ್ನಿಸದೇಯಿರಲಿಲ್ಲ. ಮೂವತ್ತೊಂದು ವರ್ಷ ಅಮೇರಿಕಾದಲ್ಲಿಯೇ ಕಳೆದ ಅಣ್ಣಯ್ಯಗೆ ತನ್ನ ದೇಹ ಮಾತ್ರ ಭಾರತಾಂಬೆಯ ಮಡಿಲಲ್ಲೇ ಮಣ್ಣಾಗಬೇಕೆಂಬ ಹಂಬಲ. ಅದಕ್ಕಾಗಿ ಏನೇನೋ ವ್ಯವಸ್ಥೆ ಮಾಡಿ ಹೆಣ ಕೆಡದಂತೆ ರಕ್ಷಿಸಿ ಕಳಿಸುತ್ತಿದ್ದಾರಂತೆ ಆತನ ಕೊನೆಯಾಸೆ ಪೂರೈಸಲಿಲ್ಲ. ಹೌದು ತಾನೆಂದೂ ಒಮ್ಮೆ ಗೋವಾಕ್ಕೆ ಹೋದಾಗ ಸೇಂಟ್ ಜೇವಿಯರ್‌ನ ಎಷ್ಟೋ ವರ್ಷಗಳ ಮೃತ ದೇಹವನ್ನು ಇನ್ನೂ ಕಾದಿರಿಸಿದ್ದನ್ನು ಆ ಚರ್ಚ್‌ನಲ್ಲಿ ನೋಡಿರಲಿಲ್ಲವೇ? ಅಷ್ಟೇ ಏಕೆ ಈಜಿಪ್ತಿನ 'ಮಮ್ಮಿ'ಗಳು ಎಂದಿನಿಂದಲೋ ಕಾಯ್ದುಕೊಂಡು ಬಂದ ಅಸ್ತಿಪಂಜರಗಳೇ ಅಲ್ಲವೇ? ಈಗಿನ ವೈದ್ಯಕೀಯ ವಿಜ್ಞಾನ ಸಾಕಷ್ಟು ಮುಂದುವರಿದಾಗ ಇದೇನು ಮಹಾ ಎಂದು ಒಮ್ಮೆ ಆತನ ಮನಸಲ್ಲಿ ಸುಳಿದುಹೋಯಿತು. ಇದರಿಂದ ತಲೆಯಲ್ಲಿನ ತುರ್ತಿನ ಪ್ರಶ್ನೆಗೆ ಸಮಾಧಾನ ಸಿಕ್ಕರೂ ಅಂತರಾಳದಲ್ಲಿ ಅಂತರ್ಮುಖಿಯಾದ. ಸಾವಿನ ಕಲ್ಪನೆಯೇ ಆತನನ್ನು ಅಸ್ವಸ್ಥನನ್ನಾಗಿ ಮಾಡತೊಡಗಿತು. ಇದು ಸ್ಮಶಾನ ವೈರಾಗ್ಯವಲ್ಲವಾದರೂ ಸಾವಿನ ಶುದ್ಧವೈರಾಗ್ಯವೂ ಆಗಲಿಲ್ಲ. ತುಸು ತುಸನೇ ಆತ ಸ್ಥಿತಪ್ರಜ್ಞ ಸ್ಥಿತಿ ತಲುಪತೊಡಗಿದ ವಿಚಾರ ಸರಣಿ ಗಹನವಾಗುತ್ತಲೇ ಸಾಗತೊಡಗಿತು;

ತಾನು ಎಂದೋ ಓದಿಕೊಂಡ ಕೆಲ ಪುಸ್ತಕಗಳಲ್ಲಿಯ, ಕೇಳಿದ ಮಾತುಗಳಲ್ಲಿಯ ಕೇವಲ ಸಾವು ಮತ್ತು ಆ ಸುತ್ತಲಿನ ವಿಷಯಗಳಷ್ಟೇ ಮನದಲ್ಲಿ ತೇಲಿ ಬರತೊಡಗಿದವು. ಪ್ರೊ. ಶೆಟ್ಟರ್‌ರವರ ಪುಸ್ತಕವೊಂದರಲ್ಲಿನ ಜೈನ ಸಿದ್ಧಾಂತವೊಂದರ ಪ್ರಕಾರವೇ ನಲ್ವತ್ತೆಂಟು ನಮೂನೆಯ ಮರಣಗಳಿವೆಯಂತೆ. ಇದರಲ್ಲಿ ಎಲ್ಲಾ ನೆನಪಿರದಿದ್ದರೂ ಸಲ್ಲೇಖನ ಮರಣ. ಅವಿಚ್ಛಿ ಮರಣ ಎಂಬೆರಡು ಪ್ರಕಾರಗಳನ್ನು ಮಾತ್ರ ಮನಸಿನಾಳದಿಂದ ಹೊರತೆಗೆದು ಮೆಲುಕು

ಹಾಕಿದ. ಮೊದಲನೆಯದು ಶರೀರವನ್ನು ನಶಿಸಿ ನಶಿಸಿಕೊಂಡು ಸಾಯುವುದಾದರೆ ಎರಡನೆಯದು ನಿರಂತರ ಮರಣ. ಈ ನಿರಂತರ ಮರಣದ ವ್ಯಾಖ್ಯಾನವೇ ವಿಚಿತ್ರವಾದುದು. ಮನುಷ್ಯ ಬದುಕಿನ ಪ್ರತಿ ಕ್ಷಣವನನು ಬದುಕುತ್ತ ಮುಂದಿನ ಕ್ಷಣಕ್ಕೆ ಹೊರಟಂತೆ ಹಿಂದಿನ ಕ್ಷಣ ಸಾಯುತ್ತಲೇ ಇರುತ್ತಾನೆ ಎಂಬ ವಾದ. ತಾನು ಓದಿಕೊಳ್ಳುವಾಲೇ ತೀವ್ರ ಪರಿಣಾಮಕ್ಕೊಳಗಾಗಿದ್ದ ಪ್ರಭುದೇವ ಇಂದು ಮತ್ತೊಮ್ಮೆ ಅತೀವವಾಗಿ ಅದರಲ್ಲಿ ಮುಳುಗಿಬಿಟ್ಟ ಹಾಗೆಯೇ.. ಬದುಕುವುದೆಂದರೆ ಸಾಯುತ್ತಲೆ (ಕ್ಷಣ ಕ್ಷಣವೂ) ಮುನ್ನಡೆಯುವುದು ಅಥವಾ ಬದುಕುತ್ತಲೆ ಸಾಯುವುದು ಎಂದರ್ಥವಂತೆ. ಎಂಥ ಅರ್ಥಗರ್ಭಿತವಾದ ವಾದ ಸರಣಿ. ಇದೊಂದು ವಿಪರೀತ ಸಿದ್ಧಾಂತವೇ ಸರಿ ಎಂದಂದುಕೊಳ್ಳುತ್ತಿದ್ದಂತೆ ಅವನಿಗರಿವಿಲ್ಲದೆಯೇ ನಿಡುಸುಯ್ದ. ಹಾಗೆಯೇ ದೀರ್ಘ ಶ್ವಾಸವೊಂದು ಹೊರಬಿತ್ತು. ಆದರೆ ಈಗ ಅಣ್ಣಯ್ಯನಿಗೆ ಬಂದದ್ದು ಮಾತ್ರ ಶಾಶ್ವತ ಮರಣ. ಮರಣದಲ್ಲಿಯೂ ಶಾಶ್ವತ - ತಾತ್ಪೂರ್ತಿಕ ಎಂಬುದಿದೆಯೇ ಎಂದು ತನ್ನನ್ನು ತಾನು ಪ್ರಶ್ನಿಸಿಯೂಕೊಂಡ, ಇವೆಲ್ಲ ಕೇವಲ ವಾದಕ್ಕಾಗಿ ಅಥವಾ ಸಿದ್ಧಾಂತವೊಂದರ ಪುಷ್ಟೀಕರಣಕ್ಕಾಗಿ ಒಡ್ಡುವ ವಿವರಣೆಗಳೂ, ಪುನರ್ಜನ್ಮದಲ್ಲಿನ ನಂಬಿಕೆ ಅಪನಂಬಿಕೆಗೆ ಸಂಬಂಧಿಸಿದವುಗಳು, ತಾನು ಮಾತ್ರ ಇವೆರಡರ ನಡುವೆ ತೇಲಾಡುತ್ತಿರುವ ತ್ರಿಶಂಕುವಿನಂತೆ ಎಂದು ತನ್ನನ್ನೇ ತಾನು ಅರ್ಥೈಸಿಕೊಂಡ.

ಅಣ್ಣಯ್ಯನ ಹೆಣ ಬಂದು ತಮ್ಮ ಹಳ್ಳಿಯನ್ನು ಸೇರಲುಳಿದಿರುವ ಆ ಐದು ದಿನಗಳೂ ಪ್ರಭುದೇವ ಮಂಕಾಗಿಯೇ ಇದ್ದ. ಇಡೀ ಗ್ರಾಮವೇ ತುಸು ಹಾಗಾಗಿತ್ತೆಂದರೂ ಅಡ್ಡಿಯಿಲ್ಲ. ಆದರೆ ಅಣ್ಣಯ್ಯನಿಗೆ ಅತೀ ಆತ್ಮೀಯನಾಗಿದ್ದ ಒಂದು ಥರ ಶಿಷ್ಯನಂತಿದ್ದ ಈತನಿಗಾದಷ್ಟು ಆಘಾತ ನೋವು ಅಲ್ಲಿ ಬೇರಾರಿಗೂ ಆಗಿರಲಿಲ್ಲ. ಇದಕ್ಕೆ ಇನ್ನೂ ಒಂದು ವಿಶೇಷ ಕಾರಣವೂ ಇತ್ತು. ಅದೆಂದರೆ ಇನ್ನು ಕೇವಲ ಮೂರು ವಾರಗಳಲ್ಲಿ ಪ್ರಭುದೇವ ತನ್ನ ಜೀವಮಾನದ ಪ್ರಪ್ರಥಮ ಚುನಾವಣೆಯೊಂದನ್ನು ಎದುರಿಸಲಿದ್ದ. ಅವನೇನು ಅದಕ್ಕೆ ಆಸೆಪಟ್ಟವನಲ್ಲ. ಆದರೆ ಜನರ ಒತ್ತಾಯಕ್ಕೆ ಮಣಿದು ಪರಿಸ್ಥಿತಿಯ ಕೂಸಾಗಿದ್ದ. ಮನಸ್ಸಿಲ್ಲದ ಮನಸ್ಸಿನೊಂದಿಗೆ ಸ್ಪರ್ಧೆಗೆ ಒಪ್ಪಿಗೆ ಸೂಸಿದ್ದ. ಈ ನಡುವೆಯೇ ಬಂದಿತ್ತು ಅಣ್ಣಯ್ಯನ ಸಾವು. ಅಣ್ಣಯ್ಯ ತನ್ನ ಅಚ್ಚುಮೆಚ್ಚಿನ ಅಣ್ಣಯ್ಯ.... ಅವರಿಬ್ಬರ ವಯಸ್ಸಿನ ಅಂತರ ಆರೆಂಟು ವರ್ಷ ಇದ್ದಿರಬಹುದು. ಅಕ್ಕಪಕ್ಕದ ಮನೆ, ಕೂಡಿ ಆಡಿ ಬೆಳೆದವರು. ಎಲ್ಲದಕ್ಕೂ ಅಣ್ಣಯ್ಯನೇ ಹಿರೇಮಣಿ - ಆಟ, ಓಟ, ಊಟ - ಇತ್ಯಾದಿ ಎಲ್ಲದಕ್ಕು. ತಾನು ತನ್ನಂತಹ ಇನ್ನು ನಾಲ್ಕಾರು ಹುಡುಗರು ಸದಾ ಅವರ ಹಿಂಬಾಲಕರು. ಆತ ಹೋದಲ್ಲಿ ಹೋಗುವುದು, ಬಂದಲ್ಲಿ ಬರುವುದು, ಮಾಡಿದ್ದನ್ನು ಮಾಡಬೇಕೆನ್ನುವುದು ಹೀಗೆಯೇ, ಆದರೆ ಆತನಂತೆ ಓದಲಿಕ್ಕೆ ಮಾತ್ರ ಆಗುತ್ತಿರಲಿಲ್ಲ. ಹಾಗೆ ನೋಡಿದರೆ ಅಣ್ಣಯ್ಯ ಹೆಚ್ಚು ಓದುತ್ತಿರಲೇ ಇಲ್ಲ. ಆದರೆ ಓದಿದ್ದನ್ನೆಲ್ಲಾ ಬಾಯಿಪಾಠ ಮಾಡಿದಂತೆ ಪುನರುಚ್ಚರುಸುತ್ತಿದ್ದ. "ಅಣ್ಣಯ್ಯನ ಜೋಡಿ ಅಡ್ಡಾಡಬ್ಯಾಡ್ರಲೇ. ಅವಾ ತುಸು ಓದಿದರೂ ನಡೀತೈತಿ. ಬಾಳ ಓದಿದರೂ ನಡೀತೈತಿ. ಉದ್ದಾನ ಕೂದಲಿದ್ದಾಕಿ ಜಡಿ ಹಾಕಿದರೂ ಚಂದ ಕಾಣಸ್ತೈತಿ ತುರುಬು ಕಟ್ಟಿದರೂ ಚಂದಾಗಿ ಕಣಿಸ್ತೈತಿ. ಅವಾ ಶ್ಯಾಣಾ ಅದಾನ. ಅವನ್ಹಂಗ ನೀವ್ ಮಾಡಿದ್ರ ಪರೀಕ್ಷಾದಾಗ ಡುಮುಕಿ ಹೊಡಿಬೇಕಾಗತ್ತೈತ್ಲೆ" ಎಂದು ತನ್ನಪ್ಪ ಇನ್ನಿತರ ಹಿರಿಯರು ಅಣ್ಣಯ್ಯನ ಜಾಣತನ ಹೊಗಳುತ್ತಲೇ ಇವನನ್ನು ಹಾಗೂ ಇವನ ಸಂಗಡಿಗರನ್ನು ಎಚ್ಚರಿಸುತ್ತಿದ್ದರು. ಎಲ್ಲದರದಲ್ಲೂ ಅಚ್ಚುಕಟ್ಟು ಅಣ್ಣಯ್ಯ, ಆಟವಾಡತೊಡಗಿದರೆ, ಈಜಲು ನಿಂತರೆ, ಕುಸ್ತಿ ಕಬ್ಬಡ್ಡಿಗಿಳಿದ್ದರೆ ಆಹ್ ಎಂತಹ ತದೇಕ ಚಿತ್ತತೆಃ ಎಲ್ಲಕ್ಕೂ ಹೆಚ್ಚಾಗಿ ಹಿರೇಹುದ್ದರಿ (Captain) ಆಗಿ ಆತ ಎಲ್ಲರನ್ನು ನಿಭಾಯಿಸುತ್ತಿದ್ದ ಪರಿ ವೈರಿಯೂ ಮೆಚ್ಚತಕ್ಕಂತಹುದು. ಅಣ್ಣಯ್ಯ ವಿಶಾಲ ಹೃದಯಿ. ತಾಲೂಕಾ ಮಟ್ಟದ ಪಂದ್ಯಾಟಗಳಲ್ಲಿ ತಮ್ಮ ತಂಡ ಒಮ್ಮೆ ಕಬ್ಬಡಿ ಪ್ರಶಸ್ತಿ ಗೆದ್ದಾಗ ನಾಯಕನಾಗಿ ಸ್ವತಃ ಹೋಗಿ ಶೀಲ್ಡು ಪಡೆಯದೇ ವಯಸ್ಸಿನಲ್ಲಿ ಎಲ್ಲಕ್ಕಿಂತ ಕಿರಿಯನಾದ ತನ್ನನ್ನು ಕಳಿಸಿರಲಿಲ್ಲವೆ? ಎಂತಾ ಉದಾರಿ ಅಣ್ಣಯ್ಯ ಎಂದು ಹೀಗೆಯೇ ಹಲವಾರ ಸಿಹಿ (ಈಗ ಕಹಿ) ನೆನಪುಗಳನ್ನು ಮೆಲಕು ಹಾಕುತ್ತ ಪುನಃ ಪುನಃ ಮಂಕಾಗುತ್ತಿದ್ದ ಪ್ರಭುದೇವ, ಹಾಗೆಯೇ ನೆನಪಿನ ಸರಣಿ ಮುಂದೊರಿದೇ ಇತ್ತು.

ಹೈಸ್ಕೂಲ್, ಕಾಲೇಜು, ಮೆಡಿಕಲ್ ಕಾಲೇಜುಗಳಿಗೆಲ್ಲ ನಂಬರ್ ಹಚ್ಚಿ ಪಾಸಾದ ಅಣ್ಣಯ್ಯನಿಗೆ ಆಗ ಅನಾಯಾಸವಾಗಿ ಅಮೆರಿಕಾದ ಡಿಟ್ರಾಯ್ಟ್‌ನ ಮಿಚಿಗನ್ ವಿಶ್ವವಿದ್ಯಾಲಯದ ಶಿಷ್ಯವೇತನ ದೊರಕಿ ಹೆಚ್ಚು ವಿಚಾರ ಮಾಡಲೂ ಆಗದೆ ವಿದೇಶಕ್ಕೆ ತೆರಳಿಯೇ ಬಿಟ್ಟಿದ್ದ. ಮೊದ ಮೊದಲು ವರ್ಷಕ್ಕೊಮ್ಮೆ ಬರುತ್ತಿದ್ದವ ಇತ್ತಿತ್ತಲಾಗಿ 2-3 ವರ್ಷಗಳಿಗೊಮ್ಮೆ ಬರತೊಡಗಿದ. ಆದರೆ ಹಾಗೆ ಬಂದಾಗ ಮಾತ್ರ ಎಲ್ಲರನ್ನೂ ದಂಗುಬಡಿಸುವಂತೆ ಯಾವಾಗಲೂ ಧೋತರ ಜುಬ್ಬಾ ಧರಿಸುತ್ತಿದ್ದ. ಅಂದರೆ ಎಲ್ಲರಕ್ಕಿಂತ ಹೆಚ್ಚು ಭಾರತೀಯನಾಗ ಬಯಸುತ್ತಿದ್ದ. ಆತನಿಗೆ ಅಲ್ಲಿ ಹೇಗೆ ಲಕ್ಷಾಂತರ ರೂಪಾಯಿ (ಡಾಲರ್‌ನಲ್ಲಿ) ಬರುತ್ತವೆಂದೂ ಹೇಗೆ ಅಲ್ಲಿಯ ಜನ ದುಡಿಯುತ್ತಾರೆಂದೂ, ಕಾಯಕವೇ ಕೈಲಾಸ ಇಲ್ಲಿ ಹುಟ್ಟಿದ ಮಾತಾದರೂ ಹೇಗೆ ಅಲ್ಲಿಯ ಜನ ಅದನ್ನು ಅಕ್ಷರಶಃ ಪಾಲಿಸುತ್ತಾರೆಂದೂ ಬಲು ಗಂಭೀರವಾಗಿ ಆದರೆ ಅಷ್ಟೇ ಭಾವುಕನಾಗಿ ವಿವರಿಸುತ್ತಿದ್ದ. ಅಣ್ಣಯ್ಯ ಏನೇ ಹೇಳಲಿ, ಎಷ್ಟೇ ನಗಲಿ, ಖುಷಿಯಿಂದಿರಲಿ ಯಾಕೋ ಪ್ರಭುದೇವಗೆ ಆತನ ಮುಖದಲ್ಲಿ ಯಾರಿಗೂ ಕಾಣದ ವಿಷಾದದ ಛಾಯೆಯೊಂದು ಸದಾ ಕಾಣುತ್ತಲೇ ಇರುತ್ತಿತ್ತು. ಇದಕ್ಕೇನು ಕಾರಣವೆಂದು ಹಲವಾರು ಸಾರೆ ಕೇಳಬೇಕೆಂದಿದ್ದರೂ ಆಗಿರಲಿಲ್ಲ. ಆದರೆ ಒಮ್ಮೆ ಅಣ್ಣಯ್ಯ ತಾನಾಗಿಯೇ".... ನೋಡು ಪ್ರಭು ಮನುಷ್ಯನಿಗೆ ಭೌತಿಕ ವಸ್ತುಗಳು ಯಾವುವೂ ನಿಜವಾದ ಸುಖ ಸಮಾಧಾನ ಕೊಡಲಾರವು. ಆತ ಕೋಟಿ ಕೋಟಿ ಗಳಿಸಿಯೂ ತಾನು ಏನನ್ನೂ ಸಂಪಾದಿಸಿಲ್ಲವೆಂದಂದುಕೊಳ್ಳಬಹುದು. ತನ್ನೊಡನೆ ಎಷ್ಟೊಂದು ಜನರಿದ್ದರೂ ತನಗಾಗುವವರು ಯಾರೂ ಇಲ್ಲ ತಾನು ಅನಾಥನೆಂಬ ಭಾವನೆ ಬಂದು ಆತನನ್ನು ಪದೇ ಪದೇ ಕಾಡುತ್ತಲೇ ಇರಬಹುದು..... ಅಂತೆಯೇ ಆಂತರಿಕ ಆನಂದ ವಿಚಿತ್ರವಸ್ತು. ಏನಿಲ್ಲದಿದ್ದರೂ ಸಂತೃಪ್ತಿಯ ಜೀವನ ನಡೆಸಬಹುದು. ಉದಾಹರಣೆಗೆ ಆ ಹನುಮಜ್ಜನನ್ನು ನೋಡು....." ಇತ್ಯಾದಿ ಹೀಗೆಯೇ ಏನೆಲ್ಲ ಆಧ್ಯಾತ್ಮಿಯಂತೆ ವಿವರಿಸಿದ್ದ.

ತೀರ ವಿಳಂಬವಾದಂತೆನಿಸಿದರೂ ಟೈಂ ಅಂಡ್ ಟೈಡ್ ವೇಟ್ ಫಾರ್ ನನ್ನ ಎಂಬಂತೆ ಆ ಹನ್ನೊಂದನೇ ತಾರೀಖು ಬಂದೇ ಬಿಟ್ಟಿತು. ಡಿಟ್ರಾಯ್ಟನಿಂದ ವಿಮಾನದಲ್ಲಿ ನ್ಯೂಯಾರ್ಕ್ ಲಂಡನ್ ಮುಂಬೈ ಮಾರ್ಗವಾಗಿ ಬೆಂಗಳೂರು ತಲುಪಿ ಮುಂದೆ ಆಂಬುಲೆನ್ಸ್‌ವೊಂದರಲ್ಲಿ ಸ್ವಗ್ರಾಮಕ್ಕೆ ಪಾರ್ಥಿವ ಶರೀರವನ್ನು ತಂದಿಳಿಸಿದರು. ಅಷ್ಟೊತ್ತಿಗಾಗಲೇ ಅಣ್ಣಯ್ಯನ ಬಂಧುಬಳಗ, ಸುತ್ತಮುತ್ತಲಿನ ಹತ್ತು ಹದಿನೈದು ಹಳ್ಳಿಯ ನಾಲ್ಕೈದು ಸಾವಿರ ಜನರೇ ಸೇರಿದ್ದರು. ಎಂದಿನಂತೆ ಭಜನಾ ಮೇಳ, ಹಣ ಹುಡುಕುವುದು, ಬಡವರಿಗೆ ಜೋಳ ವಿತರಿಸುವುದನ್ನು ಅವನ ಮನೆಯವರು ಏರ್ಪಡಿಸಿದ್ದರು. ಶವಪೆಟ್ಟಿಗೆ ಜೋಪಾನವಾಗಿ ಸುಸ್ಥಿತಿಯಲ್ಲಿದ್ದು ಕರ್‍ರನೆ ಮಿರಿ ಮಿರಿ ಮಿಂಚುತ್ತಿತ್ತು. ಕುತೂಹಲದಿಂದಾಗಿ ನೂಕು ನುಗ್ಗಲು ಹೆಚ್ಚಾದಾಗ ಹಗ್ಗ ಕಟ್ಟಿ ಎಲ್ಲರೂ ಸಾಲಾಗಿ ಬಂದು ದರ್ಶನ ಪಡೆಯಲೆಂದು ವ್ಯವಸ್ಥೆ ಮಾಡಲಾಯಿತು. ಪೆಟ್ಟಿಗೆಯ ಅಂದಾಜು ಮೂರನೆಯ ಒಂದು ಭಾಗವನ್ನು ತೆರೆಯಲಾಯಿತು. ಎದೆಯವರೆಗೆ ಅಣ್ಣಯ್ಯನ ದೇಹ ದರ್ಶನವಾಗತೊಡಗಿತು. ಸಮೀಪದಲ್ಲೇ ನಿಂತು ಇದನ್ನೆಲ್ಲ ದುಃಖ ತುಂಬಿದ ಕಣ್ಣುಗಳಿಂದ ನೋಡುತ್ತಿದ್ದ ಪ್ರಭುದೇವ ಒಂದು ಕ್ಷಣ ಅವಕ್ಕಾದ, ಆಹ್ ಎಂತಹ ಐಷರಾಮಿ ವ್ಯವಸ್ಥೆ ಆ ಪೆಟ್ಟಿಗೆಯೊಳಗೆ, ಲಕ ಲಕ ಹೊಳೆಯುವ ಸ್ವಚ್ಛ ಕೆನೆ ಬಣ್ಣದ ಕುತನಿ ಬಟ್ಟೆಯಲ್ಲಿ ವಿರಮಿಸಿದ ಅಣ್ಣಯ್ಯನ ಕಳೇಬರ. ಅರೇ ಇದೆಂತಹ ವಿಚಿತ್ರ ಕಳೆ ಅವರ ಮುಖದ ಮೇಲೆ, ಏನಾ ಮೇಕಪ್ಪು, ನೀಟಾಗಿ ಶೇವ್ ಮಾಡಿ, ತುಟಿಗಳಿಗೆ ಗುಲಾಬಿ ಬಣ್ಣದ ತೆಳು ಲಿಪ್‌ಸ್ಟಿಕ್ ಲೇಪಿಸಿ, ರೆಪ್ಪೆ ಗಲ್ಲಗಳಿಗೆ ತುಸು ಕಂದು ಬಣ್ಣ ಸವರಿದ್ದರಿಂದ ಮೂಲ ಜೀವಕಳೆಯನ್ನು ಉಳಿಸಿಕೊಂಡು ಲವಲವಿಕೆಯಿಂದ ಕೂಡಿದ ಚಹರೆ. ಒಂದು ಕ್ಷಣ ಅಣ್ಣಯ್ಯನೀಗ ಎದ್ದು ಬರುತ್ತಾನೇನೋ ಅಂದುಕೊಳ್ಳಬೇಕು ಮೊದಲ ನೋಟದ ಯಾರಾದರೂ. ಸೂಟು ಬೂಟು ಟೈಗಳಿಂದ ಶೃಂಗರಿಸಲ್ಪಟ್ಟು ವಿರಾಜಿಸುತ್ತಿರುವ ಜಡ ದೇಹದ ಆ ದೃಶ್ಯ ಅಂತಹ ದುಃಖದ ಗಳಿಗೆಯಲ್ಲೂ ಕೊಂಚ ನೆಮ್ಮದಿ ನೀಡುವಂತಿತ್ತು ನೋಡುಗರಿಗೆ, ಅಣ್ಣಯ್ಯನ ಆಶೆಯಂತೆ ಊರ ಮುಂದಿನ ಅವರ ಹೊಲದಲ್ಲೇ ಮಣ್ಣು ಮಾಡುವುದೆಂದು ನಿರ್ಧರಿಸಿ ಆ ಒಂದು ವಾರವಿಡೀ ಕುಣಿ ತೆಗೆದು ಅದನ್ನು ನಾನಾ ವಿಧದ ಬಣ್ಣದ ಹುಡಿಗಳಿಂದ ಸುತ್ತುವರೆಸಿ ತಯಾರುಗೊಳಿಸಲಾಗಿತ್ತು. ರಂಗೋಲಿಯಲ್ಲಿ ಭಾರತದ ನಕಾಶ ಮಾಡಿ ಕೇಸರಿ ಬಿಳಿ ಹಸಿರು ಬಣ್ಣಗಳು

ಎದ್ದು ಕಾಣುವಂತೆ ಮಧ್ಯಭಾಗದಲ್ಲಿಯ ಆ ಕುಣಿಯೊಳಗೆ ಮಲ್ಲಿಗೆ, ಶೇವಂತಿಗೆ, ಗುಲಾಬಿ ಇನ್ನಿತರ ಹಲವಾರು ಹೂರಾಶಿಗಳಿಂದ ಮೂಲೆ ಹಾಲೆ ಗೋಡೆಗಳನ್ನೆಲ್ಲ ಅಲಂಕರಿಸಲಾಗಿತ್ತು. ತುಸು ದೂರದಲ್ಲೇ ಎರಡು ಟ್ರಾಕ್ಟರ್ ಟ್ರೈಲರ್‌ಗಳನ್ನು ಜೋಡಿಸಿ ವೇದಿಕೆ ಮಾಡಿ ನೆರಳಿಗಾಗಿ ಹಂದರ ಹಾಕಲಾಗಿತ್ತು. ಊರ ಪ್ರಮುಖ ಬೀದಿಗಳಲ್ಲಿ ಒಂದು ಸುತ್ತು ಹಾಕಿ ಬಂದ ಶವಯಾತ್ರೆ ಕೊನೆಯಲ್ಲಿ ಕುಣಿ ತೆಗೆದಿರಿಸಿದ್ದ ಹೊಲಕ್ಕೆ ಬಂದು ತಲುಪಿತು. ಸ್ವಾಮಿಗಳ ವಚನ, ಮಂತ್ರಘೋಷ, ಗಣ್ಯರ ಶೋಕ ಭಾಷಣ ಇತ್ಯಾದಿ ಮುಗಿದ ಮೇಲೆ 'ಭಾರತಾಂಬೆಯ ಗರ್ಭದೋಳ್ ಪೊಗುವಂತೆ' ಅಣ್ಣಯ್ಯನ ಕಳೇಬರವನ್ನು ದಫನ ಮಾಡಲಾಯಿತು. ತಾನು ಚಿಕ್ಕವನಿದ್ದಾಗ ಕಲಿತ "ನನ್ನ ದೇಹದ ಬೂದಿ ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ, ಮುಷ್ಟಿ ಬೂದಿಯ ತಿಂದು ದಪ್ಪವಾಗಲು ಬೀಜ, ಧನ್ಯವಾಯಿತು ಹುಟ್ಟು ಸಾವಿನಲ್ಲಿ" ಎಂಬ ಕವಿ ವಾಕ್ಯಮನದಲ್ಲಿ ಸುಳಿದು ಹೋಯಿತು. ಭಾರ ಮನಸ್ಸಿನಿಂದ ಪ್ರಭುದೇವ ಮನೆಗೆ ಹಿಂದಿರುಗಿದ.

ಮಣ್ಣು ಕೊಟ್ಟು ಮರಳಿದ್ದೇನೊ ನಿಜವಾಯಿತು. ಆದರೆ ಅಣ್ಣಯ್ಯನ ಸಾವಿನ ಚಿತ್ರ ಕಣ್ಣಿನಿಂದ ಮೂರು ದಿನವಾದರೂ ತುಸು ಸರಿಯಲಿಲ್ಲ. ಕುಂತರೆ ನಿಂತರೆ ಕೆಲಸ ಮಾಡುವಾಗ ಮಾತನಾಡುವಾಗ ಒಂದು ರೀತಿಯ ಯಾವುದೊ ಬಾಹ್ಯ ಶಕ್ತಿ ತನ್ನನ್ನು ನಿಯಂತ್ರಿಸುತ್ತಿದೆಯೇನೋ ಎನಿಸತೊಡಗಿತ್ತು ಪ್ರಭುದೇವಗೆ. ತಿರು ತಿರುಗಿ ಅದೇ ದೃಶ್ಯ ಮನಃಪಟಲದ ಮೇಲೆ ಅಪ್ಪಳಿಸತೊಡಗಿದವು. ಇದು ಹೀಗೆಯೇ ಮುಂದುವರೆದರೆ ತನ್ನ ಚುನಾವಣೆಯ ಸಿದ್ಧತೆಯ ಗತಿಯೇನು? ಎಷ್ಟೊಂದು ದಿನ ಸಾವಿನ ಗುಂಗಿನಲ್ಲಿಯೇ ಇರುವುದು ಎಂದು ಮನಸ್ಸು ಗಟ್ಟಿ ಮಾಡಿಕೊಳ್ಳಲು ಅತೀವ ಪ್ರಯಾಸದ ಪ್ರಯತ್ನ ಮಾಡತೊಡಗಿದ. ಆದರೆ ಆ ಪ್ರಯತ್ನಕ್ಕೆ ಕಿಂಚಿತ್ತೂ ಫಲದೊರೆಯುವ ಲಕ್ಷಣ ಕಾಣದಾಯಿತು. ಹಜಾರದಲ್ಲಿ ಶತಪಥ ಬೋನಿನೊಳಗಿನ ಹುಲಿಯಂತೆ ತಿರುಗಾಡತೊಡಗಿದ. ಶೂನ್ಯದೆಡೆಗೆ ದೃಷ್ಟಿ ಇಟ್ಟವ ಎದುರಿಗೆ ತೂಗು ಹಾಕಿದ್ದ ನಿಲುವುಗನ್ನಡಿಯಲ್ಲಿ ಅಕಸ್ಮಾತ್ ತನ್ನ ಪ್ರತಿಬಿಂಬ ಕಂಡು ಸಮೀಪ ಹೋದ. ತಲೆ ಮೀಸೆ ಗಡ್ಡಗಳಲ್ಲೆಲ್ಲ ಬಿಳಿಗೂದಲುಗಳೇ ಹೆಚ್ಚಾಗಿ ತನಗೆ ಮುಪ್ಪು ಬಂದಿದ್ದನ್ನು ಸಾರಿ ಹೇಳುತ್ತಿವೆಯೇನೋ ಎನ್ನಿಸಿತು. ಅಲ್ಲಿಯೇ ಇರಿಸಿದ್ದ ಬಾಚಣಿಕೆಯನ್ನು ಎತ್ತಿಕೊಂಡು ಮೂರ್ನಾಲ್ಕು ಸಾರಿ ತಲೆಯಲ್ಲಿ ಆಡಿಸಿಕೊಂಡ. ಸಾಕೆನಿಸಿ ಕೆಳಗಿಡುವಾಗ ಅದರಲ್ಲಿಯ ಕೆಲ ಬಿಳಿ ಕೂದಲುಗಳಲ್ಲಿಯ ಒಂದನ್ನು ಎತ್ತಿ ಅಂಗೈಯಲ್ಲಿ ಹಾಕಿಕೊಂಡು ದೂರದಲ್ಲಿ ನಿಂತು ಹುಲಿಯನನು ನೋಡಿ ಹೆದರಿದ ಹುಲ್ಲೆಯಂತೆ ತೀಕ್ಷ್ಣವಾಗಿ ಗಮನಿಸತೊಡಗಿದ. ರಜತ ರಸ್ತೆಯಂತೆ ಆ ಬಿಳಿ ಕೂದಲು ಭಾಸವಾಯಿತು. ಆದರೆ ರಸ್ತೆಗೆ ಕೊನೆ? ಅದು ಹೋಗಿ ಕೂಡುವುದೆಲ್ಲಿ? ಅಂಗೈ ತುದಿ ಮುಗಿದ ನಂತರ ಅದು ಕೆಳಗೆ ಪ್ರಪಾತಕ್ಕೆ ಬಿದ್ದಂತೆ ಬೀಳಬೇಕಲ್ಲ. ಅಂದರೆ ಸ್ಮಶಾನಕ್ಕೆ ಹೋಗಿ ಕೂಡುವುದು ಸಮೀಪಿಸಿದೆಯೇ ಎಂಬ ಭಾವನೆ ಆವರಿಸಿ ತೀವ್ರ ಕಳವಳಗೊಂಡ. ಹಾಗೆಯೇ ಯಾವನೋ ಒಬ್ಬ ಇಂಗ್ಲೀಷ್ ಲೇಖಕ ಈ ಬಿಳಿ ಮೀಸೆ ಗಡ್ಡಗಳನ್ನು "ಓ ನನ್ನ ಶವಪೆಟ್ಟಿಗೆಗಳೇ!" ಎಂದು ಬಣ್ಣಿಸಿದ್ದೂ ಬೇಡ ಬೇಡವೆಂದರೂ ಆತನ ಮನದೊಳು ತೇಲಿಬಂತು. ಅನಿವಾರ್ಯವಾಗಿ ಆದದ್ದಾಗಲಿ ಎಂದು ಎಲ್ಲ ಬಿಟ್ಟು ಮಹಡಿ ಮೇಲಿನ ತನ್ನ ಕೋಣೆಗೆ ಹೋಗಿ ಪಲ್ಲಂಗದ ಮೇಲೆ ಅಂಗಾತ ಮಲಗಿ, ನಿರಾತಂಕವಾಗಿ, ಒತ್ತರಿಸಿ ಬರುತ್ತಿದ್ದ ನೆನಪುಗಳನ್ನು ಮೇವು ತಿಂದು ಗಂಟಲೊಳು ಇಳಿಸಿ ಪುನಃ ಬಾಯಿಗೆ ತಂದು ನುರಿಸುವ ಪಶುವಿನಂತೆ ಹಾಗೆಯೇ ಮೆಲಕು ಹಾಕತೊಡಗಿದ.....

........ ಅಂತಹ ಸದೃಢ ಅಣ್ಣಯ್ಯ ಅರವತ್ತಕ್ಕೆ ಮಣ್ಣಾಗಿ ಮರೆಯಾಗಿ ಹೋಗಬೇಕೆ? ಛೇ ಜೀವನವೆಂದರೆ ಇಷ್ಟಯೇ? ಹೆಂಡತಿ ಹಾಗೂ ಇಬ್ಬರು ವಯಸ್ಸಿಗೆ ಬಂದ ಮಕ್ಕಳನ್ನು ಬಿಟ್ಟು ಎರಡಂತಸ್ತಿನ ಭವ್ಯ ಬಂಗ್ಲೆ (ತಾನು ಬರೀ ಫೋಟೋ ನೋಡಿದ್ದು) ಬಿಟ್ಟು ಪ್ರತಿಷ್ಠಿತ ಶೇರ್‌ವುಡ್ ಗ್ಲೆನ್‌ನ ಬಡಾವಣೆಯ ಸುಸಜ್ಜಿತ ಆಸ್ಪತ್ರೆ ಬಿಟ್ಟು, ಹಾಗೆಯೇ ಭಾರಿ ಬ್ಯಾಂಕ್ ಠೇವಣಿ ಇತ್ಯಾದಿ ಎಲ್ಲಾ ಬಿಟ್ಟು ಅವಸರ ಅವಸರದಲ್ಲಿ ಹೋದಾನಲ್ಲವೇ ಅಣ್ಣಯ್ಯ? ತಕ್ಷಣ ಆತನಿಗೆ ಅಣ್ಣಯ್ಯನ ನೆನಪಿನ ಜೊತೆ ಜೊತೆಯಲ್ಲೇ ಮೊನ್ನೆ ಮೊನ್ನೆ ತೀರಿಕೊಂಡ ದೊಡ್ಡಪ್ಪ, ಹೋದ ವರ್ಷ ತೀರಿಕೊಂಡ ಸೋದರ ಮಾವ,

ಬರೀ ಮೂವತ್ತೆರಡಕ್ಕೆ ಕಣ್ಮರೆಯಾದ ಪೈಲ್ವಾನ್ ಕಾಕಾ ಹೀಗೆ ಹಲವಾರು ಜನರ ಸಾವು ನೆನಪಿಗೆ ಬರತೊಡಗಿದವು, ಮತ್ತೆ ಅಣ್ಣಯ್ಯ ಆಡಿದ ಆಧ್ಯಾತ್ಮದಂತೆ ತೋರುವ ಮಾತುಗಳು ಕಿವಿಗಳಲ್ಲಿ ಗುನುಗುನಿಸತೊಡಗಿದವು.

ಈ ಮನುಷ್ಯನೆಂಬ ಪ್ರಾಣಿ ತಾನು ಜೀವಿಸುತ್ತಿರುವಾಗಲೆಲ್ಲ ತಾನು ಖಾಯಂ ಆಗಿ ಹೀಗೆಯೇ ಇರುತ್ತೇನೆಂದುಕೊಂಡಿರುತ್ತಾನೆ. 'ಹಗಲು ರಾತ್ರಿ ದುಡಿತ ಗಳಿಕೆ, ಓಡಾಟ, ಲೆಕ್ಕಾಚಾರ, ಸರಸ ವಿರಸ ಓಹ್ ಏನೆಲ್ಲ ಮಾಡುತ್ತಾನೆ, ಯೋಜಿಸುತ್ತಾನೆ. ತನು ಮತ್ತು ತನ್ನ ಆಸ್ತಿಪಾಸ್ತಿಯೆಲ್ಲ ಸ್ಥಿರವಾದುದೆಂದು ಭ್ರಮಿಸಿ ಎಷ್ಟು ಹಪಹಪಿಸುತ್ತಾನೆ. ದೇವರು ದಿಂಡರುಗಳಿಗೆ ಹರಕೆ ಹೊರುತ್ತಾನೆ ಪೂಜೆ ಸಲ್ಲಿಸುತ್ತಾನೆ. ಎಂದೂ ತಾನು ಒಂದು ದಿನ ಇದನ್ನೆಲ್ಲ ಬಿಟ್ಟು ಹೋಗಲೇಬೇಕಾಗುವುದೆಂದು ಯಾಕೆ ಯೋಚಿಸುವುದಿಲ್ಲವೊ, ಯೋಚಿಸಿದರೂ ಯಾಕೆ ಹಾಗೆ ನಡೆದುಕೊಳ್ಳುವುದಿಲ್ಲವೋ, ಎಂತಹ ವಿಪರ್ಯಾಸ, ಹೀಗೆಯೇ ವಿಚಾರಿಸುತ್ತ ವಿಚಾರಿಸುತ್ತ ದಣಿದ ದೇಹ ಮನಸ್ಸುಗಳಿಗೆ ನಿದ್ರೆಯ ಮಂಪರು ಆವರಿಸತೊಡಗಿತು. ಹಾಗೆಯೇ ಸೆಳೆಯುತ್ತಿದ್ದ ಕಣ್ಣುಗಳನ್ನು ಮುಚ್ಚಿಕೊಂಡ. ತುಸುಹೊತ್ತಿನಲ್ಲಿ ಮತ್ತೆ ಮನಸಿನೊಳು ಅಂತಹುದೇ ಮತ್ತೊಂದು ಶವಯಾತ್ರೆ ಹೊರಟಂತೆ ಭಾಸವಾಗತೊಡಗಿತು. ಓಹ್ ಈ ಸಾರಿಯೂ ಅಷ್ಟೇ ಜನ ಅಷ್ಟೇ ವೈಭವ. ಅದೇ ಭಜನೆ. ಹಲಗೆ ಬಡಿತ..... ಆದರೆ ಒಂದೇ ಒಂದು ಬದಲಾವಣೆ, ಅದು ಹೆಣದ್ದು ಅದೆಂದರೆ ಸತ್ತಿದ್ದು ಅಣ್ಣಯ್ಯನಾಗಿರದೇ ತಾನೇ ಆಗಿದ್ದ ಪ್ರಭುದೇವ, ಎಲ್ಲ ವಿಚಿತ್ರಾತಿ ವಿಚಿತ್ರಃ ತನ್ನ ಶವಯಾತ್ರೆಯಲ್ಲಿ ತಾನೇ ಭಾಗಿಯಾಗುವುದೇ? ಬಹಳ ಹುರುಪು ಹುಮ್ಮಸ್ಸಿನಿಂದ ಎಲ್ಲರ ಮಧ್ಯದಲ್ಲಿಯೇ ತಾನೂ ಆ ಯಾತ್ರೆಯಲ್ಲಿ ಸಾಗಿದ್ದ ಹಾಗೂ ಜೊತೆಯಲ್ಲಿ ನಡೆದಿದ್ದ ಅಣ್ಣಯ್ಯನಿಗೆ "ನಿನ್ನ ಜೊತೆಗಾರನಲ್ಲವೇ ನಾನು ನಡೀ ಇಬ್ಬರೂ ಕೈಹಿಡಿದುಕೊಂಡೇ ಹೋಗೋಣ" ಎಂದ. ಭುಜಕ್ಕೆ ಭುಜ ಕೊಟ್ಟು ಮಿಲಿಟರಿ ಸೈನಿಕರು ಜೋಡಿಯಲ್ಲಿ ಹೆಜ್ಜೆ ಹಾಕಿದಂತೆ ಶಿಸ್ತಿನಿಂದ ನಡೆದಿದ್ದರು ಆ ಇಬ್ಬರೂ, ಕೊನೆಗೆ ಸ್ಮಶಾನಕ್ಕೆ ಬಂದು ದಫನ ಕ್ರಿಯೆ ಮುಗಿದ ಮೇಲೆ ಮತ್ತೆ ಎಲ್ಲರೊಂದಿಗೆ ತಾನೂ ಹಿಂದಿರುಗಬೇಕೆನ್ನುತ್ತಿರುವಾಗ, ಅಣ್ಣಯ್ಯ "ನೋ, ನೀನು ಮರಳಿ ಹೋಗಲಾರೆ ನೀನೀಗ ನನ್ನೊಡನೆಯೇ ಸತ್ತಿದ್ದೀಯಾ ಆದ್ದರಿಂದ ಇಲ್ಲೇ ಮಲಗಿರಬೇಕು ಪರ್ಮನೆಂಟ್ ಆಗಿ" ಎಂದೆನ್ನುತ್ತ ಗಟ್ಟಿಯಾಗಿ ಕೈಹಿಡಿದಾಗ ಅತೀವ ದುಃಖ ಹಾಗೂ ಭಯವಾಗಿ 'ಅಹ್' ಎಂದು ಚೀರುತ್ತಲೆ ಎಚ್ಚರಗೊಂಡ, ಕಸಿವಿಸಿಗೊಂಡು ಆಚೀಚೆ ಕಣ್ಣಾಡಿಸಿದ, ಪುಣ್ಯಕ್ಕೆ ಅದನ್ನಾರೂ ಕೇಳಿಸಿಕೊಂಡಿರಲಿಲ್ಲ.

ಯಾಕೆ ಈ ದುಃಸ್ವಪ್ನ? ಅಣ್ಣಯ್ಯನನ್ನು ಭಾರಿ ಹಚ್ಚಿಕೊಂಡದ್ದಕ್ಕೋ ಅಥವಾ ಅಂದು ಸ್ಮಶಾನದಲ್ಲಿಯ ಸುವಾಸನೆ, ಕುಣಿಯ ಅಲಂಕಾರ, ವೈಭವೋಪೇತ ಕಾಫಿನ್‌ನಲ್ಲಿ ವಿರಾಜಿಸುತ್ತಿದ್ದ ಅಣ್ಣಯ್ಯನ ಕಳೇಬರ ಇತ್ಯಾದಿ ನೋಡಿ ತಾನೂ ಒಂದು ಕ್ಷಣ ಒಂದೇ ಒಂದು ಕ್ಷಣ ಸತ್ತು ಅಲ್ಲಿ ಮಲಗಬೇಕೆಂಬ ಬಯಕೆ ಮನಸಿನಲ್ಲಿ ಸುಳಿದು ಹೋಗಿರಲಿಲ್ಲವೇ ಅದಕ್ಕೊ? ಹೌದು ನಿಜವಾಗಿಯೂ ತನಗೆ ಹಾಗನಿಸಿದ್ದು ವಸ್ತುಸ್ಥಿತಿಯೇ ಆಗಿತ್ತು. ತಾನೆಂದೂ ಯಾರ ಶವಯಾತ್ರೆಯೂ ಅಷ್ಟೊಂದು ಭರ್ಜರಿ ಆಗಿದ್ದನ್ನು ನೋಡಿಯೇ ಇರಲಿಲ್ಲ. ತನಗಷ್ಟೇ ಯಾಕೆ ತನ್ನಂತೆ ಹಲವಾರು ಜನರಿಗೆ ಹಾಗನ್ನಿಸಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಫಾರೆನ್ ಪರಿಮಳ ಪೂಸಿಕೊಂಡು, ಅಷ್ಟೊಂದು ಗುಲಾಬಿ ಹೂಗಳಲ್ಲಿ ಮಲಗಿ ಸುಖ ಪಡುವುದೆಂದರೆ ಸಾಮಾನ್ಯವೇ? ಆ ಆಡಂಬರದ ಶವಶಯನ ಎಷ್ಟೊಂದು ಅಪ್ಯಾಯಮಾನದ್ದಾಗಿದೆ ಎಂದೆನಿಸಿ ಸಾವನ್ನು ಕೂಡ ಕೇವಲ ಅದರ ಅನುಭವಕ್ಕಾಗಿ ಆಹ್ವಾನಿಸಿದ್ದು ಸುಳ್ಳೇನಲ್ಲವಲ್ಲ. ಆದರೆ, ಈಗ ಮಾತ್ರ ಇದರೊಡನೆಯೇ ಹಿಂದೊಮ್ಮೆ ಶ್ರೀಪಾದರಾಯರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದಾಗ ಆದ ಅನುಭವದ ತೀರ ಕಹಿಯಾದ ನೆನಪು ಮರುಕಳಿಸಿ ಬಂತು. ಎಂತಹ ದೊಡ್ಡ ವಕೀಲರವರು, ಎಂಭತ್ತೆಂಟು ವರ್ಷದ ಹಿರಿಯರು, ನೂರಾರು ಜನರಿಗೆ ಉಪಕಾರ ಮಾಡಿದವರು. ತಾಲೂಕಾದಲ್ಲಿಯೇ ವರ್ಚಸ್ವೀ ವ್ಯಕ್ತಿತ್ವ ಹೊಂದಿದ್ದವರು. ಆದರೆ ಅವರ ಅಂತ್ಯ ಸಂಸ್ಕಾರಕ್ಕೆ ಬಂದ ಜನ? ಕೇವಲ ನಲ್ವತ್ತೋ ಐವತ್ತೊ.... ಏನು ವಿಚಿತ್ರ ಅವರ ಕೋಮಿನಲ್ಲಿ ಸಾವೆಂದರೆ ವ್ಯಕ್ತಿಗೆ ಒಂದು 'ಕೇಡು' ಬಂದಂತೆ ಎಂಬ ಭಾವನೆ, ಸಾವಿನಿಂದಾಗಿ ಅಂದರೆ ಪ್ರಾಣ ಹೋದ ಮೇಲೆ ಈ ದೇಹಕ್ಕೆ ಬೆಲೆ ಇಲ್ಲ. ಅದೊಂದು

ಅಪಶಕುನ ಇತ್ಯಾದಿ. ಆದರೆ ಶರಣರ ವಚನಗಳಲ್ಲಿ ಮರಣವೇ ಮಹಾನವಮಿ ಅಲ್ಲಿ ಹಾಗೆ. ಇಲ್ಲಿ ಹೀಗೆ ಆದರೆ ಸಾವು ಮಾತ್ರ ಎರಡೂ ಕಡೆ ಒಂದೇ; ಒಬ್ಬೊಬ್ಬರಿಗೆ ಒಂದೊಂದು ತರ, ತಾನು ಚಿಕ್ಕವನಿದ್ದಾಗ ತಮ್ಮ ಹಳೆಯ ಎತ್ತು ಶಿವರಾಯ ಸತ್ತಾಗ ಚಕ್ಕಡಿಯೊಂದರಲ್ಲಿ ಅದನ್ನೇ ಹೇರಿ ಇಡೀ ಊರಲ್ಲಿ ನಾಲ್ಕೈದು ತಾಸು ದೊಡ್ಡ ಮೆರವಣಿಗೆ ಮಾಡಿ ತಮ್ಮ ಹೊಲದಲ್ಲಿ ಹುಗಿದಿರಲಿಲ್ಲವೇ ತನ್ನ ತಂದೆಯವರು? ಅಷ್ಟೇ ಯಾಕೆ ನಾಗರ ಹಾವೊಂದನ್ನು ಆಕಸ್ಮಾತ್ ಹೊಡೆದು ಕೊಂದರೆ, ಅದನ್ನು ಸುಟ್ಟು ಆ ಬೆಂಕಿಯಲ್ಲಿ ತೂತಿನ ಬಿಲ್ಲೆಯೊಂದನ್ನು ಹಾಕಿ ಉರಿ ಆರಿದ ಮೇಲೆ ಸುಟ್ಟ ಬಿಲ್ಲೆಯನ್ನು ನೀರಲ್ಲಿ ತೊಳೆದು ಉಡದಾರಕ್ಕೆ ಕಟ್ಟಿಕೊಳ್ಳುತ್ತಿದ್ದಿಲ್ಲವೇ? ಸಾವು ಕೆಲವರಿಗೆ ಅನಿಷ್ಟ. ಕೆಲವರಿಗೆ ವಿಶಿಷ್ಟ. ಆದರೆ ತನಗೆ ಮಾತ್ರ ಇಂದು.... ಅದು ಇಷ್ಟ? ಊಹುಂ ಇಲ್ಲ ಇಷ್ಟು ಬೇಗ ಅದು ಅಸಾಧ್ಯ. ತುಸು ಮೊದಲು ಕಂಡ ತನ್ನದೇ ಶವಯಾತ್ರೆಯ ಕನಸಿನ ಅರ್ಥ ತನ್ನಾತ್ಮವನ್ನು, ತನ್ನಂತರಂಗವನ್ನು ತಾನೇ ಹೊರಗೆ ನಿಂತು ಪರೀಕ್ಷಿಸಿಕೊಂಡಂತೆ ಅಷ್ಟೇ. ಮನುಷ್ಯ ತನ್ನನ್ನು ತಾನು ನಿಷ್ಪಕ್ಷಪಾತವಾಗಿ ಅಳೆದುಕೊಳ್ಳಬೇಕು. ಈ ಲೌಕಿಕ ಸೌಂದರ್ಯಕ್ಕೆ ಆಡಂಬರಗಳಿಗೆ ಹೆಚ್ಚು ಮಹತ್ವ ಕೊಡಬಾರದು. ಇತ್ಯಾದಿಯಾಗಿ ಗ್ರೇಬ್ರಿಯಲ್ ಮಾರ್ಕ್ವಿಸ್‌ನೇ ಇಂತಹ ಒಂದು ಸಂದರ್ಭದಲ್ಲಿ ವಿವರಿಸಿಲ್ಲವೇ? ತನ್ನನ್ನೇ ತಾನು ಹೊರನಿಂತು ಒರೆಗೆ ಹಚ್ಚಿಸಿಕೊಳ್ಳಬೇಕಂತೆ ಪ್ರತಿ ಮನುಷ್ಯನೂ.

ಗ್ರೇಬ್ರಿಯಲ್ ಗಾರ್ಸಿಯಾ ಮಾರ್ಕ್ವಿಸ್‌ನ ವಿವರಣೆಯನ್ನು ಪ್ರಭುದೇವ ಅಣ್ಣಯ್ಯನ ಸಾವಿನೊಂದಿಗೆ ಮತ್ತು ತನ್ನ ಚುನಾವಣಾ ಪೈಪೋಟಿಯೊಂದಿಗೆ ತಳುಕುಹಾಕಿ ಚಿಂತಿಸತೊಡಗಿದ. ಇನ್ನೆರಡು ವಾರದಲ್ಲಿ ನಡೆಯಲಿರುವ ಪಕ್ಷದ ತಾಲೂಕಾ ಅಧ್ಯಕ್ಷ ಪದಕ್ಕೆ ತಾನು ಅಭ್ಯರ್ಥಿ. ಈಗಿನ ಅಧ್ಯಕ್ಷರ ಅದಕ್ಷತೆಯಿಂದಾಗಿ ಮುಂದಿನ ವರ್ಷ ಬರಲಿರುವ ಸಾರ್ವತ್ರಿಕ ಚುನಾವಣೆಯ ಮೇಲೆ ದುಷ್ಪರಿಣಾಮವಾಗಿ ಪಕ್ಷ ನೆಲಕಚ್ಚುವುದು ಸಹಜ. ಆದ್ದರಿಂದಲೇ ಉತ್ಸಾಹಿ ಕಾರ್ಯಕರ್ತರೆಲ್ಲ ಪ್ರಭುದೇವ ಪಾಟೀಲರೇ ಅಧ್ಯಕ್ಷನಾಗಬೇಕೆಂದು ಜೋರಾಗಿ ಲಾಬಿ ಮಾಡಿ ಚುನಾವಣೆ ನಡೆಯುವಂತೆ ಮಾಡಿದ್ದಾರೆ. ಒಂದು ಕಡೆ ಅದರ ತಯಾರಿ. ಇನ್ನೊಂದು ಕಡೆ ಈ ಸಾವಿನ ಭ್ರಾಂತಿ, ಮನದಲ್ಲಿಯ ಈ ಹೊಯ್ದಾಟ ಒಮ್ಮೆಲೇ ಚುನಾವಣೆ ಸಮೀಪಿಸಿದಂತೆ ಭಾಸವಾಗಿ ಇನ್ನೂ ಜೋರಾಯಿತು. ಯಾಕೆಂದರೆ ಕೋಮಲ ಹೃದಯದ ಪ್ರಭುದೇವಗೆ ಯಾರನ್ನೂ ನೋಯಿಸುವ ಮನಸ್ಸಿರಲಿಲ್ಲ. ಈಗಿನ ಅಧ್ಯಕ್ಷ ಗಿರಿಗೌಡರು ಕಳೆದ ಹತ್ತಾರು ವರ್ಷಗಳಿಂದ ಪಕ್ಷಾಧ್ಯಕ್ಷರು. ಏನೋ ಅವರಿಗೆ ವಯಸ್ಸಾಗಿದ್ದರಿಂದ ಬಹಳ ಜನ ರಾಜೀನಾಮೆ ಕೇಳುತ್ತಿದ್ದಾರೆಂದು ಅವರ ಜೊತೆ ತಾನೂ ದನಿಗೂಡಿಸಿದಾಗ ಅವರು ಅಂದದ್ದೇನು, "ನನಗ ಗೊತ್ತೈತಿ ಇದರ ಹಿಂದೆ ಯಾರಿದ್ದಾರಾ ಅಂತ. ಎಲ್ಲರದೂ ಮನಸು ಕೆಡಿಸಿ, ಏನೂ ತಿಳಿಯದವನ ಹಂಗ, ಮಾತಾಡಬ್ಯಾಡೋ ಪ್ರಭಣ್ಣಾ..... ಗಂಡಸಾದ್ರ ಬಾ, ಎಲೆಕ್ಷನ್ ಆಗಿಯೇ ಬಿಡಲಿ" ಎಂದು ನೇರವಾಗಿ ಆರೋಪಿಸಿ ಸವಾಲೊಡ್ಡಬೇಕೆ ಗೌಡರು. ಏನೂ ತೋಚದಂತಾಗಿತ್ತು ಅವನಿಗೆ, ಆಗೀಗ ಗೌಡರು ತನ್ನ ಎಂ.ಎ.ಫಿಲಾಸಫಿ ಪದವಿ ಮೇಲೆ ಗದಾ ಪ್ರಹಾರ ಮಾಡುತ್ತಿದ್ದರೂ ಬಹಳ ಸಹಿಸಿಕೊಂಡಿದ್ದ ಪ್ರಭುದೇವ. ಆದರೆ ಕೂಡಿದ ಜನರೆದುರು ಹಾಗೆ ಅವಮಾನ ಮಾಡಿದ್ದೂ ಅಲ್ಲದೇ ಚಾಲೆಂಜ್ ಬೇರೆ ಕೊಡಬೇಕೆ? ಈ ದ್ವಂದ್ವದಲ್ಲಿದ್ದಾಗಲೇ ಹಲವಾರು ಜನ ಬಂದು ಸ್ಪರ್ಧೆ ನಡೆಯಲೇಬೇಕೆಂದು ಒತ್ತಾಯಿಸಿದ್ದು ಮತ್ತೊಂದು ಪ್ರಬಲ ಕಾರಣವಾಯಿತು ಅವರ ಚುನಾವಣಾ ಕಣಕ್ಕೆ ಇಳಿಯಲು.......

ಸೂಕ್ಷ್ಮ ಮನಸ್ಸಿನವರು ಎಲ್ಲಿಯೇ ಇರಲಿ, ಏನೇ ಮಾಡಲಿ ಸದಾ ಜಾಗೃತರಾಗಿರುವುದು ಚಿಂತನೆ ಮಾಡುವುದು. ಹೀಗಾದರೆ ಹೇಗೊ ಹಾಗಾದರೆ ಹೇಗೆ ಎಂದು ತಮ್ಮನ್ನು ತಾವು ಹಲವಾರು ಬಾರಿ ಪ್ರಶ್ನಿಸಿಕೊಳ್ಳುವುದು ಸಹಜವೇ ಅಲ್ಲವೇ? ಪ್ರಭುದೇವನೂ ಇದಕ್ಕೆ ಹೊರತಾಗಿರಲಿಲ್ಲ. ಸಾಮಾಜಿಕ ಪ್ರತಿಷ್ಠೆಯ ಜೀವನಕ್ಕೆ ರಾಜಕೀಯ ಅನಿವಾರ್ಯವೆಂದು ಮಾತ್ರ ರಾಜಕೀಯದಲ್ಲಿ ಅಷ್ಟಿಷ್ಟು ಭಾಗಿಯಾದವ. ಅದಾಗ್ಯೂ ತನ್ನ ತೀವ್ರತರ ಸಂವೇದನಾಶೀಲತೆಯನ್ನು ಬಹಳ ಜತನದಿಂದ ಕಾಯ್ದುಕೊಂಡು ಬಂದವ, ಅಮೇರಿಕಾದ ತತ್ವಜ್ಞಾನಿಯೊಬ್ಬ ಹೇಳಿದ ಹಾಗೆ "ಸಮಾಧಾನಿಯಾದ ಹಂದಿ ಹಾಗಿರುವುದಕ್ಕಿಂತ ಪ್ಲೇಟೋನ ಹಾಗೆ ದುಃಖಿಯಾಗಿರುವುದೇ ಮೇಲು" ಎಂದು

ಬಲವಾಗಿ ನಂಬಿದವ. ಮಾರಿಸ್ ಮೇತರ್ ಲಿಂಕ್‌ನು ಹೇಳಿದ "ನಿಜವಾಗಿಯೂ ಜೀವಂತವಾಗಿರುವ ಕ್ಷಣಗಳೆಂದರೆ ನಾನು ಚಿಂತನೆಯಲ್ಲಿ ತೊಡಗಿದ ಕ್ಷಣಗಳು ಮಾತ್ರ..... ಈಗ ಈ ಭೂಮಿಯಲ್ಲಿ ಮನುಷ್ಯನ ವಿಧಿ ದುರಂತವಾಗಿರುವುದರಿಂದ ದುಃಖ ನೋವು ಸಾವುಗಳಲ್ಲಿ ಕೊನೆಗೊಳ್ಳುವುದರಿಂದ, ಎಲ್ಲ ಚಿಂತನೆಗಳೂ ದುಃಖಮಯವೇ ಆಗಿರುತ್ತದೆ" ಎಂಬುದನ್ನು ಯಥಾವತ್ತಾಗಿ ಸ್ವೀಕರಿಸಿದವ. ಅಂತೆಯೇ ತನ್ನ ಸುತ್ತಮುತ್ತಲಿನ ಜನರ ಕಪಟತನ, ಈರ್ಷ್ಯೆ ಇತ್ಯಾದಿಗಳಿಗಾಗಿ ಏಕಾಂತದಲ್ಲಿಯೇ ತೀರ ದುಃಖಿಸುವವ. ಒಂದೇ ವಿಷಯವಾಗಿ ಹಲವಾರು ಬಾರಿ ತಲೆಕೆಡಿಸಿಕೊಳ್ಳುವವನಂತೆ ವಿಚಾರಿಸುವವ ಅನೇಕ ಸಾರಿ ತನ್ನಂತಹವರು ರಾಜಕೀಯಕ್ಕೆ ನಾಲಾಯಕ್ಕೂ ಎಂದಂದುಕೊಂಡವ.

ಇಂತಹ ಸೂಕ್ಷ್ಮಮತಿ ಪ್ರಭುದೇವ ಪಾಟೀಲ ಅನಿವಾರ್ಯವಾಗಿ ಸ್ಪರ್ಧಿಸಿದ್ದ ಪಕ್ಷಾಧ್ಯಕ್ಷ ಚುನಾವಣೆ ನಡೆಯುವ ದಿನ ಬರುವುದನ್ನು ತಡೆಯುವವರಾರು?

ನಾಳೆ ತಾಲೂಕು ಕೇಂದ್ರಕ್ಕೆ ಹೋಗಿ ಪಕ್ಷದ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಬೇಕು. ಮೂರು ತಾಸಿನಲ್ಲಿ ಹಿಂದೆಗೆದುಕೊಳ್ಳದಿದ್ದಲ್ಲಿ, ಮತದಾನ ನಡೆಯುವುದು ಅನಿವಾರ್ಯ, ಬೆಳಿಗ್ಗೆ ಒಂಬತ್ತು ಗಂಟೆಗೆ ಹೊರಡುವುದಿದ್ದರೂ ಇದೇ ಚಿಂತೆಯಲ್ಲಿ ರಾತ್ರಿ ಮಲಗಿದ ಆತನಿಗೆ ಸರಿಯಾಗಿ ನಿದ್ರೆಯೇ ಹತ್ತಿರಲಿಲ್ಲ. ತನ್ನ ಶವಯಾತ್ರೆಗೆ ತಾನೇ ಹೊರಟ ಆ ಮಧ್ಯಾಹ್ನದ ವಿಚಿತ್ರ ಕನಸನ್ನು ವಿಶ್ಲೇಷಿಸುತ್ತ ತಾನು ಸತ್ತಿದ್ದರೂ ತನ್ನ ಮಿತ್ರರ ಜೊತೆಗಿದ್ದು ಕಾಲ ಕಳೆಯುವ (ಅಂದರೆ ಆ ಶವಯಾತ್ರೆಯಲ್ಲಿ ಭಾಗಿಯಾಗುವ) ಅವಕಾಶ ಸಿಕ್ಕಿದ್ದಕ್ಕಾಗಿ ಸಂತೋಷಗೊಂಡಿದ್ದ. ಹಾಗಾದರೆ ಎಲ್ಲರ ಜೊತೆ ಬೆರೆತು ಒಂದಾಗಿ ಹೋದರೆ ಎಷ್ಟೊಂದು ಒಳ್ಳೆಯದು. ನೆಮ್ಮದಿಯದು. ಯಾವ ಕಿರಿಕಿರಿಯೂ ಜೀವನದಲ್ಲಿರುವುದಿಲ್ಲವಲ್ಲ. ಅಂದ ಮೇಲೆ ಈ ಪೈಪೋಟಿ. ಸ್ಪರ್ಧೆ ತನ್ನಂತಹವರಿಗೆ ಅಲ್ಲವೇ ಅಲ್ಲ. ಏನಾದರಾಗಲಿ ಹಾಗೆಂದು ಪಕ್ಷದ ಕಾರ್ಯಕರ್ತರು ಬೆಳಿಗ್ಗೆ ಬಂದಾಗ ಅವರೆದುರು ಹೇಳಿ ಬಿಡಬೇಕು ತಾನು ಸ್ಪರ್ಧಿಸುವುದಿಲ್ಲವೆಂತಲೂ ತನಗೆ ಯಾರೊಡನೆಯೂ ವೈಯಕ್ತಿಕ ವೈರತ್ವ ದ್ವೇಷ ಬೇಡವೆಂತಲೂ ಘರ್ಷಣೆಯ ಬಾಳು ಬಾಳೇ ಅಲ್ಲ. ಎಲ್ಲರೊಂದಿಗೆ ಹೊಂದಿಕೊಂಡು ಹೋಗುವುದೇ ಒಳಿತು ಎಂತಲೂ ಹೀಗೆಯೇ ಇತ್ಯಾದಿ ಚಿಂತಿಸುತ್ತಲೇ ರಾತ್ರಿ ಕಳೆದಿದ್ದ.

ಬೆಳಿಗ್ಗೆಯಾಗುತ್ತಲೇ ಸ್ಪರ್ಧಿಸದಿರುವ ರಾತ್ರಿಯ ನಿರ್ಣಯವನ್ನು ಮತ್ತೊಮ್ಮೆ ನೆನಪಿಸಿಕೊಂಡ. ಪ್ರಶ್ನಾರ್ಥಕ ಚಿಹ್ನೆಯೊಂದಿಗೇನೆ ಪ್ರಾತಃರ್ವಿಧಿಗಳನ್ನು ಮುಗಿಸಿದ. ಆದರೆ, ಒಂಬತ್ತು ಗಂಟೆಯಷ್ಟೊತ್ತಿಗೆ ಮನೆಯ ಮುಂದೆ ಬ್ಯಾಂಡ್ ಬಾಜಾ, ಡೊಳ್ಳು, ಕರಡೀ ಮಜಲು, ಕಹಳೆ ಇತ್ಯಾದಿಗಳೊಂದಿಗೆ ಜನ ಜಂಗುಳಿ ಸೇರತೊಡಗಿತು. ಹೆಜ್ಜೆ ಮೇಳದವರು ಲೋಹಾರ್ ಮಾಸ್ತರು ಬರೆದ ಗೀ ಗೀ, ಲಾವಣಿ ಪದಗಳನ್ನು ಹಾಡುತ್ತ ಲಯಬದ್ಧವಾಗಿ ಕುಣಿಯುತ್ತಿದ್ದರು. "ಪ್ರಭಣ್ಣ ಎಂಬ ದೊರೆಯು ಅಧ್ಯಕ್ಷನಾಗುತಾನ, ಎಮ್ಮೆಲ್ಲೆ ಆಗುತಾನ, ಮಂತ್ರಿಯೂ ಆಗತಾನ, ಲೋಕಾನೆ ಆಳತಾನ" ಏನೇನೋ ಚೀರಿ ಚೀರಿ ಏರುಧ್ವನಿಯಲ್ಲಿ ಹಾಡುತ್ತಿದ್ದರು. ಆ ಶಬ್ದಗಳು ಪ್ರಭುದೇವನ ಕಿವಿಗೆ ತಾಗುತ್ತಿದ್ದಂತೆಯೇ ಆತನ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು..... ಈಗ ಅಧ್ಯಕ್ಷನಾದರೆ ಮುಂದೆ ಪಕ್ಷದ ಟಿಕೆಟ್ ದೊರೆಯುವುದು ಖಂಡಿತ, ಅಂದರೆ, ಇನ್ನೊಂದು ವರ್ಷದಲ್ಲಿ ಎಮ್ಮೆಲ್ಲೆ, ಅಕಸ್ಮಾತ್ ಚಾನ್ಸ ಸಿಕ್ಕರೆ ಮಂತ್ರಿ?........ ಹಾಗೆಯೇ ಮನಸ್ಸಿಗೆ ನಿಧಾನವಾಗಿ ಚೈತನ್ಯ ಬಂದಂತೆನಿಸಿ ಪುಲಕಗೊಳ್ಳತೊಡಗಿದ. ಅದರೊಡನೆಯೇ ಹೇ ಹೇ ಎಂಬ ಕೇಕೆಯ ಧ್ವನಿಗಳು, ತುತ್ತುತ್ತೂ ಎಂಬ ಕಹಳೆಯ ಸಪ್ಪಳಗಳು ಕಿವಿಗೆ ಬೀಳುತ್ತಲೇ ಸಾವಕಾಶವಾಗಿ ಪ್ರಭುದೇವಗೆ ಮೈಯಲ್ಲಿ ಹೊಸರಕ್ತ ಹರಿದಂತಾಯಿತು. ಆತನೀಗ ಸಂಪೂರ್ಣ ರೋಮಾಂಚನಗೊಂಡ, ಉಕ್ಕಿ ಹರಿಯುವ ಉತ್ಸಾಹದ ಕಾರ್ಯಕರ್ತರ ದಂಡನ್ನು ನೋಡಿ ತನ್ನನ್ನೇ ತಾನು ನಿಯಂತ್ರಿಸದಾದ. ಅವನ ಕಾಲುಗಳು ಅವನ ಅಧೀನದಲ್ಲಿಲ್ಲವೇನೋ ಎಂಬಂತೆ ನಿಂತ ನಿಂತಲ್ಲಿಯೇ ಪುಟಿಯತೊಡಗಿದ. ಇಸ್ತ್ರಿ ಮಾಡಿಸಿ ನೀಟಾಗಿ ಹಾಕಿಕೊಂಡ ಪ್ಯಾಂಟ್ ತೆಗೆದಿರಿಸಿದ. ಜಿನುಗು ಧೋತರವೊಂದನ್ನು (ಬಹಳ ದಿನದಿಂದ ಮಡಿಕೆ ಬಿಚ್ಚಿರಲಿಲ್ಲ) ಉಟ್ಟುಕೊಂಡ, ಅದರ ತುದಿಯನ್ನು ಮೊಣಕಾಲವರೆಗೆ

ಮೇಲೇರಿಸಿ ಕಚ್ಚೆ ಹಾಕಿಕೊಂಡ. ಚಕಚಕನೇ ಮನೆಯ ಮೆಟ್ಟಿಲಗಳನ್ನಿಳಿದು ರಸ್ತೆಗೆ ಬಂದ, ಹಾಗೆಯೇ ಹೆಜ್ಜೆ ಕುಣಿತದ ಮೇಳದವರ ಜೊತೆಯಲ್ಲಿ ಸೇರಿಕೊಂಡ, ಅವರ ಕೈಯಲ್ಲಿ ಕೈ ಹಾಕಿ ಶಿಳ್ಳೆ ಹೊಡೆಯುತ್ತ ಹುಚ್ಚೆದ್ದು ಅವರೊಡನೆಯೇ ಹೆಜ್ಜೆ ಹಾಕತೊಡಗಿದ.

❖

# ಎರಡು ದಾರಿ

ಕಾರು ಜೋರಾಗಿ ಓಡುತ್ತಿತ್ತು. ಎಷ್ಟು ಜೋರಿನಿಂದ ಓಡಿದರೇನು? ಮನಸಿನ ವೇಗಕ್ಕೆ ಸರಿ ಸಾಟಿಯಾಗಬಲ್ಲದೆ? ಬಲದೇವರ ಮನಸ್ಸು ಎಂದಿನಂತೆ ವಿಚಾರಮಗ್ನವಾಗೇ ಅಲ್ಲಿ ಇಲ್ಲಿ, ಹಿಂದೆ, ಮುಂದೆ ಮತ್ತೆ ಭೂತದಲ್ಲಿ ಪ್ರಸ್ತುತದಲ್ಲಿ ಹಾಗೆಯೇ ಭವಿಷ್ಯದಲ್ಲೂ ಸಂಚರಿಸಿ ಸಂಚರಿಸಿ ಬರುತ್ತಿತ್ತು. ಮನಸಿನ ಆಳ, ವೇಗ, ಶಕ್ತಿ, ಕ್ರಿಯಾತ್ಮಕತೆ ಮತ್ತೆ ಬೇರಾವುದಕ್ಕೂ ಬರಲು ಸಾಧ್ಯವೇಯಿಲ್ಲ ಅದಕ್ಕೆ ಅದೇ ಸಾಟಿ. ನಾ ನೀ ಎನ್ನುವ ಯಂತ್ರಗಳು, ಉಪಕರಣಗಳು, ಕಂಪ್ಯೂಟರ್‌ಗಳು ಅದ್ಭುತ ಕೆಲಸ ಮಾಡಿದರೂ, ಅತೀ ವೇಗದಲ್ಲಿ ಲೆಕ್ಕಮಾಡಿದರೂ ಮನಸಿನ ವಿಸ್ತೃತತೆಗೆ ಹೇಗೆ ಸರಿಸಾಟಿಯಾಗಬಲ್ಲವು? ಕಣದಲ್ಲಿ ಚಂದ್ರಲೋಕ, ತಾರಾಲೋಕ, ಎಲ್ಲ ನಭೋಮಂಡಲ, ಸಮುದ್ರದ ತಳ, ಬೆಟ್ಟದ ತುದಿ, ಭೂಗರ್ಭ, ಲಾವಾರಸ, ಹಿಮಪಾತ, ಜಲಪಾತ ಇತ್ಯಾದಿ ಎಲ್ಲ ನೋಡಿಬರಬಲ್ಲದು ಮನಸು. ಅದರ ಶಕ್ತಿ ವ್ಯಾಪ್ತಿ ಅಪಾರ ಅಗಮ್ಯ ಅಪರಿಮಿತ, ಜಗತ್ತನ್ನು ನಿಯಂತ್ರಿಸುವ ಮನುಷ್ಯನನ್ನು ನಿಯಂತ್ರಿಸುವುದು ಮನಸ್ಸೇ, ಅದಕ್ಕಾಗಿಯೇ ಇರಬೇಕು ಇಂದು ಜಗತ್ತಿನಲ್ಲಿ ಎಲ್ಲಕ್ಕೂ ಹೆಚ್ಚು ಆದಾಯ ಪಡೆಯುತ್ತಿರುವವರು ಮೆದುಳು ಹಾಗೂ ನರರೋಗಗಳ ತಜ್ಞರಾದ ನ್ಯೂರೋ ಸರ್ಜನಗಳಾಗಿದ್ದಾರೆ. ಹೀಗೆಯೇ ಬಲದೇವರ ಮನಸ್ಸು ಮನಸಿನ ಬಗ್ಗೆ ತೀವ್ರ ಯೋಚಿಸುತ್ತಿತ್ತು. ರೊಯ್ಯ ಎಂದು ಕಾರು ಮುನ್ನಡೆದಿದ್ದರೂ ರಸ್ತೆ ಮಾತ್ರ ಎಂದಿನಂತೆ ಮುಸುಕಾಡದೇ ಬಿದ್ದುಕೊಂಡಿತ್ತು.

ಅಕಸ್ಮಾತ್ ಈ ರಸ್ತೆಗೂ ಚಾಲನೆ ಬಂದು ಅದೂ ಓಡತೊಡಗಿದರೆ? ಒಂದು ಕ್ಷಣ ಮುಜುಗರವಾಯಿತವರಿಗೆ. ಎಲ್ಲರೂ ಎಲ್ಲ ವಸ್ತುಗಳೂ ಒಂದೇ ಕೆಲಸ ಅಥವಾ ಕ್ರಿಯೆ ಒಂದೇ ಹೊತ್ತಿನಲ್ಲಿ ಅದೂ ಒಂದೇ ಜಾಗದಲ್ಲಿ ಮಾಡತೊಡಗಿದರೆ? ಅಸಂಖ್ಯಾತ ವಿಶ್ವ ಕಲಹಗಳೇ ಮಹಾಯುದ್ಧಗಳೇ ಆಗಬಹುದೇನೋ! ಅದಕ್ಕಾಗಿಯೇ ಒಬ್ಬೊಬ್ಬರು ಒಂದೊಂದು ಕರ್ತವ್ಯ ನಿಭಾಯಿಸಬೇಕಿದೆ. ಇವು ಒಂದಕ್ಕೊಂದು ಪೂರಕವಾಗಿದ್ದರೆ ಪ್ರಗತಿ, ಮಾರಕವಾಗಿದ್ದರೆ..... ಅವನತಿ, ತಲೆ ಎಲ್ಲೋ ಓಡುತ್ತಿದೆ ಏನೋ ವಿಚಾರ ಮಾಡಬಯಸುತ್ತಿದೆ. ಈ ಹೊತ್ತಿನಲ್ಲಿ ಬೇಡ? ಆಳದೊಳಗಿಂದ ಯಾರೋ ಹೇಳಿದಂತೆ; ಯಾಕೋ ಏನೂ ಸ್ಪಷ್ಟವಾಗುತ್ತಿಲ್ಲ ತುಸು ತುಸುವೇ ಯಾವದೋ ಒತ್ತಡದ ಅಮೂರ್ತ ಭಾವನೆ ಇಣುಕಿ ಹಾಕಬಯಸುತ್ತಿದೆ. ಮತ್ತೊಂಡೆದೆ ಅದು ಬೇಡ ಬೇಡವೆಂದೂ ನಿರ್ಧಾರವಾಗುತ್ತದೆ.

ಮತ್ತೆ ರಸ್ತೆ ಕಡೆ ದೃಷ್ಟಿ, ಆಲೋಚನೆ, ಎಷ್ಟೊಂದು ಸಹನೆ ತಾಳ್ಮೆ ಅದಕ್ಕೆ ! ಪ್ರತಿ ನಿಮಿಷ ನಿಮಿಷಕ್ಕೂ ಒಂದು, ಎರಡು, ಮೂರು, ನೂರು ನೂರಾರು ಭಾರದ ಟ್ರಕ್ಕುಗಳು, ವೇಗದ ಬಸ್ಸುಗಳು ಪೈಪೋಟಿಯ ಕಾರು ಜೀಪುಗಳು ಎದೆ ಸೀಳುವ ಚಕ್ಕಡಿಯ ಕಬ್ಬಿಣದ ಗಾಲಿಗಳು; ಒಂದೇ ಎರಡೇ ಆದರೂ ನಿಶ್ಚಿಂತೆ ಈ ರಸ್ತೆಗೆ, ಅಪಾರ ಸಹನೆ, ಇನ್ನೂ ಇಂತಹ ಸಾವಿರಾರು, ಲಕ್ಷಾಂತರ ಕೋಟ್ಯಾಂತರ ರಸ್ತೆಗಳನ್ನು ಮೈಮೇಲೆ ಹಾಯಿಸಿಕೊಳ್ಳುತ್ತಿರುವ ಕೆಳಗಿನ ಭೂಮಿ, ಭೂಮಿಯಲ್ಲ ಭೂದೇವಿ, ಸಹನಾ ಮೂರ್ತಿ ಕ್ಷಮಯಾಧರಿತ್ರಿ. ಈ ಭೂಮಿಗಾದರೂ ಯಾಕೆ ದೇವಿ, ಧರಿಣಿ ಎಂದರೋ; ದೇವ, ಧರಣ ಎಂದು ಪುಲ್ಲಿಂಗದಲ್ಲಿ ಹೇಳಬೇಕಿತ್ತೇನೋ..... ಮತ್ತೆ ವಿಚಾರ ಸರಣಿ ಎಲ್ಲೊ ಜಾರಿ ಏನನ್ನೋ ಮರುಕಳಿಸಲೆತ್ನಿಸುತ್ತದೆ. ಮತ್ತೊಂದೆಡೆ ಈಗ್ಯಾಕೆ ಅದೆಲ್ಲ ಎರಡು ತಾಸಿನ ಪಯಣ ಖುಷಿಯಾಗಿ ಕಳೆದರೆ ಸಾಕಲ್ಲವೇ? ಅನಾವಶ್ಯಕವಾಗಿ ಏನನ್ನೂ ಕೆದಕಿ ಮಾದ ಗಾಯದ ಮೇಲೆ ಬರಿಕೊಟ್ಟುಕೊಳ್ಳುವದೇಕೆ ಎಂದೂ

ಒಳಧನಿಯೊಂದು ಉಪದೇಶಿಸಲೆತ್ನಿಸುತ್ತಿದೆ. ತುಮುಲ ಹೆಚ್ಚಾಗುತ್ತಿದೆ. ಸಂಘರ್ಷದಲ್ಲಿ ಒಳದನಿಗಿಂತ ಮೇಲ್‌ದನಿಯೇ ಶಕ್ತಿಶಾಲಿಯಾಗತೊಡಗಿದಂತೆ.....

ಮದುವೆಯಾದ ಪ್ರಾರಂಭದ ಐದು ವರ್ಷ ನಂತರದ ಇಪ್ಪತ್ತೆಂಟು ವರ್ಷ ಹೀಗೆಯೇ ಈ ಮೂವತ್ಮೂರು ವರ್ಷಗಳು ಉರುಳಿ ಹೋಗಿವೆ. ಈಗ ಕೊಳದ ಮೇಲೆ ಡೈವಿಂಗ್ ಮಾಡಲು ಬಂದವ ಬೋರ್ಡಿ ತುದಿಗೆ ಬ್ಯಾಲನ್ಸ ಹಿಡಿದು ನಿಂತಂತೆ. ಪುಟಿದು ನೆಗೆದು ತಿರುಗಿ ತಿರುಗಿ ಹಾರಲು ಹಾರಿ ಕೆಳ ಬೀಳಲು ಮೇಲೆ ಕೆಳಗೆ ಅಡ್ಡ ಉದ್ದ ಭ್ರಮಣಿ, ಮತ್ತೆ ಶಾಂತ ಸಮೀಕ್ಷೆ......

ಇಪ್ಪತ್ತೇಳಕ್ಕೆ ಮದುವೆ. ಆ ಮೊದಲು ಒಂದಾರು ತಿಂಗಳು ಕನ್ಯಾನ್ವೇಷಣೆ. ಹತ್ತಿಪ್ಪತ್ತಾದರೂ ನೋಡಬೇಕೆಂದವನಿಗೆ ಮೂರುನಾಲ್ಕಕ್ಕೇ ನಿಲ್ಲಿಸಲು ಒತ್ತಾಯ. ಅವುಗಳಲ್ಲೇ ಒಬ್ಬಳ ಆಯ್ಕೆ. ಮೊದಲು ನೋಡುವದು ದೇವರು ಕೊಟ್ಟದ್ದಂತೆ. ಅರ್ಥವಿಲ್ಲದ ಮಾತೆನಿಸುತ್ತಿದೆ. ಎಲ್ಲ ದೇವರೇ ಕೊಡುವಾಗ, ಅಂತೂ ಇಂತೂ ಪಾಲಿಗೆ ಬಂದದ್ದು ಪಂಚಾಮೃತ? ಖಂಡಿತ ಆಗಲಿಲ್ಲ. ಒಂದು ನಮೂನೆ ಹಾಲಾಹಲ ವಿಷ. ಯಾರೆದುರು ಹೇಳುವುದು ಎಲ್ಲಿ ತೋಡಿಕೊಳ್ಳುವದು. ಹಾಗೆ ನೋಡಿದರೆ ಈ ಮೃತವನ್ನು ಕುಡಿದ ಮೃತ್ಯಂಜಯ ನೀಲಕಂಠ ತಾನು. ಒಡೆದುಹೋಗಬಹುದಾಗಿದ್ದ ಒಡ್ಡಿಗೆ ಮೈಯೊಡ್ಡಿ ತಡೆದ ತಾಳ್ಮೆಯ ಭೀಮ, ತಾಳ್ಮೆ ಶಬ್ದದ ಅಪಭ್ರಂಶ ತಾಳಿ. ಅದಕ್ಕಾಗಿಯೇ ಲಗ್ನದಲ್ಲಿ ಕೊರಳಿಗೆ ಕಟ್ಟುವದು. 'ತಾಳಿಯಾಗಿದೆಯಂತೆ, ತಾಳಿ! ಎಷ್ಟೇ ಕಷ್ಟಬಂದರೂ ತಾಳಿಕೊಳ್ಳಬೇಕಂತೆ. ಕಟ್ಟಿಸಿಕೊಳ್ಳುವವಳೋ ಕಟ್ಟುವವನೋ ಅದು ಬೇರೆ ಮಾತು. ಹಿಂದಿನವರೇನೋ ಹೆಣ್ಣೇ ತಾಳಿಕೊಳ್ಳಲಿ ಎಂದರು. ಪುರಾಣ ಪುಣ್ಯಕತೆಗಳು ಅವಳನ್ನು ಷಟ್‌ಕರ್ಮಯುಕ್ತ ಕ್ಷಮಯಾಧರಿತ್ರಿ ಎಂದವು. ಆದರೆ ಎಲ್ಲ ಅಂದುಕೊಂಡಂತೆ ಆಗಬೇಕಲ್ಲ? ಏನೇನೋ ಆಶಾಗೋಪುರ ನಿರ್ಮಿಸಿಕೊಂಡು ಕನಸುಗಳ ಹಮ್ಮಿಕೊಂಡು ಯಾರೂ ಸಂಸಾರ ಪ್ರಾರಂಭಿಸಲೇಕೂಡದು (ಇದು ಈಗ ಹೇಳುವ ಮಾತು). ಆದರೆ ಎಲ್ಲರೂ ತಮ್ಮ ತಮ್ಮ ಜೀವನ ಬೇರೆಯವರಿಗಿಂತಲು ಸುಖವಾಗಿರಲೆಂದೇ ಆಶಿಸಿರುತ್ತಾರೆ. ಹಾಗೆ ಹಂಬಲಿಸಿ ಮನದಲಿ ಸುಂದರ ಚಿತ್ರ ಬರೆದುಕೊಂಡಿದ್ದು ಬಲದೇವರು ಮಾತ್ರ ಮಾಡಿದ ತಪ್ಪಲ್ಲವಲ್ಲ.

ಪ್ರಾರಂಭದ ಬರೀ ದೇಹಾಕರ್ಷಣೆಯ ಹೊಂದಾಣಿಕೆಯ ದಿನಗಳೇ ಉತ್ತಮವಾಗಿದ್ದವು. ಆದರೆ ಬಲದೇವ ಅಂತಹ ಮನುಷ್ಯರಲ್ಲ. ಸುತ್ತಲೂ ಸಾವಿರ ಜನರಿದ್ದರೂ ಏಕಾಂತ ಅನುಭವಿಸಬಲ್ಲ. ಒಮ್ಮೆಲೆ ಅಂತರ್ಮುಖಿಯಾಗಬಲ್ಲ. ಸಂತೆಯಲ್ಲೇ ಚಿಂತಿಸಬಲ್ಲ. ದಿನಗಟ್ಟಲೇ ಗಾಢವಾಗಿ ಯೋಚಿಸಬಲ್ಲ, ದುಃಖಕರ ಕ್ಷಣಗಳನ್ನು ವೈಚಾರಿಕ ನೆಲೆಗಳನ್ನಾಗಿ ಪರಿವರ್ತಿಸಿ ಅವ್ಯಕ್ತವಾಗಿ ವಿಶ್ಲೇಷಿಸಬಲ್ಲ ವಿಚಾರಶೀಲರಾಗಿದ್ದರು. ಸಾರಾಸಾರ ವಿಚಾರಿಸದೇ ಯಾವ ವಾದವನ್ನೂ ಒಪ್ಪಿಕೊಳ್ಳದವರು. ಒಮ್ಮೊಮ್ಮೆ ತಾವೇ ಪ್ರಶ್ನಿಸಿಕೊಂಡಿದ್ದಾರೆ ಹ್ಯಾಗೆ ತಾವು ಇವಳನ್ನು ಒಪ್ಪಿಕೊಂಡದ್ದು ಧರ್ಮಪತ್ನಿಯಾಗಿ ಎಂದು. ತಮ್ಮದಲ್ಲದಿದ್ದರೂ ತಾವು ಒಪ್ಪದಿರುವ "ಮ್ಯಾರೇಜಸ್ ಆರ್ ಮೇಡ್ ಇನ್ ಹೇವನ್" ಎಂಬ ಮಾತನ್ನು ಅನಿವಾರ್ಯವಾಗಿ ಒಪ್ಪಿಕೊಂಡಿದ್ದಾರೆ.

ಮದುವೆಗೆ ಮೊದಲೇ ಒಂದು ಕಥಾ ಸಂಕಲನ, ಒಂದು ಕವನ ಸಂಕಲನ ಹೊರತಂದದ್ದು, ಕಥಾ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮಸ್ಥಾನ ಪಡೆದದ್ದು ಮತ್ತೆ ನೆನಪಾಗುತ್ತಿದೆ ಅವರಿಗೆ, ಬರಹಗಾರನಿಗೆ ಮಾನಸಿಕ ಸೌಖ್ಯ, ಶಾಂತ ಪರಿಸರ, ಎಷ್ಟು ಮುಖ್ಯ. ಯಾಕೋ ಮೈಯಲ್ಲಿ ಬೆವರು ಬಂದಂತೆನಿಸುತ್ತದೆ. ಕಾರಿನ ಗ್ಲಾಸು ಕೆಳಗಿಸಿದರೆ ತಣ್ಣನೆಯ ಗಾಳಿ; ಒಳಗೆ ಧಗೆ ಹೊರಗೆ ಛಳಿ ಹೀಗೆಯೇ ಆಗಿತ್ತಲ್ಲವೆ ತಮ್ಮ ಪ್ರಥಮ ಪಂಚವಾರ್ಷಿಕ ವೈವಾಹಿಕ ಜೀವನ, ದ್ವಂದ್ವ ದ್ವಿಮುಖ ದಾಂಪತ್ಯ ಎಷ್ಟೊಂದು ಭಯಾನಕ, ತಾನೊಬ್ಬ ಅಮಾಯಕ. ಇದ್ದುದರಲ್ಲಿಯೇ ಎಲ್ಲವನ್ನು ಸಾಧಿಸಿ ತೋರಿಸಬೇಕೆಂಬ ಛಲವಾದಿ. ಆದರೆ ಬಯಸದೇ ಬಂದ ದೌರ್ಭಾಗ್ಯ ಎಲ್ಲ ಏರುಪೇರು ಮಾಡಿತ್ತು. ಎತ್ತು ಏರಿಗೆ ಕೋಣ ಕೇರಿಗೆ ಅನ್ನುವಂತಾಗಿ ಹೋಗಿತ್ತು, ಕೋಣ ಕೋಣರಿಗೆ ಒಂದೇ ದಾರಿ, ಬಡಿದಾಟ ಹೊಡೆದಾಟ ಒಬ್ಬರನೊಬ್ಬರು

ಮುಗಿಸುವಾಟ, ಆದರೆ ಜಾಣ ಕೋಣರಿಗೆ ಎರಡೂ ದಾರಿ ಯಾವಾಗಲೂ ಲಭ್ಯ. ಹೋಗುವ ಮಾರಿಯನ್ನು ಮನೆಗ್ಯಾಕೆ ಆಹ್ವಾನಿಸಬೇಕು? ಅವರದಾರಿ ಅವರಿಗೆ ಇವರ ದಾರಿ ಇವರಿಗೆ. ಮಹತ್ತರ ಗುರಿ ಇಟ್ಟುಕೊಂಡವರಿಗೆ ಇಂತಹ ಅಯಾಚಿತ ಅವಘಡಗಳ ಗೊಡವೆ ಬೇಕಿಲ್ಲ. ಹಾಗೆಯೇ ಆಗಿತ್ತು ಬಲದೇವರ ಸ್ಥಿತಿ.

ಮಧ್ಯಮ ವರ್ಗದವರಿಗೆ ಆರಕ್ಕೆ ಏರಲೂ ಆಗುವುದಿಲ್ಲ ಮೂರಕ್ಕೆ ಇಳಿಯಲೂ ಆಗುವುದಿಲ್ಲ. ಒಂದು ರೀತಿಯ ಅತಂತ್ರ ಸ್ಥಿತಿಯಲ್ಲಿರುತ್ತಾರವರು. ಸಾಮಾಜಿಕ ಕಟ್ಟುಕಟ್ಟಳೆಗಳ ಬಂಧನಗಳು ಇವರಿಗೆ ಇತರರಿಗಿಂತ ಬಹಳ ಬಿಗಿಯಾಗಿಯೇ ಇರುತ್ತವೆ. ಕೆಳವರ್ಗದವರಿಗೆ ಅವುಗಳ ಅರಿವಿರುವುದೇ ಇಲ್ಲ. ಇದ್ದರೂ ಅನ್ವಯಿಸಿಕೊಳ್ಳುವ ಗೋಜಿಗೇ ಅವರು ಹೋಗುವುದಿಲ್ಲ. ಮೇಲು ವರ್ಗದವರು ಅವುಗಳನ್ನು ಪುರಸ್ಕರಿಸುವದೇಯಿಲ್ಲ. ತಾವು ಮಾಡುವದೇ ಶ್ರೇಷ್ಠ ರೀತಿ ರಿವಾಜು ಎಂಬ ದಾರ್ಷ್ಟ್ಯ ಎದೆಗಾರಿಕೆ ಅವರದು. ಶ್ರೀಮಂತರ ಈ ಜಂಭದ ಧೈರ್ಯವನ್ನಾಗಲಿ ಬಡವರ ಅಜ್ಞಾನ ನಿರ್ಲಕ್ಷಗಳನ್ನಾಗಲಿ ಮೈಗೂಡಿಸಿಕೊಂಡರೆ ಎಷ್ಟೊಂದು ಒಳ್ಳೆಯದೆಂದು ಅನೇಕ ಸಾರೆ ಬಲದೇವರವರೂ ಅನಿಸಿಕೊಂಡಿದ್ದಾರೆ. ಆದರೆ ಅದು ಸಾಧ್ಯವಾಗಿಯೇಯಿಲ್ಲ. ಅದಕ್ಕಾಗಿಯೇ ಮಧ್ಯಮವರ್ಗದ ವಿಚಾರವಾಗಿ ವ್ಯಕ್ತಿ. ಸಮಾಜದಲ್ಲಿ ಇತರರೆಲ್ಲರಿಗಿಂತ ಹೆಚ್ಚು ಸಂವೇದನಾಶೀಲನಾಗಿರುತ್ತಾನೆ. ಇಡೀ ಜನಸಮೂಹವೇ ತನ್ನನ್ನು ನೋಡುತ್ತಿರುತ್ತದೆಯೇನೋ ಎಂದು ಯಾವಾಗಲೂ ಚಿಂತನ ಪರವಾಗಿರುತ್ತಾನೆ ಅನ್ನುವುದು. ಇಂತಹ ವ್ಯಕ್ತಿತ್ವದ ಬಲದೇವ ತಮ್ಮ ಕೌಟುಂಬಿಕ ಜೀವನದ ಪ್ರಾರಂಭದಲ್ಲೇ ಅರಿವಾಗತೊಡಗಿದ ಅಪಾಯದ ಬಗ್ಗೆ ತಲೆಕೆಡಿಸಿಕೊಂಡು ಬಿಟ್ಟರು. ಅವಳು ಬಂದ ಆರು ತಿಂಗಳಲ್ಲೇ ನಡೆದ ಆ ಘಟನೆ ಅವರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ತಮ್ಮ ತಾಯಿಗೊಬ್ಬನೇ ಮಗ ಅವರು. ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ ಅವ್ವ. ಕಣ್ಣಲ್ಲಿ ಇಟ್ಟುಕೊಂಡು ಕಾಳಜಿಯಿಂದ ಇವರನ್ನು ಬೆಳೆಸಿದ ಅವ್ವನನ್ನು ಮನೆಗೆ ಕರೆತರುವ ಮೊದಲು ಆದ ವಾಗ್ವಾದ ನಂಬಲಾರರು ಜನ, ವಿವರಿಸಿ ಹೇಳಿದರೆ,

"ಇರುವ ಇಷ್ಟು ಮನೆಯಲ್ಲಿ ಅವರು ಬೇರೇನಾ?" ಅಂದಿದ್ದಳವಳು. ಕಂಪನಿಯ ವಸತಿ ಗೃಹಗಳು ಎಲ್ಲರಿಗೂ ಒಂದೇ ಇರುತ್ತವೆಯಲ್ಲವೇ? ಎಂದು ಸಮಾಧಾನಿಸಿದರೆ "ಬೇರೆಯವರ ಗೊಡವೆ ನಮಗ್ಯಾಕರಿ ನಮ್ಮದಷ್ಟು ನಮಗೆ ಸಾಕು" ಎಂಬ ಮಾತು, ಪಕ್ಕದ ಮನೆಯಲ್ಲಿರುವ ಕೃಷಿ ಅಧಿಕಾರಿಗೆ ಐದು ಮಕ್ಕಳು ಅವರನ್ನು ನೋಡಬಾರದೇ ಎಂದು ಕೇಳಬೇಕೆಂದರೂ ಶಬ್ದ ಬಾಯಲ್ಲೇ ಉಳಿದುಹೋಗಿದ್ದವು. ಏನಾದರಾಗಲಿ ಎಂದು ಧೈರ್ಯ ಮಾಡಿ ಅವನನ್ನು ಕರೆದುಕೊಂಡೇ ಬಂದರು. ಅದ್ಯಾವ ಅಪೂರ್ವ ಜ್ಞಾನವೋ ಅವರ ಅವ್ವ ಬರಲಿಕ್ಕೆ ಸುತಾರಾಂ ತಯಾರಿರಲಿಲ್ಲ. ಇವರ ಪ್ರೀತಿಯ ಒತ್ತಾಯಕ್ಕೆ ಮಣಿದು ಇದ್ದ ಇಪ್ಪತ್ತು ಎಕರೆ ಹೊಲ ಬೇರೆಯವರ ಸುಪರ್ದಿಗೆ ವಹಿಸಿ ಬಂದಾಗಿತ್ತು. ಮನೆಗೆ ಬಂದರೂ ಮನೆ ತುಂಬಲಿಲ್ಲ. ಎರಡು ಕೋಣೆಯಲ್ಲಿ ಒಂದರೊಳಗೆ ಹೋದ ಅವ್ವ ವಾತಾವರಣ ತಿಳಿದುಕೊಂಡಳೋ ಅಥವಾ ಊಹಿಸಿಯೇ ಬಿಟ್ಟಿದ್ದಳೊ ಕರೆಯದೇ ಎಂದೂ ಹೊರಬರುತ್ತಿರಲಿಲ್ಲ. ಮಾತನಾಡಿಸದೇ ತಾನಾಗಿಯೇ ಹೆಚ್ಚು ಮಾತನಾಡುತ್ತಿದ್ದಿಲ್ಲ. ಅದೂ ತಪ್ಪಾಯಿತೇನೋ. ಹೊಸದಾಗಿ ಲಗ್ನವಾದವರಿಗೆ ಸುಖವಾಗಿ ಇರಗೊಡಲು ಮನಸಿಲ್ಲವೇನೋ ಎಂದು ಚುಚ್ಚುನುಡಿ ಆಗಾಗ ಹೆಂಡತಿ ಬಾಯಿಂದ ಪರೋಕ್ಷವಾಗಿ ಹೊರಬರುತ್ತಿದ್ದವು. ಕೇಳಿಸಿಕೊಂಡರೆ ಅವ್ವ ರಾತ್ರಿ ಊಟವಿಲ್ಲದೇ ಮಲಗಿಕೊಳ್ಳುತ್ತಿದ್ದಳು. ಚರ್ಚೆಗೆ ಇಳಿದು ಫಲವಿಲ್ಲವೆಂಬುದು ಮಗನಂತೆ ತಾಯಿಗೂ ತಿಳಿದುಹೋಗಿತ್ತು.

ಹೀಗಾದಾಗಲೆಲ್ಲ ರಾತ್ರಿ ವಿಚಾರಿಸಿದರೆ ಜೋರು ದನಿಯಲ್ಲಿ ಉಡಾಫೆ ಉತ್ತರ. ಸಿಟ್ಟಿನಲ್ಲಿ ಏನೋ ದುಡುಕಿ ಅಂದರೆ ಅದನ್ನೇ ದೊಡ್ಡದು ಮಾಡುತ್ತೀರಲ್ಲ ಎಂದು ಅನಾವಶ್ಯಕ ಅಳು. ಪಕ್ಕದ ಮನೆಯವರಿಗೆ ಕೇಳಿಸುತ್ತಿದ್ದುದರಿಂದ ಹೆಚ್ಚು ಕೇಳಿ ಫಲವಿಲ್ಲವೆಂದು ಮುನಿಸಿಕೊಂಡು ಮಲಗಿದರೆ ಊಟಕ್ಕೆ ಏಳಿ ಎಂದೂ ಕರೆಯುತ್ತಿರಲಿಲ್ಲ. ಒಮ್ಮೆಯಂತೂ ಹೀಗಾದಾಗ ತಾನೊಬ್ಬಳೇ ಹೋಗಿ ಗಡದ್ದಾಗಿ ಉಂಡು ಬಂದು ಪಕ್ಕದಲ್ಲಿ ಉರುಳಿದಳು. ತುಸು ಹೊತ್ತಿನಲ್ಲಿ ದೀರ್ಘ

ನಿದ್ರೆಯಲ್ಲೂ ತೊಡಗಿದಳು. ಹಿಂದಿನ ಕೋಣೆಯಲ್ಲಿ ಅವ್ವ ಅಳುತ್ತಿರಬಹುದೆಂದು ಊಹಿಸಿ ತಾನು ಎದ್ದು ಹೋಗಿ ಬಾಗಿಲು ತಟ್ಟಿದರೆ ಅವ್ವ ಏಳಲೇಯಿಲ್ಲ ನಿದ್ರೆಹತ್ತಿರಬಹುದೆಂದು ತನಗೇ ಖಾತ್ರಿಯಿಲ್ಲದಿದ್ದರೂ ಇನ್ನೂ ಹೆಚ್ಚು ತಟ್ಟುವ ಧೈರ್ಯ ಮಾಡದೇ ಹಾಗೇ ತಿರುಗಿ ಬಂದರು. ಸುಡುವ ತುಪ್ಪ ಬಾಯೊಳು ಹಾಕಿಕೊಂಡ ಬಡವನ ಬವಣೆಯಂತೆ ನುಂಗಲೂ ಆಗದೆ ಉಗುಳಲೂ ಆಗದೆ ಅತಂತ್ರ ಸ್ಥಿತಿ ಅನುಭವಿಸಿದರು. ತಿರುಗಿ ಬಂದರೆ ಹೆಂಡತಿಗೆ ಇನ್ನೂ ಗಾಢನಿದ್ರೆ, ಇವರು ಮಲಗಿಕೊಂಡರೂ ಕಣ್ಣು ಮುಚ್ಚಿದರೂ ನಿದ್ರೆ ಮಾತ್ರ ಹತ್ತಿರ ಸುಳಿಯಲಿಲ್ಲ.'

ಶಾಂತಕೊಳದಲ್ಲಿ ಒಮ್ಮೆ ಕಲ್ಲೊಗೆದರೆ ಉತ್ಪತ್ತಿಯಾಗುವ ತೆರೆಗಳು ಕೆಲ ಹೊತ್ತಿನಲ್ಲಿ ಮಾಯವಾಗಿ ಮತ್ತೆ ಮೊದಲಿನ ಶಾಂತಸ್ಥಿತಿ ಮರುಳುವದು ಸಾಧ್ಯ. ಆದರೆ ಒಂದರನಂತರ ಮತ್ತೊಂದರಂತೆ ಒಗೆಯುತ್ತಲೇಯಿದ್ದರೆ ಶಾಂತಿ ಅಸಾಧ್ಯ. ಹಾಗಾಗಿತ್ತು ಬಲದೇವರ ಸ್ಥಿತಿ.

ಪ್ರತಿ ದಿನ ಒಂದಲ್ಲೊಂದು ನೆಪ ತೆಗೆದು ವಾದವಿವಾದ, ಸಿಟ್ಟು, ಅಳು ಇದೇ ಆಗಿಹೋಗಿತ್ತು. ಕಾರಣಗಳೇನು ಎಂದು ತಿಳಿದುಕೊಳ್ಳುವದೇ ಒಂದು ದೊಡ್ಡ ಕೆಲಸವಾಗಿತ್ತವರಿಗೆ. ಅನೇಕ ಸಾರೆ ಈ ಅನ್ವೇಷಣೆ ಅರ್ಥವಿಲ್ಲದ್ದು, ವ್ಯರ್ಥವಾದದ್ದು ಅನಿಸಿಯೂಬಿಡುತ್ತಿತ್ತು. ಹಾಗಿದ್ದರೆ ತನ್ನ ಜೀವನ ಹೀಗೆ ಅನರ್ಥದ ಪ್ರಕರಣವಾಗಿಯೇ ಮುಂದುವರೆಯಬೇಕೆ ಎಂದು ಗಾಢವಾಗಿ ಚಿಂತಿಸುತ್ತಿದ್ದರು. ಚಾಲಕ ಕಾರಿನ ವೇಗ ಹೆಚ್ಚಿಸುತ್ತಲೇಯಿದ್ದ ಇವರ ವಿಚಾರ ಸರಣಿಯೂ ವೇಗೋತ್ಕರ್ಷಗೊಳ್ಳುತ್ತಲೇ ಹೋಗುತ್ತಿತ್ತು.

ಅಂದೊಮ್ಮೆ ಗೆಳೆಯರನ್ನು ಊಟಕ್ಕೆ ಕರೆದ ದಿನ ತಮಗಾದ ಅವಮಾನ..... ಹಾಗೆ ನೋಡಿದರೆ ಅಂದೇ ತಾವು ಇವಳನ್ನು ಖಾಯಂ ಆಗಿ ತವರಿಗೆ ಕಳಿಸಿಬಿಡಬೇಕೆಂದುಕೊಂಡಿದ್ದರು. ಬಂದವರೆದುರೇ ಅದು ಇಲ್ಲ ಇದು ಇಲ್ಲವೆಂದು ತಾನು ಯಾರದೋ ಮನೆಯಲ್ಲಿರುವಳೇನೋ ಎಂಬಂತೆ ನಿರ್ಲಿಪ್ತ ಭಾವನಾರಹಿತ ನಡೆನುಡಿ, ಅತಿಥಿ ಸತ್ಕಾರದ ಆವಿಷ್ಕಾರವೇ ಇಲ್ಲವೇನೋ ಇವಳಿಗೆ. ಇವಳ ತಂದೆ ತಾಯಿಗಳನ್ನು ನೋಡಿ ತಾನು ತರ್ಕಿಸಿದ್ದು ಸುಳ್ಳಾಗಿ ಹೋಗಿತ್ತು. ಆಕಳಂತೆ ಕರು ತಾಯಿಯಂತೆ ಮಗು ಎಂದು ತಿಳಿದುಕೊಂಡಿದ್ದು ತನ್ನ ಪ್ರಕರಣದಲ್ಲಿ ಸುಳ್ಳಾಗಬೇಕೆ? ಹುಟ್ಟುವಿಕೆ ಹೇಗೆ ಆಕಸ್ಮಿಕವೊ ಮದುವೆಯೂ ಅಷ್ಟೇ ಅನಿರೀಕ್ಷಿತ. ಇಂಗ್ಲೀಷನಲ್ಲಿ "ಬರ್ತ್ ಈಜ್ ಆನ್ ಆಕ್ಸಿಡೆಂಟ್" ಅನ್ನುತ್ತಾರೆ ಇದಕ್ಕೆ. ಅದರಂತೆಯೇ ನಮ್ಮ ದೇಶದಲ್ಲಿ ಮದುವೆಯೂ ಕೂಡಾ ಒಂದು ಆಕಸ್ಮಿಕವೇ ಆಗಿಬಿಟ್ಟಿದೆ. ಬೇರೆಯವರಿಗೆ ಆಕ್ಸಿಡೆಂಟ್ ಅನ್ನುವುದು ಕೇವಲ "ಆಕಸ್ಮಿಕ" ಎಂಬ ಅರ್ಥ ನೀಡಿದ್ದರೆ ಇವರ ಪ್ರಸಂಗದಲ್ಲಿ ಅದು "ಮ್ಯಾರೇಜ್ ಈಜ್ ಆನ್ ಆಕ್ಸಿಡೆಂಟ್" ಅಂದರೆ ಒಂದು ಅಪಘಾತ ಅಥವಾ ಆಘಾತ ಎಂಬ ಅರ್ಥದಲ್ಲಿ ಬಂದೊದಗಿತ್ತು. ಎರಡೂ ಕೈಯ ಚಪ್ಪಾಳೆ ಹೊಂದಾಣಿಕೆ ಸರಿಯಾಗಿದ್ದರೆ ತಾಳ, ಇಲ್ಲದಿದ್ದರೆ ತಪ್ಪುವುದು ತಾಳ ಈ ಬಾಳಲ್ಲಿ. ಈ ತಾಳ ತಪ್ಪುವುದನ್ನು ತಪ್ಪಿಸಲೆಂದೇ ಬಲದೇವ ಬಹಳ ತಡಕಾಡಿದ್ದರು.

ಗೆಳೆಯರೆಲ್ಲರೂ ಕೇಳುತ್ತಲೇ ಇದ್ದರು ಏನಾಯಿತಯ್ಯ ನಿನಗೆ ಎರಡು ವರ್ಷದಿಂದ ಏನೂ ಬರೆಯುತ್ತಿಲ್ಲ. ಯಾಕೆ ಲಗ್ನವಾದ ಮೇಲೆ ಬಹಳ ಬ್ಯೂಜೀನಾ ಎಂದು ಹರ್ಷಭರಿತ ವ್ಯಂಗ್ಯವಾಡುತ್ತಿದ್ದರು. ಆದರೆ ಅವರ ವಿಡಂಬನೆ ಇವರಿಗೆ ಬೇರೊಂದು ಅರ್ಥದಲ್ಲಿ ನಿಜವೇ ಆಗಿತ್ತು. ಆ ಎರಡು ವರ್ಷ ತಾವು ಮಾಡಿದ್ದೇನು? ಪ್ರತಿ ದಿನ ಪ್ರತಿ ಕ್ಷಣ ಬರೀ ಹ್ಯಾಗೆ ಹೆಂಡತಿಯನ್ನು ಸಮಾಧಾನಗೊಳಿಸಬೇಕು; ಸಂಪ್ರೀತಳನ್ನಾಗಿ ಮಾಡಬೇಕು ಎಂಬುದೇ ಚಿಂತೆಯಾಗಿತ್ತು. ಹಾಗೆಯೇ ಒಮ್ಮೆ ಲೆಕ್ಕ ಹಾಕಿಯೂಬಿಟ್ಟಿದ್ದರು ಮೂರು ವರ್ಷಗಳಲ್ಲಿ ಇಷ್ಟು ಸಾರೆ ತಾವು ಪರಿತಪಿಸಿರಬಹುದೆಂದು 3 ವರ್ಷ 365 ದಿನಗಳು 24 ಗಂಟೆಗಳು 60 ನಿಮಿಷಗಳು 60 ಸೆಕೆಂಡುಗಳು = 94608000 ಹೀಗೆ ಒಂಭತ್ತುವರೆ ಕೋಟಿ ಕ್ಷಣಗಳ ಆ ದಳ್ಳುರಿಯ ವಿಚಾರಸರಣಿ ಸಾಕಾಗಿಹೋಗಿತ್ತವರಿಗೆ. ಯಾರಾದರು ಏನು ಸಾಹಿತಿಗಳು ಯಾವುದೋ ದೀರ್ಘ ಚಿಂತನೆಯಲ್ಲಿದ್ದಂತಿದೆಯಲ್ಲ"? ಎಂದು ಕೇಳಿದರೆ, ಇವರ್‍ಯಾಕೆ ದೀರ್ಘ ಚಿಂತೆಯಲ್ಲಿದ್ದೀರಿ ಎಂದು ಕೇಳುವುದಿಲ್ಲ? ನಮ್ಮ ಚಿಂತೆ ಇವರಿಗೆ ಅರ್ಥವಾಗುತ್ತಲೇ ಇಲ್ಲವೆ? ಚಿಂತೆಯ ಚಿತೆ ಮೇಲೆ ತಾನು ಬೇಯುತ್ತಿರುವುದೂ ಇವರಿಗೆ ತಿಳೀಯದೇ

ಎಂದಂದುಕೊಳ್ಳುತ್ತಿದ್ದರು. ಆದರೆ ಇತರರಿಗೆ ತೋರದಂತೆ ತಮ್ಮ ಚಿಂತಾಕ್ರಾಂತ ಮುಖಕ್ಕೆ ನಸುನಗೆಯ ಲೇಪನ ಹಚ್ಚುತ್ತಿದ್ದರು. (ಮತ್ತಾವುದಾದರೂ ಹೊಸ ಕೃತಿ ಹೊರತರುತ್ತಿದ್ದೀರಾ?" ಎಂಬುದಕ್ಕೆ ಹೌದು ಈಗ ನನ್ನ ಕೃತಿ ಪ್ರಕೃತಿ, ನನ್ನಾಕೆಗೆ ಎಂಟರಲ್ಲಿದೆ" ಎಂದು ಹಾಸ್ಯವಾಡಿ ವ್ಯಥೆಯ ಯಾವ ಸುಳಿವೂ ಯಾರಿಗೂ ತಿಳಿಯದಂತೆ ವರ್ತಿಸುತ್ತಿದ್ದರು.

ಬಲದೇವರ ಹೆಂಡತಿ ಗಂಡು ಮಗುವಿಗೆ ಜನ್ಮ ನೀಡಿದಾಗ ಹಿರಿಯರೊಬ್ಬರು ನಗೆಯಾಡುತ್ತಾ "ಗಂಡು ಹಡೆದವರು ಗಂಡನನ್ನೂ, ಹೆಣ್ಣು ಹಡೆದ ಹೆಂಡತಿಯನ್ನು ಗಂಡನೂ ಹೆಚ್ಚು ಪ್ರೀತಿಸುತ್ತಾನೆಂದರ್ಥ" ಎಂಬ ಅರ್ಥವಿಲ್ಲದ ಹಾಸ್ಯವಾಡಿದಾಗ ಅದನ್ನೇ ನೆನೆದು "ನೋಡ್ರಿ ನೀವು ನನ್ನನ್ನು ಪ್ರೀತಿಸದಿದ್ದರೂ ನಾನು ನಿಮ್ಮನ್ನು ಪ್ರೀತಿಸುತ್ತೇನೆ" ಎಂದು ಕಟುಕುತ್ತಿದ್ದಳು. ಅಬ್ಬಾ ಪ್ರೀತಿ ಇಷ್ಟೊಂದು ಚುಚ್ಚುವದಾದರೆ ಸಿಟ್ಟೇ ಉತ್ತಮವೇನೋ ಅಂದುಕೊಂಡು ಸುಮ್ಮನೆ ಮುಗುಳ್ನಕ್ಕು ಸೋಲನ್ನೊಪಿಕೊಂಡಿದ್ದರು. ಅದ್ಯಾವ ವಿಚಿತ್ರವೋ ಹೀಗೆ ವಿನಾಕಾರಣ ಇವರು ಸೋಲನ್ನೊಪ್ಪಿಕೊಂಡಿದ್ದರೂ ಅವಳಿಗೆ ಆಗುತ್ತಿದ್ದ ಖುಷಿ ಮಾತ್ರ ಅಪಾರ. ಇದೊಂದು ಥರ ಕ್ರೂರಖುಷಿ, ವಿಕ್ಷಿಪ್ತ ಆನಂದ ಪರ್ವರ್ಟೆಡ್ ಪ್ಲೆಜರ್ನಂತೆ. ಯಾವ ತೆರನಾದರೂ ಆಗಲಿ ಇಗ್ನೊರನ್ಸ್ ಈಜ್ ಬ್ಲಿಸ್ (ಮೌಢ್ಯ ಆನಂದ) ಆದರೂ ಆಯಿತಲ್ಲ ಒಂದು ದಿನವಾದರೂ ತಮಗೆ ಶಾಂತಿ ಸಮಾಧಾನ ದೊರಕಿತಲ್ಲ ಅಷ್ಟೇ ಸಾಕು ಎಂದುಕೊಳ್ಳುತ್ತಿದ್ದರು.

ಅದೇನು ನಿಸರ್ಗದ ನೇಮವೋ ನಮಗೆ ಬೇಡಾದ ಹೊಟ್ಟೆಯಲ್ಲಿ ಹುಟ್ಟಿದರೂ - ಮಕ್ಕಳು ಮಾತ್ರ ಆತ್ಮಕ್ಕೆ ನೇರ ಬಂದುಬಿಡುತ್ತವೆ. ಹೃದಯಕ್ಕೆ ಹತ್ತಿಕೊಳ್ಳುತ್ತವೆ. ಮಗ ಬೆಳೆಯುತ್ತ ಬೆಳೆಯುತ್ತ ಮೂರು ವರ್ಷದವನಾದಾಗಲೇ ತಮ್ಮನ್ನೂ ತಮ್ಮ ತಾಯಿಯನ್ನೂ ಹೆಚ್ಚೆಚ್ಚು ಪ್ರೀತಿಸತೊಡಗಿದ. ಒಮ್ಮೆ ಜ್ವರ ಬಂದು "ಪ್ಯಾರಾ ಟಾಯಫಾಯ್ಡ್ ಆಗಿ ಮಗು ಆಸ್ಪತ್ರೆಗೆ ಸೇರಿಸಲ್ಪಟ್ಟಾಗ ಆಸ್ಪತ್ರೆಯಲ್ಲಿ ಬಾತರೂಮು ಸರಿಯಾಗಿಲ್ಲವೆಂಬ ನೆಪಮಾಡಿ ಮಗು ಅಲ್ಲಿದ್ದ ಮೂರು ದಿನವೂ ಬಲದೇವ ಅವರೇ ಜೊತೆಯಲ್ಲಿರಬೇಕಾಗಿ ಬಂತು. ಅವರಿಗೇನೋ ಆನಂದವೇ. ಆದರೆ ಕೇಳುವ ಜನಕ್ಕೆ ಏನು ಹೇಳುವದು. ಅವಳು "ನಿಮ್ಮ ಪ್ರೀತಿಯ ಮಗನೊಟ್ಟಿಗೆ ನೀವೇ ಇರಿ" ಎಂದದ್ದನ್ನು ಹೇಳುವದೇ? ಎಲ್ಲ ನುಂಗಿಕೊಂಡು, "ಇಲ್ಲ ಅವಳಿಗೂ ಸ್ವಲ್ಪ ನೆಗಡಿಯಾಗಿತ್ತು. ಮಗುವಿಗೆ ಒಳ್ಳೆಯದಲ್ಲವೆಂದು ನಾನೇ ಬೇಡವೆಂದೆ" ಎಂದು ಅವಳಿಗೆ ತಿಳಿಯದ ಹಾಗೆಯೇ ಉತ್ತರಿಸಿದ್ದರು. ಮಗ ತಮ್ಮನ್ನು ಹಾಗೂ ತಮ್ಮ ತಾಯಿ (ಅಜ್ಜಿ)ಯನ್ನು ಹೆಚ್ಚಾಗಿ ಹಚ್ಚಿಕೊಂಡಿದ್ದಕ್ಕೆ ಈ ರೀತಿಯ ನಡವಳಿಕೆ ಎಂಬುದು ಅವರಿಗೆ ತಿಳಿದ ಮಾತೆ ಆಗಿತ್ತು. ಆದರೆ ಇದೇ ಜ್ವರದ ನೆಪಮಾಡಿ ಮಗು ಮುಂದೆ ತನ್ನ ಅಜ್ಜಿಯ ಹತ್ತಿರ ಹೋಗದಂತೆ ತಡೆದಾಗ ಯಾಕೆಂದು ಕೇಳಿದ್ದಕ್ಕೆ "ಅತ್ತೆಯವರಿಗೆ ದಮ್ಮು ಜಾಸ್ತಿ. ಅದೂ ಟೀಬಿಯೋ ಅಸ್ತಮಾವೋ ಆಗಿದ್ದರೆ.. ಇನ್ನೂ ಏನೇನು ಹೇಳುತ್ತಿದ್ದಳೋ ಇವರು ನಡುವೆಯೇ ಬಾಯಿ ಹಾಕಿ "ಸಾಕು ಸಾಕು ಎಲ್ಲ ತಿಳಿಯಿತು. ಇಲ್ಲದ ರೋಗ ಬರಲೆಂದು ಬೇಡುವುದು ಬೇಡ. ನಿನಗೆ ತಿಳಿದಂತೆ ಮಾಡು" ಎಂದು ಸೋಲೊಪ್ಪಿಕೊಂಡು ತಾವು ಹೊರನಡೆದಾಗಲೇ ಆಕೆ ಸುಮ್ಮನಾಗಿದ್ದಳು.

ಆದರೆ ಹೀಗೆ ತಾಯಿಗೆ ಚಳಿಗಾಲದಲ್ಲಿ ಛಳಿ ತಡೆಯುವದಾಗದೆಂದು ಅದಕ್ಕೂ ಮೊದಲೊಮ್ಮೆ ತಾವು ಹೊಸ ರಗ್ ಒಂದನ್ನು ತಂದಾಗ ಅದು ತನಗೇ ಎಂದು ಭಾವಿಸಿದ ಹೆಂಡತಿಗೆ, ರಾತ್ರಿ ಬಲದೇವ ಅವರೇ ಹೋಗಿ ತಾಯಿಗೆ ಹೊಚ್ಚಿ ಬಂದಾಗ, ಮಾಡಿದ ರಂಪ ಆಡಿದ ಕಟೋಕ್ತಿಗಳು ಮನೆಯಿಂದ ಓಡಿ ಹೋಗಬೇಕೆನ್ನುವಷ್ಟು ಇವರನ್ನು ಕಂಗಾಲು ಮಾಡಿದ್ದವು. ಹೇಗೇಗೋ ಸಾವರಿಸಿಕೊಂಡಾಗಿತ್ತು. ಮುಂದೆ ನಿನಗೂ ಒಂದು ರಗ್ ತರುವೆ ಎಂದರೂ ಹ್ಯಾವಕ್ಕಾಗಿ ಹಠಕ್ಕಾಗಿ ಇಂದಿಗೂ ರಗ್ ಬೇಡವೆಂದೇ, ಎಷ್ಟೇ ಛಳಿಯಿದ್ದರೂ ಎರಡೆರಡು ಚಾದರ ಹೊತ್ತುಕೊಳ್ಳುತ್ತಾಳೆಯೇ ವಿನಹ ರಗ್ ತರಬೇಕೆಂದು ಹೇಳುವುದಿಲ್ಲ. ಅವಳ ಸುಖಕ್ಕಿಂತ ಹೆಚ್ಚು. ಹಠ ಹಾವಗಳೇ ಅವಳಿಗೆ ಅಪ್ಯಾಯಮಾನವಾಗಿದ್ದಾಗ ಇವರೇನು ಮಾಡಬೇಕು? ಆದದ್ದಾಯಿತೆಂದು ಸುಮ್ಮನಿರುದೊಂದೇ ದಾರಿ. ಆ ದಾರಿಯಲ್ಲೇ ಆ ಐದು ವರ್ಷ ಸಾಗಿಬಂದಿದ್ದರು.

ಎಷ್ಟೊಂದು ವರ್ಷ ಹೀಗೆ ಸಾಗಲು ಸಾಧ್ಯ. ಈ ಐದು ವರ್ಷ ಒಂದಕ್ಷರವೂ ಬರೆಯಲಿಲ್ಲ ತಾವು ತಮ್ಮಲ್ಲಿಯ ಲೇಖಕ ಕಣ್ಮರೆಯಾದನೇ? ತಮ್ಮ ಕ್ರಿಯಾಶೀಲತೆ ಸತ್ತೇ ಹೋಯಿತೆ? ಅಥವಾ ಅದಕ್ಕೆ ಅಕಾಲ ಮುಪ್ಪಡರಿತೆ? ವಿಚಾರಿಸಿ ಸಾಕಾಗಿ ಹೋಗಿತ್ತವರಿಗೆ. ಒಂದು ಕಡೆ ಹೀಗಾದರೆ ಇನ್ನೊಂದೆಡೆ ಯಾಕೆ ಬರೆಯುವುದಿಲ್ಲ? ಸ್ಪರ್ಧೆಗಳಿಗೆ ಕಥೆ ಕವನ ಯಾಕೆ ಕಳಿಸುತ್ತಿಲ್ಲ? ಎಂಬ ಸಾಹಿತ್ಯ ಮಿತ್ರರ ಕಳಕಳಿಯ ಪ್ರೇರಣೆ. ಕೊನೆಗೊಮ್ಮೆ ನಿರ್ಧಾರ; ಎರಡೂ ಪಕ್ಷದವರು ತಯಾರಿರದಿದ್ದರೆ ಜಗಳ ಹೇಗೆ ಸಾಧ್ಯ? ಮಾತಿಗೆ ಮಾತು ಮಥಿಸಿಲ್ಕೆ ವಿಧಿ ತಾ ಆತು ಕೂತಿರುತ್ತದೆಯಲ್ಲವೇ? ಮಾತಿಗೆ ಮಾತು ಎದುರಾಡದಿದ್ದರೆ, ವಾದಕ್ಕೆ ಪ್ರತಿವಾದ ಮಾಡದೇ ಹೋದರೆ ಜಗಳ ಮುಗಿದೇ ಹೋಗುತ್ತದೆ ಬಿರುಸು ಗೋಡೆಗೆ ಒಗೆದ ಚಂಡು ತಿರುಗಿ ಬರುವುದಿಲ್ಲದೇ ಕೆಸರೊಳಗೆ ಅಥವಾ ಮೆದೆಯೊಳಗೆ ಒಗೆದದ್ದು ಪ್ರತಿರೋಧವಿಲ್ಲದೇ ಅಲ್ಲೇ ಉಳಿಯುವಂತೆ ಈ ಜಗಳಾಟ ಕೂಡ. ಅವಳೇನೇ ಹೇಳಿದರೂ ಇವರು ಹೂಂ ಗುಟ್ಟಬೇಕು. ಇದು ಇವರ ಜಾಯಮಾನಕ್ಕೆ ಹೊಂದುವ ಮಾತಲ್ಲವಾದರೂ ಯಾರಾದರೊಬ್ಬರು ಹೊಂದಾಣಿಕೆ ಮಾಡಿಕೊಳ್ಳಬೇಕಲ್ಲವೇ. ಆದ್ದರಿಂದ ಜೀವನದಲ್ಲಿ ಅಪಘಾತ (ಆಕ್ಸಿಡೆಂಟ್) ತಪ್ಪಿಸಲು ಸಂದು, ಇವರೇ ಬೇರೆ ದಾರಿ ಹಿಡಿದಿದ್ದರು. ಪರಿಸ್ಥಿತಿಯೊಡನೆ ರಾಜಿ ಮಾಡಿಕೊಂಡಿದ್ದರು ತಮ್ಮ ಮನೇಚ್ಛೆಗೆ ವಿರುದ್ಧವಾಗಿ ಆದರೆ ಸುಗಮ ಜೀವನದ ಬಾಳ್ವೆಗಾಗಿ ಹಾಗೂ ಏನಾದರೂ ಸಾಧಿಸಬೇಕೆಂಬ ಹಂಬಲಕ್ಕಾಗಿ,

ಚಾಲಕ ಜೋರಾಗಿ ಬ್ರೇಕ್ ಹಾಕಿದಾಗ ವಾಸ್ತವಕ್ಕೆ ಬಂದರು. ಎದುರು ನೋಡಿದರೆ ದನಗಳ ಹಿಂಡು, ದಾರಿ ಬಿಡದ ಎಮ್ಮೆಗಳು, ಹಾರ್ನ್ ಯಾಕೆ ಬಾರಿಸ್ತೀಯಪ್ಪಾ, ಕೆಳಗೆ ತೊಗೋ, ಅವುಗಳದೇ ಈ ಹೆದ್ದಾರಿ, ಸುಮ್ಮನೆ ಅವುಗಳೊಡನೆ ಯಾಕೆ ಹಠ? ಹೀಗೆ ಅನ್ನುತ್ತಲೇ ತಮ್ಮ ಜೀವನದ ಮಾರ್ಗದ ಸಾರಾಂಶವನ್ನೇ ಆತನೊಡನೆ ಹಂಚಿಕೊಳ್ಳುತ್ತಿರುವರೆನೋ ಎಂಬಂತೆನಿಸಿ ಬಲದೇವ ತಮ್ಮಷ್ಟಕ್ಕೆ ತಾವೇ ನಕ್ಕರು. ಚಾಲಕ ಆಜ್ಞಾಪಾಲನೆ ಮಾಡಿ ಟಾರರೋಡ್ ಬಿಟ್ಟು ಕೆಳಗಿಳಿದು ಎರಡನೇ ದಾರಿ ಮಾಡಿಕೊಂಡು ಮತ್ತೆ ಮುಖ್ಯ ರಸ್ತೆಗೆ ಬಂದು ಕಾರು ಓಡಿಸತೊಡಗಿದ. ಈಗ ಬಿಸಿಲು ಹೆಚ್ಚಾಗಿತ್ತು. ದಾರಿಗೆ ಹಾಕಿದ ಕರಿ ಡಾಂಬರ್ ಕರಗುತ್ತ ಕರಗುತ್ತ ಬೆವೆತು ದಾರಿ ದಣಿದಂತೆ ಕಾಣಿಸತೊಡಗಿತ್ತು.

ತಾವು ಸುಗಮದಾರಿ ಹಿಡಿದು ಇಪ್ಪತ್ತೆಂಟು ವರ್ಷವಾಗಿ ಹೋದವು. ಈಗಲೂ ಅವಳು ತನ್ನ ನಡೆನುಡಿಯನ್ನು ಕಿಂಚಿತ್ತೂ ಬದಲಾಯಿಸಿಕೊಂಡಿಲ್ಲ. ಬಲದೇವರ ಮೌನ ಅವಳಿಗೆ ಗೆಲುವಿನ ಖುಷಿಯನ್ನು ಕೊಡುತ್ತದೆ. ಇವರ ನೋವು ಅನುಭವದ ಮೂಷೆಯಲ್ಲಿ ಬೆಂದು ಹೊಸ ಹೊಸ ಸಾಹಿತ್ಯ ಕೃತಿಗಳು ಹೊರಬಂದಿವೆ. ಆಗಾಗ ಪ್ರಶಸ್ತಿ ಬಹುಮಾನಗಳು ಬಂದಾಗ ಅಭಿಮಾನಿ ಮಿತ್ರರು ಸನ್ಮಾನ ಸತ್ಕಾರ ಮಾಡಿದಾಗ ಇವಳನ್ನೂ ಜೊತೆಯಲ್ಲೇ ಕರೆದುಕೊಂಡು ಹೋಗುತ್ತಾರೆ. ಬಲು ಖುಷಿ ಅವಳಿಗೆ, ಭರ್ಜರಿಯಾಗಿ ಬರುತ್ತಾಳೆ ಹೆಮ್ಮೆಯಿಂದ ಓಡಾಡುತ್ತಾಳೆ. ಕಾಣಿಕೆಗಳನ್ನು ಸ್ವೀಕರಿಸುವಾಗ ತಾನೇ ಲೇಖಕಿಯೇನೋ ಎಂಬಂತೆ ಬೀಗುತ್ತಾಳೆ.

ಇಂದು ಹೊರಟ ಕಾರ್ಯಕ್ರಮಕ್ಕೂ ಅಷ್ಟೇ ತಮಗೆ ಬಂದ ಅಕಾಡೆಮಿಯ ಪ್ರಶಸ್ತಿಗಾಗಿ ಹುಬ್ಬಳ್ಳಿಯಲ್ಲಿಯ ಹಳೆಯ ಗೆಳೆಯರು ಸತ್ಕಾರವಿಟ್ಟುಕೊಂಡಿದ್ದಾರೆ. ಹೆಂಡತಿ ನಿನ್ನೆಯೇ ಅಲ್ಲಿಗೆ ಹೋಗಿದ್ದಾಳೆ. ಇವರಿಗೆ ಅರವತ್ತು ವರ್ಷ ತುಂಬಿದ್ದಕ್ಕೆ "ಷಷ್ಟಬ್ದಿಪೂರ್ತಿ" ಸಮಾರಂಭವೂ ಈ ಸತ್ಕಾರದ ಒಂದು ಅಂಗವಾಗಿದೆ. ಅವಳು ಯಾರದೋ ಮನೆಯಲ್ಲಿರುವುದಾಗಿ ಹೇಳಿ ಹೋಗಿದ್ದಾಳೆ. ಇವರಿಗೆ ಆ ಹೆಸರು ಕೂಡಾ ತಕ್ಷಣ ನೆನಪಾಗುತ್ತಿಲ್ಲ. ಹಾ! ವೇರ್ಣೆಕರ ಅವರ ಮನೆ. ಆ ದಂಪತಿಗಳಿಬ್ಬರೂ ಇವರ ಅಭಿಮಾನಿ ಓದುಗರು. ಪತ್ರಿಕೆಗಳಲ್ಲಿ ಕಥೆ ಕವನ ಲೇಖನಗಳು ಬಂದಾಗಲೆಲ್ಲ ಫೋನ್ ಮಾಡಿ ಹೇಳುವವರು. ತಾನೇ ಬರೆಯಿಸಿದವಳೇನೋ ಎಂಬಂತೆ ಕೆಲಸಾರೆ ತಾನೊಬ್ಬಳೇ ಮಾತನಾಡಿ ಫೋನ್ ಇಟ್ಟು ನಂತರ ತಮ್ಮೊಡನೆ ಅವರು ಹಾಗೆ ಹೇಳಿದರು. ಹೀಗೆ ಹೇಳಿದರು ಎಂದು ಉಬ್ಬುಬ್ಬಿ

ಹೇಳುತ್ತಿದ್ದಳು. ಅದಕ್ಕೆಲ್ಲ ತಾನೇ ಕಾರಣಕರ್ತೆಯಾದಂತೆ ಕೊರೆಯುತ್ತಿದ್ದಳು. ಇದೆಲ್ಲ ಬಲದೇವರಿಗೆ ಈಗೀಗ ರೂಢಿಯಾಗಿ ಹೋಗಿದೆ.

"ಅತ್ತಿಮಬ್ಬೆ" ಪ್ರಶಸ್ತಿ ಬಗ್ಗೆ ಪೇಪರಿನಲ್ಲಿ ಓದಿ "ಯಾರ್ರಿ ಇವಳು ಬಹಳ ದೊಡ್ಡ ಸಾಹಿತಿಯೇನು? ಅದೇ ಹೆಸರಿನಲ್ಲಿ ಪ್ರಶಸ್ತಿ ಇಡಬೇಕೆಂದರೆ" ಎಂದು ತನ್ನ ಅಜ್ಞಾನ ಪ್ರದರ್ಶಿಸಿದ್ದಳು. ಇವಳು ತನ್ನೂರಿನ ಪಕ್ಕದ ಲಕ್ಕುಂಡಿಯವಳೆನ್ನುವದೂ ಗೊತ್ತಿರದ ಪೆದ್ದಿಯಾಗಿದ್ದರೂ ಏನನ್ನೂ ಅನ್ನದೇ (ಎಂದಿನಂತೆ) ಅತ್ತಿಮಬ್ಬೆ ಬಗ್ಗೆ ವಿವರಿಸಿ ರನ್ನನಂತಹ ಮಹಾಕವಿಗೆ ಆಶ್ರಯದಾತಳಾಗಿದ್ದುದನ್ನು ವಿವರಿಸಿ ಸುಮ್ಮನಾಗಿದ್ದರು. ಕೊನೆಗೆ "ನನಗೆ ನೀನಿದ್ದಂತೆ" ಎಂಬ ಹುಸಿ ಅಸ್ತ್ರ ಬಿಟ್ಟಿದ್ದರು. ಅವರಿಗೆ ಗೊತ್ತು ಈ ಮಾತು ಕನಿಷ್ಠ ಎರಡು ದಿನವಾದರೂ ತಮಗೆ ಶಾಂತಿಯನ್ನು ಅವಳ ನಡುವಳಿಕೆಯಲ್ಲಿ ಕೊಡುತ್ತದೆಂದು.

ಹುಬ್ಬಳ್ಳಿ ಸಾಹಿತ್ಯ ವೇದಿಕೆಯವರು ಸಮಾರಂಭವನ್ನು ಚೆನ್ನಾಗಿಯೇ ಹಮ್ಮಿಕೊಂಡಿದ್ದಾರೆ ನೂರಾರು ಜನ ಸೇರಿಸಿದ್ದಾರೆ. ತಾವು ಹಿಂದೆ ಇಲ್ಲಿದ್ದಾಗ ಅನೇಕರಿಗೆ ಕೆಲಸ ಮಾಡಿಕೊಟ್ಟು, ಸಹಾಯ ಮಾಡಿದ್ದು ಅವರು ನೆನಪಿಟ್ಟುಕೊಂಡಂತೆ ಕಾಣುತ್ತದೆ. ಇವರು ಹೋಗುವದರೊಳಗಾಗಿ ಹೆಂಡತಿ ಆಗಲೇ ಅಲ್ಲಿ ಹಾಜರಾಗಿದ್ದಾಳೆ ಭರ್ಜರಿ ದಡಿಯ ಸೀರೆ ಅದಕ್ಕೊಪ್ಪುವ ಬ್ಲೌಜ ಹಾಕಿ ಕೂದಲನ್ನು ಎತ್ತಿ ಕಟ್ಟಿ ಗಂಟು ಮಾಡಿ ಒಳ್ಳೆ ಮಾಡೆಲ್ ತರ ತುರುಬು ಕಟ್ಟಿಕೊಂಡಿದ್ದಾಳೆ. ಅದಕ್ಕಾಗಿ ಅವಳು ಬ್ಯೂಟಿ ಪಾರ್ಲರಿಗೆ ಹೋಗಿ ಹೇರ್ ಡ್ರೆಸಿಂಗ್‌ಗಾಗಿ ನೂರೈವತ್ತು ಬಡೆದಿದ್ದಾಳೆಂದು ಅವರಿಗೆ ಗ್ಯಾರಂಟೀಯಾಯಿತು. ನೋಡಿ ಮುಗಳ್ನಕ್ಕು ಮುನ್ನಡೆದು ಬೇರೆಯವರನ್ನು ಮಾತನಾಡಿಸಬೇಕೆಂದರೂ ತಾನೇ ಅವರ ಕೈ ಹಿಡಿದು ಮುಂದು ಮುಂದಾಗಿ ಒಬ್ಬೊಬ್ಬರನ್ನೇ ಭೆಟ್ಟಿ ಮಾಡಿಸಹತ್ತಿ ಅವರು ಅಭಿನಂದನೆಗಳನ್ನು ಹೇಳಿದಾಗ ತಾನೇ ಪ್ರತಿಯಾಗಿ ಥ್ಯಾಂಕ್ಯೂ ಎಂದು ಬಾಗಿ ಬಾಗಿ ಕೈ ಕುಲುಕಿ ಮೈಯೆಲ್ಲ ಕುಣಿಸುತ್ತಾಳೆ. ಯಾರೋ ಒಬ್ಬರು "ಮೇಡಂ ಈಗಲಾದರೂ ಕೈಬಿಡ್ರಿ ಪಾಪ ಸರ್‌ಗೆ ಸ್ವಲ್ಪ ಸ್ವಾತಂತ್ರ್ಯ ಕೊಡಿ" ಎಂದು ಚಟಾಕಿ ಹಾರಿಸಿದಾಗ ಇವಳು ಮತ್ತೂ ಉಬ್ಬಿ ಹೋದಳು. ಗಂಡ ತನ್ನ ಮಾತು ಕೇಳುವುದು ಇವರಿಗೂ ತಿಳಿದೇ ಹೋಯಿತೆ ಎಂದು ನಾಚಿಕೆ ಪಟ್ಟುಕೊಳ್ಳಲೇಯಿಲ್ಲ.

ಸಮಾರಂಭ ಪ್ರಾರಂಭವಾಯಿತು. ವೇದಿಕೆ ಮೇಲೆ ಸತ್ಕಾರಮೂರ್ತಿ ಬಲದೇವ ಹಾಗೂ ಅವರ ಧರ್ಮಪತ್ನಿ ಇಬ್ಬರಿಗೂ ಮಧ್ಯದಲ್ಲಿ ಕೂಡ್ರಿಸಿದ್ದಾರೆ. ಪಕ್ಕದಲ್ಲಿ ಸಮಾರಂಭದ ಅಧ್ಯಕ್ಷರಾಗಿ ಹಿರಿಯ ಅಂಕಣಕಾರರೊಬ್ಬರಿದ್ದರೆ, ಪರಿಚಯ ಭಾಷಣ ಅವಶ್ಯವಿಲ್ಲವೆನ್ನುತ್ತಲೇ ಇವರು ಹುಟ್ಟಿದಂದಿನಿಂದ ಹಿಡಿದು ಇಂದಿನ ಷಷ್ಟಬ್ದಿ ಹಾಗೂ ಸನ್ಮಾನ ಸಮಾರಂಭವೆರಡರವರೆಗೂ ಒಬ್ಬರು ವಿವರಿಸಿ ಹೇಳಿ ಹೋದರು. ಇನ್ನು ಮಾಲಾರ್ಪಣೆ, ಒಬ್ಬೊಬ್ಬರಾಗಿ ಬಂದು ಹಾರ ಹಾಕತೊಡಗಿದರು. ಕೊನೆಗೆ ಸಂಘಟಕರಿಂದ ದಂಪತಿಗಳಿಬ್ಬರಿಗೂ ಕೂಡಿಯೇ ಹಾಕಲು ದೊಡ್ಡದೊಂದು ಗುಲಾಬಿಯ ಮಾಲೆ, ಮತ್ತೆ ವ್ಯಾಖ್ಯಾನ ಹಿನ್ನೆಲೆಯಿಂದ, ಹೇಳುತ್ತ ಹೇಳುತ್ತ ತಕ್ಷಣ ಮಾಲಿ ತೆಗೆಯಬಾರದೆಂದೂ ಫೋಟೋಕ್ಕೆ ಅನುಕೂಲ ಮಾಡಬೇಕೆಂದೂ ವಿನಂತಿಸಿದರು. ಬಲದೇವರು ಸಹಕರಿಸತೊಡಗಿದರು. ಆದರೆ ವಿವರಣೆಯಲ್ಲಿ ಪ್ರತಿ ಪುರುಷನ ಜಯದ ಹಿಂದೆ, ಸಾಧನೆಯ ಹಿಂದೆ ಸ್ತ್ರೀಯೊಬ್ಬಳಿರುತ್ತಾಳೆಂದೂ ಆ ಪಾತ್ರವನ್ನಿಲ್ಲಿ ಇಂದಿನ ಸಮಾರಂಭದಲ್ಲಿ ಭಾಗಿಯಾಗಿ ಬಲದೇವರ ಜೊತೆ ದೊಡ್ಡ ಗುಲಾಬಿ ಮಾಲೆಯಲ್ಲಿ ನಿಂತುಕೊಂಡ ಅವರ ಧರ್ಮಪತ್ನಿ ಬಲು ಸಮರ್ಥವಾಗಿ ನಿರ್ವಹಿಸಿದ್ದಾರೆಂದೂ ಇವರ ಬರಹಕ್ಕೆ ಅವರೇ ಪ್ರೇರಣಾ ಶಕ್ತಿಯೆಂದು ಇನ್ನೂ ಏನೇನು ಹೇಳುತ್ತಿದ್ದರೋ ಕೇಳಿಸಿಕೊಳ್ಳುತಿದ್ದ ಬಲದೇವರಿಗೆ ಮೈಯಲ್ಲಿ ಯಾವುದೋ ವಿಚಿತ್ರ ಶಕ್ತಿ ಸಂಚಾರವಾದಂತೆನಿಸಿ "ಅಲ್ರಿ ಅತ್ತಿಮಬ್ಬೆ ಇದ್ದಂಗ ಅಂತ ಅನಲಿಲ್ಲರೀ ಅವರು" ಎಂದು ಅವಳು ಇವರ ಕಿವಿಯಲ್ಲಿ ಉಸುರುತ್ತಿದ್ದುದನ್ನು ಕೇಳಿಯೂ ಕೇಳಿಸಿಕೊಳ್ಳದವರಂತೆ, ಫೋಟೋದ ಹುಡುಗ ಬೇಡ ಹಾಗೆಯೇ ಇರಲಿ ಎಂದರೂ ಕಿವಿಗೆ ಹಾಕಿಕೊಳ್ಳದೇ ಕೊರಳೊಳಗಿನ ಮಾಲೆಯನ್ನು ನಿಂತಲ್ಲಿಂದಲೇ ತಕ್ಷಣ ತೆಗೆದು ಮೇಜಿನ ಮೇಲಿಟ್ಟು ಕುಳಿತುಕೊಂಡು ಬಿಟ್ಟರು. ಅವರ ಈ

ಮೌನ ಪ್ರತಿಭಟನೆ ಅಲ್ಲಿ ಯಾರ ಗಮನಕ್ಕೂ ಬಾರದೇ ಹೋಯಿತು. ಆದರೆ ಬಲದೇವರಿಗಂತೂ ತಾವು ಆಯ್ದುಕೊಂಡ ಅರ್ಥಪೂರ್ಣ ಎರಡನೆಯ ದಾರಿ ನಿಚ್ಚಳವಾಗಿಯೇ ಕಾಣುತ್ತಿತ್ತು.

❖

# ಮುತ್ತೆದೆ

ಅಥಣಿಯ ಆ ಹಳೆಯ ಡಾಕ್ ಬಂಗ್ಲೆಯ ದಪ್ಪನೆಯ ಕಟ್ಟಿಗೆ ಮಂಚದ ಮೇಲೆ ಅಂಗಾತ ಮಲಗಿದ ಸುರೇಶ ಒಮ್ಮೆ ಛತ್ತನ್ನು ತದೇಕ ದೃಷ್ಟಿಯಿಂದ ನೋಡಿದ. ಕನಿಷ್ಟ ಏನಿಲ್ಲೆಂದರೂ ಇಪ್ಪತ್ತೈದು ಫೂಟು ಎತ್ತರ. ಒಳಭಾಗಕ್ಕೆಲ್ಲ ಸಾಗವಾನಿ ಫಳಿಗಳ ಜೋಡಣೆ, ಬೇಸಿಗೆಯ ಬಿಸಿಲಿಗೆ ಮೇಲೆ ಹೊದಿಸಿದ ಕೆಂಪು ಹೆಂಚುಗಳು ಕಾಯ್ದು, ಝಳ ಕೋಣೆಯೊಳಗೆ ನುಗ್ಗದಿರಲಿ ಎಂದು ಹೊಂದಿಸಿದ ಆ ಪರಿ ನಿಜಕ್ಕೂ ಆತನ ಮನ ಸೆಳೆಯಿತು. ನಾಲ್ಕು ಗೋಡೆಗಳ ನಾಲ್ಕೂ ಮೂಲೆಯ ಮೇಲೆ ನಾಲ್ಕು ಗಟ್ಟಿ ಮುಟ್ಟಾದ ತೊಲೆಗಳು, ಮತ್ತೆ ಅವುಗಳು ಕೂಡುವ ಜಾಗೆಯಲ್ಲಿ ತ್ರಿಕೋಣಾಕೃತಿಯ ಮತ್ತೆರಡು ತೊಲೆಗಳು, ನಡುವೆ ಈ ಎಲ್ಲ ತೊಲೆಗಳನ್ನು ಬಂಧಿಸಿಡುವ ಎಂಟ್ಹತ್ತು ಚಿಕ್ಕ ಚಿಕ್ಕ ರಾಫ್ಟರ್‌ಗಳು. ಎಲ್ಲಿಯೂ ಒಂದು ಕಿಂಡಿಯಾಗಲಿ, ಕಟಿಗೆ ಸೊಟ್ಟಾಗಿದ್ದಾಗಲಿ, ಜರಿದದ್ದಾಗಲೀ ಇಲ್ಲವೇ ಇಲ್ಲ! ಬಂಗ್ಲೆಯನ್ನು ಪ್ರವೇಶಿಸಿದೊಡನೆ ಎದುರಿಗೆ ಕಾಣುವ ನಸುಗೆಂಪು ಕಲ್ಲಿನ ಮೇಲೆ 1898 ಎಂದು ಬರೆದ ಕರಿ ಬರಹ. ಈಗ್ಗೆ ನೂರು ವರ್ಷಗಳ ಹಿಂದೆ ಕಟ್ಟಿದ ಕಟ್ಟಡ! ದಪ್ಪನೆಯ ಗೋಡೆಗಳು, ಅಷ್ಟೇ ಬಲವಾದ ಬಾಗಿಲು ಕಿಡಕಿಗಳ ಚೌಕಟ್ಟುಗಳು, ಹಿತ್ತಾಳೆಯ ದಪ್ಪನೆಯ ಚಿಲಕ ಕೊಂಡಿಗಳು ಅದೇನು ಕೌಶಲವೋ ಅದೇನು ಕಾಳಜಿಯೊ ಅದೇನು ಬ್ರಿಟಿಷರ ಪ್ರಾಮಾಣಿಕತೆಯೊ ಎಂದಂದುಕೊಂಡ ಸುರೇಶ. ಬ್ರಿಟಿಷರಷ್ಟೇ ಯಾಕೆ? ಹಳೆಯ ಮೈಸೂರಿನಲ್ಲಿ ಹೋದಾಗ ತಾನು ನೋಡಿದ ಮೈಸೂರು ಅರಸರ, ಟಿಪ್ಪುಸುಲ್ತಾನನ ಹಳೆಯ ಕಟ್ಟಡಗಳು ಇನ್ನೂ ಹೊಚ್ಚ ಹೊಸತಾಗಿಯೇ ಇಲ್ಲವೇ? ಹೀಗೆಯೇ ಆತನ ವಿಚಾರ ಸರಣಿ ಇತಿಹಾಸದ ಹಿಂದೆ ಹಿಂದೆ ಹರಿಯತೊಡಗಿತು.

ಪಕ್ಕದ ಬಿಜಾಪುರ ಜಿಲ್ಲೆಯ ಬಾದಾಮಿ, ಐಹೊಳೆ ಪಟ್ಟದಕಲ್ಲು ಮೇಲೆ ಗೋಲಗುಮ್ಮಟ ಹೀಗೆ ಒಂದೊಂದೇ ಎದ್ದು ಬಂದು ಆತನ ಮನಸಿನೊಳಗೆ ಮೆರೆಯತೊಡಗಿದವು. ನಮ್ಮ ಇತಿಹಾಸವೇ ಎಷ್ಟೊಂದು ಸುಂದರ ಎಂದಂದುಕೊಂಡಾಗಲೇ ಆತನಿಗೆ ಹಳೆಯದೆಲ್ಲವೂ ಸುಂದರವೇ ಅಲ್ಲವೇ ಅದಕ್ಕಾಗಿಯೇ ಇಂಗ್ಲೀಷಿನಲ್ಲಿ "ಓಲ್ಡ್ ಈಸ್ ಗೋಲ್ಡ್" ಎಂಬ ಮಾತು ಚಾಲ್ತಿಯಲ್ಲಿ ಬಂದಿರಬೇಕು ಎನಿಸಿತು. ಹಳೆಯ ಪುಸ್ತಕ, ಹಳೆಯ ಗೆಳೆಯ ಹಾಗೂ ಹಳೆಯ ವೈನ್ ಇವೆಲ್ಲ ಬಹಳ ಅಪ್ಯಾಯಮಾನವಾದವುಗಳೆಂಬುದು ಇನ್ನೂ ಒಂದು ಗಾದೆ ಹೇಳುತ್ತದೆ. ಅಷ್ಟೇ ಏಕೆ ಇತಿಹಾಸವನ್ನು ಮರೆಯುವವನು ಹೊಸ ಇತಿಹಾಸವನ್ನು ನಿರ್ಮಿಸಲಾರ ಎಂದು ಅಂಬೇಡ್ಕರ್ ಅವರೇ ಹೇಳುತ್ತಿರಲಿಲ್ಲವೇ? ಡಿ.ವಿ.ಜಿ. ಯವರಂತೂ ಎಷ್ಟೊಂದು ಸೊಗಸಾಗಿ "ಹೊಸ ಚಿಗುರು ಹಳೇಬೇರು ಕೂಡಿರಲು ಮರ ಸೊಬಗು... ಋಷಿ ವಾಕ್ಯದೊಡನೆ ವಿಜ್ಞಾನ ಮೇಳವಿಸೆ ಜಸವು ಜನಜೀವನಕೆ ಮಂಕತಿಮ" ಎಂದು ಹಾಡಿಲ್ಲವೇ? ಅಂದರೆ ಹಿಂದಿನದನ್ನು ಮರೆಯಕೂಡದು ಎಂದಾಯಿತಲ್ಲವೇ? ಯಾಕೋ ಏನೋ ಅನೇಕ ಹಳೆಯ ವಸ್ತುಗಳು ಘಟನೆಗಳು ಹಾಗೆಯೇ ಜನಗಳ ನೆನಪುಗಳು ತಂಡ ತಂಡವಾಗಿ ಮನದಲ್ಲಿ ಉಕ್ಕೇರಿ ಬರತೊಡಗಿದವು.

ಮನಸಿನೊಳು ನಡೆದ ಈ ಹಳೆ ನೆನಪುಗಳ ಹಿಂದಿನಿಂದ ಯಾವುದೋ ಒಂದು ವ್ಯಕ್ತಿ ಎಲ್ಲೋ ಒಂದು ಮೂಲೆಯಿಂದ ಎದ್ದು ನುಸುನುಸುಳಿ ಜಾಗ ಮಾಡಿಕೊಂಡು ನೇರವಾಗಿ ಹೃದಯಕ್ಕೆ ಲಗ್ಗೆ ಇಡಬೇಕೆ? ಓ ದೇವೀರಮ್ಮ! ಯಾಕೆಂದು ತನಗೇ ತಿಳಿಯುತ್ತಿಲ್ಲ. ಎಲ್ಲವನ್ನೂ ಸರಸಿ ಇಡೀ ಹೃನ್ಮನಗಳನ್ನು ಆವರಿಸಿಕೊಳ್ಳುತ್ತಿದ್ದಾಳಲ್ಲ ಯಾಕೆ? ಬಹುದಿನಗಳಿಂದ ತಾನು ಅವಳನ್ನು ನೋಡಲು ಹೋಗದಿದ್ದುದರಿಂದಲೇ? ಅಥವಾ ತಾಯಿಯ ಒತ್ತಾಯಕ್ಕೆಂದೇ ಈಗ ಅವಳನ್ನು ಭೇಟಿ ಮಾಡುತ್ತಿರುವುದರಿಂದಲೇ? ಎಲ್ಲ ಗೋಜಲು ಗೋಜಲು.

ಅಜ್ಜಿಯ ನೆನಪು ಅಡರಿಕೊಂಡಂತೆಯೇ ಸುರೇಶ ಮೇಲೆದ್ದು ಕುಳಿತುಕೊಂಡ. ಇತಿಹಾಸದ ಅಮಲಿನಿಂದ ಹೊರಬಂದ ಹಳೆಯ ನೆನಪುಗಳ ಪಳಿಯುವಳಿಕೆಗಳನ್ನು ಹಿಂದೆ ಸರಿಸಿ ವಾಸ್ತವದ ವಸ್ತುಗಳನ್ನು ಆಯ್ದುಕೊಳ್ಳತೊಡಗಿದ. ದೇವೀರಮ್ಮನಿಗೆ ಈಗ ಎಂಭತ್ತು ಸಮೀಪಿಸುತ್ತಿರಬಹುದು. ವಯಸ್ಸು ಕೇಳಿದವರಿಗೆ ನಾಕಿಪ್ಪತ್ತು ಆಗಿರಬೇಕು ಎನ್ನುತ್ತಾಳೆ. ಉಪ್ಪಿನ ಸತ್ಯಾಗ್ರಹದಲ್ಲಿ ಗಾಂಧೀಜಿಯವರೊಡನೆ ಭಾಗವಹಿಸಲು ಮೈಲಾರ ಮಹಾದೇವಪ್ಪ ಹೊರಟಾಗ ತನಗೆ ಎರಡು ಮಕ್ಕಳಾಗಿದ್ದವೆಂದೂ ಆಗ ತನ್ನ ವಯಾ ಒಂದಿಪ್ಪತ್ತು ಎಂದೂ ನೆನಪಿಟ್ಟು ಹೇಳುತ್ತಾಳೆ. ಆಮೇಲೆ ಹೆಣ್ಣನ್ನೇ ಹಡೆದು ಕಲ್ಲಾಗಿ ಬಿಟ್ಟಳು ದೇವಿರಮ್ಮ. ಮೂರು ಹೆಣ್ಣಿನ ಮೇಲೆ ಒಂದು ಗಂಡು ಮಗುವಾದರೆ ಬಹಳ ಒಳ್ಳೆಯದೆಂದು ಅವಳ ಮುದಿ ಅತ್ತೆ ಎಂಭತ್ತು ವರುಷ ಜೀವ ಹಿಡಿದುಕೊಂಡಿದ್ದರೂ ಆ ಭಾಗ್ಯ ದೇವೀರಮ್ಮನದಾಗಲೇ ಇಲ್ಲ.

ತಾನು ಮೂರು ಹೆಣ್ಣು ಹಡೆದದ್ದೊತ್ತಟ್ಟಿಗಿರಲಿ ತನ್ನ ಮೊದಲ ಇಬ್ಬರು ಹೆಣ್ಣು ಮಕ್ಕಳೂ ಬರೀ ಮೂರು ನಾಲ್ಕು ಹೆಣ್ಣೇ ಹಡೆಯಬೇಕೆ? ಈಗಿನಂತೆ ಹೆಣ್ಣು ಗಂಡು ಎರಡೂ ಒಂದೇ. ಇನ್ನೂ ಹೆಣ್ಣಾದರೆ ಚಿಂತೆ ಕಡಿಮೆ. ಚೆನ್ನಾಗಿ ಓದಿದರೆ ಡಾಕ್ಟರನ್ನಾಗಿ ಮಾಡಬಹುದು, ಇಲ್ಲವಾದರೆ ಡಾಕ್ಟರರನ್ನೋ ಇಂಜಿನೀಯರನ್ನೋ ಹುಡುಕಿ ಮದುವೆ ಮಾಡಬಹುದು. ಗಂಡುಮಗನಾದರೆ ಓದಿಸಬೇಕು. ಆಸ್ತಿ ಮಾಡಿಕೊಡಬೇಕು. ಜೀವಿತವಿರುವವರೆಗೂ ಆತನ ಕಾಳಜಿ ಮಾಡುತ್ತಿರಬೇಕು. ಆತ ಬೇರೆ ತನ್ನ ಮದುವೆ ಆದ ಮೇಲೆ ಹೆಂಡತಿಯ ಕೈಗೊಂಬೆಯಾಗಿಬಿಟ್ಟರಂತೂ ಹೇಳಲಾಗದು ಆ ನೋವನ್ನು ಯಾಕೆ ತನಗೆ ಹೆಣ್ಣು ಹಡೆಯುವುದೇ ಉತ್ತಮವೆಂದೆನಿಸುತ್ತಿದೆ? ಕಾರಣ ಸ್ಪಷ್ಟ. ದೇವೀರಮ್ಮನ ವಂಶವಾಹಿನಿಯಲ್ಲಿ ತಾನೇ ಅಲ್ಲವೆ ಮೊದಲ ಗಂಡು ಸಂತಾನ! ತನ್ನ ಹುಟ್ಟಿನ ಬಾಣಂತನಕ್ಕೆ ತನ್ನ ತಾಯಿ ತವರಿನಲ್ಲಿದ್ದಾಗ ತನ್ನನ್ನು ಹೆತ್ತೊಡನೆ ಅಜ್ಜಿ ಮೂರ್ಹೆಜ್ಜೆ ಒಮ್ಮೆಲೆ ಜಿಗಿದದ್ದು ಆ ಮೇಲೆ ರಾತ್ರಿಯಿಡೀ ಜೋಳಿಗೆಯಲ್ಲಿ ಹಾಕಿ ತೂಗುತ್ತಾ ನಿದ್ರೆ ಮಾಡದೇ ಹಾಗೆ ದೀಪದ ಮಂದ ಬೆಳಕಿನಲ್ಲಿ ತನ್ನನ್ನು ನೋಡುತ್ತ ತುಸು ಒದ್ದೆಯಾದರೂ ತಕ್ಷಣ ಅರಿವೆ ಬದಲು ಮಾಡಿ, ಹೊತ್ತಿಗೆ ಸರಿಯಾಗಿ ಎಣ್ಣೆ ಹಚ್ಚಿ ತಿಕ್ಕಿ ತೀಡಿ ಹಿತವಾದ ಬಿಸಿನೀರಿನಿಂದ ಬಿಸಿನೀರಿನಿಂದ ಎರೆದು….. ಎಷ್ಟೊಂದು ಆರೈಕೆ. ಅಂದಾಜು ಮೂರು ತಿಂಗಳು ಐವತ್ತು ವರ್ಷದ ಅಜ್ಜಿ ಇಪ್ಪತ್ತೈದವರವಳಂತೆ ಓಡಾಡಿದ್ದು, ತನ್ನನ್ನು ಉಪಚರಿಸಿ ಬೆಳೆಸಿದ್ದು ಆಮೇಲೆಯೂ ಅಷ್ಟೇ ತನ್ನೂರಿಗೆ ಬಂದಳೆಂದರೆ ಇಲ್ಲವೇ ಸುರೇಶನೇ ದೇವೀರಮ್ಮನ ಮನೆಗೆ ಹೋದಾಗಲೋ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುವ ರೀತಿ ಎಲ್ಲ ಹಸಿರಾಗೇ ಮನದಲ್ಲಿ ಉಳಿದುಕೊಂಡು ಈಗೇಕೆ ಮರುಕಳಿಸುತ್ತಿದೆ? ಇಷ್ಟೆಲ್ಲಾ ಉಪಚರಿಸಿ ಬೆಳೆಸಿದ ಅಜ್ಜಿಯನ್ನು ತಾನು ಹೇಗೆ ನೋಡಿಕೊಂಡೆ? ಈ ಪ್ರಶ್ನೆಗೆ ಆತನಲ್ಲಿ ಉತ್ತರ ಸಿಗದಾಯ್ತು. ಅದಕ್ಕಾಗಿಯೋ ಏನೋ ಆತನ ಒಳಮನಸ್ಸು, ಅಂತರಾತ್ಮ, ತನ್ನಂತಹ ಗಂಡು ಹುಟ್ಟುವುದಕ್ಕಿಂತಲೂ ಉಪಕಾರ ಸ್ಮರಿಸುವ ಋಣ ತೀರಿಸುವ ಹೆಣ್ಣು ಮಕ್ಕಳಾಗುವುದೇ ಲೇಸೆಂದು ನಿರ್ಣಯಿಸುತ್ತಿದೆಯೇನೋ ಎಂಬುದು ಆತನಿಗೆ ತುಸು ತಡವಾಗಿ ಹೊಳೆಯತೊಡಗಿತು.

ದೇವೀರಮ್ಮನಿಗೆ ಆರಾಮವಿಲ್ಲ ಎಂಬ ಸುದ್ದಿ ತನಗೆ ಬಂದದ್ದು ಯಾವಾಗ? ಎರಡು ತಿಂಗಳಾಯಿತಲ್ಲವೇ? ತನಗೆ ತನ್ನ ಪ್ರಾಕ್ಟೀಸೇ ಹೆಚ್ಚಾಯಿತೇ ಹೊರತು….. ಛೇ ಈಗ ಹೋಗಿ ತಾನು ಮಾಡುವುದಾದರೂ ಏನು? ಆಕೆ ಎಷ್ಟೊಂದು ಸಾರೆ ತನ್ನೆದುರು ತೋಡಿಕೊಂಡಿಲ್ಲ ತನ್ನ ಅಳಲನ್ನು? ನಾನಿರಬಾರ್ದಪ್ಪಾ ಆ ದೇವರು ಆದಷ್ಟು ಬೇಗ ಕರಕೊಂಡು ಹೋಗಬೇಕು. ನಿಮ್ಮ ಅಜ್ಜಾರನ್ನು ಒಯ್ಯುವ ಮೊದಲು ನನ್ನ ಕಣ್ಣುಮುಚ್ಚಿಸಿದ್ರೆ ಸಾಕು ಎಂದು ಹಲವಾರು ಸಲ ನಿಡುಸುಯ್ದಿದ್ದಳು. ಮುತ್ತೈದೆಯಾಗಿಯೇ ಸಾಯಬೇಕೆಂದು ಆಕೆ ಹಪಹಪಿಸುತ್ತಿರುವುದು ಸುರೇಶನಿಗೆ ಸ್ಪಷ್ಟವಾಗಿತ್ತು. ಹೆಣವಾದ ಮೇಲೂ ಹಸಿರು ಬಳೆ, ಕೆಂಪು ಕುಂಕುಮ, ಗಲ್ಲದ ತುಂಬ ಅರಿಷಿಣ ಹಚ್ಚಿಕೊಂಡೆ ಇರಬೇಕೆಂಬ ಅಭಿಲಾಷೆ. ಈ ಸಾಮಗ್ರಿಗಳೇ ತನಗೆ ಸ್ವರ್ಗಕ್ಕೆ ಸೋಪಾನ ತೋರಿಸಬಲ್ಲವೆಂಬ ಮೂಢ ನಂಬಿಕೆ. ಯಾಕೋ ಇಲ್ಲಿ ಪುರುಷನ ಕ್ರೌರ್ಯವೇ ಆತನಿಗೆ ಎದ್ದು ಕಾಣತೊಡಗಿತು. ಹೆಂಡತಿಗಿಂತಲೂ ಗಂಡನೇ ಹಿರಿಯನಾಗಿದ್ದರೂ ಕಿರಿಯಳಾದ ಅವಳೇ ಮೊದಲು ಸಾಯುವುದೆಂದರೆ….. ಇದು ಭಂಡ ಗಂಡು ಮಾಡಿಟ್ಟ ಪರಿಪಾಠ. ಅದನ್ನು ತಿರಸ್ಕರಿಸಬೇಕೆಂದು

ದೇವಿರಮ್ಮನಿಗೆ ಬುದ್ಧಿ ಹೇಳಬೇಕೆಂದುಕೊಂಡ. ಹಾಗಿದ್ದರೆ ತಾನ್ಯಾಕೆ ದೌಡಾಯಿಸಿ ಬಂದು ಆಕೆಯನ್ನು ಉಪಚರಿಸಲಿಲ್ಲ? ಆಕೆಯ ಉತ್ಕಟೇಚ್ಛೆಗೆ ಅನುಕೂಲ ಮಾಡಿಕೊಡಲು ಅಂದರೆ ಆಕೆ ಬೇಗ ಸಾಯಲು ಅನುವು ಮಾಡಿಕೊಡಲು ತನ್ನ ನಿರ್ಲಕ್ಷವೇ ಒಂದು ಉದಾರತೆ ಅಲ್ಲವೇ? ಎಂದು ಒಮ್ಮೆ ಅನಿಸಿಯೂ ಬಿಟ್ಟಿತು. ಆದರೆ ತನ್ನ ನಿರ್ದಯಿ ಉದಾಸೀನತೆಯನ್ನು ಉದಾರತೆ ಎಂದು ರೂಪಾಂತರಿಸುವ ಆ ಅಪೌರುಷ ಗಂಡಸುತನ ಆತನಿಗೇ ಹೇಸಿಕೆಯನ್ನುಂಟು ಮಾಡಿತು. ಈ ಪರಿಯ ನಿರ್ಲಕ್ಷ್ಯ ಕೇವಲ ಗಂಡಿಗೆ ತಾನೇ ಸಾಧ್ಯ. ಆ ಗಂಡಿನ ಗುಂಡಿಗೆ ಮಾತ್ರ ಹೀಗೆ ಬಂಜೆಯಾಗಿರಲು ಸಾಧ್ಯವಲ್ಲವೇ? ಹೆಣ್ಣಿಗೆ ಕರುಣೆಯೇ ಸಹಜಗುಣ, ಅನುಕಂಪವೇ ನಿಜ ಲಕ್ಷಣ. ಹೀಗೆನ್ನುತ್ತಾ ಆತ ತನ್ನನ್ನು ತಾನು ಸಮರ್ಥಿಸಿಕೊಳ್ಳದಾದ. ತಪ್ಪಿಗೆ ಒಪ್ಪಿಕೊಂಡವನಂತೆ ಪುನಃ ಪುನಃ ದೇವೀರಮ್ಮನ ಬಗ್ಗೆಯೇ ಯೋಚಿಸುತ್ತ ನೆನಪಿನ ಉಪಕಾರ ಸ್ಮರಣೆ ಮಾಡತೊಡಗಿದ.

ತನಗೆ ಮೆಡಿಕಲ್ ಸೀಟು ಸಿಕ್ಕಾಗ ತನ್ನೂರಿಗೆ ಬರಗಾಲ ಬಿದ್ದಿರಲಿಲ್ಲವೇ? ಅಜ್ಜಿಯೇ ಅಲ್ಲವೇ ಹತ್ತು ತೊಲೆ ವಂಕಿಯನ್ನು ಮಾಡಿ ಇಪ್ಪತ್ತು ಸಾವಿರ ರೂಪಾಯಿಗಳನ್ನು ತನ್ನಪ್ಪನಿಗೂ ಗೊತ್ತಾಗದಂತೆ ತನ್ನವ್ವನ ಕೈಯಲ್ಲಿಟ್ಟು ಹೋದದ್ದು! ಹದಿನೈದು ವರ್ಷ ಮಾತ್ರ ಹಳೆಯ ಸಂಗತಿ, ಮರೆತೇ ಹೋಗಬೇಕೆ? ಅಥವಾ ನೆನಪಿಸಿಕೊಳ್ಳುವ ಪ್ರಸಂಗವೇ ಬಂದಿರಲಿಲ್ಲವೇ? "ಪಬ್ಲಿಕ್ ಮೆಮರಿ ಈಸ್ ಷಾರ್ಟ್" ಅಂದಂತೆ ತಾನೂ ನೂರರಲ್ಲೊಬ್ಬ ಸಾರ್ವಜನಿಕನಂತೆಯೇ ಆದನೇ? ಅಂದರೆ ದೇವೀರಮ್ಮನಿಗೂ ತನಗೂ ಯಾವ ವೈಯಕ್ತಿಕ ಸಂಬಂಧವೂ ಇಲ್ಲವೇ? ಛೇ ಏನಿದು ಯಾಕೆ ಹೀಗಾಗುತ್ತಿದೆ. ತನ್ನ ಹೆತ್ತವ್ವಳನ್ನು ಹೆತ್ತವಳವಳು. ಅವಳ ಉಪಕಾರ ತೀರಿಸುವುದು ಈ ಜನ್ಮದಲ್ಲಿ ಸಾಧ್ಯವೇ? ಅದು ಬಿಟ್ಟು ತಾನು ತನ್ನ ದಿವ್ಯ ನಿರ್ಲಕ್ಷ್ಯವನ್ನು ಸಮರ್ಥಿಸಿಕೊಳ್ಳುವುದು ಸರಿಯೇ? ಇಲ್ಲ ತಾನು ಹೇಗಾದರೂ ಮಾಡಿ ಅವಳನ್ನು ಉಳಿಸಿಕೊಳ್ಳಬೇಕು. ಮೀರಜ್‌ಗೆ ಒಯ್ದು ಡಾ. ಕುಲಕರ್ಣಿಯವರ ಪಾಲಿಕ್ಲಿನಿಕಿಗೆ ಅಡ್ಮಿಟ್ ಮಾಡಿ, ಎಷ್ಟೇ ಖರ್ಚು ಬಂದರೂ ಪರವಾಯಿಲ್ಲ. ಆಕೆಯನ್ನು ಸಾಯಲು ಬಿಡಬಾರದು.

ಆದರೆ ತನ್ನಿಂದ ದೇವೀರಮ್ಮನ ಮನ ಒಲಿಸುವುದು ಸಾಧ್ಯವೇ? ಅವಳು ತನಗೆ ಸರಿಯೆನಿಸಿದ್ದನ್ನು ಯಾರು ಏನೆಂದರೂ ಸರಿ ಮಾಡಿಯೇ ತೀರುವಾಕೆ ಎಂದೂ ಯಾರಿಂದಲೂ ಏನೊಂದನ್ನೂ ಹೇಳಿಸಿಕೊಂಡವಳಲ್ಲ. ಬೇಕೆಂದರೆ ಕೂಳು ನೀರು ಬಿಟ್ಟು ಜೈನ ಮುನಿಗಳಂತೆ ಸಲ್ಲೇಖನ ವ್ರತ ಹಿಡಿದು ಮಡಿಯುವಾಕೆ, ಮರಣವೇ ಮಹಾನವಮಿ ಎಂಬ ಶರಣರ ಮಾತನ್ನು ಎಷ್ಟು ಸಾರೆ ಆಕೆ ಉದಾಹರಿಸಿ ಮಾತಿನ ನಡುವೆ ಹೇಳಿಲ್ಲ. ಆಕೆಯಷ್ಟು ಮುತ್ತೈದೆತನ ಬಯಸುವವರನ್ನು ಅದಕ್ಕೂ ಹೆಚ್ಚಾಗಿ ಸುಮಂಗಲಿ ಸಾವನ್ನು ಸಂತೋಷದಿಂದ ಸ್ವಾಗತಿಸುವವರನ್ನು ತಾನು ನೋಡಿಯೇ ಇಲ್ಲ ಸಾವಿನ ಕಲ್ಪನೆಯೇ ಅನೇಕರನ್ನು ಅಸ್ವಸ್ಥರನ್ನಾಗಿ ಮಾಡಿಸಿಬಿಡುತ್ತದೆ. ಆದರೆ ದೇವೀರಮ್ಮನಂತ ಕೆಲವರಿಗಾದರೂ ಅದು ಒಂದು ಚಾಲೆಂಜ್ ಆಗಿ ಸೋಲನ್ನಪ್ಪಿಕೊಳ್ಳಬೇಕಾಗುತ್ತದೆ. ಬಲು ಹಠಮಾರಿ ಅವಳು ಎಂದು ಹೇಳಿದೆಯಲ್ಲವೇ ಆಗಲೆ, ಹೌದು. ಆಕೆಯದು ಸಾತ್ವಿಕ ಹಠ. ಸಮಾಜ ಬೆರಳು ಮಾಡಿ ತೋರಿಸುವಂತಹ ಯಾವ ಕೆಲಸವನ್ನೂ ಆಕೆ ಮಾಡಳು. ಆನೆ ನಡೆದದ್ದೇ ಮಾರ್ಗವೆಂಬಂತೆ ದೇವೀರಮ್ಮನಂತಹವರು ಹಾಕಿಕೊಡುವ ಮಾದರಿಯೇ ಇತರರಿಗೂ ಆದರ್ಶವಾದೀತು.

ಕುಳಿತ ಸೋಫಾದ ಮೇಲಿಂದಲೇ ಹಾಗೆ ಯೋಚಿಸುತ್ತ ಮುಚ್ಚಿದ ಕಣ್ಣನ್ನು ಸಡಿಲಿಸಿ ತೆಗೆದರೆ...... ಓಹ್ ಇದೇನಿದು ತನಗರಿವಿಲ್ಲದಂತೆಯೇ ಮುಚ್ಚಿದ ಕಣ್ಣೊಳಗಿನ ಕತ್ತಲೆ ಇಡೀ ಕೋಣೆಯನ್ನೆಲ್ಲ ಆಕ್ರಮಿಸಿದೆಯಲ್ಲ! ಅಂದರೆ ಆಗಲೇ ರಾತ್ರಿಯಾಗಿ ಹೋಯಿತೆಂದಂತಾಯಿತು. ತಾಸುಗಟ್ಟಲೇ ವಿಚಾರಿಸುತ್ತಿರುವಾತನಿಗೆ ನಿಸರ್ಗದ ಈ ಆಟ ನಡೆದದ್ದೇ ಗೊತ್ತಾಗಲಿಲ್ಲವೇ. ಸಾವಕಾಶವಾಗಿ ಮೇಲೆದ್ದು ಸ್ವಿಚ್ಚಳಿಗಾಗಿ ತಡಕಾಡಿ. ಮೊಳಕಾಲಿಗೆ ಟೀಪಾಯಿಯ ಚೂಪು ತುದಿ ತಗುಲಿ ನೋವಾಯಿತು. ದೇವೀರಮ್ಮನೂ ದೃಷ್ಟಿ ಮಂದವಾಗಿ ಹೀಗೆಯೇ ದಿನಾಲೂ ಎಷ್ಟು ಸಾರೆ ಕೈಕಾಲುಗಳಿಗೆ ನೋವು ಮಾಡಿಕೊಳ್ಳುತ್ತಾಳೋ ಎಂದಂದುಕೊಳ್ಳುತ್ತ ತನ್ನ ನೋವನ್ನು ಹಿಗ್ಗಿನಿಂದಲೇ ಅನುಭವಿಸಿದ. ಅಷ್ಟರಲ್ಲಿ ಕೈಗೆ

ಸಿಕ್ಕ ಸ್ವಿಚ್ ಒತ್ತಿದಾಗ ಇಡೀ ಕೋಣೆ ಬೆಳಗಿತು. ನೋವಾದ ಮೊಣಕಾಲನ್ನು ಬಗ್ಗಿ ನೋಡಿಕೊಳ್ಳಲೂ ಹೋಗಲಿಲ್ಲ. ಎಲ್ಲೋ ಕಾಡುತ್ತಿದ್ದ ಅಪರಾಧ ಪ್ರಜ್ಞೆಗೆ ಶಿಕ್ಷೆ ಅನುಭವಿಸಲೆಂದು.

ರಿಪೇರಿಗೆ ಹೋದ ಕಾರು ಮರುದಿನವೇ ಬರುವುದೆಂದಾದಾಗ ಅನಿವಾರ್ಯವಾಗಿ ರಾತ್ರಿ ಊಟ ಮುಗಿಸಿ ಅಲ್ಲೇ ರಾತ್ರಿ ಕಳೆದ. ಬೆಳಿಗ್ಗೆ ಹತ್ತು ಗಂಟೆಗೆ ಬಂದ ಡ್ರೈವರ್ ತನ್ನೊಡನೆ ಅಜ್ಜಿಯ ಊರಿನವರೊಬ್ಬರನ್ನು ಕರೆ ತಂದಿದ್ದ. ಅವರು ನೇರವಾಗಿ ಬಂದವರೆ ನಮಸ್ಕಾರಾ ಡಾಕ್ಟರಿಗೆ ಗೊತ್ತು ಹತ್ತಿತಲ್ರಿ? ನಾ ರಾಮಣ್ಣಾ, ಬೆಳಗಾವಿ ಆರ್.ಎಲ್.ಎಸ್. ಕಾಲೇಜನಾಗೆ ಎರಡು ವರ್ಷ ಪಿ.ಯು.ಸಿ. ನಿಮ್ಮ ಕೂಡಾ ಕಲೀತಿದ್ದಿನಲ್ರೀ....? ಅನ್ನುತ್ತಲೇ, ಸುರೇಶ ಹಾಂ! ಗೊತ್ತಾತು. ರಾಮಣ್ಣ ಇದೇನು ಇಲ್ಲಿ? ಊರಾಗ ಎಲ್ಲಾರು ಅರಾಮಾ? ಎಂದು ಉಭಯ ಕುಶಲೋಪರಿ ಮಾಡಿದ ಮೇಲೆ ರಾಜಣ್ಣನೂ ಶಿರಹಟ್ಟಿಗೇ ಹೊರಟಿರುವುದಾಗಿಯೂ, ಇವನ ಆಕ್ಷೇಪಣೆಯಿಲ್ಲದಿದ್ದರೆ ಅದೇ ಕಾರಿನಲ್ಲಿ ಬರುವುದಾಗಿಯೂ ತಿಳಿಸಿದ. ಜೊತೆಗೇ ತನ್ನ ಮೋಟಾರ್ ಸೈಕಲ್‌ನ್ನು ರಿಪೇರಿಗೆ ಬಿಟ್ಟಿರುವುದಾಗಿಯೂ ಹೇಳಿದ. ಇಪ್ಪತ್ತೆರಡು ಕಿಲೋಮೀಟರ್ ರಸ್ತೆ ಈಗ ಹೇಗಿದೆಯೋ? ತಾನು ಹೋಗಿ ಹತ್ತು ವರ್ಷವಾಯಿತಲ್ಲವೇ? ಮೊದಲಿನ ಹಾಗೆಯೇ ಇದ್ದರೆ ಆ ರಸ್ತೆಯಲ್ಲಿ ಕಾರ್ ಒತ್ತಟ್ಟಿಗಿರಲಿ ಆನೆ ಹೋಗುವುದೂ ದುಸ್ತರದ ಕೆಲಸ. ಅವನ ತವರುಮನೆ ಮೇಲೆ ವಿಮಾನಗಳೇ ಹಾಯ್ದುಹೋಗುತ್ತವೆ ಅಂತೆ ಎಂದು ಆಗೀಗ ತಾನು ಆಡಿದ ಹಾಸ್ಯಮಯ ಮಾತಿನಲ್ಲಿ ಕೇವಲ ವಾಯುಯಾನಕ್ಕೆ ಮಾತ್ರ ಅಲ್ಲಿಗೆ ಹೋಗುವುದು ಸಾಧ್ಯ ಎಂಬ ತಾತ್ಪರ್ಯ ಅಡಗಿದ್ದನ್ನು ಸುರೇಶ್ ಪುನಃ ನೆನಪಿಸಿಕೊಂಡ. ರಸ್ತೆಯಲ್ಲಿ ಮತ್ತೇನಾದರೂ ಹೆಚ್ಚು ಕಡಿಮೆ ಆದರೆ ಇರಲಿ ಎಂದು ರಾಮಣ್ಣನನ್ನು ಖುಷಿಯಿಂದಲೇ ಜೊತೆಗೆ ಕರೆದುಕೊಂಡ.

ನಮ್ಮವರು "ಕುರಿತೋದದೆಯಂ ಕಾವ್ಯ ಪ್ರಯೋಗ ಮತಿ" ಗಳಲ್ಲವೇ? ಎಷ್ಟೊಂದು ಓದಿಕೊಂಡಿದ್ದಾನೆ ರಾಮಣ್ಣ ಇತ್ತೀಚಿನ ಸಾಹಿತ್ಯದ ಬೆಳವಣಿಗೆ ಕಂಪ್ಯೂಟರ್ ಬಳಕೆ. ಇನ್‌ಫಾರ್ಮೇಶನ್ ಟೆಕ್ನಾಲಜಿ, ಡಿಸ್ಕವರಿ ಚಾನಲ್, ಹೆಪಟೆಟಿಸ್ - ಬಿ ಎಲ್ಲಾ ಅಪ್ ಟು ಡೇಟ್ ಮಾಹ್ತಿ ಮನುಷ್ಯ, ಎಲ್ಲದರ ಮೇಲೂ ತನ್ನದೆ ಆದ ಸ್ವತಂತ್ರ ಅಭಿಪ್ರಾಯ ಹೊಂದಿದ್ದಾನೆ. ಒಕ್ಕಲುತನ ನೀರಾವರಿ, ಬೆಳೆಗಳ ಇಳುವರಿ, ರೋಗಗಳು, ಜೀನ್‌ಗಳು ಎಂಥಹ ವಿಷಯದ ಮೇಲಂತೂ ಬಹುಸ್ಪಷ್ಟ ಹಾಗೂ ಸಲಹೆಗಳನ್ನು ನೀಡುತ್ತಾನೆ. ಸರ್ಕಾರ ಭೂ ಸುಧಾರಣಾ ಕಾನೂನು ಒಳ್ಳೆ ಕಾನೂನು ಒಳ್ಳೆ ಉದ್ದೇಶವನ್ನು ಹೊಂದಿದ್ದರೂ ಇನ್ನೂ ಅದರಲ್ಲಿ ಕೆಲವೊಂದು ತೀವ್ರತರ ಬದಲಾವಣೆಗಳನ್ನು ತರಬೇಕೆಂದೂ, ಒಂದು ಎಕರೆ ಜಮೀನಿಗೆ ಇಂತಿಷ್ಟು ಪ್ರಮಾಣದ ಬೆಳೆಯನ್ನು ಬೆಳೆಯುವುದನ್ನು ಕಡ್ಡಾಯ ಮಾಡಬೇಕೆಂತಲೂ ಆ ನಿಗದಿತ ಪ್ರಮಾಣಕ್ಕಿಂತ ಪದೇ ಪದೇ ಐದು ಬೆಳೆಗಳನ್ನು (ಮೂರು ವರ್ಷಗಳಲ್ಲಿ) ಕಡಿಮೆ ಬೆಳೆದಿದ್ದಾದರೆ ಆ ಜಮೀನನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಭೂಹಿತರಿಗೆ ಅದನ್ನು ಹಂಚುವ ವ್ಯವಸ್ಥೆ ಮಾಡಬೇಕೆಂದೂ ನಿಖರವಾಗಿಯೇ ಮಂಡಿಸುತ್ತಾನೆ. ಸರ್ಕಾರದಿಂದ ರೈತರ ಜಮೀನುಗಳಿಗೆ ಒಡ್ಡು ಹಾಕಿಸುವುದು, ಬಾಂದಾರಾ ನಿರ್ಮಿಸುವುದು ಇತ್ಯಾದಿಗಳನ್ನು ನಿಲ್ಲಿಸಿ, ರೈತರೇ ಅವುಗಳನ್ನು ಮಾಡಿಕೊಂಡರೆ ಇಂತಿಷ್ಟು ಸಹಾಯಧನವನ್ನು ಕೆಲಸ ಮುಗಿದ ಮೇಲೆ ಕೊಡಬೇಕೆಂದೂ, ಇದರಿಂದಾಗಿ ಕಾಮಗಾರಿ ನಿರ್ಮಾಣದಲ್ಲಿ ಆಗಬಹುದಾದ ಹಣದ ದುರುಪಯೋಗ ನಿಲ್ಲಿಸಬಹುದೆಂದೂ ಹೇಳುತ್ತಾನೆ. ರಾಮಣ್ಣ ಸಾಮಾನ್ಯನಾಗಿ ಕಾಣುತ್ತಿದ್ದರೂ ಆತನ ವಿಚಾರಗಳು ಅಸಾಮಾನ್ಯವಾಗಿವೆ. ಅದಕ್ಕಾಗಿ ನಮ್ಮ ಹಿರಿಯರು "ಓದು ಒಕ್ಕಾಲು ಬುದ್ಧಿ ಮುಕ್ಕಾಲು" ಎಂಬ ಮಾತನ್ನು ಗಾದೆಯನ್ನಾಗಿಸಿದ್ದಾರೆ.

ತುಂಬ ಮಾತನಾಡುತ್ತಿದ್ದ ರಾಮಣ್ಣನೊಂದು ಮಾಹ್ತಿ ಕೇಂದ್ರವೆನಿಸುತ್ತ ತನ್ನನ್ನೇ ತಾನು ಬಿಚ್ಚಿಕೊಳ್ಳುತ್ತಿರುವುದನ್ನು ಅರಿತು ಈಗ ತನಗೆ ಬೇಕಾಗಿರುವ ವಿಷಯದ ಬಗ್ಗೆ ಆತನನ್ನು ಉಪಯೋಗಿಸಿಕೊಳ್ಳಬೇಕೆಂದು ಸುರೇಶ "ಅಲ್ಲಾ ರಾಮಣ್ಣ ನಮ್ಮಜ್ಜನ ಬಗ್ಗೆ ಸ್ವಲ್ಪ ಹೇಳಲ್ಲಾ. ಈಗ ಹೆಂಗ ಅದಾನ್ ಅವಾ?" ಕೇಳಿದ. ಈಗ ಮಾತುಕತೆ ವಾಸ್ತವಕ್ಕೆ ಬರಬೇಕೆಂಬ ಇವನ ಇಚ್ಛೆಯನ್ನು ಗ್ರಹಿಸಿದ ರಾಮಣ್ಣ "ನಿಮ್ಮ ಅಜ್ಜ ಏನಪ್ಪಾ ರಾಜಾ ಮನಶಾ. ಜಿಪುಣ

ಮಂದಿ ಕಲೀಬೇಕು ಅವನ ಕಡೇಂದ ಏನ್ ಅವರ ಠೀವಿ, ಗತ್ತು, ಆಹಾ ಯಾರಿಗೂ ಬರಾಕಿಲ್ಲ ಬಿಡು ಅದು. ಅದರ ಕೈಯ ಭಾಳ ಲೂಜು, ಕೈಯಾಗ ರೊಕ್ಕ ಇಟ ''ಗೊಳ್ಳೋ'ದು ಗೊತ್ತಿಲ್ಲಾ ಅವಗ....." ಇನ್ನೂ ಏನೇನು ಹೇಳುತ್ತಿದ್ದಾನೋ ಥಕ್ಕನೆ ಸುರೇಶನಿಗ ಆಕಸ್ಮಾತ್ ತನ್ನ ಅಜ್ಜ ಅಜ್ಜಿ ಹೊತ್ತಿಗೆ ಸರಿಯಾಗಿ ತನಗೆ ಸಹಾಯ ಹಸ್ತ ನೀಡದಿದ್ದರೆ ಜೀವನದಲ್ಲಿ ತಾನು ಇಲ್ಲಿಯವರೆಗೆ ಬರುವುದು ಸಾಧ್ಯವೇ ಇರಲಿಲ್ಲ ಎಂಬುದು ಅರಿವಾಯಿತು. ಆದರೆ ಅಜ್ಜನ ಸಿಟ್ಟು ಸ್ವಭಾವ ಅವನಿಗೆ ಎಂದೂ ಹಿಡಿಸಿರಲಿಲ್ಲ. ಕೋಪವೆಂದರೆ ಜಮದಗ್ನಿಯ ಕೋಪ, ಕಣ್ಣುಗಳಲ್ಲೇ ಕೆಂಡ ಸುರುಸಿ ಎದುರಿಗಿರುವವನ್ನೂ ಸುಟ್ಟು ಬಿಡಬಹುದಾದ ಕಠೋರತೆ, ಅದೊಮ್ಮೆ ತಾನು ಚಿಕ್ಕವನಿದ್ದಾಗ ಕೇಳಿದ ಅಜ್ಜನ ಬಗೆಗಿನ ಒಂದು ಘಟನೆ ನೆನಪಾಯಿತವನಿಗೆ! ಮನೆಯ ಅಂಗಳ ಹಾಗೂ ಹಿತ್ತಲಲ್ಲಿ ಒಣ ಹಾಕಿದ ಐವತ್ತು ಚೀಲ ಮೆಣಸಿನ ಕಾಯಿಗಳಲ್ಲಿ ಎರಡು ಚೀಲ ಕಳುವಾಗಿ ಕಳುವು ಮಾಡಿದವರು ಮನೆಯಲ್ಲಿ ದುಡಿಯುತ್ತಿದ್ದ ಹೀರೇ ಆಳು ಯಮನಪ್ಪನ ಸೋದರ ಸಂಬಂಧಿ ಎಂಬುಂದು ಗೊತ್ತಾದಾಗ.... ಅಬ್ಬಾ...... ಏನು ಆಗಿಯೇ ಇಲ್ಲವೇನೋ ಎಂಬಂತಿದ್ದ ಅಜ್ಜ ಬೇರೆಯವರ ಎದುರಿಗೆಲ್ಲ, "ಹುಲಿ ಸಿಂಹಾ ಮಲಕೊಂಡಾಗ ಸುತ್ತಲೂ ನರಿ ನಾಯಿ ಹಾಯೋಹಂಗಿಲ್ಲ. ರಾತ್ರಿ ನಮ್ಮ ಮನಿ ಬಾಗಲಕ್ಕೂ ಅಗಳಿ ಸಹಿತ ಹಾಕೋಂಗಿಲ್ಲಾ ನಾವು. ನಮ್ಮಲ್ಲೇ ಕಳವು ದರೋಢೆ ಆಗೋದಂದ್ರ ಮನ್ಯಾನ ಆಳುಗಳೇ ಮಾಡಬೇಕು ಇಲ್ಲ ನಾನೇ ಮಾಡಬೇಕು. ನೋಡೋಣು ಕಳ್ಳಾ ಯಾವಾಗ ಪತ್ತೆ ಆಗ್ತಾನಾ ಅಂತ"....... ಎಂದು ಹೇಳುತ್ತಿದ್ದ. ಒಂದು ವಾರದೊಳಗಾಗಿ ನಿಖರವಾಗಿ ಕಳ್ಳನ ಪತ್ತೆ ಆದಾಗ.... ಅಬ್ಬಾ...... ಆತನಿಗೆ ಹೊಡೆದದ್ದೆಂದರೆ ಆತ ಹೆದರಿ ತನ್ನ ಧೋತರದಲ್ಲಿಯೇ ಉಚ್ಚೆ ಹೊಡ್ಕೊಂಡು ಹೇಸಿಗೆಯನ್ನೂ ಮಾಡಿಕೊಂಡಿದ್ದ. ಅಷ್ಟಕ್ಕೆ ಬಿಡದೇ ಆತನ ಒಂದು ಕಿರುಬೆರಳನ್ನು ಕತ್ತರಿಸಬೇಕೇ? ಈ ಒಂದು ಸಾರೆ ಒಂದು ಬೆರಳು ಇನ್ನೊಮ್ಮೆ ಮಾಡಿದ್ರ ಪ್ರಾಣಾ..... ಎಂದು ಚೀರಿ ಬಿಟ್ಟಿದ್ದನಂತೆ ಅಜ್ಜ, ಅಂದಿನಿಂದ ಅಜ್ಜನ ಮನೆಯಲ್ಲಿರಲಿ ಇಡೀ ಊರಲ್ಲಿ ವರ್ಷಗಳವರೆಗೆ ಒಂದೂ ಕಳುವಾಗಿರಲಿಲ್ಲವಂತೆ.

ಇಂತಹ ಕೆಂಡಮಂಡಲ ಅಜ್ಜನ ಜೊತೆ 'ತನ್ನಜ್ಜಿ' ಮಾಡಿದ ಅರವತ್ತ ಎಪ್ಪತ್ತು ವರ್ಷಗಳ ಬಾಳ್ವೆಯೆಂದರೆ........ ಅಜ್ಜನ ಮಾತಿನಲ್ಲೇ ಹೇಳುವುದೆಂದರೆ ನನ್ನಜೊತೆ ಇರುವುದೆಂದರೆ ಸರ್ಪದ ಜೊತೆ ಬಾಳ್ವೆ ಮಾಡಿದಂತೆ ಯಾವಾಗ ಭುಸ್ ಎನ್ನುವುದೋ ಯಾವಾ ಕಡಿಯುವುದೊ...... ಅವರು ಅಂದುಕೊಳ್ಳುವಂತೆ ಕೇವಲ ಸರ್ಪವಲ್ಲಪ್ಪಾ ಅವರು ಏಳುಹೆಡಿ ಸರ್ಪಾ ಯಾವಾಗ ಏನೋ ಹೆಂಗೋ ಯಾರಿಗೂ ತಿಳಿಯೋಂಗಿಲ್ಲ ಎಂದು ಅಜ್ಜಿ ಆಗಾಗ ತನ್ನ ಗಂಡನನ್ನು ವ್ಯಾಖ್ಯಾನಿಸುವುದೂ ಉಂಟು. ಮನೆಗೆ ಬಂದ ಮೂವತ್ತು ವರ್ಷವಾಗಿದ್ದಾಗೊಮ್ಮೆ ಮನೆ ವ್ಯವಹಾರದಲ್ಲೇನೋ ಅಜ್ಜಿ ತನ್ನ ಅಭಿಪ್ರಾಯ ನೀಡಿದಳೆಂದೂ ಅದು ತನ್ನದಕ್ಕೆ ವಿರೋಧವಾಗಿತ್ತೆಂದೂ ಅಜ್ಜಿಯನ್ನು ಹೊಡೆದದ್ದೆಂದರೆ...... ಒಂದೂವರೆ ತಿಂಗಳು ಹಿಡಿದಿತ್ತು ಮೈಮೇಲಿನ ಗಾಯಗಳೆಲ್ಲ ಮಾಯಲು! ಊರ ಜನರೆಲ್ಲ ಅಜ್ಜನನ್ನು "ಬೆಂಕಿ ಸ್ವಾಮಿ ಬೆಂಕಿ ಸ್ವಾಮಿ" ಎಂದು ಕರೆಯುತ್ತಿದ್ದುದು (ತಮ್ಮ ತಮ್ಮಲ್ಲೇ) ಸುರೇಶನಿಗೂ ಗೊತ್ತಿತ್ತು. ಅಜ್ಜ ಹೀಗಿದ್ದುದರಿಂದಲೋ ಏನೋ ಅಜ್ಜಿ ಮಾತ್ರ ಶಾಂತಸಾಗರ. ಆತ ಅಗ್ನಿಯಾದರೆ ಆಕೆ ಮಳೆ ಆಗಿದ್ದಳು. ಒಮ್ಮೆಲೇ ಸುರೇಶನಿಗೆ ಮೊನ್ನೆ ತಾನು ಬೆಳಗಾವಿಯಲ್ಲಿ ನೋಡಿದ ಗಿರೀಶ ಕಾರ್ನಾಡರ ನಾಟಕವೊಂದರ ತಲೆ ಬರಹ ನೆನಪಾಯಿತು. ಅಗ್ನಿ ಮತ್ತು ಮಳೆ ಅದೇ ತನ್ನ ಅಜ್ಜ ಮತ್ತು ಅಜ್ಜಿ ಎಂದಂದುಕೊಂಡು ತನ್ನಷ್ಟಕ್ಕೆ ಮುಗುಳ್ನಕ್ಕ.

ಈಗ ಸುರೇಶನಿಗೆ ತನ್ನಜ್ಜಿ ಯಾಕೆ ಮುತ್ತೈದೆ ಸಾವಿಗಾಗಿ ಹಂಬಲಿಸುತ್ತಿದ್ದಾಳೆಂಬ ಪ್ರಶ್ನೆ ಕಾಡತೊಡಗಿತ್ತು. ತಾನು ಸತ್ತ ಮೇಲೆ ಆದರೂ ಅಜ್ಜನಿಗೆ ತನ್ನ ಮಹತ್ವ ತಿಳಿಯಲೆಂದೆ? ಅಥವಾ ನೇರ ಸ್ವರ್ಗಕ್ಕೇ ತನಗೆ ದಾರಿ ಸಿಗಲಿಯೆಂದೇ ಅಥವಾ ಅದಷ್ಟು ಬೇಗ ಈ ಸಂಕಟದಿಂದ ಮುಕ್ತಿ ದೊರಕಿಸಿಕೊಳ್ಳಲೆಂದೇ? ಒಂದೂ ಸ್ಪಷ್ಟವಾಗದಾಯಿತು..... ಈಗ ಅಜ್ಜಿಗೆ ಹುಷಾರಿಲ್ಲವಂತೆ. ಎಲ್ಲಿ ಡಾಕ್ಟರ್ ಆದ ತನಗೆ ಅಷ್ಟು ಬೇಗ ಸಾಯುವಂತಾ ಔಷಧಿ ಕೊಡು ಎಂದು ಹಠಮಾಡುತ್ತಾಳೋ ಅನಿಸಿತವನಿಗೆ, ಆಗ ಅದು ಮರ್ಸಿ ಕಿಲ್ಲಂಗ್ ಆಗದೇ ಫೋರ್ಸ್ಡ್ ಕಿಲ್ಲಂಗ್

ಅಂದರೆ ಕೊಲೆ ಮಾಡಿದಂತೆ ಆಗುತ್ತದಲ್ಲಾ ಎಂದು ಬೆದರಿಬಿಟ್ಟ. ಈ ಮುತ್ತೈದೆತನದ ಭ್ರಾಂತಿಯೂ ಸತಿ ಪದ್ಧತಿಯ ಮಗದೊಂದು ರೂಪವೇ ಎಂದಂದುಕೊಂಡ ಇಂತಹ ಅರ್ಥವಿಲ್ಲದ ಎಷ್ಟೋ ನಂಬಿಕೆಗಳು ಭಾರತೀಯ ಸ್ತ್ರೀ ಜನಾಂಗವನ್ನೇ ಕಿತ್ತು ತಿನ್ನುವುದನ್ನೂ ನೆನಪಿಸಿಕೊಂಡ. ಜೊತೆಯಲ್ಲಿದ್ದ ರಾಮಣ್ಣನ ಮಾತಿನ ಕಡೆ ಕ್ರಮೇಣ ಲಕ್ಷ ಕೊಡುತ್ತ ತನ್ನ ಮನಸ್ಸಿನ ಭಾರವನ್ನು ಕಡಿಮೆ ಮಾಡಿಕೊಳ್ಳತೊಡಗಿದ. ಹಾಗೆಯೇ ಬಲಗೈಯಿಂದ ತನ್ನ ಪಕ್ಕದಲ್ಲಿದ್ದ ಔಷಧ ಗುಳಿಗೆಗಳು ತುಂಬಿದ ಬ್ಯಾಗ್ ಅನ್ನು ಕೈಯಾಡಿಸುತ್ತ ತಾನು ಇಷ್ಟೊಂದು ಕಾಳಜಿ ಹಾಗೂ ಪ್ರೀತಿಯಿಂದ ತಂದ ಅವುಗಳನ್ನು ಅಜ್ಜಿ ತಿರಸ್ಕರಿಸಲಿಕ್ಕಿಲ್ಲವೆಂದೂ ಅಂದುಕೊಂಡ.

ಮನೆ ಸಮೀಪ ಬಂದಾಗ ಹೊರಕಟ್ಟೆಯ ಮೇಲೆ ಅಜ್ಜ ಅವನೊಂದಿಗೆ ಮೂರು ನಾಲ್ಕು ಜನ ಕುಳಿತುಕೊಂಡಿದ್ದರು ಮನೆಯೊಳಗೆ ಅಡರಿದ ನೀರವತೆ ಒಣಿಯೊಳಗೂ ಮೈ ಚಾಚಿದಂತೆ ಎಲ್ಲೆಡೆ ಬಿಗಿ ವಾತಾವರಣವಿತ್ತು. ಅಜ್ಜಿಯ ಆರೋಗ್ಯ ಬಿಗಡಾಯಿಸಿದ್ದರ ಸೂಚನೆ ಸುರೇಶನಿಗೆ ದೂರದಿಂದಲೇ ಸಿಕ್ಕಿಬಿಟ್ಟಿತು. ಆತನಲ್ಲಿಯ ವೈದ್ಯ ಜಾಗೃತನಾದ, ದೂರದಿಂದ ತನ್ನ ಎಲ್ಲ ಪರಿಕರಗಳನ್ನು ತೆಗೆದುಕೊಂಡು ನೇರ ಅಜ್ಜಿಯಿದ್ದ ಕೋಣೆಗೆ ನಡೆದ. ತುಂಬುಗಂಬಳಿಯಲ್ಲಿ ಮುದುಡಿ ಮಲಗಿದ ಅವಳ ಅಂಗೈಗಳನ್ನು ತನ್ನ ಕೈಯೊಳಗೆ ಹಿಡಿದ. ಕರಿಮೋಡ ಸರಿದು ಹೊರಬಂದ ಚಂದ್ರನಂತೆ ಅಜ್ಜಿ ರಗ್ ಸರಿಸಿ ಮುಖ ಹೊರಚಾಚಿ ತೀವ್ರ ಆನಂದದ ನೋಟ ಬೀರಿದಳು. ಅದರಲ್ಲಿ ಯಾವುದೋ ಒಂದು ಹೊಸ ಮಿಂಚು ಗೋಚರವಾದಂತೆನಿಸಿತು ಸುರೇಶನಿಗೆ. ಸ್ವಲ್ಪ ಪ್ರಫುಲ್ಲಿತವಾಗಿ "ಯಾಕ ಎಮ್ಮಾ ಈಗ ಹೆಂಗ್ ಅದೀ?" ಪ್ರಶ್ನಿಸಿದ. ಇದ್ಯಾವುದಕ್ಕೂ ಉತ್ತರಿಸದೇ "ಯಾವಾಗ ಬಂದೀ?" ಎನ್ನುತ್ತ ಈತನ ಕುಶಲ ವಿಚಾರಿಸತೊಡಗಿದಳು. ತನ್ನ ರೋಗವನ್ನು ವಾಸಿಮಾಡುವ ಸಂಜೀವಿನಿಯೇ ಬಂದಂತಹ ಹುರುಪು ಚಿಮ್ಮಿಸತೊಡಗಿದಳು. ಸುರೇಶನಿಗೆ ಹಾಯೆನಿಸಿತು "ಬಹಳ ಜುಗ್ಗಾಗಿಬೇ, ಯಾಕ ಚಿಂತೀ ಬಾಳ ಮಾಡತೀಯೇನು? ಆರಾಮಾಕ್ಕೀದಿ ಚಿಂತೀ ಮಾಡಬ್ಯಾಡಾ. ಆದ್ರ ನಾ ಹೇಳಿದ್ದಂಗ ಗುಳಿಗೆ ಔಷದಾ ತೊಗೋಬೇಕು.....? ಎಲ್ಲಿ ತನ್ನಜ್ಜಿ ಔಷಧಿ ಇತ್ಯಾದಿಯನ್ನು ನಿರಾಕರಿಸುತ್ತಾಳೋ ಎಂಬ ಅಳುಕನ್ನು ಹೋಗಲಾಡಿಸಲು ಬುನಾದಿ ಹಾಕತೊಡಗಿದ. ಇದೇ ಹೊತ್ತೆಂದು ಆಕೆ ಸಾಯುವ ಸಿದ್ಧತೆ ಮಾಡಿಕೊಳ್ಳದಿರಲಿ ಎಂದು ಆಕೆಯನ್ನು ಹುರಿದುಂಬಿಸಿ ಮಾತಿಗೆಳೆಯತೊಡಹಿದ. ತಾನು ಹೀಗೆ ಸುಪ್ರಸಿದ್ಧ ವೈದ್ಯನಿದ್ದು ಅವಳನ್ನು ವಿನಾಕಾರಣ ಬೇಗ ಸಾಯಲು ಬಿಡಬಾರದೆಂದುಕೊಂಡ. ಹಾಗೇನಾದರೂ ಆದರೆ ತಾನು ಡಾಕ್ಟರ್ ಆಗಿದ್ದು ವ್ಯರ್ಥವೆಂದುಕೊಂಡು ಏನಾದರೂ ಮಾಡಿ ಆಕೆಯನ್ನು ಉಳಿಸಿಕೊಳ್ಳಲೇಬೇಕೆಂದು ಮನದಲ್ಲಿ ನಿರ್ಧರಿಸಿಯೂ ಬಿಟ್ಟ. ಹುಟ್ಟಿನ ಹಿಂದೆಯೇ ಸಾವು ಯಾರಿಗೂ ತಪ್ಪಿಲ್ಲವೆಂದ, ಅದಕ್ಕೆ ಹೆಣ್ಣು ಗಂಡೆಂಬ ಭೇದಭಾವ ಸಲ್ಲದ್ದೆಂದೂ, ಹೆಚ್ಚು ವಯಸ್ಸಾದ ಗಂಡ ಕಿರಿಯಳಾದ ಹೆಂಡತಿಗಿಂತ ಮೊದಲು ಸಾಯುವುದರಲ್ಲಿ ಏನೂ ಆಶ್ಚರ್ಯವಿಲ್ಲದಾಗಿಯೂ ಅವಳಿಗೆ ಮನವರಿಕೆ ಮಾಡಿಕೊಟ್ಟ. ಸಾವು ಯಾವಾಗಲಾದರೂ ಬರಲಿ ಆದರೆ ಸಾವನ್ನು ಆಹ್ವಾನಿಸಿ, ಅಕಾಲದಲ್ಲಿ ಅದರ ತೆಕ್ಕೆಗೆ ಹೋಗುವುದು ಖಂಡಿತ ಸಾಧುವಾದುದಲ್ಲ ಎಂದೂ ವಿವರಿಸಿದ. ನೀ ಮೊದಲ ಆದ್ರ ನೀನು ಅಜ್ಜ ಮೊದಲ ಆದ್ರ ಅಜ್ಜ ಯಮ ಯಾರಿಗೆ ಮೊದಲ ಕರೀತಾನೋ ಅವರು ಮೊದಲು ಹೋಗಬೇಕು. ಸುಮ್ಮ ಸುಮ್ಮನೆ ಅಜ್ಜನಿಗಿಂತ ಮೊದಲು ನೀ ಹೊಕ್ಕೀನಿ ಅಂತ ಹೇಳಿ ಹೋಗೊ ತಯಾರಿ ಮಾಡಿದರ ಆತ್ಮಹತ್ಯಾ. ಅದು ಮಹಾಪಾಪ ಅನ್ನೋದನ್ನೇ ಅವಳಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸತೊಡಗಿದ.

ತನ್ನ ಮಾತಿನ ಪರಿಣಾಮ ಸರಿಯಾಗಿಯೇ ಆಯಿತು ಎಂದು ಸುರೇಶನಿಗೆ ಅನಿಸಹತ್ತಿತ್ತು. ತೀರ ಬಳಲಿದ ಮುದುಕಿ ಎದ್ದು ಕೂಡಲು ಯತ್ನಿಸತೊಡಗಿತು. ಆಗಲಿಲ್ಲ. ಆತನೇ "ಇರಲಿ ಮಲಗಿಕೊಂಡೇ ಮಾತನಾಡು" ಎಂದಾಗ ಎಪ್ಪಾ ನನ್ ಮೊಮ್ಮಗ್ನಾ ...... ಏನೋ ಗುಟೋಂದನ್ನು ಹೇಳುವವಳಂತೆ ಅಚೀಚೆ ನೋಡತೊಡಗಿದಳು. ಈತ ಕಣ್ಸನ್ನೇ ಮಾಡಿ ಬೇರೆಯವರನ್ನು ಹೊರಗೆ ಹೋಗುವಂತೆ ಸೂಚಿಸಿದಾಗ ಮುಂದುವರೆಸಿದಳು..... ನೀ ಅನ್ನೋದೂ ಖರೇ ಐತಿ ಆದ್ರ ದೇವರು ನನ್ನ ಮೊದಲು ಒಯ್ಯಿತಾನೇನೊ, ಏನ್ ಕಾಡಾಕ ಹತ್ತೈತಿ ಈ ಬ್ಯಾನಿ...." ಎಂದು

ತನಗಾದ ಬೇನೆಯನ್ನು ಹಳಿಯುತ್ತ ಸುರೇಶನ ಮಾತಿನ ಪರಿಣಾಮ ಅವಳ ಮೇಲೆ ಆದ ಸೂಚನೆ ನೀಡಿದಳು. ಸುರೇಶ ತುಸು ಖುಷಿಯಿಂದ ತಾನು ಬಹು ದೊಡ್ಡ ಡಾಕ್ಟರ್ ಎಂದು ಅವಳ ಆಶೀರ್ವಾದದಿಂದ ತನ್ನ ಕೈಯಲ್ಲಿ ಈವರೆಗೂ ಯಾರೂ ಸತ್ತಿಲ್ಲವೆಂದೂ ಅವಳಿಗೆ ಚೈತನ್ಯ ತುಂಬತೊಡಗಿದ. ಆದರೆ ತನ್ನ ಮೇಲೆ ಇದ್ಯಾವುದರ ಪರಿಣಾಮವೂ ಆಗಿಲ್ಲವೆಂದು ಅವಳ ದೈಹಿಕ ಚಟುವಟಿಕೆಯ ಭಾಷೆ (ಬಾಡಿ ಲಾಂಗ್ವೇಜ್) ಹೇಳತೊಡಗಿದ್ದನ್ನು ಸುರೇಶ ಸ್ಪಷ್ಟವಾಗಿ ಕಂಡುಕೊಂಡ. ಮತ್ತೆ ತುಸು ಕಸಿವಿಸಿಗೊಂಡ. ಆಕೆಯ ಹಠಮಾರಿತನ ಇನ್ನೂ ಹಾಗೆಯೇ ಉಳಿದಿದೆಂದುಕೊಂಡ. ಆದರೆ ಮುದುಕಿ ಇದ್ಯಾವುದನ್ನೂ ಲೆಕ್ಕಿಸದೇ ತನ್ನ ಗೋಣುಸನ್ನೆಯಿಂದ ಅವನನ್ನು ಸಮೀಪ ಕರೆದು "ಎಪ್ಪಾ ಹೆಂಗಾರ ಮಾಡಿ ನನ್ನ ಉಳಿಸಿಕೊಳ್ಳಾಕ ಆಕೈತೇನು?" ಎಂದು ಕಣ್ಣು ಮುಚ್ಚಿ ದುಃಖಿಸತೊಡಗಿದಳು. ಗುಳಿಬಿದ್ದ ಕಣ್ಣುಗಳಿಂದ ನೀರು ಬಸಿಯತೊಡಗಿ ಸುಕ್ಕಾಗಿ ಮುರುಟಿದ ಚರ್ಮದ ತಗ್ಗಿನಲ್ಲಿ ಶೇಖರವಾಗತೊಡಗಿತು. ಸುರೇಶನಿಗೆ ವಿಚಿತ್ರವೆನಿಸಿತು. ಹಾಗೆಯೇ ತನ್ನ ಉಪದೇಶಪರಮಾತುಗಳು ಇಷ್ಟು ಬೇಗ ಪರಿಣಾಮ ನೀಡಿದವೇ ಎಂದುಕೊಳ್ಳುತ್ತಿರುವಾಗ ಇದ್ಯಾವುದಕ್ಕೂ ಗಮನಕೊಡದೇ ಅಜ್ಜಿ "ಹೆಂಗರಮಾಡಿ ನನ್ನ ಉಳುಸು, ಅವರು (ಅಜ್ಜ) ಇರೋತನಾ ನಾನೂ ಇರೋ ಹಂಗ ಮಾಡು. ನನ್ನ ಕಣ್ಣ ಎದುರೇ ನಾನ ಜೀವಂತ ಇದ್ದಾಗನ ಅವರು ಕಣ್ಣುಮುಚ್ಚಲಿ. ಅದಕ್ಕೆ ನನ್ನ ಉಳುಸು ಏನರ ಮಾಡಿ ಆರಾಮ ಮಾಡು" ಮುದುಕಿ ದಣಿದಂತೆ ಮತ್ತೆ ಕಣ್ಣುಮುಚ್ಚಿ ದೀರ್ಘ ಶ್ವಾಸೋಚ್ಛ್ವಾಸ ಮಾಡತೊಗಡಿದಳು. ಸುರೇಶನಿಗೆ ಎಲ್ಲ ವಿಚಿತ್ರವೆನಿಸತೊಡಗಿತು. ಖಂಡಿತ ಇದು ತನ್ನ ಮಾತಿನ ಪರಿಣಾಮ ಅಲ್ಲವೆಂದು ಅವನಿಗೆ ಖಾತ್ರಿಯಾಯಿತು. ಜೀವಮಾನವಿಡೀ ತಾನು ಬದುಕಬೇಕು ಬಹುಕಾಲ ಬದುಕಬೇಕು ಎಂದುಕೊಳ್ಳುವ ಮನುಷ್ಯನಿಗೆ ಯಾರದೋ ಸ್ಮಶಾನಯಾತ್ರೆಗೆ ಹೋದಾಗ ಅಲ್ಲಿ ತುಸುವಾದರೂ ವೈರಾಗ್ಯ ಕಾಡುವಂತೆ, ಅಜ್ಜಿಗೂ ಯಾವಾಗಲೂ ತಾನು ಸಾಯಬೇಕು ಅಜ್ಜನಿಗೆ ಮೊದಲು ಸಾಯಬೇಕು ಎಂದಂದುಕೊಂಡಿದ್ದಕ್ಕೆ ಈಗ ನಿಜವಾಗಿಯೂ ಸಾಯುತ್ತಿರುವಾಗ ತಾನು ಬದುಕಬೇಕು ಎಂದೊಮ್ಮೆ ಅನಿಸುತ್ತಿರಬಹುದೆ? ಇದೇ ಸಾಮಾನ್ಯ ಮಾನವ ದ್ವಂದ್ವವೇ? ಅದಕ್ಕೆ ಅಜ್ಜಿಯೂ ಮಾರು ಹೋದಳೆ ಎಂದೊಮ್ಮೆ ಭಾಸವಾಗತೊಡಗಿತು.

ಸುರೇಶನ ಈ ಅಳುಕು, ಸಂದೇಹ ಎಲ್ಲ ಹುಸಿಯಾಗಿತ್ತು. ಅಜ್ಜಿ ಅಸಾಮಾನ್ಯಳಾಗಿದ್ದಳು. ಸಾಮಾನ್ಯರಂತೆ ಬದುಕುವುದು ಅವಳಿಂದ ಸಾಧ್ಯವೇ ಇರಲಿಲ್ಲ. ಅವಳ ಬದುಕಿಗೆ ಜೀವಂತಿಕೆಗೆ ಬೇರೆಯದೇ ಕಾರಣವಿತ್ತು. ಕೆಲದಿನಗಳ ಹಿಂದೆ ಸುರೇಶನ ಅಜ್ಜ ಹಾಸಿಗೆ ಹಿಡಿದಿದ್ದ ಒಂದೂವರೆ ತಿಂಗಳು ದೀರ್ಘ ಆರೈಕೆ ಸೇವೆಗೆ ಯಾವ ಆಳೂ ತಯಾರಿರಲಿಲ್ಲ. ಎಲ್ಲ ಅಜ್ಜಿಯದೇ ವ್ಯವಸ್ಥೆ. ಮಲಮೂತ್ರ ಬಳೆಯುವುದು, ಹೊತ್ತಿಗೆ ಸರಿಯಾಗಿ ಊಟ ಔಷಧಿ ಕೊಡುವುದು, ರಾತ್ರಿಯಿಡೀ ನಿದ್ರೆಗೆಡುವುದು, ಎಲ್ಲಕ್ಕೂ ಮೇಲಾಗಿ ಎಲ್ಲ ಸರಿಯಾಗಿ ಮಾಡಿದ ಮೇಲೂ ಮನನೋಯುವಂತೆ ಸಿಟ್ಟಿನಲ್ಲಿ ಒದರಾಡುವುದು ಕೈಗೆ ಸಿಕ್ಕ ಕಪ್ಪು ಬಸಿ ಎಸೆಯುವುದು ಎಲ್ಲ ಸಹಿಸಿಕೊಂಡು ಆತನನ್ನು ಗುಣಪಡಿಸಿದ್ದಳು ಅಜ್ಜಿ, ಕೂತು ವಿಚಾರಿಸುತ್ತಿದ್ದಳು ದಿನಗಟ್ಟಲೇ.... ತಾನೇ ಮೊದಲು ಸತ್ತಿದ್ದರೆ ಓಹ್ ಎಂತಹ ಅನಾಹುತವಾಗುತ್ತಿತ್ತು! ಯಾರಿದ್ದರು ಅವರ ಸೇವೆ ಮಾಡಲು? ಆಳುಗಳೇನೋ ಒಳ್ಳೆಯವರೆ, ಎಲ್ಲ ಚೊಕ್ಕ ಕೆಲಸ ಮಾಡುವವರೆ. ಆದರೆ ಇವರ ಕಟೋಕ್ತಿಗಳನ್ನು ಯಾರೂ ಸಹಿಸುವುದಿಲ್ಲವಲ್ಲ! ಒಳ್ಳೆ ಕೆಲಸ ಮಾಡಿಯೂ ಬೈಯಿಸಿಕೊಳ್ಳುವವರಾರು? ಆಗಲೇ ಯಾವುದೋ ಒಂದು ನಿರ್ಧಾರಕ್ಕೆ ಅಜ್ಜಿ ಬಂದಿದ್ದಳು. ತಾನು ಜೀವಂತವಾಗಿರದಿದ್ದರೆ ಇವರ (ಅಜ್ಜನ) ಹೆಣವೂ ಅನಾಥವಾಗಿ ಬಿಡಬಹುದು. ಆದ್ದರಿಂದ ತಾನು ಬದುಕಲೇಬೇಕು. ಚೆನ್ನಾಗಿ ಗಟ್ಟಿಮುಟ್ಟಾಗಿ, ಅಜ್ಜನ ಸೇವೆಗಾಗಿ! ಅಂದು ಆಕೆ ತೆಗೆದುಕೊಂಡ ನಿರ್ಣಯ ಇಂದು ಸುರೇಶನೆದುರು ಆಕೆ ಜೀವನ ಭಿಕ್ಷೆ ಬೇಡುವಂತೆ ಮಾಡಿತ್ತು. ಆಕೆ ಬದುಕಲೇಬೇಕೆಂದು ನಿರ್ಧರಿಸಿಯೂ ಆಗಿತ್ತು. ಮುತ್ತೈದೆ ಸಾವಿನ ಹುಸಿ ಭ್ರಾಂತಿಯಿಂದ ಆಕೆಯ ಕರ್ತವ್ಯಪ್ರಜ್ಞೆ ಹೊರಸ್ಫೋಟಿಸಿ ನಲಿಯುತ್ತಿತ್ತು. ಅವಳೊಳಗಿನ ಮುತ್ತೈದೆಗೆ ತಂತಾನೆ ಸಾವು ಬಂದಿತ್ತು.

❖

# ಒಂದು ಚಪ್ಪಲಿ ಪ್ರಕರಣ

ಮುಂಗಾರು ಮಳೆ ಧೋ ಧೋ ಎಂದು ಸುರಿಯುತ್ತಿದ್ದರೂ ಬಸವಣ್ಣಿಗೆ ಅದರ ಪರಿವೆಯೇಯಿಲ್ಲ. ಭರ್ರನೆ ಬೀಸುವ ಛಳಿಗಾಳಿಯಾಗಲಿ, ಆಗಾಗ ಕಡ್ ಕಡಲ್ ಎಂದು ಹೊಡೆಯುವ ಗುಡುಗು ಸಿಡಿಲುಗಳಾಗಲಿ ಅವನ ಏಕಾಗ್ರತೆಯನ್ನು ಕದಲಿಸಲಾರದಾಗಿವೆ. ತಾನೀಗ ಸೀದಾ ರಾವ್ ಸಾಹೇಬರ ದಲಾಲಿ ಅಂಗಡಿ ತಲುಪಬೇಕೆಂಬುದೊಂದೆ ಆತನ ನೇರ ಗುರಿ. ತನ್ನ ಮಾಲನ್ನು (ಹತ್ತಿ) ತಾನು ಹೇಳಿದ ರೇಟಿಗಿಂತಲೂ ಕಡಿಮೆ ಮಾಡಿ, ಅದೂ ಕ್ವಿಂಟಾಲಿಗೆ ಮೂರು - ನೂರು ರೂಪಾಯಿ ಕಡಿಮೆ ಮಾಡಿ ವಿಕ್ರಿ (ಮಾರು) ಮಾಡಿದ್ದು ಬಸವಣ್ಣಿಯ ರಕ್ತ ಕುದಿಯುವಂತೆ ಮಾಡಿದೆ. ವರ್ಷಾನುಗಟ್ಟಲೇ ಸ್ಟಾಕ್ ಇಟ್ಟು ಅಪದ್ಭಾಂಧವನಂತೆ ನೋಡಿಕೊಂಡ ಮೂರು ಕ್ವಿಂಟಾಲ್ ಹತ್ತಿಗೆ ಕೇವಲ ಹನ್ನೊಂದು ನೂರು ರೂಪಾಯಿ. ಏನಿಲ್ಲೆಂದರೂ ತನಗೆ ಎರಡು ಸಾವಿರ ರೂಪಾಯಿ ಬರಬಹುದೆಂದು ಲೆಕ್ಕ ಹಾಕಿದ ಆತನಿಗೆ ನಿನ್ನೆ ಸಂಜೆ ತನ್ನ ತಮ್ಮ ಬಂದು ಹತ್ತಿ ಮಾರಾಟವಾದ ಬೆಲೆಯ ಬಗ್ಗೆ ಹೇಳಿದಾಗ ಸಿಟ್ಟು ದುಃಖ ಒಮ್ಮೆಲೇ ಬಂದಿದ್ದವು. ಕ್ವಿಂಟಾಲಿಗೆ ಏಳು ನೂರಕ್ಕಿಂತ ಕಡಿಮೆ ಬೆಲೆ ಬಂದರೆ ರಿಪೀಜ್ (ರೆಫ್ಯೂಜ್) ಮಾಡಿಸಲು ತಾನು ಸ್ಪಷ್ಟವಾಗಿ ಹೇಳಿದ್ದರೂ ಅಂಗಡಿಯ ಮಾಲಿಕ ರಾವ್ ಸಾಹೇಬರು ಜೋರಾವರಿ ಮಾಡಿ ಹತ್ತಿ ಮಾಲನ್ನು ವಿಕ್ರಿ ಮಾಡಿಸಿಯೇ ಬಿಟ್ಟರಂತೆ. ಬಸವಣ್ಣಿ ತನ್ನಷ್ಟಕ್ಕೆ ತಾನೆ "ಎಷ್ಟು ಕೊಬ್ಬು ಅವನಿಗೆ" ಅಂದುಕೊಳ್ಳುತ್ತಲೇ ರಾತ್ರಿ ಕಳೆದಿದ್ದ.

ಈಗ ತಾನು ರಾವ್ ಸಾಹೇಬರ ದಲಾಲಿ ಅಂಗಡಿಗೆ ಹೋಗಿ ವಿಕ್ರಿ ಆದದ್ದನ್ನು ರಿಪೀಜ್ ಮಾಡಿಸಲೇಬೇಕು. ಇಲ್ಲವಾದಲ್ಲಿ ಎಸ್.ಎಸ್.ಎಲ್.ಸಿಯನ್ನು ಮೆರಿಟ್‌ನಲ್ಲಿ ಪಾಸಾಗಿ ಧಾರವಾಡಕ್ಕೆ ಕಾಲೇಜಿಗೆ ಹೊರಟಿರುವ ತನ್ನ ಪ್ರೀತಿಯ ಮಗನಿಗೆ ಫೀ ತುಂಬಲು ಬೇಕಾದ ಹಣ ಕೊಡುವದೂ ಅಸಾಧ್ಯ. ವಿಕ್ರಿಯಾದ ನಂತರ ರಿಪೀಜ್ ಮಾಡಿಸುವ ತನ್ನ ನಿರ್ಧಾರ ಸರಿಯೇ? ಎಂಬುದು ಒಂದೆಡೆಯಾದರೆ, ಸಾಧ್ಯವೇ ಎನ್ನುವುದು ಮತ್ತೊಂದೆಡೆ. ಯಾಕೆಂದರೆ ಒಮ್ಮೆ ವಿಕ್ರಿ ಮಾಡಿದ ಮಾಲನ್ನು ರಿಪೀಜ್ ಮಾಡಿಸಲು ವಾಯದೆ ಪ್ರಕಾರ ಆಗುವುದಿಲ್ಲ. ಅಲ್ಲದೇ ರಾವ್ ಸಾಹೇಬರು ಅತ್ಯಂತ ಪ್ರತಿಷ್ಠೆಯ ಮನುಷ್ಯರು. ದೂರದ ಕೊಲ್ಲಾಪುರ, ಬಾಂಬೆಗಳಿಗೂ ಮಾಲು ಪೂರೈಕೆ ಮಾಡುವ ಅವರ ವರ್ಚಸ್ಸು ಅಪಾರವಾದದ್ದು.

ಒಳಗೆ ಉದ್ಭವಿಸುತ್ತಿರುವ ಈ ನಾನಾ ಸವಾಲುಗಳೂ ಬಸವಣ್ಣಿಯ ನಿರ್ಧಾರದಲ್ಲಿ ಏನೇನೂ ಬದಲಾವಣೆ ತರಲಿಲ್ಲ. ಆತ ಸೀದಾ ರಾವ್‌ಸಾಹೇಬರ ಅಂಗಡಿ ಕಡೆ ಹೆಜ್ಜೆ ಹಾಕಿದ.

ಬುಸುಗುಡುತ್ತ ಬರುತ್ತಿರುವ ಬಸವಣ್ಣಿಯನ್ನು ದಲಾಲಿ ಅಂಗಡಿಯ ಮ್ಯಾನೇಜರ್ ಚನ್ನಗೌಡನಲ್ಲದೇ ಬೇರೆ ಯಾರೂ ಗಮನಿಸಿರಲಿಲ್ಲ. ಅಲ್ಲಲ್ಲಿ ಕುಳಿತು ಲೆಕ್ಕಾಚಾರದಲ್ಲಿ ತೊಡಗಿದ ರೈತರಿಗೆ ತಮ್ಮದೇ ಆದ ಸಮಸ್ಯೆಗಳಿವೆ, ಕೊರತೆಗಳಿವೆ, ಬೇರೆಯವರನ್ನು ಗಮನಿಸುವಷ್ಟು ವ್ಯವಧಾನ, ಮಾನಸಿಕ ಸಮಾಧಾನ ಅವರಲ್ಲಿಲ್ಲ. ನಿಂತ ನಾಲ್ಕೈದು ಜನರನ್ನು ಸೀಳಿ ಗೂಳಿಯಂತೆ ನುಗ್ಗಿದ. ಬಸವಣ್ಣಿಯನ್ನು "ಬಾರ ಬಾರಪಾ" ಎಂದು ತಮ್ಮ ಎಲೆಯಡಿಕೆಯ ಬಾಯಿಂದ ಬರಮಾಡಿಕೊಂಡು ಚನ್ನಗೌಡ ಕೂತಕೊಳ್ಳಲು ಹೇಳಿದ. ಅದ್ಯಾವುದಕ್ಕೂ ಕಿವಿಗೊಡದ ಬಸವಣ್ಣಿ "ಮ್ಯಾನೇಜರೇ ನನ್ನ ಮಾಲನ್ನು ಕ್ವಿಂಟಾಲಿಗೆ 700 ರೂ.ಗಿಂತ ಕಡಿಮೆ ಬಂದರೆ ನಾನು ರಿಪೀಜ್ ಮಾಡಲು ತಿಳಿಸಿದ್ದರೂ ನೀವ್ಯಾಕೆ ವಿಕ್ರಿ ಮಾಡಿಸಿದಿರಿ?" ಎಂದು ನೇರವಾಗಿ ವಿಷಯ ಪ್ರಸ್ತಾಪ ಮಾಡಿದ. ಬಾಯಲ್ಲಿದ್ದ ತಾಂಬೂಲದ ಜೊಲ್ಲು ಜೋರಾಗಿ ಇಡೀ ದೇಹವೇ ತೊಂದರೆಗೀಡಾದವನಂತೆ ಕಂಡ ಚನ್ನಗೌಡ ಧೋತರದ ತುದಿಯನ್ನು ಎಡಕೈಯಲ್ಲಿ ಹಿಡಿದು ಬಾಯಿ ಬಿಗಿದುಕೊಂಡು ಉಗುಳಿ ಬರಲು ಮೇಲೆದ್ದ. ಬಾಯಿಯಲ್ಲಿಯ ಉಗುಳು ಪಿಚಕ್ ಎಂದು ಕೆಂಪು ನೀರಿನ ಬಾಣದಂತೆ ತುಸು ದೂರ ಹೋಗಿ ನೆಲಕ್ಕಪ್ಪಳಿಸುತ್ತಿದ್ದಂತೆಯೇ ಹೆರಿಗೆ ಆದ ಹೆಣ್ಣು ಮಗಳಂತೆ ಹಗುರ ಅನುಭವಿಸಿದ ಗೌಡ ತಿರುಗಿ ಬಂದ ಕುಳಿತ. ಈ ತುಸು ಹೊತ್ತಿನಲ್ಲಿಯೇ ಅಕ್ಕಪಕ್ಕದಲ್ಲಿ ಕುಳಿತು ಲೆಕ್ಕ ತೀರಿಸುತ್ತಿದ್ದ ಇತರ ಕಾರಕೂನರೂ ಬಸವಣ್ಣಿಯ

ಕೆಂಗಣ್ಣುಗಳನ್ನು ತಮ್ಮ ಕಳ್ಳನೋಟದಿಂದ ನೋಡಿಯೂ ನೋಡದವರಂತೆ ತಮ್ಮ ತಮ್ಮ ಕೆಲಸವನ್ನು ಯಾಂತ್ರಿಕವಾಗಿ ಮುಂದುವರೆಸಿದರು.

ತಿರುಗಿ ಬಂದು ಕುಳಿತ ಚನ್ನಗೌಡ "ಯಾಕಾಪ್ಪಾ ಯಾಕ ಒಮ್ಮೆಲೆ ಮೈಮ್ಯಾಲ ದೇವರು ಬಂದವನಂತ ಮಾಡತೀದಿ? ಸ್ವಲ್ಪ ಸುಧಾರಿಸಿಕೊ..... ಸಮಾಧಾನದಿಂದ ಮಾತಾಡೋಣು" ಎಂದ ಬಸವಣ್ಣೆಯನ್ನುದ್ದೇಶಿಸಿ, ಹೆಗಲ ಮೇಲಿನ ಕಂದು ಬಣ್ಣದ ಟವೆಲ್‌ನಿಂದ ಮೇಲಿನ ಬೆವರು ಒರೆಸುತ್ತ ಬಸವಣ್ಣಿ...... "ಮೈಮ್ಯಾಲ ದೇವರ ಅಲ್ಲರೀ ದೆವ್ವ ಬಂದೈತಿ ದೆವ್ವ, ನೀವು ಹಿಂಗ ನಮ್ಮಂತಾರ ಮಾಲನ್ನು ನಿಮ್ಮ ಮನಸ್ಸಿಗೆ ಬಂದಾಂಗ ಮಾರಿಕೊಂಡ ಕುಂತರ ಆ ದೇವರೂ ಮೂಲಿಗುಂಪು ಆಗ್ತಾನ" ಇನ್ನೂ ಏನೇನು ಹೇಳಬೇಕೆಂದಿದ್ದನೋ ಏನೋ ನಡುವೆಯೇ ಚನ್ನಗೌಡ 'ಛೇ ಛೇ ಹಂಗೆಲ್ಲಾ ಸಿಟ್ಟಿನ ಕೈಯಾಗ ಬುದ್ಧಿ ಕೊಡಬ್ಯಾಡ ಬಸವಣ್ಣೆಪ. ಧನೇರು ಬರ್ಲಿ ಎಲ್ಲಾರೂ ಕುತಗೊಂಡು ಮಾತಾಡಿ ವಿಷಯಾ ಬಗೀ ಹರಿಸೋಣ" ಎಂದ. ಇಷ್ಟಕ್ಕೇನೆ ತನ್ನ ದಾರಿಗೆ ಗೌಡ ಬರುತ್ತಿರುವುದರ ಸುಳಿವು ಸಿಕ್ಕಂತಾಗಿ ಬಸವಣ್ಣಿ ಆದದ್ದಾಗಲಿ ಮಾಲೀಕರು ಬರುವವರೆಗೆ ಕಾಯ್ದರಾಯ್ತು ಎಂದುಕೊಂಡು ಪಕ್ಕದ ಗೋಡೆಗೊರಗಿ ಧೋತರದ ಚುಂಗಿನಿಂದ ಗಾಳಿ ಹೊಡೆದುಕೊಳ್ಳತೊಡಗಿದ. ತಾನು ಯಾವುದೋ ದೊಡ್ಡ ಯುದ್ಧದಲ್ಲಿ ಗೆದ್ದವನಂತೆ ಒಳಗೊಳಗೇ ಖುಷಿಗೊಂಡ ಚನ್ನಗೌಡ ತನ್ನ ಕೆಲಸದಲ್ಲಿ ಪುನಃ ತಲ್ಲೀನನಾದ.

ದಲಾಲಿ ಅಂಗಡಿ ಮಾಲಿಕ ರಾವ್ ಸಾಹೇಬರು ವಖಾರದ ಮುಖ್ಯ ಬಾಗಿಲಿಗೆ ಬರುವುದಕ್ಕೂ ಕೋಣೆಯೊಳಗಿನ ದೊಡ್ಡ ಗಡಿಯಾರ ಸಂಜೆ ಆರು ಬಡಿಯುವುದಕ್ಕೂ ಸಮವಾಯ್ತು. ಮಧ್ಯಮ ಎತ್ತರದ ಗೋಧಿಗೆಂಪಿನ ಮೈ ಬಣ್ಣದ, ಚೈನಾ ಸಿಲ್ಕ್ ಜುಬ್ಬಾ, ಮೆಂಚೆಸ್ಸರ ಧೋತರದ ರಾವ್ ಸಾಹೇಬರು ದೂರದಿಂದ ನೋಡುವವರಿಗೆ ಮದುವೆಗೆ ನಿಂತ ವರನಂತೆ ಕಾಣುತ್ತಿದ್ದರು. ಅವರು ಪೂಸಿಕೊಂಡ ಮುತ್ತಗಾರ ರಾಮಯ್ಯ ಕೊಟ್ಟ ಅತ್ತರಿನ (ಗಂಧದೆಣ್ಣೆ) ವಾಸನೆ ಬಡಿಯುತ್ತಲೇ ವಠಾರದಲ್ಲಿ ಶೇಂಗಾ, ಹತ್ತಿ, ಮೆಣಸಿಕಾಯಿ ಇತ್ಯಾದಿ ತೂಗುವ, ಸ್ವಚ್ಛಗೊಳಿಸುವ ಕೆಲಸದಲ್ಲಿದ್ದ ಆಳುಗಳು ಕೀಲಿಕೊಟ್ಟ ಗೊಂಬೆಗಳಂಗೆ ಸರಬರನೇ ತಮ್ಮ ಕೆಲಸ ಚುರುಕುಗೊಳಿಸಿದರು. ಗಂಭೀರವಾದ ಹೆಜ್ಜೆ ಹಾಕುತ್ತಾ ಒಳಬರುತ್ತಿದ್ದ ರಾವ್ ಸಾಹೇಬರಿಗೆ ಕೆಲಸ ಮಾಡುತ್ತಿದ್ದ ಆಳುಗಳ ಹರಿದ ಬಟ್ಟೆಗಳಾಗಲೀ ಸೀರಿ ಧೋತರ ಮೇಲೆತ್ತಿಕಟ್ಟಿದ್ದರಿಂದ ಮೊಳಕಾಲ್‌ವರೆಗೆ ಅದು ಇದು ತೆರೆದು ಆದ ಗೀರು, ಗಾಯಗಳಾಗಲೀ, ತಲೆಯಿಂದ ಹಣೆಗಿಳಿದು ಮೂಗಿನ ಮೇಲಿಂದ ತೊಟ್ಟಿಕ್ಕುತ್ತಿರುವ ಅವರ ಬೆವರಾಗಲಿ ಕಾಣಲೇ ಇಲ್ಲ. ನೇರವಾಗಿ ಅಂಗಡಿ ಪ್ರವೇಶಿಸಿ ಕರ‍್ರನೇ ಮಿನುಗುವ ಬೂಟು ಕಳೆದು ತಮ್ಮ ಕುರ್ಚಿಗೆ ಕುಳಿತರು. ಇದಕ್ಕಾಗಿಯೇ ಕಾಯುತ್ತಿದ್ದ ಬಸವಣ್ಣಿ ದಿಗ್ಗನೆ ಎದ್ದು ಧೋತರ ಸರಿಪಡಿಸಿಕೊಂಡು ರಾವ್ ಸಾಹೇಬರಿಗೆ ಮಾಡಿದ ನಮಸ್ಕಾರವೂ ವ್ಯರ್ಥವಾಗಿ ಪ್ರತಿಕ್ರಿಯೆ ಸಿಕ್ಕಿದ್ದಕ್ಕೆ ತುಸು ಒಳಗೊಳಗೇ ಮುನಿಸಿಕೊಂಡ. ಪರಿಸ್ಥಿತಿಯ ಅರಿವಾಗಿ ಕೈಯಲ್ಲಿ ದಿನವಹಿ ಹಿಡಿದುಕೊಂಡು ಚನ್ನಗೌಡ ಸರ‍್ರನೇ ರಾವ್ ಸಾಹೇಬರ ಕೋಣೆ ಒಳನುಗ್ಗಿದ. ಅವಸರದಲ್ಲಿ ತನ್ನ ಕಚ್ಚೆ ಕಳೆದದ್ದೂ ಆತನಿಗೆ ಅರಿವಿರಲಿಲ್ಲ. ವಹಿಯನ್ನು ರಾವ್‌ಸಾಹೇಬರ ಎದುರಿನ ಟೇಬಲ್ ಮೇಲೆ ಇಟ್ಟ ನಂತರವೇ ಕಚ್ಚೆ ಹಾಕಿಕೊಂಡ. ತುಸು ಮತ್ತಷ್ಟು ಮುಂದೆ ಬಾಗಿ ರಾವಸಾಹೇಬರ ಕಿವಿ ಹತ್ತಿರ ಬಾಯಿ ತಂದು "ಧಣೇರ ಧಣೇರ" ಎಂದು ನಡೆದ ವಿಷಯ ಹೇಳಲು ಹಾತೊರೆದ. "ಹೇಳು" ಅನ್ನುವಂತೆ ಗೋಣು ಹಾಕಿದ ಧಣಿಗೆ ಚನ್ನಗೌಡ ಬಸವಣ್ಣಿಯ ವಿಷಯ ಪ್ರಸ್ತಾಪಿಸಿದ. ವಿಷಯದ ಸೂಕ್ಷ್ಮತೆಯನ್ನು ಸಂಪೂರ್ಣವಾಗಿ ಗ್ರಹಿಸಿದ ರಾವ್ ಸಾಹೇಬರು ಬಸವಣ್ಣಿಯನ್ನು ಕರೆತರಲು ಹೇಳಿದರು.

ಬಾಗಿಲ ಹೊರಗೆ ನಿಂತು "ನಮಸ್ಕಾರ ಧಣೇರಿಗೆ" ಎಂದು ಬಸವಣ್ಣಿ ತನ್ ಅಹವಾಲು ಹೇಳುತ್ತಾ ಕೊನೆಗೆ "ಹ್ಯಾಂಗರ ಮಾಡಿ ನನ್ನ ಮಾಲಿಗೆ ಬಂದ ವಿಕ್ರಿ ಟೆಂಡರ್ ರಿಪೀಜ ಮಾಡಸ್ರಿಯಪ್ಪಾ" ಅಂದ.

"ಅದಹೆಂಗ್ ಸಾಧ್ಯ?"

"ನೀವ್ ಮನಸು ಮಾಡಬೇಕ್ರಿ ಭಾಳ ಅಡಚಣೆ ಐತಿ. ಮಗ ಕಾಲೇಜಿಗೆ ಹೋಗಾಂವ ಅದಾನ. ನನ್ನ ಕೈ ನಿಂತ್ಕೈತ್ರೀ" ಬಸವಣ್ಣಿ ಅಂಗಲಾಚಿದ. ಇಷ್ಟೊತ್ತಿಗಾಗಲೇ ಅಂಗಡಿಯೊಳಗಿದ್ದ ಜನರೆಲ್ಲ ಏನು ನಡೆಯುತ್ತಿದೆಂದು ಕುತೂಹಲಗೊಂಡು ಬಸವಣ್ಣಿ ಹಾಗು ರಾವಸಾಹೇಬರ ಮಾತುಗಳನ್ನು ಆಲಿಸತೊಡಗಿದ್ದರು. ಹೀಗೆ ಜನರ ಲಕ್ಷ್ಯ ತಮ್ಮ ಕಡೆ ಹೊರಳಿದ್ದು ನೋಡಿ ಧಣಿ ಜಾಗ್ರತಗೊಂಡು ಮತ್ತಷ್ಟು ಠೀವಿಯಿಂದಲೇ "ಬೇಕಾಯ್ದೆಸೀರ್ ಇಂಥಾ ಮಾಂಗಣಿ ಮಾಡಿದ್ರ ಏನ್ ಮಾಡೋದು ಬಸವಣ್ಣಿ? ನಮ್ಮ ರೀತಿ ರಿವಾಜು ಬಿಟ್ಟುಕೊಟ್ಟು ವ್ಯವಹಾರ ಮಾಡಾಕ ಅಗ್ತೈತಿಯೇನು? ಹಿಂಗೆಲ್ಲಾ ಮಾಡೋದು ಸರಿ ಅಲ್ಲ" ತುಸು ಜೋರಿನಿಂದಲೇ ಎಚ್ಚರಿಸಿದರು. ಕೋಪ ದುಃಖ ಎರಡೂ ಒಂದಾಗಿ ಒಳಗೊಳಗೇ ಕುದಿಯುತ್ತಿದ್ದ ಬಸವಣ್ಣಿ ಇನ್ನೂ ಹೆಚ್ಚು ತಡಕೊಳ್ಳದಾದ, "ನಿನ್ನಂಗಡಿಗೆ ಮಾಲು ಹಾಕಿದ್ದ ತಪ್ಪಾಗೈತಿ ಧಣಿ. ನಮ್ಮ ಹೊಟ್ಯಾನ ಸಂಗ್ಟಾ ನಿನಗೆಂಗ್ ತಿಳೀಬೇಕು. ಏನರ ಮಾಡು ನನ್ನ ಮಾಲು ನನಗ ವಾಪಾಸ ಮಾಡಿಸಿಬಿಡು, ಮತ್ತ ನಾ ಎಲ್ಲೆರ ಬ್ಯಾರೆ ಕಡೆ ಹೋಗಿ ವಿಕ್ರಿ ಮಾಡಸ್ತೀನಿ" ತನ್ನ ಅಚಲ ನಿರ್ಧಾರವನ್ನು ಮತ್ತಷ್ಟು ಜೋರಾಗಿ ಹೇಳಿದ ಬಸವಣ್ಣಿಯ ಈ ನಡತೆ ಧಣಿಗೆ ವಿಪರೀತ ಸಿಟ್ಟು ತರಿಸಿತು. "ಏನ್ಲೆ ಏನೋ ಹೋಗ್ಲಿ ಅಂತ ಅಂದ್ರ ಭಾಳ ಅಡ್ಡಡ್ಡ ಮಾತಾಡ್ತೀಯಲ್ಲ? ಮೈಮ್ಯಾಲ ಖಬರ ಐತೊ ಇಲ್ಲೊ" ಜಬರಿಸಿದ ಧಣಿ ಖುರ್ಚಿ ಬಿಟ್ಟು ಹೊರ ನಡೆಯಲು ಮುಂದಾದ. "ನಿಲ್ಲ ಧಣಿ ಹಂಗ ಹೋಗಬ್ಯಾಡ, ಪರಿಸ್ಥಿತಿ ನೆಟ್ಟಗಾಗಕಿಲ್ಲ" ತನ್ನ ಕೈ ಧಣಿಗೆ ಅಡ್ಡ ಹಿಡಿದ ಬಸವಣ್ಣಿ. "ಏನ ಏನಂತ ತಿಳಿದೀಲೆ ಬಸವಣ್ಣಿ" ಮೈಮ್ಯಾಲಿನ ಚರ್ಮಾ ಸುಲಿಸೇನು. ತಗೀ ಕೈನ" ಎದೆಯುಬ್ಬಿಸಿ ಬಸವಣ್ಣಿಯ ಕೈಯನ್ನು ಜೋರಾಗಿ ಸರಿಸಿ ಮುನ್ನಡೆಯಬೇಕೆಂದ ಧಣಿ. ಇಷ್ಟೊತ್ತಿಗೆ ಅಂಗಡಿಯೊಳಗಿನ ಜನವಿಡೀ ಎರಡೂ ಬದಿಗೆ ನಿಂತು ವಿಸ್ಮಯದಿಂದ ನೋಡತೊಡಗಿದರು. ಈ ಅಪೂರ್ವ ಘಟನೆಯನ್ನು, ಎಂದೂ ಅವರ್ಯಾರೂ ಹೀಗೆ ರಾವಸಾಹೇಬರಿಗೆ ಎದುರಾಡಿದ್ದಿಲ್ಲ. ಅವರು ಹೇಳಿದ್ದು ಇವರು ಕೇಳಿ 'ಹೂಂ ಧಣೇರ' ಅಂದದ್ದು ಮಾತ್ರ ಅವರಿಗೆ ಗೊತ್ತು. ಬಸವಣ್ಣಿಯ ಈ ನಡತೆ ಕೆಲವರಿಗೆ ವಿಚಿತ್ರವೆನ್ನಿಸಿದ್ದರೆ ಇನ್ನು ಕೆಲವರಿಗೆ ಒಳಗೊಳಗೇ ಖುಷಿ ನೀಡುತ್ತಿತ್ತು ಎಂದೋ ತಮಗಾದ ಅನ್ಯಾಯವನ್ನು ಬಸವಣ್ಣಿಯ ಬಂಡಾಯದ ಮೂಲಕ ಅವರೂ ಸರಿಪಡಿಸಿಕೊಳ್ಳುತ್ತಿರುವಂತೆನಿಸುತ್ತಿತ್ತು.

ತನ್ನ ಕೈಯನ್ನು ರಾವ್ ಸಾಹೇಬರು ಎಷ್ಟು ಜೋರಿನಿಂದ ತೆಗೆದೊಗೆದರೊ ಅದಕ್ಕಿಂತಲೂ ದುಪ್ಪಟ್ಟು ಜೋರಿನಿಂದ ಬಸವಣ್ಣಿಯ ಕೈ ತಿರುಗಿ ಬಂತು. ಫಕ್ಕನೆ ಧಣೇರ ಚೈನಾಸೀಲ್ಕ ಜುಬ್ಬಾದ ಕೊರಳ ಪಟ್ಟಿಯನ್ನು ಹಿಡಿದು ಬಿಟ್ಟಿತು. ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಸುದ್ದಿ ಅಕ್ಕಪಕ್ಕದ ದಲಾಲಿ ಅಂಗಡಿಗೆ ಮುಟ್ಟಿದ್ದರಿಂದ ಅಲ್ಲಿಯ ಮಾಲೀಕರಾದ ಬಾಬಣ್ಣ, ಶ್ಯಾಮರಾವ್ ಮುಂತಾದವರು ಧಾವಿಸಿ ಬಂದರು. ಇಷ್ಟೊತ್ತಿಗಾಗಲೇ ಬಸವಣ್ಣಿ ಧಣೇರ ನಡುವೆ ಕೈ ಕೈ ನಡೆದೇ ಬಿಟ್ಟಿತ್ತು. ಅಜಾನುಬಾಹು ಬಸವಣ್ಣಿಗೆ ಧಣಿ ಈಡಾಗಲಿಲ್ಲ.

"ಧಣಿ ನಿನ್ನ ಇವತ್ತು ಓಡಿಸ್ಯಾಡಿ ಚಪ್ಪಲೀಲೇ ಹೊಡಿಲಿಲ್ಲಾಂದ್ರ ನನ್ನ ಹೆಸರು ಬಸವಣ್ಣಿನೇ ಅಲ್ಲ" ಜೋರಾಗಿ ಚೀರಿದ.

"ಸೂಳೆ ಮಗನೆ ಗಂಡಸಾಗಿದ್ರ ಮಡಿ ತೋರಸ್ಲೆ ನಿನ್ನ ಕೈಗೆ ಬೇಡಿ ಹಾಕಸ್ಲಿಲ್ಲಾಂದ್ರ ನನ್ನ ಹೆಸರೂ ರಾವ್ ಸಾಹೇಬನ ಅಲ್ಲಲೆ" ಆರ್ಭಟಿಸಿದ ಧಣಿ.

ಸಿಟ್ಟಿನಲ್ಲಿ ತಾನೇನು ಮಾಡುತ್ತೀದ್ದೆನೆಂದು ಅರಿವಾಗದೇ ಕಾಲಲ್ಲಿಯ ಚಪ್ಪಲಿಯನ್ನು ಕೈಗೆ ತೆಗೆದುಕೊಂಡ ಬಸವಣ್ಣಿ. ಕಂಗಾಲಾದ ಧಣಿ ಹೆದರಿ ಓಡತೊಡಗಿದ. ಬೆನ್ನಟ್ಟಿದ ಬಸವಣ್ಣಿ ತನ್ನ ಎಡಗಾಲಿನ ಕೆರವಿನಿಂದ ಧಣೀರ ಬೆನ್ನಿಗೆ ಹೊಡದೇ ಬಿಟ್ಟ.

♦

ಸೋಮವಾರವೇ ಲಕ್ಷ್ಮೇಶ್ವರದ ಜೆ.ಎಂ.ಎಫ್.ಸಿ. ಕೋರ್ಟಿನಲ್ಲಿ ಬಸವಣ್ಣಿಯ ಮೇಲೆ ರಾವ ಸಾಹೇಬರು ದಾಖಲು ಮಾಡಿದ ಕ್ರಿಮಿನಲ್ ಮೊಕದ್ದಮೆ ಬರುವದಿದೆ ಎಂದು ಊರಿಗೆಲ್ಲ ಸುದ್ದಿ ಹರಡಿತು. ಶಿಗ್ಲಿಯಲ್ಲದೇ

ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲ ಕಾಡ್ಗಿಚ್ಚಿನಂತೆ ಭರ್ರನೆ ಚಾಚಿತ್ತು ವಿಷಯ. ಬೆಳಿಗ್ಗೆ 10ರಿಂದಲೇ ಕೋರ್ಟಿನ ಆವರಣದಲ್ಲಿ ಜನ ಸೇರತೊಡಗಿದ್ದರು. ಅಂದು ಚಹದ ಅಂಗಡಿಗಳಲ್ಲಿ ತಿಂಡಿ ತಿನಿಸುಗಳೆಲ್ಲ ಖಾಲಿ ಆಗುದೊತ್ತಟ್ಟಿಗಿರಲಿ ಕಾಲಿಡಲು ಜಾಗೆ ಇರಲಿಲ್ಲ. ಎಲ್ಲೆಂದರಲ್ಲಿ ಗುಂಪು ಗುಂಪಾಗಿ ಪಿಸುಧ್ವನಿಯಲ್ಲಿ ಮಾತನಾಡುತ್ತಿದ್ದವರು ಹಲವಾರು ಜನರಾದರೆ ಬಸವಣ್ಣೆಯನ್ನು ಪೋಲೀಸರೇ ಕೈಗೆ ಬೇಡಿ ಹಾಕಿಯೇ ತರುತ್ತಾರೇನೋ ಎಂದು ಉಸಿರು ಬಿಗಿಹಿಡಿದು ಕುತೂಹಲದಿಂದ ದಾರಿ ಕಾಯುತ್ತಿದ್ದವರು ಅನೇಕರು. ಉಷ್ ಉಷ್ ಎಂದು ಬಿಳಿ ಯುನಿಫಾರ್ಮ ಮೇಲೆ ಕೆಂಪು ಪಟ್ಟಿಯನ್ನು ಅಡ್ಡ ಬಿಗಿದುಕೊಂಡ ಸಿಪಾಯಿ ಅನುತಲೇ ಕೋರ್ಟ ಒಳಗಡೆ ಇದ್ದ ದನಿಗಳೆಲ್ಲ ಸಬ್ಧವಾಗಿ ಸಂಪೂರ್ಣ ಶಾಂತತೆ ಆವರಿಸುತ್ತಿದ್ದಂತೆಯೇ ಜೆ.ಎಮ್.ಎಫ್.ಸಿ.ಯವರು ಗಂಭೀರವಾಗಿ ನಡೆದು ಬಂದು ನಿಂತವರಿಗೆಲ್ಲ ಪ್ರತಿ ನಮಸ್ಕರಿಸಿ ಆಸನಾರೂಢರಾದರು. ಎದುರಿಗೆ ಹಾಕಿದ ಗಡಿಯಾದ ಹನ್ನೊಂದು ಗಂಟೆ ತೋರಿಸುತ್ತಿತ್ತು.

ಮೊದಲರ್ಧ ಗಂಟೆ ಕೇವಲ ಪ್ರಕರಣ ಕೂಗಿಸುವುದು ಮುದ್ದತ್ತು ಪಡೆಯುವದು ನಡೆಸುವ ಪ್ರಕರಣಗಳಿದ್ದರೆ ಮಾತ್ರ ಅವುಗಳನ್ನು ಇಡುವದು, ಮತ್ತೆ ಮುಂದಿನ ಪ್ರಕರಣಕ್ಕೆ ಹೋಗುವುದು ಇತ್ಯಾದಿ ನಡೆಯಿತು. ಸರಿ ಸುಮಾರು ಈ ಹೊತ್ತಿಗೇನೇ ಬಸವಣ್ಣಿ ತನ್ನ ವಕೀಲರ ಜೊತೆ ಕೋರ್ಟ ಆವರಣ ಪ್ರವೇಶಿಸಿದ. ಜನರ ನೂಕು ನುಗ್ಗಲು ಹೆಚ್ಚಾಗಿ ಪಾಟೀಲ ವಕೀಲರು "ನಿಮಗೆ ಕೈ ಮುಗೀತೇನ್ರಪ್ಪಾ ದೌಡು ಸ್ವಲ್ಪ ದಾರಿ ಬಿಡಿ" ಎಂದು ಜನರನ್ನು ಸರಿಸುತ್ತಾ ಸರಿಸುತ್ತಾ ಬಂದರು ಅನೇಕರಿಗೆ ಆಶ್ಚರ್ಯವೋ ಆಶ್ಚರ್ಯ. ಬಸವಣ್ಣಿ ಕೈಗೆ ಬೇಡಿಯೇ ಇಲ್ಲ. ಇದು ಅವನ ಪಾಟೀಲ ವಕೀಲರ ಶ್ಯಾಣಾತನವೆಂದು ಕೆಲವರೆಂದರೆ ಇನ್ನು ಕೆಲವರಿಗೆ ಏನೋ ಮಸಲತ್ತು ನಡೆದಿರುಬಹುದೆಂಬ ಗುಮಾನಿ.

ಮ್ಯಾಜಿಸ್ಟ್ರೇಟರ ಎದುರು ಬಾಗಿನಿಂತ ಪಾಟೀಲ ವಕೀಲರು ತಾವು ಪ್ರಕರಣ ನಡೆಸಲು ತಯಾರಿ ಯುವರ ಆನರ ಎಂದಂದು ಕುಳಿತುಕೊಂಡರು. ಎದುರಾಳಿ ರಾವ್‌ಸಾಹೇಬರ ವಕೀಲರಾದ ದೇಶಪಾಂಡೆಯವರೂ ತಾವು ತಯಾರ ಇರುವುದಾಗಿಯೂ ಪ್ರಕರಣದಲ್ಲಿ ಕೆಲ ಮುಖ್ಯ ಸಾಕ್ಷಿ ಮಾಡಿಸುವುದಾಗಿಯೂ ತಿಳಿಸಿದರು. ಪ್ರಕರಣವನ್ನು ಮಧ್ಯಾಹ್ನ ಮೂರು ಗಂಟೆಗೆ ತೆಗೆದುಕೊಳ್ಳುವುದಾಗಿ ನ್ಯಾಯಾಧೀಶರು ತಿಳಿಸಿದ ನಂತರ ಇಬ್ಬರು ವಕೀಲರು ಎದ್ದು ಹೊರ ಬಂದರು. ರಾವ್‌ಸಾಹೇಬರ ಪರ ಸಾಕ್ಷಿ ಹೇಳ ಬಂದ ಬಾಬಣ್ಣ, ಶ್ಯಾಮರಾವ್ ಕೂಡ ಒಳ್ಳೆ ಶಿಸ್ತಿನಿಂದ ತಯಾರಾಗಿ ಬಂದಿದ್ದರು. ಇಬ್ಬರ ನಡುವೆ ರಾವ್ ಸಾಹೇಬ ಸುರಕ್ಷಾ ಭಂಟರ ನಡುವಿನ ರಾಜಕುಮಾರನಂತೆ ಗಂಭೀರವಾಗಿ ನಿಂತಿದ್ದರು. ಬಾಬಣ್ಣ ಶ್ಯಾಮರಾವ ಎಂದರೆ ಭಾರೀ ವಜನಕಟ್ಟಿನ ಮನುಷ್ಯರು. 15-20 ವರ್ಷಗಳಿಂದ ನಗರಸಭೆಯ ಸದಸ್ಯರಾಗಿದ್ದವರು. ಸಮಾಜದಲ್ಲಿ ಸಹಜವಾಗಿಯೇ ಪ್ರತಿಷ್ಠಿತ ಸ್ಥಾನದಲ್ಲಿದ್ದವರು. ಇಂತಹವರು ವಿರುದ್ಧ ಸಾಕ್ಷಿ ಹೇಳಿದರೆ ಆರೋಪಿ ಬಸವಣ್ಣಿಯ ಕತೆ ಮುಗಿದಂತೆಯೇ. ಸಾಕ್ಷಿದಾರರ ಪಟ್ಟಿ ನೋಡಿ ಪಾಟೀಲ ವಕೀಲರ ಮೈ ಬೆವೆತು ಹೋಯಿತು. ಅದೂ ಅವರಿಬ್ಬರೂ ಪ್ರತ್ಯಕ್ಷದರ್ಶಿಗಳು ಅಂದ ಮೇಲೆ ಬಸವಣ್ಣಿಗೆ ಶಿಕ್ಷೆ ಖಂಡಿತ. ತಾವು ಈ ಪ್ರಕರಣದಲ್ಲಿ ಹಾಜರಾಗಲೇಬಾರದಿತ್ತು ಎಂದಂದುಕೊಂಡರು. ನಾ ನೀ ಅನ್ನುವ ದೊಡ್ಡ ದೊಡ್ಡ ವಕೀಲರು ವಕಾಲತ್ತು ಹಾಕಲು ಬಸವಣ್ಣಿಗೆ ನಿರಾಕರಿಸಿದ್ದರು. ಇದೊಂದು ಖಂಡಿತ ಶಿಕ್ಷೆ ಆಗುವ ಪ್ರಕರಣವೆಂದೂ, ಗೆದೆಯುವ ಅವಕಾಶವೇ ಇಲ್ಲವೆಂದೂ ಕೆಲ ವಕೀಲರು ಒಲ್ಲೆನೆಂದಿದ್ದರೆ ಇನ್ನು ಕೆಲವರು ರಾವ್‌ಸಾಹೇಬರಂತಹವರ ಮರ್ಯಾದೆ ನೂರಾರು ಜನರೆದುರು ಹೋಗಿರುವಾಗ ತಾವು ಬಸವಣ್ಣೆಯ ಪರ ಹಾಜರಾಗುವದು ಸರಿಯಿಲ್ಲವೆಂದೂ ವಕಾಲತ್ತು ನಿರಾಕರಿಸಿದ್ದರು. ಇಡೀ ವಕೀಲರ ಸಂಘದಿಂದಲೇ ಯಾರೂ ಹಾಜರಾಗಬಾರದೆಂದು ನಿರ್ಣಯವನ್ನು ಮಾಡಬೇಕೆಂದು ಕೆಲ ಹಿರಿಯ ವಕೀಲರು ಚರ್ಚಿಸಿಯೂ ಆಗಿತ್ತು. ಆದರೆ ಹೊಸದಾಗಿ ಬಂದ ಪಾಟೀಲ್ ವಕೀಲರಿಗೆ ಬಸವಣ್ಣಿ ಪರಿಪರಿಯಿಂದ ಬೇಡಿಕೊಂಡಿದ್ದರಿಂದಲೂ, ತನ್ನ ವರ್ಚಸ್ಸು ಬೆಳೆಯುವುದಾದರೆ ಇದೇ ಮೊಕದ್ದಮೆಯಿಂದಲೇ ಸಾಧ್ಯ ಎಂಬ ಭಂಡ ಧೈರ್ಯದಿಂದಲೂ ಆದದ್ದಾಗಲಿ ಎಂದು ಅನೇಕ ವಕೀಲರು ನಿರಾಕರಿಸಿದ್ದರೂ ಅವರು ವಕಾಲತ್ತಿಗೆ ಒಪ್ಪಿಕೊಂಡಾಗಿತ್ತು. "ವಕೀಲರ ನೀವೇನೂ ಹೆದರಬ್ಯಾಡ್ರಿ ನನ್ನ ದೈವದಾಗ ಇದ್ದಾಂಗ ಆಗತೈತಿ" ಎಂದು ಬಸವಣ್ಣಿ ಆಗಾಗ ಅಂದಿದ್ದೂ

ಅವರಿಗೆ ಮೊಕದ್ದಮೆಗೆ ವಕಾಲತ್ತು ಹಾಕುವಂತೆ ಪುಸಲಾಯಿಸಿತ್ತು. ಆದರೆ ಈಗ ತಾವು ದುಡುಕಿದರೇನೋ ಎಂಬ ಅಳುಕು ಸುರುವಾಗಿತ್ತು ಅವರಿಗೆ ಬಾರ್ ರೂಮಿನಲ್ಲಿ ಬರೀ ಬಸವಣ್ಣಿಯದೇ ಸುದ್ದಿ. ಪಾಟೀಲ್ ವಕೀಲರ ದುಡುಕಿಗೆ ಕರುಣೆ ವ್ಯಕ್ತಪಡಿಸುವವರು ಕೆಲವರಾದರೆ, ಅಪಹಾಸ್ಯದ ನಗು ಸೂಸುತ್ತಿದ್ದವರು ಕೆಲವರಾಗಿದ್ದರು.

ಪಾಟೀಲ ವಕೀಲರೂ ಎದುರಾಳಿ ದೇಶಪಾಂಡೆ ವಕೀಲರೂ ಒಬ್ಬರಿಗೊಬ್ಬರು ಸಮೀಪ ಬಂದಾಗ ಅನಿವಾರ್ಯವಾಗಿ ಬಸವಣ್ಣಿ ಅವರಿಗೂ "ನಮಸ್ಕಾರೀ ವಕೀಲರ" ಅಂದ. ಅವರೂ ಪ್ರತಿಯಾಗಿ "ನಮಸ್ಕಾರ" ಅಂದರು. ಪಕ್ಕದಲ್ಲಿದ್ದ ಬಾಬಣ್ಣ ಶ್ಯಾಮರಾವ್ ಬೇರೆ ಕಡೆ ದೃಷ್ಟಿ ಮಾಡಿ ನಿಂತುಕೊಂಡರು. ಅವರನ್ನು ನೋಡಿ ಪಾಟೀಲ ವಕೀಲರು ಮತ್ತಷ್ಟು ಕಂಗಾಲಾದರು. ತನ್ನ ವಕೀಲರ ಧೃತಿಗೆಟ್ಟ ಮುಖನೋಡಿ ಬಸವಣ್ಣಿಗೆ ತೀರ ಕೆಡುಕೆನಿಸಿತು. ತನ್ನಿಂದಾಗಿ ವಕೀಲರಿಗೆ ಬದನಾಮಿ ಆಗಬಾರದೆಂದುಕೊಂಡ. ಯಾವುದೋ ದೃಡ ನಿಶ್ಚಯ ಮಾಡಿದವನಂತೆ ತನ್ನ ವಕೀಲರಿಗೆ ನೇರವಾಗಿ ಕೇಳಿದ "ವಕೀಲ್ರೆ ಈ ಪ್ರಕರಣದಲ್ಲಿ ಶಿಕ್ಷೆಯಾದರೆ ಎಷ್ಟು ದಿನಗಳಾಗಬಹುದು? ನೀವೇನೂ ಚಿಂತಿ ಮಾಡಬಾಡ್ರಿ, ಪ್ರಯತ್ನಾ ಮಾಡಷ್ಟು ಮಾಡ್ರಿ, ನಾನಂತೂ ಶಿಕ್ಷಾ ಅನುಭವಿಸಾಕ ತಯಾರಾಗೇ ಬಂದೀನಿ. ಹೇಳಿ ಎಷ್ಟು ದಿನಾ ಶಿಕ್ಷಾ?" ಪಾಟೀಲ ವಕೀಲರಿಗೆ ತಾವು ಕಳೆದುಕೊಂಡ ಯಾವದೋ ಅಮೂಲ್ಯ ವಸ್ತುವೊಂದು ದೊರಕಿದಷ್ಟು ಸಮಾಧಾನವಾಯ್ತು. ಆದರೂ ನಿರಾಶೆಯ ಧ್ವನಿಯಲ್ಲಿ "ಮೂರರಿಂದ ಆರು ತಿಂಗಳು ಆಗಬಹುದು ಬಸವಣ್ಣೆಪಾ" ಅಂದರು. ಇನ್ನೂ ಏನೇನು ಹೇಳಬೇಕೆಂದಿದ್ದರೋ ನಡುವೆಯೇ ಬಾಯಿ ಹಾಕಿದ ಬಸವಣ್ಣಿ "ಆಗಲಿ ಬಿಡ್ರಿ ಅದಕ್ಯಾಕ ಹೆದರೋದು ಬಾವ್ಯಾಗ ಬಿದ್ದ ಮ್ಯಾಲೆ ಮಳೀಗೆ ಯಾಕ ಅಂಜೋದ್ರಿ?" ಅವನು ಧ್ವನಿಯೇರಿಸುತ್ತಿದ್ದಂತೆಯೇ ಅಲ್ಲಿಯೇ ಇದ್ದ ಬಾಬಣ್ಣ ಶ್ಯಾಮರಾವ್ ಒಳಗೊಳಗೇ ಖುಷಿಪಡುತ್ತಿದ್ದುದನ್ನು ಗಮನಿಸಿ ಬಸವಣ್ಣಿ "ನೋಡ್ರಿ ವಕೀಲ್ರ ನಾನಂತೂ ದೀಡ್ ವರ್ಷ ಶಿಕ್ಷಾ ಅನುಭವಿಸಾಕ ತಯಾರಾಗೀನಿ ಈಗ". ತಾವು ಮೂರರಿಂದ ಆರು ತಿಂಗಳ ಅಂದಿದ್ರೂ ಇದೇನಿದು ಈತ ಒಂದೂವರೆ ವರ್ಷವೆನ್ನುತ್ತಾನಲ್ಲ ಎಂದು ವಿಚಿತ್ರವೆನಿಸಿ ವಕೀಲರು ಆಶ್ಚರ್ಯದಿಂದಲೇ ಬಸವಣ್ಣಿಯ ಮುಕ ನೋಡಿದರು. ತಕ್ಷಣ ಬಸವಣ್ಣಿ ಮಾತು ಮುಂದುವರೆಸಿದ. "ಈಗ ರಾವ್ ಸಾಹೇಬನ್ನ ಮುಚ್ಚೀಲೆ ಹೊಡೆದಿದ್ದಕ್ಕೆ ಆರು ತಿಂಗಳಾರೀ, ಜೇಲಿಂದ ಹೊರಗೆ ಬಂದ ಮ್ಯಾಲೆ ಇಲ್ಲಿ ನಿಂತಾರಲ್ರಿ ಸಾಕ್ಷಿ ಹೇಳಾಕ ಬಂದವ್ರು ಬಾಬ್ಯಾ ಶ್ಯಾಮ್ಯಾ ಇವರಿಬ್ಬರಿಗೂ ಓಡಿಸ್ಯಾಡಿ ಪ್ಯಾಟ್ಯಾಗ ಮುಚ್ಚೀಲೇ ಹೊಡಿತೇನ್ರಿ ಒಟ್ಟ ದೀಡ್ ವರ್ಷ ಜೇಲ್ ಸೋಸೋದು ಅಷ್ಟ ಅಲ್ರಿ?" ಒಂದೇ ಉಸಿರಲ್ಲಿ ಸ್ವಲ್ಪ ಎತ್ತರದ ಧ್ವನಿಯಲ್ಲಿಯೇ ಹೇಳಿದ ಬಸವಣ್ಣಿ ಬಾಬಣ್ಣ ಶ್ಯಾಮರಾವರಿಗೆ ಕೇಳುವಂತೆ.

ಇಷ್ಟಾದ ಮೇಲೆ ತಿಳಿದುಬಂದದ್ದು ಇಷ್ಟೆ. ಅಂದು ಕೋರ್ಟಿನಲ್ಲಿ ಬಸವಣ್ಣಿಯ ಪ್ರಕರಣ ಬಂದಾಗ ಎದುರಾಳಿ ವಕೀಲರೇ ಮುದ್ದುತ್ತು ಕೇಳಿ ಅದನ್ನು ಮುಂದೆ ಹಾಕಿಸಿದರೆಂದೂ ನಂತರದ ಮುದ್ದತ್ತಿನಲ್ಲಿಯೂ ಸಾಕ್ಷಿ ಯಾರೂ ಹಾಜರ್ ಆಗದಿದ್ದುದಕ್ಕೆ ಪ್ರಕರಣ ಪುನಃ ಪುನಃ ಮುಂದೆ ಹಾಕಲ್ಪಟ್ಟು ಕೊನೆಗೆ ರಾಜಿಯಲ್ಲಿ ಮುಕ್ತಾಯಗೊಳ್ಳಬೇಕಾಯಿತಂತೆ.

❖

## ಅಳು

ಬೆಳಿಗ್ಗೆ 5-30ಕ್ಕೇನೆ ಆಳುಮಗ ಬಂದು ಎಬ್ಬಿಸಿದಾಗ ಮಂಜುನಾಥನಿಗೆ ಎಂದಿನ ಹುರುಪು ಹುಮ್ಮಸ್ಸುಗಳಿರಲಿಲ್ಲ. ನಿನ್ನೆ ತನ್ನ ತಂದೆ ತನ್ನನ್ನು ಈ ಸಾರೆ ಮೈಸೂರಿನ ವಸತಿ ಶಾಲೆಯೊಂದಕ್ಕೆ ಸೇರಿಸಲಿದ್ದಾರೆ ಎಂಬುದನ್ನು ಕೇಳಿದ ಆತನಿಗೆ ಒಮ್ಮೆಲೆ ಎಲ್ಲದರಲ್ಲೂ ಅಭಿರುಚಿ ಮಾಯವಾದಂತೆ ಅನಿಸಹತ್ತಿದೆ. "ಬೇಗ ಮಕಾ ತೊಳಿರಿ. ಹಿತ್ತಲಕ್ಕೆ ಹೋಗಿಬಂದು ಲಗು ತಯಾರಾಗ್ರಿ" ಎಂದು ಆಳುಮನುಷ್ಯ ಪುನಃ ಹೇಳಿದಾಗ, ಯಾಂತ್ರಿಕವಾಗಿ ಮಂಜುನಾಥ ಬಹಿರ್ದೆಶೆಗಾಗಿ ದನದ ಮನೆಯ ಹಿತ್ತಲ ಕಡೆ ನಡೆದ.

ಎಂಟು ಎತ್ತು ಆರು ಆಕಳು, ಮೂರು ಎಮ್ಮೆ, ನಾಲ್ಕು ಕರುಗಳು ಎಲ್ಲವನ್ನೂ ದಾಟಬೇಕವ. ವಾರದ ಹಿಂದೆ ಹುಟ್ಟಿದ ಗುಲಾಬಿ ಆಕಳದ ಹೋರಿಕರು ಚನ್ನ್ಯಾನ ಮೈ ಕೈಯಾಡಿಸುತ್ತ ನಿಂತ ಮಂಜುಗೆ ಅಳು ಬಂದುಬಿಟ್ಟಿತು. ಅಚ್ಚ ಬಿಳಿ ಬಣ್ಣದ ಕರು, ಈತನ ನೋಡಿ ಚಿನ್ನಾಟವಾಡುತ್ತ ಮುಂಗೈಯನ್ನು ನೆಕ್ಕತೊಡಗಿತು. ತುಂಟ ಚೆನ್ನ್ಯಾ, ಕೈಯಾಡಿಸುತ್ತಿದ್ದರೆ ಬೆರಳನ್ನೇ ಚೀಪತೊಡಗುತ್ತಾನೆ. ಆದರೆ ತಾನೇನು ಕಡಿಮೆ. ಚನ್ನ್ಯಾನ ಜೊತೆ ಜೊತೆಯಲ್ಲಿಯೇ ಅದರ ತಾಯಿ ಗುಲಾಬಿಯ ಮೊಲೆಯನ್ನು ಎಷ್ಟು ಸಾರಿ ಎಷ್ಟೊಂದು ಸಾರೆ ಚೀಪಿಲ್ಲ. ಗುಲಾಬಿ ಗೋಮಾತೆ, ತನಗೂ ತಾಯಿ ಇದ್ದಂತೆ. ಸ್ವಲ್ಪ ಮುಂದೆ ಸರಿದು ಅದರ ಕೋಡುಗಳ ನಡುವೆ ಹಣೆಯ ತಗ್ಗಿನಲ್ಲಿ ಬೆರಳು ಹಾಕಿ ತುರಿಸತೊಡಗಿದ. ಲಾಟೀನಿನ ಮಂದ ಬೆಳಕಿನಲ್ಲೂ ಗುಲಾಬಿ ಗೋಣು ತಗ್ಗಿಸಿಕೊಂಡು ಕೃತಜ್ಞತೆಯ ದೃಷ್ಟಿ ತೋರಿಸುತ್ತಿದ್ದುದನ್ನು ನೋಡಿ ಆನಂದಗೊಂಡ. ಮನಸ್ಸಿಲ್ಲದ ಮನಸ್ಸಿನಿಂದ ಪಾಯಖಾನೆ ಕಡೆಗೆ ನಡೆದ.

ಇನ್ನು ಊರ ಅಗಸಿಯಲ್ಲಿರುವ ಮಸೀದಿಯಿಂದ ಕನಕಾಪೂರ ಹಳ್ಳದವರೆಗೂ ಓಡಬೇಕು. ಅಂದಾಜು ಎರಡು ಕಿಲೋ ಮೀಟರ್ ಓಟ. ಪ್ರಾರಂಭದ ಒಂದು ಫರ್ಲಾಂಗ ಅಂದರೆ ಈಶ್ವರನ ಬನ್ನಿ ಗಿಡದವರೆಗೆ ಸ್ವಲ್ಪ ಕಠಿಣ: ಡಿಸೆಂಬರದ ಛಳಿಗೆ ಮೈ ಬಿಗಿದುಕೊಂಡಿರುತ್ತದಲ್ಲಾ ಅನಂತರ ಮೈಯಲ್ಲಿ ಬಿಸಿ ತಂತಾನೇ ಉದ್ಭವಿಸಿ ಓಡುವದು ಸರಾಗವಾಗುತ್ತದೆ. ದಾರಿಯುದ್ದಕ್ಕೂ ಬರುವ ಊರಹಳ್ಳ, ಬನ್ನಿ ಗಿಡ, ಮರಕೋತಿ ಆಟದ ಬೇವಿನಮರ, ತೋಟದವರ ಒಡ್ಡು, ಗೋಡೆಯವರ ಒಡ್ಡು, ಶೆಟ್ಟಿ ಮಾಮಾನ ಹೊಲ, ಸ್ವಾಮಿಯವರ ಹೊಲ, ದಾಟುತ್ತಲೇ ಸಿಗುವುದು ಕನಕಾಪೂರ ಹಳ್ಳ. ತಾನು ದಿನಾಲೂ ಓಡುವಾಗ ರಸ್ತೆಯ ಅಕ್ಕಪಕ್ಕದಲ್ಲಿರುವ ಇವುಗಳನ್ನು ನೋಡುತ್ತಲೇ ಯಾವುದೋ ಒಂದು ಅವಿನಾಭಾವ ಸಂಬಂಧ ಅವುಗಳ ಜೊತೆಗೆ ಬೆಸೆದಿದೆಯೇನೋ ಎಂದು ಇಂದು ಮಂಜುಗೆ ಅನಿಸುತ್ತದೆ. ಇವುಗಳನ್ನು ಬಿಟ್ಟು ಗೆಳೆಯರನ್ನು ಬಿಟ್ಟು, ಅಕ್ಕಂದಿರನ್ನು ಕಡೆಗೆ ಊರನ್ನೇ ಬಿಟ್ಟು ತಾನು ದೂರದ ಮೈಸೂರಿಗೆ ಹೋಗಬೇಕಲ್ಲವೇ ಎಂದು ನೆನಪಾಗಿ ಗಂಟಲು ಕಟ್ಟಿದಂತಾಗುತ್ತದೆ. ಕನಕಾಪೂರ ಹಳ್ಳದ ಪೂಲಿನ ಮೇಲೆ ನಿಂತು ದೂರದ ದ್ಯಾಮವ್ವನ ಗುಡಿಗೆ ಎಂದಿಗಿಂತಲೂ ಇಂದು ಹೆಚ್ಚು ದೀನವಾಗಿ ಭಯಮಿಶ್ರಿತ ಭಕ್ತಿಯಿಂದ ಕೈಜೋಡಿಸಿ ನಮಸ್ಕರಿಸಿದ.

ಬೆಳಿಗ್ಗೆ ಏಳೂ ಕಾಲಿಗೆ ಶಾಲೆ ಪ್ರಾರಂಭ. ಅದಕ್ಕೂ ಮೊದಲೇ ಆತ ಹೋಗಿ ಗಂಟೆ ಹೊಡೆಯಬೇಕು. ಪ್ರಾರ್ಥನೆಗಾಗಿ ಎಲ್ಲರೂ ಸಾಲಾಗಿ ನಿಂತಾಗ ತಾನೇ "ಮಾಪ್‌ಲೋ...... ಸಾವಧಾನ... ಏಕಸಾಥ್ ಪ್ರಾರ್ಥನಾ ಸೂ......ರು" ಎಂದು ಆದೇಶ ಕೊಟ್ಟ ಮೇಲೆಯೇ ಎಲ್ಲರೂ ಜನಗಣಮನ ಹಾಡುವುದು. ಈ ವರ್ಷ ಅವನು ಏಳನೇ ಈಯುತ್ತೆ. ಪಾಸಾಗಿ ಮುಂದೆ ಹೈಸ್ಕೂಲಿಗೆ ಹೋಗುವ ತವಕ ಆದರೆ ಈ ಮೈಸೂರ ಶಾಲೆ ಎಲ್ಲಿ ಬಂತೋ ನಡುವೆ. ಅನೇಕ ಜನ ಹೈಸ್ಕೂಲ ಸರ್‌ಗಳು, "ಇನ್ನೂ ಯಾವಾಗ ಕನ್ನಡ ಸಾಲಿ ಬಿಡೋದ?" ಎಂದು ಹಾಸ್ಯಮಯವಾಗಿ ಕೇಳಿದಾಗ, "ಪರೀಕ್ಷಾ ಮುಗದಕೂಡ್ಲೆ ಈ ಕಂಪೌಂಡ ಜಿಗಿದು ಓಡಿ ಬಂದs ಬಿಡ್ತೀನಿ ಸರ್" ಎಂದು ಖುಷಿ ಉಕ್ಕಿಸಿಕೊಂಡು ಹೇಳುತ್ತಿದ್ದ. ಅಪ್ಪನಿಗೆ ಯಾಕೆ ಇದು ಅರ್ಥವಾಗುತ್ತಿಲ್ಲ. ಆಟಪಾಠಗಳಲ್ಲಿ ತಾನೆಂದೂ ಹಿಂದೆ ಬಿದ್ದಿಲ್ಲ. ಮತ್ತ್ಯಾಕೆ ತನ್ನನ್ನು ಇಲ್ಲಿಂದ ದೂರ ಅಟ್ಟುತ್ತಿದ್ದಾನೆ? ಅಪ್ಪನನ್ನು ತಾನೆಷ್ಟು ಪ್ರೀತಿಸುತ್ತೇನೆನ್ನುವುದು ಅವನಿಗೆ ತಿಳಿಯುತ್ತಲೇ ಇಲ್ಲವೆ. ಯಾಕೆ ನನ್ನ ಜೀವ ತಿನ್ನುತ್ತಿದ್ದಾರೆ ಅಪ್ಪ ಎಂದು ಮಂಜು ತೀವ್ರ ಬೇಜಾರಗೊಂಡ.

ಊರಲ್ಲಿ ಯಾರೂ ಮಾಡಲಾರದ್ದನ್ನು ತಾನು ಮಾಡಬೇಕೆಂದುಕೊಳ್ಳುತ್ತಿದ್ದ ಆತನ ತಂದೆಗೆ ಮಗನ ಮನಸ್ಸಿನಲ್ಲಿಯ ಈ ಹೊಯ್ದಾಟದ ಸಂಕಟ ತಿಳಿಯದೇ ಹೋಯಿತು. ಮನೆಗೆ ಬರುತ್ತಿದ್ದ ದೊಡ್ಡ ದೊಡ್ಡ ಅಧಿಕಾರಿಗಳು ಮಂತ್ರಿಗಳು ಮುಂತಾದವರಿಗೆ ಮಂಜುನಾಥನಿಂದಲೇ ಊಟ ತಿಂಡಿ ಕೊಡಿಸುತ್ತಿದ್ದವರಿಗೆ ತನ್ನ ಮಗನೂ ಅತಿದೊಡ್ಡ ವ್ಯಕ್ತಿಯಾಗಲೇಬೇಕೆಂದು ಹಠ. ಅದಕ್ಕಾಗಿ ತಮ್ಮೂರ ಶಾಲೆ ಏನೇನೂ ಸಾಲದು ಎಂಬ ಭಾವನೆ. ವರ್ಷಕ್ಕೆ ಐವತ್ತು ಸಾವಿರ ಖರ್ಚಂತೆ. ಆದರೂ ಆಗಲಿ ಮಗ ಓದಿ ಮುಂದೆ ಬರಬೇಕು. ಬಂದ ಗಣ್ಯರಿಗೆಲ್ಲಾ ಮಗನ ಪರಿಚಯ ಮಾಡಿಸುತ್ತ, "ಒಬ್ಬನs ಗಂಡಮಗಾರಿ, ಸಾಲಿಯೊಳಗೆಲ್ಲಾ ಮುಂದೆ ಅದಾನ. ಅದಕ್ಕೆ ಈ ವರ್ಷ ಮುಲ್ಕೀ ಪರೀಕ್ಷಾ

ಮುಗದ ಮ್ಯಾಲ, ಮುಂದಕ್ಕ ಮೈಸೂರಿಗೆ ಹಾಕಬೇಕಂತ ಮಾಡೇನಿ" ಎಂದು ಆ ವಸತಿ ಶಾಲೆಯ ಬಗ್ಗೆ ಹೊಗಳಿ ಬಿಡುತ್ತಾರೆ. ಮಹತ್ವಾಕಾಂಕ್ಷಿ ತಂದೆಗೆ, ಮಗನ ಮನಸ್ಸನ್ನು ತಿಳಿದುಕೊಳ್ಳುವ ಸೂಕ್ಷ್ಮತನವಿರಲಿಲ್ಲ. ಅವರ ಠೀವಿ ಮತ್ತು ಸಮಾಜದಲ್ಲಿಯ ಪ್ರತಿಷ್ಠೆಯ ಪ್ರಶ್ನೆಗಳೂ ಅವರ ನಿರ್ಧಾರವನ್ನು ಗಟ್ಟಿಗೊಳಿಸುತ್ತಾ ಹೋದಂತೆ, ಮಂಜು ಮೈಸೂರಿಗೆ ಹೋಗುವುದು ಅನಿವಾರ್ಯವಾಗಿತ್ತು. ಹೊಟ್ಟೆಯೊಳಗಿನ ಕರುಳುಕಿತ್ತು ಬರುವಂತೆ ಅತ್ತರೂ ಪ್ರಯೋಜನವಾಗಿರಲಿಲ್ಲ.

ಮಂಜು ಅವನ ಊರನ್ನು ಬಿಟ್ಟು ಆಗಲೇ ಹದಿನೈದು ವರ್ಷಗಳಾದವು. ಈ ನಡುವೆ ಕನಕಾಪುರ ಹಳ್ಳದ ಪೂಲಿನ ಕೆಳಗೆ ಬಹಳಷ್ಟು ನೀರು ಹರಿದುಹೋಗಿದೆ. ಅವನ ಊರಲ್ಲಿ ಹಾಗೂ ಅದರಂತೆಯೇ ವೈಯಕ್ತಿಕ ಜೀವನದಲ್ಲಿ ಬಹಳಷ್ಟು ಬದಲಾವಣೆಗಳೂ ಆಗಿಹೋಗಿವೆ. ಅಂದು ಕರುಳು ಹೊರಬರುವಂತೆ ಅತ್ತ ಆತನ ಕರುಳ ಬಳ್ಳಿಯ ಕುಡಿ ಚಿವುಟಿದಂತಾಗಿ, ಅದು ತನ್ನ ಗಾಢ ಸಂಬಂಧವನ್ನು ಚಿಗುರಿಸಲಾರದೇ ಅಲ್ಲಿಯೇ ಕಮರಿ ಹೋಗಿದೆ. ಮೈಸೂರಿಗೆ ಹೋದ ಐದಾರು ತಿಂಗಳೂ ಮಾತ್ರ ಅಪ್ಪ, ಅಮ್ಮ, ಊರು, ಕೇರಿ ಆತನ ಮನಸ್ಸಿನಲ್ಲಿ ಪದೇ ಪದೇ ಬಂದು ನೋವನ್ನುಂಟುಮಾಡುತ್ತಿದ್ದವು. ಮುಂದೆ ಮೈಸೂರ ಶಾಲೆಯ ಹೊಸ ಗೆಳೆಯರು, ಹೊಸ ವಾತಾವರಣ ಇವುಗಳಲ್ಲಿ ಆತ ಕ್ರಮೇಣ ಎಲ್ಲ ಮರೆಯತೊಡಗಿದ. ಮನಸಿನ ಪಟಲದಿಂದ ಹಳೆಯ ಚಿತ್ರಗಳು ದೂರಾಗಿ ಹೊಸ ಹೊಸ ಘಟನೆಗಳು ಆವರಿಸಿಕೊಂಡವು.

ವಸತಿ ಶಾಲೆಯಲ್ಲಿಯೇ ಪಿ.ಯು.ಸಿ. ಮುಗಿಸಿಕೊಂಡ ಮೇಲೆ, ಬೆಂಗಳೂರಿನ ಪ್ರತಿಷ್ಠಿತ ಕಾಲೇಜೊಂದರಲ್ಲಿ ಇಂಜಿನಿಯರಿಂಗ್ ಕೋರ್ಸ ಮುಗಿಸಿದ. ಉತ್ತಮ ಫಲಿತಾಂಶದಿಂದಾಗಿ ಪ್ರಖ್ಯಾತ ಅಂತರರಾಷ್ಟ್ರೀಯ ಕಂಪನಿಯೊಂದರಲ್ಲಿ ಮದ್ರಾಸಿನಲ್ಲಿ ನೌಕರಿಗೆ ಸೇರಿದ. ನಾಲ್ಕು ವರ್ಷಗಳಲ್ಲಿ ಅಲ್ಲಿಯೇ ಮೇಲಿನ ಹುದ್ದೆಗೆ ಏರಿದ. ಈತನ ಶಿಸ್ತು, ಕಠಿಣ ಪರಿಶ್ರಮ, ಮೇಲೆ ಮೆರಿಟ್ ಇವೆಲ್ಲಾ ನೋಡಿದ ಕಂಪನಿಯ ಹಿರಿಯ ಅಧಿಕಾರಿಗಳು ಅವನನ್ನು ಬೆಂಗಳೂರಿನ ವಲಯ ಕಚೇರಿಗೆ ಏರಿಯಾ ಎಕ್ಸೀಕ್ಯುಟೀವ್ ಎಂದು ವರ್ಗಾಯಿಸಿದರು.

ತನ್ನ ಅಸಿಸ್ಟಂಟ್ ಮ್ಯಾನೇಜರ್‌ನೊಂದಿಗೆ ಏನೋ ಚರ್ಚಿಸುತ್ತಿದ್ದ ಮಂಜುನಾಥ ಫೋನ್ ಗಂಟೆ ಬಾರಿಸಿದಾಗ ಸಹಜವಾಗಿ ಎತ್ತಿ "ಓಹೋ ಯಾವಾಗ?...... ಆಗ್ಲಿ ನಾನು ಹೊರಟುಬರ್ತೀನಿ ಆದಷ್ಟು ಬೇಗ..... ಆಯ್ತು ಆಯ್ತು" ಎಂದು ರಿಸೀವರ್ ಕೆಳಗಿಟ್ಟ. ಏನು ವಿಷಯವೆಂದು ಕೇಳಬೇಕೆಂದು ಅಸಿಸ್ಟಂಟ್ ಮ್ಯಾನೇಜರ್ ಅಂದುಕೊಳ್ಳುತ್ತಿರುವಾಗಲೇ "ನಮ್ಮ ತಂದೆಯವರಿಗೆ ನಾಲ್ಕೈದು ದಿನಗಳಿಂದ ಹುಷಾರಿರಲಿಲ್ಲವಂತೆ......." ಎಂದೆನ್ನುತ್ತಾ ಕರೆಗಂಟೆಯೊತ್ತಿ ಜವಾನನಿಗಾಗಿ ಎದುರು ನೋಡತೊಡಗಿದ. ಅವರ ಆಪ್ತ ಸಹಾಯಕಿ ಬಂದು, ಜವಾನ ಎಲ್ಲೋ ಹೋಗಿರುವುದಾಗಿ ತಿಳಿಸಿ, "ಏನಾಗಬೇಕು ಸರ್?" ಎಂದು ಕೇಳಿದ್ದಕ್ಕೆ "ನೀವೇ ಬೇಕಾಗಿತ್ತು. ಬ್ಯಾಂಕಿನಿಂದ ಹಣ ತೆಗೆಯಬೇಕು, ನನ್ನ ಚೆಕ್‌ಬುಕ್ ಪಾಸ್ ಬುಕ್ ತನ್ನಿ. ಮತ್ತೆ ಸಾಯಂಕಾಲದ ಕಿತ್ತೂರ ಎಕ್ಸ್‌ಪ್ರೆಸಗೆ ಒಂದು ಟಿಕೆಟ್ ಬುಕ್ ಮಾಡಿ. ಹುಬ್ಬಳ್ಳಿಗೆ, ನಮ್ಮೂರಿಗೆ ಹೋಗಬೇಕಾಗಿದೆ. ನಮ್ಮ ತಂದೆ ಎಕ್ಸ್‌ಪಾಯರ್ ಆಗಿದ್ದಾರಂತೆ" ಶಾಂತಚಿತ್ತದಿಂದಲೇ ಆತ ಹೇಳುತ್ತಿದ್ದರೂ, ಆತನ ಪಿ.ಎ. ಹಾಗೂ ಅಸಿಸ್ಟಂಟ ಮ್ಯಾನೇಜರ್‌ಗಳು ಒಮ್ಮೆಲೆ ಗರಬಡಿದಂತವರಾದರು. "ಸಾರಿ ಸರ್, ಎಕ್ಸ್‌ಟ್ರೀಮ್ಲಿ ಸ್ಯಾಡ್" ಎಂದು ಮುಂದೇನು ಹೇಳಬೇಕೆಂದು ತೋಚದೇ ದುಃಖಿತರಾದರು. ಪಿ.ಎ.ಯಂತೂ ತನ್ ಸಲ್ವಾರ್ ಕಮೀಜ್‌ನ ದುಪ್ಪಟ್ಟಾದಿಂದ ಕಣ್ಣು ಒರೆಸಿಕೊಳ್ಳುತ್ತಾ ಹೊರನಡೆದಳು.

ರೈಲು' ಬೆಂಗಳೂರು ನಿಲ್ದಾಣವನ್ನು ಬಿಡುತ್ತಲೇ, ಮಂಜುನಾಥನ ತಲೆಯಲ್ಲಿ ತಂದೆಯ ಸಾವಿನ ಚಿತ್ರ ಮೂಡಿಬರತೊಡಗಿತು. ಏನಾಗಿದೆ ತನಗೆ ಈ ಹದಿನೈದು ವರ್ಷಗಳಲ್ಲಿ? ಅಪ್ಪ ಸತ್ತನೆಂದರೂ ಅಳು ಬರುತ್ತಿಲ್ಲವಲ್ಲ? ಯಾಕೆ? ಆಫೀಸಿನಲ್ಲಿಯ ಜನಕ್ಕೆ ಎಷ್ಟು ಶಾಕ್ ಆಗಿದೆ. ತನಗೇಕೆ ಎಲ್ಲ ಸಾಧಾರಣ ಘಟನೆಗಳಂತೆಯೇ ಇದೂ ಒಂದು ಎಂದು ಅನಿಸಹತ್ತಿದೆ? ಅಸಿಸ್ಟಂಟ್ ಮ್ಯಾನೇಜರ ಕೂಡಾ ತನ್ನ ಮುಪ್ಪಿನ ತಂದೆಯೂ ಎಲ್ಲಿ ಸತ್ತುಬಿಡುತ್ತಾರೋ ಎಂಬ ಭಾವನೆಯಿಂದ ಆತನನ್ನು ನೆನೆಸಿಕೊಂಡು ಇವನೆದುರೇ ಗಳಗಳನೇ ಅತ್ತೇಬಿಟ್ಟನಲ್ಲಾ. ಅದಕ್ಕಾಗಿ ಆದರೂ ತಾನು

ಅಳಬಾರದಿತ್ತೇ? ಸುದ್ದಿ ಬಂದ ಮೇಲೂ ಒಂದು ಗಂಟೆ ಆಫೀಸಿನ ಕೆಲಸ ಮಾಡುತ್ತಿದ್ದಾಗ ಅಪ್ಪ ಸರಿದು ಮನಸಿನ ಹೊರಗೇ ಯಾಕೆ ನಿಂತ? ಟ್ರೇನಿನ ವೇಗ ಜಾಸ್ತಿಯಾದಂತೆ ಮನಸೂ ಹಿಂದೆ ಹಿಂದೆ ಓಡತೊಡಗಿತ್ತು. ತಾನು ಚಿಕ್ಕವನಿದ್ದಾಗ ಎಷ್ಟು ಸಾರೆ ಅತ್ತಿಲ್ಲ? ದೂರದ ದೊಡ್ಡವ್ವನ ಗಂಡ ಬೇರೆ ಯಾರನ್ನೋ ಇಟ್ಟುಕೊಂಡು, ಅವಳ ಮಾತು ಕೇಳಿ ಆಗಾಗ ದೊಡ್ಡವ್ವನನ್ನು ಹೊಡೆಯುತ್ತಾನೆಂದೂ, ಗಟ್ಟಿಮುಟ್ಟಾಗಿದ್ದ ದೊಡ್ಡವ್ವ ಚಿಂತೆಯಿಂದಾಗಿ ಎಲುವಿನ ಹಂದರವಾಗಿದ್ದಾಳೆಂದೂ ತನಗೆ ತಿಳಿದಾಗ, ರಾತ್ರಿ ಬಹಳ ಹೊತ್ತಿನವರೆಗೆ ಮುಸುಕಿನಲ್ಲೇ ಗಳಗಳ ಅಳುತ್ತಿದ್ದ ಹಾಗೂ ಆಗಾಗ ಮನೆಯಲ್ಲಿ ಆಕೆಯ ಸುದ್ದಿ ಮಾತನಾಡಿದಾಗಲೆಲ್ಲಾ ತಾನು ತನ್ನಷ್ಟಕ್ಕೆನೆ ಆಕೆಯನ್ನು ಕಣ್ಣೆದುರು ತಂದುಕೊಂಡು, ಕಣ್ಣೀರು ಸುರಿಸುತ್ತಿದ್ದ. ಅದೂ ಹೋಗಲಿ, ತನಗೆ ಮೂರನೇ ಈಯತ್ತೆ ಕಲಿಸಿದ ಅಬ್ದುಲ್ ಮಾಸ್ತರ ತೀರಿಕೊಂಡಾಗ, ತಾನು ಅತ್ತದ್ದಾದರೂ ಎಷ್ಟು? ಅವರ ಮಕ್ಕಳೇ ತನ್ನಷ್ಟು ಅತ್ತಿರಲಿಲ್ಲವೆಂದು ಆಮೇಲೆ ತಿಳಿದಿತ್ತು. ದೊಡ್ಡಕ್ಕ ಗಂಡನ ಮನೆಗೆ ಹೊರಟುನಿಂತಾಗ ತಾನು ತಾಯಿಯ ಜೊತೆ ಅತ್ತದೊತ್ತಟ್ಟಿಗಿರಲಿ, ಮನೆಯ ನಾಯಿ ಮಾಣಿಕ ಕಣ್ಮರೆಯಾಗಿ ಎಲ್ಲಿ ಹೋಯಿತೆಂದು ಕೊನೆಗೂ ತಿಳಿಯದಾದಾಗ, ತಾನು ಅಳುತ್ತಾ ಇಡೀ ದಿನ ಊಟಕ್ಕೆ ಒಲ್ಲೆ ಎಂದು ಹಠ ಹಿಡಿದಿದ್ದ. ಎಲ್ಲಿ ಹೋಯಿತು, ಆ ನೋವಿನ ಹಠ ಹಾಗೂ ಹೃದಯಾಂತರಾಳದ ಅಳು? ಪುನಃ ಅವೇ ಪ್ರಶ್ನೆಗಳು ಅವನನ್ನು ಇರಿಯತೊಡಗಿದವು.

ಮಧ್ಯರಾತ್ರಿ ಸರಿದಿದ್ದರೂ ನಿದ್ರೆ ಬರುತ್ತಿಲ್ಲ. ಅಪ್ಪನ ಸಾವಿನ ಸುದ್ದಿ ತಿಳಿದಾಗಲಾದರೂ ಎರಡು ಹನಿ ಕಣ್ಣೀರು ಬರಬಾರದೇ? ಆಫೀಸಿನ ಜನ ಏನು ತಿಳಿದಕೊಂಡರೋ? ಆರು ಗಂಟೆಯ ಸೂಪರ್ ಡಿಲಕ್ಸ ಬಸ್ ಹಿಡಿದು ಹೋಗಿದ್ದರೆ ಬೆಳಗಿನ 6ಕ್ಕೇನೆ ಊರು ಮುಟ್ಟಬಹುದಿತ್ತು ಈ ಟ್ರೇನು ಇಳಿದನಂತರ ಮತ್ತೆ ತನ್ನ ಹಳ್ಳಿಗೆ ಒಂದು ತಾಸಿನ ಪ್ರಯಾಣ. ಮುಟ್ಟಲು ಎಷ್ಟು ಬೇಗವೆಂದರೂ 9 ಗಂಟೆಯಾಗುತ್ತದೆ. ಯಾಕೆ ತಾನು ದೌಡಾಯಿಸಿ ಹೋಗಲಿಲ್ಲ? ಸಾವಿನ ಸುದ್ದಿ ಬಂದಾಗಲೂ ಮನಸ್ಸು ಯಾಕೆ ತಾನು ಮೂರು ನಾಲ್ಕು ಗಂಟೆ ಮೊದಲು ಮುಟ್ಟಲು ತವಕಿಸಲಿಲ್ಲ? ಪ್ರಶ್ನೆಗಳ ಹಿಂದೆಯೇ ನಾಗಾಲೋಟ ಓಡಿ ಓಡಿ ದಣಿದ ಮನಸ್ಸಿಗೆ ಬೆಳಗಿನ ಜಾವ ಸ್ವಲ್ಪ ನಿದ್ರೆ ಬಂದಿತ್ತು.

♦

ಕಾರು ಇಳಿದು ಮನೆಯ ಸಮೀಪ ಬರುತ್ತಿದ್ದಂತೆಯೇ ರಣಹಲಿಗೆ ಶಬ್ದ ಕಿವಿಗೆ ಬಡೆಯತೊಡಗಿತು. ತಾನು ಸಣ್ಣವನಿದ್ದಾಗ ಈ ಹಲಿಗೆ ಬಡಿಯುವವರು, ಹಲಿಗೆ ಶಬ್ದದ ಮೇಲೆ ಬಚ್ಚಿಟ್ಟ ರೊಕ್ಕ ಹುಡುಕುವ ಆಟ ಆಡುತ್ತಿದ್ದುದು ಹಾಗೂ "ಸತ್ತರೆ ಹೊಂಟ್ ಹೋತು, ಕೊಡು ನನ್ನ ರೊಕ್ಕ" ಎಂದೇ ಅವರು ಹಲಿಗೆ ಬಡಿಯುವ ಶಬ್ದದಲ್ಲಿ ಹೊರಡಿಸುತ್ತಾರೆ ಎಂಬುದು ಮನಸ್ಸಿನಲ್ಲಿ ಒಮ್ಮೆ ಸುಳಿದೂ ಹೋಯಿತು. ಸಾಯುವವರು ಸಾಯುತ್ತಾರೆ ನನಗೇನು, ಹಲಿಗೆ ಬಡಿದ ಕೂಲಿ ರೊಕ್ಕ ಸಿಕ್ಕರೆ ಸಾಕು ಎಂಬುದು ಅದರರ್ಥ ಎಂದಂದುಕೊಂಡ. ಯಾಕೆ ತನ್ನನ್ನು ಈ ನಿರ್ಲಿಪ್ತತೆ ತಿಂದುಹಾಕುತ್ತಿದೆ? ತಾನೂ ಈ ಸಂಬಂಧವಿಲ್ಲದ ಹಲಿಗೆ ಬಡಿಯುವವರು, ಜೋಳದ ಭಿಕ್ಷೆಗಾಗಿ ಸಾಲಾಗಿ ನಿಂತ ಊರ ಬಡವರು, ಹೆಣದ ಮೇಲಿನ ಹೊಸ ಬಟ್ಟೆಗಾಗಿ ಕಾಯುತ್ತಿರುವವರು ಇವರೆಲ್ಲರ ಪಕ್ಷದಲ್ಲಿ ನಿಲ್ಲುತ್ತಿದ್ದೇನೆಯೇ? ಮನೆ ಸಮೀಪಿಸುತ್ತಿದ್ದಂತೆ ಈತ ಬಂದ ಸುದ್ದಿ ಕೇಳಿ ಅವ್ವ, ಅಕ್ಕಂದಿರು ಆರ್ತನಾದ ಆಕಾಶವನ್ನೇ ತಲುಪುವಂತೆ ಚೀರಿ ಚೀರಿ ಎದೆ ಎದೆ ಬಡಿದುಕೊಂಡು ಅಳತೊಡಗಿದರು.

ತಾನೆಷ್ಟು ಪ್ರೀತಿಸುತ್ತಿದ್ದ ಅಪ್ಪ, ತನ್ನ ಬಾಲ್ಯ ಆದರ್ಶದ ಅಪ್ಪ, ತನಗಾಗಿ ಇಷ್ಟೆಲ್ಲಾ ಆಸ್ತಿಪಾಸ್ತಿ ಜೋಪಾನವಾಗಿಟ್ಟು ಹೋದ ಅಪ್ಪ, ತನ್ನಲ್ಯಾಕೆ ಅಳು ಹುಟ್ಟಿಸುತ್ತಿಲ್ಲ? ಮತ್ತು ನಾಲಕು ಕಣ್ಣೀರ ಹನಿಗಳು ಯಾಕೆ ಉದುರುತ್ತಿಲ್ಲ? ಎಂದು ಒಳಗೊಳಗೇ ಕಳವಳಿಸಿದ. ಕಣ್ಣೀರಿನ ಜೊತೆಯಲ್ಲಿ ಮಾನವೀಯತೆಯ ಝರಿಯೇ ಬತ್ತಿಹೋಯಿತೇ? ತನ್ನಲ್ಲಿಯ ಕರುಣಾಮಯಿ ಹೃದಯವಂತ ಎಳೆಯ ಮಂಜು ಸತ್ತುಹೋದನೇ? ತನ್ನ ಮಧುರ ಭಾವನೆಗಳು ಬರಿದಾಗಿ ಬಿಟ್ಟವೇ? ಅಪ್ಪ ತನ್ನನ್ನು ಮೈಸೂರಿಗೆ ಕಳಿಸಿದ್ದು ಕೇವಲ ತನ್ನ ಏಳ್ಗೆಗಾಗಿ, ಅದರಲ್ಲೇನೂ ಅವನ

ಸ್ವಾರ್ಥವಿಲ್ಲ. ತನ್ನನ್ನು ಕೇವಲ ಊರಿಂದ ದೂರ ಮಾಡಿದ ಅಪ್ಪನನ್ನು ತಾನು ಹೃದಯದಿಂದಲೇ ದೂರಮಾಡುವುದೇ? ಅಂದರೆ ತನ್ನ ಬಾಲ್ಯದ ದಿನಗಳನ್ನು ತಾನೇ ಕೊಲ್ಲುತ್ತಿದ್ದೇನೆಯೇ? ಅಪ್ಪನ ಸಾವಿನಲ್ಲೇ ತನ್ನದೂ ಅರ್ಧ ಸಾವು ಸಂಭವಿಸಿತೆ? ತನ್ನ ಇಡೀ ವ್ಯಕ್ತಿತ್ವಕ್ಕೇನೆ ಪಾರ್ಶ್ವವಾಯು ಹೊಡೆಯತೆ? ಮಾನಸಿಕವಾಗಿ ತಾನೂ ಅರ್ಧ ಸತ್ತಂತೆಯೇ ಆಯಿತೆ? ಈಗ ಆತನಿಗೆ ಸಾವಕಾಶವಾಗಿ ತನ್ನ ಈ ಪರಿಯ ಸಾವಿಗಾಗಿ ಅಳು ಬರತೊಡಗಿತು. ಹಾಗೆಯೇ ಕಣ್ಣೀರೂ ಬಸಿಯತೊಡಗಿದವು. ಮೆಲ್ಲನೆ ತಲೆತಗ್ಗಿಸಿ ಹಣೆಗೆ ಕೈ ಹಚ್ಚಿಕೊಂಡು ಕುಳಿತ. ನೋಡುತ್ತಿದ್ದ ಜನಕ್ಕೆ ಮಾತ್ರ ಆತ ಅವರಪ್ಪನಿಗಾಗಿಯೇ ಅಳುತ್ತಿದ್ದಂತೆ ಭಾಸವಾಯಿತು.

# ಪೃಥ್ವಿಯ ಮೇಲೊಂದು ಮೊರಡಿ

ಅನುಭವನ ಖುರಪುಟದ ಶಬ್ದ ಸ್ವರ್ಗದ ಹೆಬ್ಬಾಗಿಲಿನ ಆಚೆವರೆಗೂ ಕೇಳಿಬರುತ್ತಿತ್ತು. ಹಿಂಜಿದ ಅರಳೆಯಂತೆ ಎದುರು ಬರುತ್ತಿರುವ ಬಿಳಿ ಮೋಡಗಳನ್ನು ಛೇದಿಸುತ್ತ ಸುತ್ತು ಸುಳಿಯುತ್ತಿದ್ದ ತಂಗಾಳಿಯಲ್ಲಿ ಆತ ತೇಲುತ್ತಿರುವಂತೆ ಭಾಸವಾಗುತ್ತಿತ್ತು. ಮೇಲೆ ಪವಡಿಸಿದ ಬಸವಣ್ಣ ಎಂದಿನ ತನ್ನ ಮುಂಜಾವಿನ ತಿರುಗಾಟ ಮುಗಿಸಿಕೊಂಡು ಇನ್ನೇನು ಮರಳಬೇಕೆಂದುಕೊಳ್ಳುವಷ್ಟರಲ್ಲೆಯೇ "ನಾರಾಯಣ ನಾರಾಯಣ"ವೆಂಬ ಶಬ್ದ ಕಿವಿಗೆ ತಾಗಿದಂತಾಗಿ ತಿರುಗಿ ನೋಡಿದ. ಸಾಕ್ಷಾತ್ ನಾರದರು! ಅಶ್ವಾರೂಢ ಬಸವಣ್ಣ ಬಿಟ್ಟ ಬಾಣದಂತೆ ಸರ್ರನೆ ಕೆಳಗಿಳಿದು ಕೈಜೋಡಿಸಿ 'ದೇವರ್ಷಿಗಳಿಗೆ ಶರಣು' ಎಂದ. ತಕ್ಷಣವೇ, "ಶರಣು ಶರಣಾರ್ಥಿ" ಎನ್ನಬೇಕೆ ನಾರದರು. ಬಸವಣ್ಣಗೆ ಬಸವಳಿದು ಬಂದಂತಾಗಿ ಮಹರ್ಷಿಗಳು ತ್ರಿಲೋಕ ಸಂಚಾರಿಯಾಗಿದ್ದಂತೆಯೇ ತ್ರಿಕಾಲಜ್ಞಾನಿಗಳೂ ಆಗಿದ್ದು ಹೀಗೆ ಎರಡು ಸಲ ಶರಣು ಹೇಳಿದ ಪರಿ ನಿಜವಾಗಿಯೂ ಸೂಜಿಯಿಂದ ತಿವಿದಂತಾಯ್ತು. ಭೂಲೋಕದಲ್ಲಿದ್ದಾಗಲೇ ಅಲ್ಲವೇ ಹರಳಯ್ಯ ಕಲ್ಯಾಣಮ್ಮನವರು ತಾನು ಹೀಗೆ ಹೇಳಿದಾಗ ತಮ್ಮ ತೊಡೆ ಚರ್ಮದ ಪಾದರಕ್ಷೆಗಳನ್ನು ಅರ್ಪಿಸಿ ತನ್ನನ್ನು ಜಾಗೃತಗೊಳಿಸಿದ್ದು. ಈಗಲಾದರೂ ಅವರೂ ತನ್ನೊಡನೆ ಇಲ್ಲಿ ಸ್ವರ್ಗದಲ್ಲಿಯೇ ಇದ್ದಾರಲ್ಲವೆ? ಅಂದ ಮೇಲೆ ನಾರದ ಮುನಿಗಳ ಈ ಮಾತನ್ನು ಅಷ್ಟೊಂದು ಸರಳ ಹಾಗೂ ಸಹಜವಾಗಿ ತೆಗೆದುಕೊಳ್ಳಬಾರದೆಂದ ಬಸವಣ್ಣ. ಶರಣೆಂದಿದ್ದಕ್ಕೆ "ಶರಣು ಶರಣಾರ್ಥಿ" ಎಂಬ ಮಾರುತ್ತರದ ಎರಡು ಶಬ್ದಗಳಲ್ಲಿ ಹಲವು ಗ್ರಂಥಗಳಾಗುವಷ್ಟು ಸಂದೇಶವಿದೆ ಎಂದು ಆತನಿಗೆ ಅನಿಸತೊಡಗಿತು. ಅತಿ ವಿನೀತನಾಗಿ "ದೇವಮುನಿಗಳ ಈ ಉತ್ತರದ ಪವಿತ್ರಾರ್ಥವನ್ನು ನಾನು ತೀವ್ರವಾಗಿ ಗ್ರಹಿಸಲಿಚ್ಛಿಸುತ್ತೇನೆ" ಎಂದು. ಆಗ, "ಜ್ಞಾನ ಭಂಡಾರಿಗೆ ಹೆಚ್ಚೇನು ಹೇಳಲಿದೆ? ಸ್ವರ್ಗದಲ್ಲಂತೂ ಎಲ್ಲವೂ ಉಂಟಲ್ಲವೇ? ನಾರಾಯಣ ನಾರಾಯಣ" ಎಂದು ಅರ್ಥಗರ್ಭಿತ ಮುಗುಳ್ನಗೆಯೊಂದನ್ನು ಬೀರಿ ನಾರದರು ಕಣ್ಮರೆಯಾದರು.

ನಾರದ ನಿರ್ಗಮನವೇನೋ ಆಯಿತು. ಆದರೆ ಬಸವಣ್ಣನ ತಲೆಯೊಳು ಚಿಂತೆತೂರಿ ಬಂತು. ಸುತ್ತ ಸೂಸುತ್ತಿದ್ದ ವಿಧ ವಿಧವಾದ ಹೂಗಳ ಸುಗಂಧವಾಗಲಿ, ಕಣ್ಮನ ಸೆಳೆಯುವ ಅವುಗಳ ನವಿರಾದ ಸೌಂದರ್ಯವಾಗಲಿ ಅವನ ಏಕಾಗ್ರತೆಯನ್ನು ಕದಡಿಸದಾದವು. ಆ ತನ್ಮಯತೆಯನ್ನೇ ತನ್ನೊಳಗೂ ಅಡಗಿಸಿಕೊಂಡವನಂತೆ ಅನುಭವ ಟಕ್ ಟಕ್ ಎಂದು ಮೃದುವಾಗಿ ಹೆಜ್ಜೆ ಹಾಕತೊಡಗಿದ್ದ. ಒತ್ತಿ ಬರುತ್ತಿದ್ದ ಹೇಷಾರವವನ್ನೂ ಕಠಿಣವಾಗಿ ನಿಯಂತ್ರಿಸಿ ತನ್ನೊಡೆಯನ ಧ್ಯಾನಸ್ಥ ಸ್ಥಿತಿಯಲ್ಲಿ ಭಾಗಿಯಾಗಲೆತ್ನಿಸುತ್ತಿದ್ದ. ಬಸವಣ್ಣನ ಗಾಢ ಚಿಂತನೆ ಮುಂದುವರೆದಿತ್ತು. ಎಷ್ಟೊಂದು ವರ್ಷಗಳಾದವು ತಾನು ಇಲ್ಲಿಗೆ ಬಂದು, ಶತಮಾನಗಳೇ ಉರುಳಿವೆಯಲ್ಲವೇ? ಇಲ್ಲಿ ಸುಖಭೋಗಗಳನ್ನು ಅನುಭವಿಸುತ್ತ ಕಾಲ ಕಳೆದವರಿಗೆ ಬೇರೊಂದು ವಿಚಾರ ಬರಲುಂಟೇ? ಯಾಕೋ ಆತನಿಗೆ ಇದೆಲ್ಲ ಹೊನ್ನಶೂಲವೆಂದೆನಿಸಿ ಇಡೀ ದೇಹ ಶೂಲೆ ಬಾಧಿಸತೊಡಗಿತು. ಒಮ್ಮೆ ಕೇವಲ ಒಮ್ಮೆ ಹಾಗೆ ಹೋಗಿ ಹೀಗೆ ಬಂದುಬಿಡಬೇಕು ಭುವಿಗೆ ಎಂದಂದುಕೊಂಡ. ಹಿಡಿದ ಲಗಾಮು ತಂತಾನೆ ಬಿಗಿಯಾಗಲು ಅನುಭವ ಗರಕ್ಕನೇ ಒಂದು ಪೂರ್ಣ ತಿರುವನ್ನು ಸುತ್ತಿದ. ಹಾಗೆಯೇ

ಸ್ವರ್ಗದ ಮಹಾದ್ವಾರದ ಹೊರಹೋಗಲು ಅನುವಾದ, ಮನದಲ್ಲಿಯೇ ದೇವಾದ ದೇವತೆಗಳನ್ನು ನೆನದು ಬಸವಣ್ಣ ಯತ್ರಾರ್ಥಿಯಾದ, ಸ್ವರ್ಗಲೋಕದಿಂದ ಮರ್ತ್ಯಲೋಕದೆಡೆಗೆ.

ಅನುಭವನ ಮೇಲೆ ಕುಳಿತೇ ಒಮ್ಮೆ ಅಧೋಮುಖಿಯಾಗಿ ಕೆಳ ನೋಡಿದ. ಅಷ್ಟ ಮೆಟ್ಟಿಲುಗಳ ಸೋಪನಾ ಬಾ ಎಂದು ಆಹ್ವಾನಿಸುತ್ತಿತ್ತು. ಹೌದು ಎಂಟು ಶತಮಾನಗಳು ಸರಿದು ಹೋಗಿವೆ. ಒಂದೊಂದು ಶತಮಾನಕ್ಕೆ ಒಂದೊಂದು ಮೆಟ್ಟಿಲು. ಸರಿಯಾಗಿದೆ. ಹಾಕಿದರೆ ಎಂಟು ನೆಗೆತ, ಹಾಗೆಯೇ ಹೋಗುವುದೇ ಭರ್ರೆಂದು ನೇರವಾಗಿ? ಇಲ್ಲ. ಬೇಡ ಅವಸರ ಸಲ್ಲ. ಸಿದ್ಧ ಕವಲೂರಿಗೆ ಹೋಗಿ ಬಂದಂತಾಗಬಾರದು. ಎಲ್ಲ ವಿವರವಾಗಿ ನೋಡುತ್ತ ಸಾಗಬೇಕು ಸಮಧಾನಿಯಾಗಿ, ಅನುಭವಿಸದೇ, ಆಚರಿಸದೇ ಅರಿತುಕೊಳ್ಳುವದೆಂತಲ್ಲವೇ? ಕಾರಣ ನಿಧಾನದಿಂದ ಒಂದೊಂದೇ ಮೆಟ್ಟಿಲು ಇಳಿಯಲಾರಂಭಿಸಿದ.

ಮೊದಲ ಮೆಟ್ಟಿಲು ಹದಿಮೂರನೇ ಶತಮಾನ, ತಾನು ಐಕ್ಯನಾದ ಮೇಲೆ ಬಂದ ಪ್ರಥಮದ್ದು. ತನ್ನ ಕಾಲದ ಕಲ್ಯಾಣದಲ್ಲೇ ಸಾಕಷ್ಟು ಸಾಹಿತ್ಯ ವಚನರೂಪದಲ್ಲಿ ಹಾಗೂ ಭರತ ಖಂಡದ ಇತರೆಡೆ ಕಾವ್ಯ ಪ್ರಕಾರದಲ್ಲಿ ಬರಲಾರಂಭಿಸಿದ್ದರೂ ಕಾಲಮಾನದ ಘಟನಾವಳಿಗಳನ್ನು ದಾಖಲಿಸುವಂತಹ ಕೆಲಸ ಅಷ್ಟೊಂದು ಸಮರ್ಪಕವಾಗಿ ನಡೆದಿರಲಿಲ್ಲ. ಆ ಕಾಲದಲ್ಲಿ ಇಡೀ ಆರ್ಯಾವರ್ತದಲ್ಲಿ ಕಲ್ಹಣನ 'ರಾಜ ತರಂಗಿಣಿ'ಯೊಂದೇ ಐತಿಹಾಸಿಕ ದಾಖಲೆಗಳನ್ನೊದಗಿಸಿದ ಗ್ರಂಥವಾಗಿತ್ತು. ಈಗ ಇಸ್ಲಾಂ ಧರ್ಮೀಯರು ಆಗಮಿಸುತ್ತಿದ್ದು ಅವರಲ್ಲಿಯೇ ಕೆಲವರು ಇಂತಹ ಚರಿತ್ರೆಯ ಗ್ರಂಥಗಳನ್ನು ರಚಿಸುತ್ತಿರುವುದು ಅಪೂರ್ವವೆಂದೆನಿಸಿತು. ಅಮೀರ್ ಖುಸ್ರೊ ತೊಂಭತ್ತೆರಡು ಗ್ರಂಥ ರಚಿಸಿ ಆರನ್ನು ಐತಿಹಾಸಿಕ ದಾಖಲೆಗಳಿಗಾಗಿಯೇ ಮೀಸಲಿರಿಸಿದ್ದನ್ನು ನೋಡಿ ಬಸವಣ್ಣ ಅವಕ್ಕಾದ. ಹಾಗೆಯೇ ಆ ಶತಮಾನದ ಅತ್ಯಂತ ರೋಮಾಂಚನಕಾರಿ ಸಂದರ್ಭವೊಂದನ್ನು ಸಂಧಿಸಿದ. ಅದೇ ಮೊದಲ ಮುಸ್ಲಿಂ ದೊರೆ ಮಹಮ್ಮದ ಘೋರಿಯ ನಂತರ ಆತನ ಗುಲಾಮನಾಗಿದ್ದ ಕುತಬುದ್ದೀನ್ ಐಬಕ್ ದಿಲ್ಲಿಯ ಸಿಂಹಾಸನಾರೂಢನಾದದ್ದು! ವರ್ಗ ಕಲಹದ ತಾರತಮ್ಯವನ್ನು ಹೋಗಲಾಡಿಸಿದ ಬೃಹತ್ ಪ್ರಮಾಣದ ಮೊದಲ ಹೆಜ್ಜೆಯಿದು. ತಾನು ಹಲವಾರು ದಶಕಗಳ ಹಿಂದೆ ಕೆಳವರ್ಗದವರ ಪರವಾಗಿ ಬಿತ್ತಿದ ಬೀಜ ಈ ರೀತಿ ಮೊಳಕೆಯೊಡೆದಿರಬಹುದೇ ಎಂದೆಂದುಕೊಂಡು ಸಮಾಧಾನ ಪಟ್ಟ. ಆತನಿಗೆ ಇನ್ನೂ ಹೆಚ್ಚಿನ ಸಂತಸದ ಸಂಗತಿಯೆಂದರೆ ದೆಹಲಿ ಸುಲ್ತಾನರ ಕಾಲದ ಏಕೈಕ ಮಹಿಳಾ ರಾಜಳಾಗಿ ರಾಜ್ಯಭಾರ ನಡೆಸಿದ ರಜಿಯಾ ಸುಲ್ತಾನಳದು. ಬುರ್ಖಾವನ್ನು ಕಡೆಗಣಿಸಿ ಪುರುಷ ಉಡುಪನ್ನೇ ಧರಿಸಿ ಆಡಳಿತ ಮಾಡುತ್ತಿದ್ದ ಸ್ವತಃ ಹೋರಾಟ ಮಾಡುತ್ತಿದ್ದ ಅವಳನ್ನು ನೋಡುವುದೇ ಒಂದು ಖುಷಿಯೆನಿಸಿತ್ತು. ಆದರೆ ಅವನ ಈ ಖುಷಿ ಬಹಳ ಹೊತ್ತು ಉಳಿಯಲಿಲ್ಲ. ಅಂತೆಯೇ ಕುತುಬ್ ಮೀನಾರ್ ನಿರ್ಮಾಣದ ಆನಂದವನ್ನನುಭವಿಸಬೇಕೆಂದರೂ ಆಗಲಿಲ್ಲ. ಕಾರಣ ಅಲ್ಲೇ ಪಕ್ಕದಲ್ಲಿ ಬಿದ್ದ ಗುಡಿ ಗುಂಡಾರಗಳ ಭಾಗ್ನಾವ ಶೇಷಗಳು ಭಲ್ಲೆಯಂತೆ ಇರಿಯುತ್ತಿದ್ದವು. 'ಕೂಡಲ ಸಂಗಮಾ' ಎಂದು ಗೋಗರೆದ.

ಹಾಗೆಯೇ ಒದ್ದೆ ಕಣ್ಣುಗಳಲ್ಲೇ ಹದಿನಾಲ್ಕನೆ ಶತಮಾನದೆಡೆ ನೋಟ ಬೀರಿದ. ಹದಿಮೂರರ ವಿಸ್ತರಣೆಯಂತಿದ್ದ ಅಲ್ಲಿಯೂ ಅದೇ ಸುಲ್ತಾನರ ಆಳ್ವಿಕೆ, ಭಾರತೀಯ ರಾಜರ ಅಂತಃಕಲಹ ಮುಂದುವರೆದಿದ್ದವು. ಮೊಹಮ್ಮದ್ ಬಿನ ತುಘಲಕ್ ಹಾಗೂ ಫಿರೋಜ್ ಷಾ ತುಘಲಕ್ ಆತನ ವಿಶೇಷ ಗಮನ ಸೆಳೆದರು. ತನ್ನ ವಿಚಿತ್ರ ವರ್ತನೆ ಹಾಗೂ ಅಪ್ರಾಯೋಗಿಕ ಯೋಜನೆಗಳಿಂದಾಗಿ ಹೆಸರುವಾಸಿಯಾದ ಮೊಹಮ್ಮದ್ ತುಘಲಕ್ ವಾಸ್ತವದಲ್ಲಿ ನ್ಯಾಯ ಪಾಲನೆ, ನಮ್ರತೆ, ಔದಾರ್ಯಗಳ ಆಗರವಾಗಿದ್ದ. ಶುಚಿ ಜೀವನ ಘನವಿದ್ವತ್ತು ಆತನ ವಿಶೇಷತೆಗಳಾಗಿದ್ದವು. ಪರಧರ್ಮ ದ್ವೇಷ ಇವನಿಗಿರಲಿಲ್ಲವೆಂಬುದು ಬಸವಣ್ಣನಿಗೆ ತೀರ ಹಿಡಿಸಿತು. ಇವನೊಬ್ಬ ನತದೃಷ್ಟ ನರೇಂದ್ರ ಎಂದು ಅವನನ್ನು ವ್ಯಾಖ್ಯಾನಿಸಿದ. ಆದರೆ ಇನ್ನೊಬ್ಬ ತುಘಲಕ್‌ನ ರೀತಿಯೇ ಬೇರೆಯಾಗಿತ್ತು. ಸ್ವತಃ ರಜಪೂತ ತಾಯಿಯ ಉದರದಲ್ಲಿ

ಜನಿಸಿದ್ದರೂ ಈ ಫೀರೋಜ್ ಷಾ ತುಗಲಕ್ ತನ್ನ ತಂದೆಯಂತೆ ಪರಮತ ದ್ವೇಷಿಯಾಗಿ ಪುರಿಯ ಜಗನ್ನಾಥ ದೇವಾಲಯ ಮುಂತಾದವುಗಳನ್ನು ನಿರ್ದಯವಾಗಿ ನಾಶಮಾಡಿದ್ದ.

ಹೀಗೆ ಹಲವಾರು ಜನ ಸುಲ್ತಾನರು ಧಾರ್ಮಿಕ ದಬ್ಬಾಳಿಕೆ ನಡೆಸುತ್ತಿರಲು ಹಿಂದೂ ಮುಸ್ಲಿಂ ಸಮಾನ ಅಂಶಗಳನ್ನೊಳಗೊಂಡ ಪಂಥವೊಂದು ಚಿಗುರೊಡೆಯುತ್ತಿರುವುದು ಮುಂದಿನ ಎರಡು ಮೆಟ್ಟಿಲುಗಳಲ್ಲಿ ಕ್ರಮೇಣ ಗೋಚರಿಸತೊಡಗಿತು. ಇಸ್ಲಾಂನ ಸಮಾನತೆ ಹಾಗೂ ಏಕೇಶ್ವರವಾದಗಳು ಹಿಂದೂ ಧರ್ಮಾಭಿಮಾನಿಗಳಿಗೆ ಸವಾಲಾಗಿ ನಿಂತವು. ಅಂತೆಯೇ ಅವರೂ ತಮ್ಮ ಸಮಾಜ ಪುನರ್‌ರಚನೆಗೆ ತೊಡಗಲು 'ಭಕ್ತಿ ಪಂಥ'ವೆಂಬ ಹೊಸಮಾರ್ಗವೊಂದರಲ್ಲಿ ಸೃಷ್ಟಿಯಾಯಿತು. ತಾನು ಹಾಕಿದ ಪರಂಪರೆ ಮುಂದುವರೆಯಲು ಇಷ್ಟೊಂದು ವರ್ಷಗಳೇ ಬೇಕಾಯಿತಲ್ಲವೇ ಎಂದು ತುಸು ಖೇದವೆನಿಸಿದರೂ ಅಷ್ಟಾದರೂ ಆಯಿತಲ್ಲ ಎಂದು ಸಂತೃಪ್ತಿಯ ಉಸಿರೊಂದೆಳೆದ.

ಈ ಭಕ್ತಿಮಾರ್ಗದ ರಮಾನಂದರು ಶೈವ ವೈಷ್ಣವರ ಭೇದಭಾವಗಳನ್ನಳಿಸಲು ಹಾಗೂ ಹಿಂದೂ ಮುಸ್ಲಿಂ ಬಾಂಧವ್ಯ ಏರ್ಪಡಿಸಲು ಹೆಣಗಿದರು. ದೇವನೊಬ್ಬ ನಾಮ ಹಲವು ಬಗೆ ದಾರಿ ಬೇರೆ ಬೇರೆ ಎಂದು ತಾನು ಹೇಳಿದ್ದನ್ನು ಇವರು ಹಾಗೂ ಇವರ ಶಿಷ್ಯಂದಿರು ಅನುಷ್ಠಾನಕ್ಕೆ ತರುತ್ತಿರುವುದನ್ನು ಬಸವಣ್ಣ ಮನಗಂಡ. ರಾಮನು ಯಾವನೊ ಅವನೇ ರಹೀಮ / ಯಾವನು ಕೃಷ್ಣನೊ ಅವನೇ ಕರೀಮ/..... ಎಂಬ ಕಬೀರನ ಹಾಡನ್ನು ಕೇಳಿ ಮೈದುಂಬಿ ಕುಣಿಯುವಂತೆ ಎನಿಸಿತು. ಇದರಂತೆಯೇ ಗುರುನಾನಕರ ಮನುಷ ಜಾತಿಯೊಂದೇ, ದುಡಿತದ ಬದುಕೇ ಪರಮಾತ್ಮನಿಗೆ ಪ್ರಿಯವೆಂಬ ಘೋಷಣೆಗೆ ಮಾರುಹೋಗಿ ಇವರೂ ತನ್ನ ತತ್ವವನ್ನೇ ಸಾರುತ್ತಿದ್ದಾರಲ್ಲ ಎಂದು ಹೆಮ್ಮೆ ಪಟ್ಟ. ಸ್ವಲ್ಪ ಪಕ್ಕಕ್ಕೆ ಕಣ್ಣು ಹಾಯಿಸಲು ಶ್ವೇತ ವಸ್ತ್ರಧಾರಿಣಿಯೊಬ್ಬಳು ಕಾಣಿಸಿಕೊಳ್ಳಲು ಇದೇನು ಅಕ್ಕಮಹಾದೇವಿಯೂ ಭುವಿಗೆ ತನ್ನನ್ನು ಹಿಂಬಾಲಿಸಿದ್ದಾಳೆಯೇ ಎಂದು ಕುತೂಹಲಗೊಂಡು ನೋಡಿದರೆ ಸಂತ ಮೀರಾಬಾಯಿ 'ಗಿರಿಧರ ಗೋಪಾಲ ನನ್ನ ಸರ್ವಸ್ವ. ಅವನ ಸಾನ್ನಿಧ್ಯಕ್ಕಾಗಿ ಎಲ್ಲರ ತ್ಯಜಿಸಿದೆ' ಎಂದು ತನ್ಮಯಳಾಗಿ ಹಾಡುತ್ತಿದ್ದಳು.

ಹಿಂದೂ ಧರ್ಮದಲ್ಲಿಯ ಈ ಭಕ್ತಿಮಾರ್ಗ ಬಸವಣ್ಣನಿಗೆ ಅತಿಯಾಗಿ ಹಿಡಿಸಿದರೆ ಅದಕ್ಕೂ ಹೆಚ್ಚಿನದು ಸೂಫೀಪಂಥದ ಉದಯವನ್ನು ನೋಡುವುದಾಗಿದ್ದಿತು. ಇಸ್ಲಾಂ ಧರ್ಮದಲ್ಲಿ ಆಧ್ಯಾತ್ಮಿಕ ತತ್ವೋಪದೇಶಕ್ಕಿರುವ ಮತ್ತೊಂದು ಹೆಸರು ಸೂಫೀ ಪಂಥ, ಷೇಕ್ ಮೊಹಿನುದ್ದೀನ್ ಚಿಸ್ತಿ, ಸಲೀಂ ಚಿಸ್ತಿ, ಔಲಿಯ, ಮುಂತಾದ ಸೂಫಿ ಸಂತರು ಇಸ್ಲಾಂ ಕಾಯ್ದೆಯನ್ನು ಮೀರಿದ ಉದಾತ್ತ ದಾರ್ಮಿಕ ಭಾತೃತ್ವ ಹಾಗೂ ಸಹಿಷ್ಣುತೆಯನ್ನು ಆಚರಿಸುತ್ತಲೇ ಅದನ್ನು ಪ್ರಚಾರ ಮಾಡಿದ ಸನ್ನಿವೇಶ ಹೃದಯ ತುಂಬುವಂತಹದಾಗಿತ್ತು. ಸಂತಮೀರ್ ಮೀಯಾಮ್‌ರು ಸಿಖ್ಖರ ಸುವರ್ಣ ಮಂದಿರದ ಶಂಕುಸ್ಥಾಪನೆ ಮಾಡಿದ್ದನ್ನು ಬಸವಣ್ಣ ಕಂಡಾಗಲಂತೂ ಇದು ವಿಶ್ವದ ಇತಿಹಾಸಕ್ಕೆ ಒಂದು ಅನನ್ಯ ಕೊಡುಗೆ ಎಂದು ಸಾರಿದ. ಮುಂದೆ ಈ ಸೂಫಿ ಪಂಥ ಸಾಮ್ರಾಟ್ ಅಕ್ಬರನ ಮೊಮ್ಮಗ ದಾರಾಶುಕೋನ ಮೇಲೆ ತೀವ್ರ ಪರಿಣಾಮ ಬೀರಿ ಆತನೂ ಸೂಫಿ ದಾರ್ಶನಿಕನಾಗಿ ಉಪನಿಷತ್ತುಗಳನ್ನು ಸಂಸ್ಕೃತದಿಂದ ಪರ್ಶಿಯನ್‌ಗೆ ಭಾಷಾಂತರಿಸಿ ಧಾರ್ಮಿಕ ಕ್ರಾಂತಿಯನ್ನೇ ಮಾಡಿದ್ದ. ಮೇಲಾಗಿ ಅಕ್ಬರ್ ಚಕ್ರವರ್ತಿಯ ಧಾರ್ಮಿಕ ನೀತಿ ಈ ಧರ್ಮ ಸಹಿಷ್ಣುತೆಗೆ ಮುಕುಟಪ್ರಾಯದಂತೆ ಗೋಚರಿಸಿತು. ಸ್ವತಃ ಒಂದು ಹೊಸ ಧರ್ಮಪಂಥವನ್ನೇ ಸ್ಥಾಪಿಸಿ 'ದೇವರ ಧರ್ಮ' (ದಿನ್ ಎ ಇಲಾಹಿ) ಎಂದು ಹೆಸರಿಸಿ ಹಿಂದೂ ಬೌದ್ಧ, ಜೈನ ಕ್ರಿಶ್ಚಿಯನ್ ಹಾಗೂ ಇಸ್ಲಾಂ ಮುಂತಾದ ಧರ್ಮೀಯರ ಸಭೆ ಸೇರಿಸಿ ಧಾರ್ಮಿಕ ಸಮನ್ವಯತೆ ಬಗ್ಗೆ ಚಿಂತಿಸುತ್ತಿದ್ದ ಘನವಂತನಾತ. ಕೊನೆಯವರೆಗೂ ಯಾವ ಪಂಗಡಕ್ಕೂ ಸೇರದೇ ಅಕ್ಬರ್ ದೇಹಾಂತದೊಂಡದ್ದು ಅವಿಸ್ಮರಣೀಯವಾಗಿತ್ತು. ಹಾಗೆಯೇ ತನ್ನ ಹೊಸಧರ್ಮದವರನ್ನು ನೆನೆದ. ಈಗ ಅವರೆಲ್ಲ ಹೇಗಿರುವರೊ ಎಂದು ಕಳವಳಗೊಂಡು ಅವರಿರುವೆಡೆಗೆ ತನ್ನ ಪ್ರಯಾಣವನ್ನು ತೀವ್ರಗೊಳಿಸಿದ.

ಒಂದು ಕಡೆ ಧಾರ್ಮಿಕ ಅತಿರೇಕದ ಅತ್ಯಾಚಾರ ಮತ್ತೊಂದೆಡೆ ಸಮನ್ವಯತೆಯ ಸದಾಚಾರ ಹೀಗೆ ನೆರಳು ಬಿಸಿಲಿನಂತೆ ಏರುಪೇರು ಆತನ ಆ ಪ್ರಯಾಣದುದ್ದಕ್ಕೂ ನಡೆದೇಯಿತ್ತು. ಸಿಂಹಾಸನಕ್ಕಾಗಿ ತಂದೆ, ಮಗ, ಬಂಧು ಬಾಂಧವರು ತಮ್ಮ ತಮ್ಮೊಳು ಕಚ್ಚಾಡುತ್ತ ಕೊಲ್ಲುವುದು. ಕೊಲ್ಲಿಸುವುದನ್ನು ಕಂಡಾಗ ಹೆಣ್ಣಿಗಾಗಿ ಸತ್ತವರು ಕೋಟಿ

ಕೋಟಿ ಮಣ್ಣಿಗಾಗಿ ಸತ್ತವರು ಕೋಟಿ ಕೋಟಿ ಹೊನ್ನಿಗಾಗಿ ಸತ್ತವರು ಕೋಟಿ, ಕೋಟಿ, ನಿನಗಾಗಿ ಸತ್ತವರ್ಯ್ಯಾರನೂ ಕಾಣೆ" ಎಂಬ ಅಲ್ಲಮರ ವಚನ ನಿಟ್ಟುಸಿರೊಡನೆಯೇ ಹೊರಬಿತ್ತು.

ಹಾಗೆಯೇ ಈ ಸಮಯದಲ್ಲೇ ಹಿಂದೂಸ್ಥಾನದ ಹೊರಗೆ ಹೇಗಿದ್ದಿರಬಹುದೆಂಬ ಕುತೂಹಲ ಹೆಚ್ಚಾಗಿ ಬಸವಣ್ಣ ಪಾಶ್ಚಾತ್ಯ ದೇಶಗಳ ಕಡೆ ಪ್ರಯಾಣ ಬೆಳೆಸಿದ. ಹದಿನಾರು ಹದಿನೇಳನೇ ಶತಮಾನಗಳಲ್ಲಿ ಅಲ್ಲಿಯ ಧಾರ್ಮಿಕ ತಿಕ್ಕಾಟ ಕ್ರಾಂತಿಗಳೇ ಕಣ್ಣಿಗೆ ರಾಚುವಂತೆ ನಡೆದಿದ್ದವು. ಚರ್ಚುಗಳಲ್ಲಿ ದುರ್ವ್ಯವಹಾರ ಜಾಸ್ತಿಯಾಗಿ ಬೇಸತ್ತ ಜನ ಬಂಡೇಳತೊಡಗಿದ್ದರು. ಹೊಸ ಧಾರ್ಮಿಕ ಶಾಖೆಗಳಾದ ಪ್ರಾಟೆಸ್ಟಂಟ್ಸ್ ಜೆಸೋಯೇಟ್ಸ್ ಮುಂತಾದವು ಹುಟ್ಟಿಕೊಂಡಿದ್ದವು. ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟಂಟ್ಸ್‌ರ ನಡುವೆ 'ಮೂವತ್ತು ವರ್ಷಗಳ ಯುದ್ಧವೇ' ನಡೆದುಹೋಯಿತು. ತಾನೂ ಹೊಸ ಸಿದ್ಧಾಂತವೊಂದನ್ನು ರೂಪಿಸಿ ಜಾತ್ಯಾತೀತ ನವಸಮಾಜ ನಿರ್ಮಾಣ ಮಾಡಬೇಕೆಂದಾಗ ಕಲ್ಯಾಣದಲ್ಲಿಯೂ ಹೀಗೆಯೇ ಘರ್ಷಣೆಗಳಾಗಿರಲಿಲ್ಲವೇ? ಇಲ್ಲಿ ರಾಜ ಮಹಾರಾಜರುಗಳೇ ಒಂದೊಂದು ಧಾರ್ಮಿಕ ಶಾಖೆಗಳನ್ನು ಅವಲಂಬಿಸಿದ್ದರಿಂದ ಯುದ್ಧಗಳೇ ನಡೆದುಹೋಗುತ್ತಿವೆ. ತನ್ನ ಹಿಂದೆ ಬೆನ್ನೆಲುಬಾಗಿ ಯಾವ ಬೇರೆ ಅರಸನೂ ಇರಲಿಲ್ಲವಲ್ಲ. ಈ ಧಾರ್ಮಿಕ ಯುದ್ಧಗಳ ದುಷ್ಪರಿಣಾಮಗಳೇನೇ ಇರಲಿ ಅಲ್ಲಿ ಸಮುದ್ರ ಮಂಥನದ ಅಮೃತದಂತೆ ಬೈಬಲ್ ಅನ್ನು ಲ್ಯಾಟಿನ್‌ನಿಂದ ಜನರ ಭಾಷೆಗಳಾದ ಜರ್ಮನ್ ಹಾಗೂ ಇಂಗ್ಲೀಷಗಳಿಗೆ ಭಾಷಾಂತರಿಸಿದ್ದು, ಊಳಿಗಮಾನ್ಯ ಪದ್ಧತಿಯನ್ನು ಹಾಗೂ ಧರ್ಮಗುರುಗಳ ಅಪ್ರಶ್ನಿತ ಅಧಿಕಾರವನ್ನು ತಹಬಂದಿಗೆ ತಂದದ್ದೇ ಮುಂತಾದ ಮಹತ್ವದ ಸಂಗತಿಗಳೂ ಬೆಳಕು ಕಾಣುವಂತಾಯ್ತು. ಮತ್ತೊಮ್ಮೆ ಈ ಕಡೆ ಬಂದು ವಿವರವಾಗಿ ನೋಡಿದರಾಯಿತು ಎಂದು ಸ್ವದೇಶದೆಡೆಗೆ ತೆರಳಲು ಅನುಭವಗೆ ಸನ್ನೆ ಮಾಡಿದ. ಯಾವುದೋ ವಿಸ್ಮಯವನ್ನು ದರ್ಶನಮಾಡಿಕೊಂಡ ಪುಲಕದಲ್ಲಿ ಅವನೂ ಹೇಂಕರಿಸುತ್ತ ನಾಗಾಲೋಟ ಕಿತ್ತನು.

ಈಗ ಉಳಿದಿರುವವು ಕೊನೆಯ ಮೂರು ಮೆಟ್ಟಿಲುಗಳು. ಅದರಲ್ಲಿ ಹದಿನೆಂಟನೇ ಶತಮಾನದ ಮೊದಲ ಮೆಟ್ಟಲಿಗಿಳಿದಾಗ ಎದುರಾದದ್ದು ಭೀಕರ ಬರಗಾಲ. ಒಂದು ಕಡೆ ನಿಸರ್ಗ ವಿಕೋಪವಾದರೆ ಮತ್ತೊಂದೆಡೆ ವಿದೇಶಿಯರ ಅನೀತಿಯುತ ಆಡಳಿತ. ತಾನು ಪಾಶ್ಚಾತ್ಯ ದೇಶಗಳಲ್ಲಿ ನೋಡಿದಂತಹ ಕೆಂಪು ಜನರೇ ಈಗ ಭಾರತದ ಸೂತ್ರಧಾರವ್ವ ವಹಿಸಿದ್ದನ್ನು ಕಂಡ. ಈ ಹೊತ್ತಿಗಾಗಲೇ ಅವರು ಅಲ್ಲಿ ಆಳವಾಗಿ ಬೇರುಬಿಟ್ಟು ಇಲ್ಲಿಯ ಧನ, ಕನಕ, ಖನಿಜ ಸಂಪತ್ತೆಲ್ಲವನ್ನೂ ಲೂಟಿ ಮಾಡುತ್ತಿದ್ದದು ತೀರ ನೋವಿನ ಸಂಗತಿಯಾಗಿತ್ತು. ಲಕ್ಷಾಂತರ ಜನ ಅನ್ನ ನೀರಿಲ್ಲದೆ, ರೋಗರುಜಿನುಗಳಿಗೆ ಬಲಿಯಾಗಿ ದಾರಿದಾರಿಯಲ್ಲಿ ಹೆಣಗಳು ಬೀಳುವಂತಾಯ್ತು. ಇಡೀ ಸಮಾಜವೇ ಆರ್ಥಿಕ ಹಾಗು ಸಮಾಜಿಕವಾಗಿ ಅಸ್ತವ್ಯಸ್ತಗೊಂಡು ಮೌಲಿಕ ಅವನತಿ ಎಲ್ಲೆಡೆ ತಾಂಡವವಾಡುತ್ತಿತ್ತು.

ಇದು ಸಮಾಜದಲ್ಲಿಯ ಸೂಕ್ಷ್ಮ ಸಂವೇದಿಗಳಿಗೆ ಆಘಾತವನ್ನುಂಟುಮಾಡಿ ವಿಚಾರ ಪ್ರಚೋದನೆಗೆಡೆಯಾದ್ದರಿಂದ ಮುಂದಿನ ಮೆಟ್ಟಿಲುಗಳಲ್ಲಿ ತುಸು ಹೊಸ ಬದಲಾವಣೆ ಕಾಣುವುದು ಶಕ್ಯವಾಯಿತು.

ಏಳನೆಯ ಮೆಟ್ಟಿಲು ಪ್ರಾರಂಭದಲ್ಲಿಯೇ ಬ್ರಹ್ಮ ಸಮಾಜದ ಸ್ಥಾಪನೆಯಾಗಿ ರಾಜಾರಾಮಮೋಹನ್‌ರಾಯ್‌ರ ಸಮಾಜ ಸುಧಾರಣಾ ಚಳುವಳಿ ಜಡ ಸಮಾಜವನ್ನು ಜಾಗೃತಗೊಳಿಸುತ್ತಿತ್ತು. ಜಾತಿ, ಮತಗಳನ್ನೆಲ್ಲ ತೊಡೆದು ಹಾಕಿ ಒಂದೇ ಧರ್ಮವನ್ನು ಆರಾಧಿಸುವ ಈ ವ್ಯವಸ್ಥೆ 'ದೇವನೊಬ್ಬ ತಾ ನಾಮ ಹಲವು ಬಗೆ ದಾರಿ ಬೇರೆ ಬೇರೆ' ಎಂಬ ತನ್ನುಕ್ತಿಯಂತಾಯಿತೆಂದು ಬಸವಣ್ಣ ಸಂತಸಗೊಂಡ. ಸ್ತ್ರೀಯರ ಮೇಲಾಗುವ ದಬ್ಬಾಳಿಕೆಯನ್ನು ತಡೆಯುವ ಅನೇಕ ಕಾರ್ಯಕ್ರಮಗಳು ಕೈಗೂಡುತ್ತಿರುವುದೂ ಶ್ಲಾಘನೀಯವೆನಿಸಿತು. ಅದರಲ್ಲೂ ರಾಮಕೃಷ್ಣ-ವಿವೇಕಾನದಂದ ಪ್ರಯತ್ನಗಳು ಎದ್ದು ಕಾಣುವಂತಹವಾಗಿದ್ದವು. ಸ್ವಾಭಿಮಾನ, ಶರೀರ ಶ್ರಮ, ಅಜ್ಞಾನ ಹಾಗೂ ಬಡತನ ನಿರ್ಮೂಲನಗಳೇ ಇತ್ಯಾದಿಗಳನ್ನು ಜಾಗೃತಗೊಳಿಸುತ್ತಿರುವ ವೀರ ಸನ್ಯಾಸಿಯಲ್ಲಿ ಬಸವಣ್ಣ ತನ್ನ ಪ್ರತಿರೂಪ ಕಂಡುಕೊಂಡ.

ಈ ಸಮಾಜ ಸುಧಾರಣೆ ಕಾರ್ಯಗಳು ಹಾಗೆಯೇ ದೇಶದ ಹಲವಾರು ಭಾಗಗಳಿಗೆ ವ್ಯಾಪಿಸತೊಡಗಿದವು. ಭಾರತೀಯ ಸೇವಾ ಸಂಘ ಕಟ್ಟಿಕೊಂಡು ಕೆಳವರ್ಗದವರನ್ನು ಮೇಲೆತ್ತುವ ಕೆಲಸವನ್ನು ಗೋಖಲೆ ಕೈಗೊಂಡಿದ್ದರೆ, ಆನಿಬೆಸೆಂಟ್‌ರವರ 'ಮದ್ರಾಸ್ ಹಿಂದೂ ಸಂಘ' ಅನಿಷ್ಟ ದೇವದಾಸಿ ಪದ್ಧತಿಯನ್ನು ತೀವ್ರ ವಿರೋಧಿಸಿತು. ಇವರೆಲ್ಲಗಿಂತ ಒಂದು ಹೆಜ್ಜೆ ಮುಂದಿದ್ದವರೆಂದರೆ ಜೋತಿಬಾ ಫುಲೆ. ನಿರ್ಲಕ್ಷಿತರ ಹಾಗೂ ಸ್ತ್ರೀಯರ ಏಳ್ಗೆಗಾಗಿ ವಿಶೇಷ ಶಾಲೆಗಳನ್ನು ತೆರೆದು ತಮ್ಮ ಜೀವಮಾನವಿಡೀ ಅವರ ಕಲ್ಯಾಣಕ್ಕಾಗಿಯೇ ದುಡಿದ ಇವರೂ ತನ್ನ ಶರಣಗಣದಲ್ಲೊಬ್ಬರೆಂದೆನ್ನಿಸಿತು. ಹಾಗೆಯೇ ತುಸು ದಕ್ಷಿಣಕ್ಕೆ ಸರಿದು ಕಣ್ಣಾಡಿಸಿದರೆ ಅಲ್ಲಿ ನಾರಾಯಣ ಗುರುರವರು "ಎಲ್ಲ ಧರ್ಮಗಳ ಸಾರವೂ ಒಂದೇ" ಎಂದು ಚಳುವಳಿ ನಡೆಸುತ್ತಿದ್ದುದ ನೋಡಿ ಬಸವಣ್ಣ. ಈ ಗುರು ನನದೆಯೂ ಗುರು ನಿನಗೆಯೂ ಗುರು ಎಂದುಸಿರಿದ. ಇದರ ಪರಿಣಾಮವಾಗಿಯೇ ಎಂಬಂತೆ ಮುಂದೆ ತಿರುವಾಂಕೂರಿನ ಮಹಾರಾಜನೇ ಎಲ್ಲ ಸರ್ಕಾರಿ ದೇವಾಲಯಗಳಲ್ಲಿಯೂ ಸರ್ವರಿಗೂ ಪ್ರವೇಶ ಮುಕ್ತವಾಗಿರಬೇಕೆಂದು ಆಜ್ಞೆ ಹೊರಡಿಸಿದ. ತಾನೂ ಮಾಡಿದ ಇಂತಹ ಪ್ರಯತ್ನಗಳಲ್ಲಿ ರಾಜ ಬಿಜ್ಜಳ ಮೊದ ಮೊದಲು ಹೀಗೆಯೇ ಸಹಕಾರ ಕೊಟ್ಟಿರಲಿಲ್ಲವೇ? ಆದರೆ ವಿಧಿಯಾಟ ಕೊನೆ ಕೊನೆಯಲ್ಲಿ ಆತನೂ ಮೂಲಭೂತವಾದಿಗಳ ಪಿತೂರಿಗೆ ತಲೆಬಾಗಿದ್ದ.

ಹಾಗೆಯೇ ಸಾಗುತ್ತ ಕೊನೆಯ ಮೆಟ್ಟಿಲ ಮೇಲೆ ಬಂದ ಬಸವಣ್ಣ. ಇಲ್ಲಿಂದ ಕೆಳಗೆ ನೋಡಿದರೆ ಇಪ್ಪತ್ತೊಂದನೆಯ ಶತಮಾನವೂ ಎರಡನೇ ಸಹಸ್ರಮಾನದ ಕೊನೆಯೂ ಸ್ಪಷ್ಟವಾಗಿ ಗೋಚರಿಸುತ್ತವೆ. ಈಗ ಇಡೀ ಭರತವರ್ಷವೇ ತಲ್ಲಣಿಸುತ್ತ ಪರಿವರ್ತನೆಯ ಹೊಸ್ತಿಲನ್ನು ದಾಟುತ್ತಿರುವಂತೆ ಭಾಸವಾಗತೊಡಗಿತು. 'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂದು ತಾನುಲಿದಂತೆಯೇ ವಿದ್ಯೆಗೆ ಅಕ್ಷರ ಕಲಿಕೆಗೆ ಎಲ್ಲಿಲ್ಲದ ಮಹತ್ವ ಬರತೊಡಗಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಜೊತೆ ಜೊತೆಯಲ್ಲೇ ವಚನಗಳ ಕಟ್ಟುಗಳನ್ನು ತಲೆ ಮೇಲೆ ಹೊತ್ತು ಮನೆ ಮನೆ ತಿರುಗುತ್ತ ಅವುಗಳ ಸಾರ ಸಂದೇಶ ಸಾರುತ್ತ ಹೊರಟಿರುವವರ ಕಂಡು ತನ್ನ ಶರಣ ಸಂತತಿಯ ಈ ಪಡೆ ನಿರಂತರವಿರಲಿ ಎಂದು ಹಾರೈಸಿದ. ದೇಶಕ್ಕೆ ಸ್ವಾತಂತ್ರ್ಯ ಬೇಕೆ ಬೇಕು ಎಂದು ಗಾಂಧೀಜಿಯ ನೇತೃತ್ವದಲ್ಲಿ ನಡೆಯುತ್ತಿರುವ ಆಂದೋಲನದಲ್ಲಿ ಇಡೀ ದೇಶವೇ ಒಂದಾಗಿ ಹೋರಾಡುತ್ತಿರುವುದು ಕಂಡು ಪರಕೀಯರ ದಬ್ಬಾಳಿಕೆ ಕಿತ್ತೊಗೆಯಲಾದರೂ ಹೀಗೆ ಸಮಾಜ ಬಾಂಧವರೆಲ್ಲ ಒಗ್ಗೂಡಿದ್ದಾರಲ್ಲ ಎಂದು ಉಲ್ಲಸಿತನಾದ. ಆದರೆ ಮುಂದೆ ತನಗಾದಂತೆಯೇ ಮಹಾತ್ಮನ ಅಂತ್ಯವೂ ಒಂದು ದುರಂತದಂತೆ ಬಂದೆರಗಿದ್ದನ್ನು ಕಂಡು ಉರಿಯಲ್ಲಿಯ ಕರ್ಪೂರದಂತೆ ಕರಗಿಹೋದ. ತನ್ನ ತತ್ವಗಣದವರಿಗೆಲ್ಲ ಮರಣವೇ ಮಹಾನವಮಿ ಅಲ್ಲವೇ? ಈ ಮಹಾತ್ಮನ ಅಹಿಂಸೆ, ಸತ್ಯ, ಶಾಂತಿ, ಘೋಷಣೆಗಳಿಗೆ ತಿಲಕ ನಮ್ಮ ಮಾದಾರ ಚನ್ನಯ್ಯ, ನಿಮ್ಮಿಂದಧಿಕ ಕೂಡಲ ಸಂಗಮ" ಎಂಬಂತೆ ಈ ಬಾಬಾ ಸಾಹೇಬನೂ ಶ್ರೇಷ್ಠನೇ ಎಂದು ಮೆಚ್ಚುಗೆ ವ್ಯಕ್ತಪಡಿಸಿದ.

ಇಪ್ಪತ್ತನೇ ಶತಮಾನದಲ್ಲೇ ಒಮ್ಮೆಲೇ ಇಂತಹ ಕ್ರಾಂತಿಕಾರಿ ವಿಚಾರ ಧೋರಣೆ ಹೇಗೆ ಸಾಧ್ಯವಾಯಿತು? ಎಂದು ಗಹನ ವಿಚಾರದಲ್ಲಿ ಮುಳುಗಿದ. ಹಾಗೆಯೇ ತುಸು ಹೊರಳಿ ಪಶ್ಚಿಮಕ್ಕೆ ನೋಡಲು ಹಿಂದಿನ ಮೆಟ್ಟಿಲಲ್ಲೇ ಕಾರ್ಲ್ ಮಾರ್ಕ್ಸ್ ಅಂಜೆಲ್ಸ್ ಎಂಬ ವಿಚಾರವಾದಿಗಳಿಬ್ಬರು ಅಲ್ಲಿ "ಜಗತ್ತಿನ ದುಡಿಯುವ ಜನರೇ ಒಂದಾಗಿ" ಎಂದು ಚೀರುತ್ತಿದ್ದುದು ಕೇಳಿಸಿತು. ಹಾಗೆಯೇ ಸ್ವಲ್ಪ ಇನ್ನೂ ಹಿನ್ನೋಡಿದರೆ 18ನೇ ಶತಮಾನದಲ್ಲಿ ಫ್ರಾನ್ಸ್ ಅಮೇರಿಕಾಗಳಲ್ಲಿ ಕ್ರಾಂತಿಗಳು ನಡೆಯುತ್ತಿದ್ದವು. ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತ್ವಕ್ಕಾಗಿ ಹುಟ್ಟುಹಾಕಲ್ಪಟ್ಟ ಈ ಆಂದೋಲನಗಳಲ್ಲಿಯೂ ತನ್ನ ಕ್ರಾಂತಿಯ ಬೀಜಗಳು ಮೊಳೆತಂತೆ ಭಾಸವಾಯಿತವನಿಗೆ.

ಮತ್ತೆ ತುಸು ಹಿಂದೆಯೇ ತನ್ನ ತಾಯ್ನಾಡಲ್ಲೇ ಸರ್ವಜ್ಞನೆಂಬುವವನು ನಿಗರ್ವಿಯಾಗಿ ನಡೆವದೊಂದೇ ಭೂಮಿ, ಕುಡಿವದೊಂದೇ ನೀರು, ಸುಡುವಾಗ್ನಿ ಒಂದು ಇರುತಿರಲು, ನಡುವೆ ಕುಲಗೋತ್ರ ಎತ್ತಣದು? ಎಂದು ವರ್ಣಭೇದದ ಗರ್ವಭಂಗ ಮಾಡುತ್ತ ನಡೆದಿದ್ದ. ಹಾಗೆಯೇ ಕನಕದಾಸರು ಕುಲ ಕುಲ ಕುಲವೆಂದು ಹೊಡೆದಾಡದಿರಿ, ಆತ್ಮ ಯಾವ

ಕುಲ, ಜೀವ ಯಾವ ಕುಲ? ಎಂದು ಪ್ರಶ್ನಿಸುತ್ತ ನಿಜವಾದ ಕುಲದ ನೆಲೆ ತಿಳಿದುಕೊಳ್ಳಿರೊ ಎಂದು ಮಾತಿನಲ್ಲೇ ತಿವಿಯುತ್ತ ಅಲೆಯುತ್ತಿದ್ದರೆ, ಪುರಂದರ ದಾಸರೂ ಸಮಾಜದಲ್ಲಿಯ ಕಂದಾಚಾರಗಳನ್ನು ಖಂಡಿಸುತ್ತ 'ನಗೆಯು ಬರುತಿದೆ ಎನಗೆ ಜಗದೊಳಿರುವ ಮನುಜರ ಹಗರಣ ಮಾಡುವುದು ಕಂಡು' ಎಂದು ಚಾಟಿ ಬೀಸುತ್ತಿದ್ದರು. ಮುಂದಿನ ಮೆಟ್ಟಿಲೊಂದರಲ್ಲಿ ಶರೀಫನೆಂಬ ಮುಸ್ಲೀಮನು ತನ್ನ ತತ್ವಪದಗಳಲ್ಲಿ ಖದರಲಿಂಗನ ಕೊಂಡಾಡುತ್ತ ಹಿಂದೂ ಮುಸ್ಲಿಮ್ ಐಕ್ಯತೆಗೆ ಅರ್ಹನಿಸಿ ಯತ್ನಿಸುತ್ತ ಸಾಗಿದ್ದನು. ಈಗ ಬಸವಣ್ಣ ಈತನಿಗೆ ದೀಕ್ಷೆ ಕೊಟ್ಟ ಗುರುಗೋವಿಂದ ಭಟ್ಟರನ್ನು ಹೃದಯಾರೆ ಅಭಿನಂದಿಸಿ. ಹಾಗೆಯೇ ಆತನ ಎದುರಿಗೆ ಪುನಃ ಇಪ್ಪತ್ತನೇ ಶತಮಾನವೇ ಬಂತು. ಕಣ್ಣರಳಿಸಿ ನೋಡಬೇಕು. ಮನಸ್ಸಿಟ್ಟು ಮನದಟ್ಟು ಮಾಡಿಕೊಳ್ಳಬೇಕು ಅಂತಹ ಘಟನೆಗಳೆ ಸುತ್ತಮುತ್ತ, ಇಡೀ ಭಾರತ ವರ್ಷವೇ ಒಕ್ಕೊರಲಿನಿಂದ ಕೂಗುತ್ತಿದೆ ಒಂದೇ ಘೋಷಣೆಯ 'ಆಂಗ್ಲರೇ ಭಾರತ ಬಿಟ್ಟು ತೊಲಗಿ' ಶಬ್ದಗಳು ಕಿವಿ ಸೇರುತ್ತಲೇ ಅವನಿಗರಿವಿಲ್ಲದಂತೆಯೇ ಕೈ ಜೋಡಿಸಿ ಬಸವಣ್ಣ 'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿಗರೀಯಸಿ" ಎಂದ. ನೋಡ ನೋಡುವಷ್ಟರಲ್ಲಿ, ಅಮಾಯಕ ಜನರ ಮೇಲೆ ಕೆಂಪು ಮೂತಿಯ ಕಾಖಿಧಾರಿಗಳು ಲಾಠಿಯಿಂದ ಬೀಸುವುದು, ಕೆಲಸಾರಿ ಗುಂಡುಗಳ ಮಳೆ ಸುರಿಸುವುದೇ ಇತ್ಯಾದಿ ಪ್ರಾರಂಭವಾಯಿತು. ಅಲ್ಲಲ್ಲಿ ಹರಿದ ರಕ್ತದ ಕೋಡಿ ಆತನ ಕಣ್ಣೀರಾಗಿ ಕೆಳಗಿಳಿಯತೊಡಗಿತು. ಅತ್ಯಂತ ವಿನೀತನಾಗಿ 'ಶಿವಶಿವಾ' ಎಂದು ಕೈ ಮೇಲಕ್ಕೆತ್ತಿದ. ಈ ಪ್ರಾರ್ಥನೆ ಕೇಳಿಸಿತೇನೊ ಎಂಬಂತೆ ಜನರ ಹೋರಾಟಕ್ಕೆ ಫಲ ಸಿಕ್ಕಿತೆನಿಸುವಂತೆ ನೀಲಿ ಕೆಂಪು ಪಟ್ಟಿಗಳಿಂದ ಕೂಡಿದ ಧ್ವಜ ಕೆಳಗಿಳಿದು, ಜವಾಹರಲಾಲ್‌ರವರು ಕೆಂಪು ಕೋಟೆಯ ಮೇಲೆ ಸ್ವದೇಶಿ ತಿರಂಗವನ್ನು ಹಾರಿಸುತ್ತಿರುವಂತೆಯೇ ಜನ ಸಮುದಾಯದ ಹರ್ಷದ ಹೊಳೆ ಉಕ್ಕಿ ಹರಿಯಿತು.

ಆದರೆ ಈ ಉತ್ಸಾಹ ಬಹಳ ಕಾಲ ಉಳಿಯಲಿಲ್ಲ. ಕೆಂಪು ಜನ ಹೋದದ್ದೇ ತಡ ಇಲ್ಲಿಯವರ ಮಧ್ಯವೇ ತಿಕ್ಕಾಟ ಘರ್ಷಣೆ ಪ್ರಾರಂಭವಾಗಿ ಬಿಡಬೇಕೆ? ದೇಶದೆಲ್ಲೆಡೆ ದಂಗೆ, ಕೊಲೆ, ಸುಲಿಗೆಗಳ ವಿಷಜ್ವಾಲೆ ಭುಗಿಲೆದ್ದವು. ಹಸಿರು ಧ್ವಜದಲ್ಲಿ ಅರ್ಧ ಚಂದ್ರ ಹಾಗೂ ಒಂದು ನಕ್ಷತ್ರವನ್ನಿಟ್ಟುಕೊಂಡುವರು ತಮಗೆ ಬೇರೆ ದೇಶವೇ ಬೇಕೆಂದು ಜಗಳಾಟಕ್ಕಿಳಿದಿದ್ದರು. ಕೊನೆಗೆ ಅನಿವಾರ್ಯವಾಗಿ ಅಣ್ಣ ತಮ್ಮಂದಿರು ಹಿಂಸೆ ಮಾಡಿಕೊಂಡಂತೆ ಹಿಂದೂಸ್ತಾನ ಒಡೆದು ಪಾಕಿಸ್ತಾನದ ಉದಯಕ್ಕೆ ಅವಕಾಶ ಮಾಡಿಕೊಡಲಾಯಿತು. ಇನ್ನೂ ತುಸು ಮುನ್ನಡೆದರೆ, ಹೊಸ ಧರ್ಮಗ್ರಂಥದಂತಹ ದೇಶದ ಆಡಳಿತಗಾರರು ರಚಿಸಿಕೊಂಡದ್ದು ತಿಳಿದುಬಂತು. ಇದರಲ್ಲಿಯು ನಿರ್ದೇಶಕ ತತ್ವಗಳು ಎಷ್ಟೊಂದು ಸೊಗಸಾಗಿದೆ? ಬಡವರ, ದೀನದಲಿತರ, ಮಹಿಳೆಯರ ಕಲ್ಯಾಣಕ್ಕಾಗಿ ವಿಶೇಷ ಮಾರ್ಗದರ್ಶಿಗಳು! ವಾಹ್ ಇವೆಲ್ಲ ಕಾರ್ಯಗತವಾಗಿಬಿಟ್ಟರೆ... ತನ್ನ ಅರ್ಧದಲ್ಲಿ ನಿಂತುಹೋದ ಕ್ರಾಂತಿ ಸಂಪೂರ್ಣವಾದಂತಹ ತೃಪ್ತಿ ತನ್ನದಾದೀತಲ್ಲ! ತಾನು ಈಗಿಂದೀಗಲೇ ಸ್ವರ್ಗಕ್ಕೆ ಮರಳಿ ಹೋಗಬಹುದು, ಆದರೆ, ಇರಲಿ, ಇನ್ನೂ ಮುಂದಿನದನ್ನು ನೋಡಿಕೊಂಡೇ ಹೋದರಾಯಿತೆಂದ. ಹೊಸ ಹೊಸ ಸಂಶೋಧನೆಗಳಿಂದಾಗಿ ಮಾನವ ಏನೆಲ್ಲ ಅದ್ಭುತಗಳನ್ನು ಕೈವಶ ಮಾಡಿಕೊಂಡಿದ್ದಾನೆ. ಮೀನಿಗಿಂತ ಚೆನ್ನಾಗಿ ಈಜುತ್ತಾನೆ. ಹಕ್ಕಿಗಿಂತ ಚೆನ್ನಾಗಿ ಹಾರುತ್ತಾನೆ. ಅಂದುಕೊಳ್ಳುತ್ತಿರುವಂತೆಯೇ..... "ಆದರೆ ಮನುಷ್ಯ ಮನುಷ್ಯನಂತೆ ಬಾಳುತ್ತಿಲ್ಲ" ಎಂಬ ತತ್ವಜ್ಞಾನಿಯ ಮಾತೊಂದು ಕಿವಿಗೆ ಅಪ್ಪಳಿಸಿತು. ತಿರುಗಿ ನೋಡಿದರೆ, ಶುಭ್ರ ಪೇಟ ಕನ್ನಡಕ, ಧೋತಿಯುಟ್ಟ ವೃದ್ಧ ರಾಧಾಕೃಷ್ಣನ್‌ರವರು ದೆಹಲಿಯ ಅತ್ಯುಚ್ಛ ಸ್ಥಾನದಲ್ಲಿ ಕುಳಿತಿದ್ದೂ ನಿಟ್ಟುಸಿರು ಹಾಕುತ್ತಿದ್ದರು.

ಈಗ ಶತಮಾನ ಸಹಸ್ರಮಾನಗಳ ಅಂಚಿಗೆ ಬಂದು ನಿಂತಿದ್ದ ಬಸವಣ್ಣನ ಕಿವಿಯಲ್ಲಿ ಆ ತತ್ವಜ್ಞಾನಿಯ ಮಾತುಗಳು ಗುಂಯ್‌ಗುಡುತ್ತಲೇ ಇದ್ದವು. ವಿಷಣ್ಣವಾಗಿ ಸುತ್ತಲೂ ನೋಡತೊಡಗಿದ. ನಿಜ. ಏನಾಗುತ್ತಿದೆ ಇಲ್ಲೆಲ್ಲ. ಒಬ್ಬರ ಪೂಜಾ ಸ್ಥಾನಗಳನ್ನು ಮತ್ತೊಬ್ಬರು ಕೆಡುವುತ್ತಿದ್ದಾರೆ. ತನ್ನ ಪಯಣದ ಪ್ರಾರಂಭದಲ್ಲೇ ತಾನು ನೋಡಿದ ಘೋರಿ ಗಜನ ಮಹಮ್ಮದ್‌ಗಳ ಅಪರಾವತಾರ ಇವರಾಗಿದ್ದಾರೆ. ಧರಿಸಿದ ವಸ್ತ್ರ, ಮುಖ ಚಹರೆಗಳು ಬದಲಾವಣೆಗೊಂಡಿವೆಯೇ

ಹೊರತು ಧೋರಣೆಗಳು ಬದಲಾಗಲಿಲ್ಲ. ಈ ಮುರಿದ ಮನಸ್ಸುಗಳನ್ನು ಕಟ್ಟುವುದೇ ಅಂದು ತನ್ನ ಆದ್ಯತೆಯಾಗಿತ್ತು. ಈಗಲೂ ಅದೇ ಆಗಬೇಕಾದ್ದೆನಿಸುತ್ತದೆ. ಮನುಷ್ಯ ಮನುಷ್ಯನ ಮಧ್ಯದ ಪ್ರೀತಿಗಿಂತ ಮಿಗಿಲಾದುದು ಇನ್ನಿಲ್ಲ. ಈ ಜಾತಿ ಭೇದಗಳ ಬೇರು ಕಿತ್ತೊಗೆಯುವುದೇ ತನ್ನ ಮಹತ್ವಾಕಾಂಕ್ಷೆ ಕರ್ತವ್ಯವಾಗಿದ್ದದ್ದು ತನ್ನ ಮನದಲ್ಲಿ ಹಚ್ಚ ಹಸಿರಾಗಿ ಉಳಿದಿರಲು ಇದೇ ಕಾರಣವಿರಬೇಕೆಂದುಕೊಂಡ. ಎಲ್ಲಿಯವರೆಗೆ ಈ ಧರ್ಮಾಂಧರ ಕ್ರೂರ ಅಟ್ಟಹಾಸವೊ ಆ ದೇವನೆ ಬಲ್ಲ. ಆದರೆ ಭವ್ಯ ಅತಿ ಭವ್ಯ ಗುಡಿ ಗುಂಡಾರಗಳು, ಮಸೀದಿ, ಚರ್ಚುಗಳು ಎದ್ದು ನಿಂತಿವೆ. ದೇವಸ್ಥಾನಗಳಲ್ಲೆಲ್ಲ ಬಂಗಾರ ಕಿರೀಟ, ವಜ್ರದುಂಗುರಗಳ ಅಲಂಕಾರ ನಡೆಯುತ್ತಿದೆ..... ಏನಾಯಿತು. 'ಕಾಲೇ ಕಂಬ ದೇಹವೇ ದೇಗುಲ......' "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಆದರೆ ಈಗ ಇದೆಲ್ಲ ಗರಬಡಿದು ಕುಳಿತಂತಿದೆಯಲ್ಲವೇ? ಪರಧನ, ಪರಸ್ತ್ರೀಯರ ವಾಂಛೆ ಎಲ್ಲೆಡೆ ತಾಂಡವಾಡುತ್ತಿದೆ. ಕಾರಣ ತಾನು ಇಲ್ಲಿ ತುಂಬ ಕೆಲಸ ಮಾಡುವುದು ಬಾಕಿಯಿದೆ ಎಂದೆನಿಸುತ್ತದೆ. "ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ" ಎಂದಿರಲಿಲ್ಲವೇ ತಾನು. ಅಲ್ಲಿ ಎಲ್ಲ ಸುಖ ಸಮೃದ್ಧಿ, ಆದರೆ ದಾಸೋಹವಿಲ್ಲ. ದಾನಧರ್ಮಗಳಿಲ್ಲ. ದುಡಿತ ಅಂತೂ ಇಲ್ಲವೇ ಇಲ್ಲ. ಅಂದರೆ ಕಾಯಕವಿಲ್ಲದೇ ಕೈಲಾಸವೇ? ವಿಚಿತ್ರವೆನಿಸತೊಡಗಿತು ಬಸವಣ್ಣನಿಗೆ. ಎಲ್ಲ ಮೆಟ್ಟಿಲುಗಳನ್ನೂ ಅಲ್ಪ ಸ್ವಲ್ಪ ನೋಡಿದ್ದಾಯಿತು. ಇನ್ನು ತಿರುಗಿ ಹೋಗುವ ತಯಾರಿ ಮಾಡಬೇಕು. ಆದರೆ ಯಾಕೋ ಮನೋರಥ ಮುಂದೆ ಸಾಗದಾಯಿತು. ಹಾಗೆಯೇ ಹಣೆಗೆ ಕೈ ಹಚ್ಚಿ ಕುಳಿತುಕೊಂಡ.

ಅಲ್ಲಿ ಸಲ್ಲಿದ ತಾನು ಈಗ ಪುನಃ ಇಲ್ಲಿ ಸಲ್ಲಬೇಕಾಗಿದೆ. ಆಗ ಅರ್ಧಕ್ಕೆ ನಿಂತ ತನ್ನ ಜೀವನ ಕಾರ್ಯ ಈಗ ಮುಂದೊರೆಯಬೇಕಿದೆ. 'ಸ್ವರ್ಗಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿಭೋ' ತನ್ನ ಮಾತೆ ತನ್ನ ಕಿವಿಯಲ್ಲಿ ತಿರುತಿರುಗಿ ಅಪ್ಪಳಿಸುತ್ತಿದೆ. ಅಂದ ಮೇಲೆ ತಿರುಗಿ ಸ್ವರ್ಗಕ್ಕೆ ಹೋಗಿ ಮಾಡುವದೇನಿದೆ? ಮತ್ತೆ ಮತ್ತೆ ಅದೇ ಪ್ರಶ್ನೆ. ತಾನು ಚಿಕ್ಕವನಿದ್ದಾಗ ಓದಿದ "ಆರ್ ಅಂಕುಶ ಇಟೊಡಂ ನೆನೆವದೆನ್ನ ಮನಂ ಬನವಾಸಿ ದೇಶಮಂ...... ಪುಟ್ಟಮೇಂ ಕೋಗಿಲೆಯಾಗಿ ಮೇಣ್ ಮರಿದುಂಬಿಯಾಗಿ...... "ಓಹ್ ಆದಿಕವಿ ಪಂಪನೇ ನಿನಗೆ ಅಭಿನಂದನೆಗಳೆಂದ. ಎಂತಹ ಅನುಪಮ ಸಂದೇಶ! ಹಾಗೆಯೇ ಸಾವಕಾಶವಾಗಿ ಪದ್ಮಾಸನದಲ್ಲಿ ಪವಡಿಸಿದ. ಒಳಗಿನ ಲಿಂಗವನ್ನು ಹೊರತೆಗೆದ. ಅಗಮ್ಯ ಅಗೋಚರ, ಅಪ್ರತಿಮ ಲಿಂಗವೇ..... ಎನ್ನ ಕರಸ್ಥಲಕ್ಕೆ ಬಂದು ಚುಳಕಾದಿರಿ ಎನ್ನುತ್ತ ಭಕ್ತಿ ಭಾವದಿಂದ ಮೈಮರೆತು ಪೂಜಿಸತೊಡಗಿದ. ಹಾಗೆಯೇ ಮನಸ್ಸಿನಲ್ಲೇನೋ ಒಂದು ಉತ್ಕಟ ಬಯಕೆಯಾಗತೊಡಗಿತು. ಬೇಡುವವನೆ ಬಡವ, ಹೌದು, ಆದರೆ ಈಗ ತಾನು ನಿಜವಾಗಿಯೂ ಬೇಡಬೇಕಾಗಿ ಬಂದಿದೆ ಆ ಕೂಡಲಸಂಗಮನಲ್ಲಿ, ಬಸವಣ್ಣ ಅಂಗಲಾಚಿದ. ತಾನು ಕಡುಬಡವನೆಂದ, ಭಕ್ತಿಯ ಪಿತ್ತ ನೆತ್ತಿಗೇರಿ ತಾನು ಕೈಲಾಸದ ಬಟ್ಟೆ (ದಾರಿ)ಯ ಹತ್ತಿದ್ದು ವ್ಯರ್ಥವಾಯಿತೆಂದ. "ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು, ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೇ?" ಎಂಬ ವಚನ ಒತ್ತರಿಸಿ ಬಂದಿತು. ಹಾಗೆಯೇ ವರವೊಂದು ಬೇಡಿದ ಶಿವನಲ್ಲಿ ಆದರೆ ಏನನ್ನೊ ಕೊಡು ಎಂದಲ್ಲ ಕೇವಲ "ಬೇಡ" ಎಂದು, ತನ್ನನ್ನು ಈ ಭೂಮಿಯಲ್ಲೇ ಬಿಟ್ಟು ಬಿಡು ಬಹಳಷ್ಟನ್ನು ಇಲ್ಲಿ ಇನ್ನೂ ಮಾಡಬೇಕಿದೆ. ಸ್ವರ್ಗ ತನಗೆ "ಬೇಡ" ಎಂದು.

# ಆಶ್ರಯ

ಅಗಸಿಯವರ ಮನೆಯಲ್ಲಿ ಮದುವೆಯೆಂದರೆ ಒಂದು ದೊಡ್ಡ ಜಾತ್ರೆಯೇ ಇದ್ದಂತೆ. ಮೂರು ತಲೆಮಾರಿನಿಂದಲೂ ಕೂಡಿ ಇದ್ದ ಅವರ ಸಂಸಾರ ಇಡೀ ಜಿಲ್ಲೆಯಲ್ಲಿಯೇ ಹೆಸರುವಾಸಿಯಾದ ಅವಿಭಕ್ತ ಕುಟುಂಬ, ಏನಿಲ್ಲವೆಂದರೂ ಒಂದು ನೂರು ಜನಸಂಖ್ಯೆ, ದೊಡ್ಡ ಆರೇಳು ಮನೆಗಳು, ಬಂಗ್ಲೆಗಳು, ಮೊದಲ ತಲೆಮಾರಿನ ಏಳು ಜನ ಅಣ್ಣತಮ್ಮಂದಿರು. ಮೂರು ಜನ ಅಕ್ಕತಂಗಿಯರಿಗೆ ಮಕ್ಕಳು ಮೊಮ್ಮಕ್ಕಳು ಈಗ ಮರಿಮಕ್ಕು. ಈ ಮನೆಯ

ಸಂಬಂಧಿಕರೆಂದರೆ ಕರ್ನಾಟಕ ಹಾಗೂ ನೆರೆಯ ಮಹಾರಾಷ್ಟಗಳನ್ನೆಲ್ಲ ಸುತ್ತಾಡಿ ಬರಬೇಕು. ಮದುವೆಯಂತಹ ಬಹು ಮುಖ್ಯ ಕಾರ್ಯಕ್ರಮಕ್ಕೆ ಎಲ್ಲರನ್ನೂ ಕರೆಯಬೇಕಲ್ಲ. ಹಾಗಾಗಿ ವಧೂ-ವರರನ್ನು ಭೇಟಿ ಮಾಡಿ, ಶುಭಹಾರೈಸಿ, ಕಿರು ಕಾಣಿಕೆ ನೀಡಿ, ಫೋಟೊ ತೆಗೆಸಿಕೊಂಡು, ಉಭಯಕುಶಲೋಪರಿ ವಿಚಾರಿಸಿ ವೇದಿಕೆ ಇಳಿದು ಬರಬೇಕೆಂದರೆ ಕನಿಷ್ಠ ಒಂದೆರಡು ನಿಮಿಷಗಳು ಒಬ್ಬೊಬ್ಬರಿಗೆ ಬೇಕು. ದೂರದ ಕ್ಯೂನಲ್ಲಿನಿಂತ ಮಹೇಶನ ತಲೆಯಲ್ಲಿ ತಾನು ವೇದಿಕೆ ತಲುಪಲು ಏನಿಲ್ಲೆಂದರೂ ಇನ್ನೂ 30-40 ನಿಮಿಷ ಬೇಕಾಗಬಹುದೆಂದು ಲೆಕ್ಕಾಚಾರವಾಯಿತು. ತದೇಕಚಿತ್ತದಿಂದ ಆ ಕಲ್ಯಾಣ ಮಂಟಪದ ಛತ್ತು, ಗೋಡೆ, ಪುಷ್ಪಾಲಂಕಾರ, ಜನರ ಗಜಿಬಿಜಿ, ಸರಕ್ ಪರತ್ ಎಂಬ ಹೊಸ ಹೊಸ ರೇಷ್ಮೆ ಸೀರೆಗಳ ಸದ್ದು, ಹೊರಗಡೆಯಿಂದ ನುಸುಳಿ ಬರುವ ಬ್ಯಾಂಡ್ ಸಪ್ಪಳ ಚೀರಾಟ ಗದ್ದಲ ನಗು...... ಇತ್ಯಾದಿ ಕೇಳುತ್ತ, ನೋಡುತ್ತ ಈ ಎಲ್ಲ ಆಗುಹೋಗುಗಳನ್ನು ಮನದಲ್ಲಿ ದಾಖಲಿಸುತ್ತ ಒಂದು ರೀತಿಯ ಲಘು ರೋಮಾಂಚನವನ್ನು ಅನುಭವಿಸುತ್ತಿರುವಾಗಲೇ ಆತನ ಹೆಗಲ ಮೇಲೆ ಕೈಯೊಂದು ಇಟ್ಟಂತಾಗಿ ಮಹೇಶನ ಈ ಆನಂದಕ್ಕೆ ಸ್ವಲ್ಪ ಅಡಚಣೆಯುಂಟಾಯಿತು. ತಿರುಗಿ ನೋಡಿದರೆ ಹರೀಂದ್ರ ನಗುತ್ತ ನಿಂತಿದ್ದಾನೆ. ನಸುಗಪ್ಪು ಬಣ್ಣದ ಆ ಮುಖದಲ್ಲಿ ಫಳಫಳನೆ ಹೊಳೆಯುವ ಹಲ್ಲುಗಳು. ನಿಷ್ಕಲ್ಮಶ ನಗೆಯೆಂದರೆ ಹೀಗೆಯೇ, ಭೌತ ಹಾಗೂ ಭಾವಾರ್ಥ ಎರಡರಲ್ಲೂ ಎಂಬಂತಹ ಹಸನ್ಮುಖಿ. ವರ್ಷೆರಡು ವರ್ಷಕ್ಕೊಮ್ಮೆ ಭೆಟ್ಟಿಯಾಗುವ ಇಬ್ಬರಿಗೂ ಮದುವೆಯ ಒಟ್ಟಾರೆ ವಾತಾವರಣವೂ ಗೌಣವಾಗಿ ಒನ್-ಟು-ಒನ್ ಸಂಭಾಷಣೆ ಪ್ರಾರಂಭವಾಗಿಬಿಟ್ಟಿತು. ಅಂತರ್ಧ್ಯಾನಿಯಾಗಿ ಕುಳಿತ ಹಲವಾರು ವ್ಯಕ್ತಿಗತ ಜಾರಿತ್ರಿಕ ಸಂಗತಿಗಳು ತಂತಾನೆ ಪುಟಿದೆದ್ದು ಹೊರಹೊಮ್ಮುತೊಡಗಿದವು. ಇಪ್ಪತ್ತು ವರ್ಷದ ಗೆಳೆತನವೆಂದರೆ ಸುಮ್ಮನೆಯೇ? ಬಾಸೆಲ್ ಮಿಶನ್ ಪ್ರೌಢಶಾಲೆಯ ಅಂಗಳದಿಂದ ಕರ್ನಾಟಕ ಕಾಲೇಜು, ವಿಶ್ವವಿದ್ಯಾಲಯಗಳ ಕ್ಯಾಂಟೀನ್ ಬಸ್ ಸ್ಟಾಪ್‌ಗಳವರೆಗೂ ನೆನಪಿನ ಗಾಡಿಯ ಸಹಜ ಪಯಣ. ಎಷ್ಟು ಸಾಗಿದರೂ ಸಾಕೆನಿಸಲಿಲ್ಲ. ರುಚಿ ರುಚಿಯಾದ ಘಮ ಘಮ ಎನ್ನುವ ಅಡಿಗೆಯ ವಾಸನೆಯ ಕಡೆಗೂ ಈ ಭೋಜನ ಪ್ರಿಯರ ಲಕ್ಷ್ಯ ಹೋಗಲಿಲ್ಲ. ಬೇಸಿಗೆಯಲ್ಲಿನ ಮಳೆಯನ್ನು ತೀವ್ರ ಆನಂದಿಸುವ ಎಮ್ಮೆ ಕೋಣಗಳಂತೆ ಬೇರಾವದಕ್ಕೂ ಗಮನ ನೀಡದೇ ಹಳೆಯ ಘಟನಾವಳಿಗಳನ್ನು ಮೆಲಕು ಹಾಕುತ್ತಿದ್ದರು.

ಹೀಗೆಯೇ ಜೀವನ, ಒಂದು ಹೋಗಿ ಮತ್ತೊಂದು ಬರುತ್ತದೆ. ಆನಂದದ ಹಿಂದೆ ಆನಂದ, ದುಃಖದ ಹಿಂದೆ ದುಃಖ, ಅಥವಾ ಸ್ವಲ್ಪ ಅದಲು ಬದಲು, ಒಟ್ಟಿನಲ್ಲಿ ಬದಲಾವಣೆ ಅಥವಾ ಪರಿವರ್ತನೆ ಜಗದ ನಿಯಮವಲ್ಲವೇ? Change is the changeless charm of life. ಅದಕ್ಕನೆ ಈ ಗೆಳೆಯರಿಬ್ಬರ ಈ ಮೈಮರೆತವನ್ನು ಮತ್ತಿನ್ನಿಬ್ಬರು ಮದುವೆಗೆ ಬಂದ ಗುರುತಿನವರು ಕಲುಕಿಬಿಟ್ಟರು. ಅವರು ಇವರು ಹೀಗೆಯೇ ನಾಲ್ಕೈದು ಜನರೆಲ್ಲರೂ ಮಹೇಶನನ್ನು ಪ್ರೀತಿಯಿಂದ ಒತ್ತಾಯಿಸುವವರೇ. ಮದುವೆ ಮುಗಿದ ಮೇಲೆ ಆತ ತಮ್ಮ ಮನೆಗೆ ಬರಬೇಕೆಂದೂ ಆತ ಬಾರದೇ ಎಷ್ಟೋ ದಿನಗಳಾದವೆಂದೂ ಈ ಊರಿಗೆ ಆಗಾಗ ಬರುತ್ತಿದ್ದರೂ ತಮ್ಮನ್ನೆಲ್ಲ ಮರೆತಂತೆ ಕಾಣುತ್ತದೆಂದೂ ಏನೇನೋ ಆರೋಪ, ಪ್ರತ್ಯಾರೋಪಗಳು, ಹೀಗೆಯೇ ಈ ಪ್ರೀತಿಯ ಸಮಯ ಸರೋವರದಲ್ಲಿ ಆತ ಈಜುತ್ತಿರುವಂತೆಯೇ ಆತನನ್ನು ಯಾರೋ ಇನ್ನೂ ಹಗುರವಾಗಿ ಮೇಲೆತ್ತಿದಂತಾದಾಗಿ ಪಕ್ಕಕ್ಕೆ ನೋಡಿದರೆ ವಸಂತಕುಮಾರ್, ಅಬ್ಬಾ ಇಪ್ಪತ್ತೈದು ವರ್ಷಗಳಾಗಿವೆ ಆದರೂ ಅದೇ ರೂಪ ಅದೇ ಭಂಗಿ ಅದೇ ದೈನೇಸಿ ಆಳ ಕಣ್ಣುಗಳು ಹಿಂಜರಿತದ ನಗೆ ಕೆಂದುಟಿಗಳ ಮೇಲೆ, "ಓಹ್ ವಸಂತಣ್ಣ"! ತನಗರಿವಿಲ್ಲದಂತೆಯೇ ಉದ್ಗರಿಸಿದ್ದ ಮಹೇಶ್.

ಹೀಗೆ ಕೂಡಿ (ದೈವ)ರ ಉಭಯ ಕುಶಲೋಪರಿಯೊಡನೆಯೇ ಹಾಗೆ ಹೀಗೆ ಅಲ್ಪಸ್ವಲ್ಪ ಕ್ಯೂ ಮುರಿಯುತ್ತ ಮುನ್ನಡೆಯುತ್ತ ವಧೂ-ವರರನ್ನು ಹಾರೈಸಿ ಜನರ ಚಕ್ರವ್ಯೂಹ ಭೇದಿಸಿ ಜಯಸಿದ ಅರ್ಜುನನಂತೆ ಹೊರಬಂದ. ಊಟಕ್ಕೂ ಈ ನಾಲ್ಕೈದು ಜನ ಆತನ ಸುತ್ತುವರಿದಿದ್ದರು. ಒಬ್ಬರ ಮೇಲೊಬ್ಬರಿಗೆ ಪೈಪೋಟಿ ಮಹೇಶನನ್ನು ಮಾತಾಡಿಸಲು, ಕೈ ಮೈ ಕುಲುಕಲು, ಸಿಹಿ ಉಂಡಿ ಬಿಸಿ ಭಜಿಗಳನ್ನು ಬಡಿಸಲು, ತನಗೆ ಬೇಕಿರುವುದು ಕುರುಕುರು

ಎನ್ನುವ ಸಜ್ಜಿ ರೊಟ್ಟಿ ಸೇಂಗಾ ಚಟ್ನಿ ಮೊಸರು ಎಂದು ಇನ್ನೂ ಬಾಯಲ್ಲಿ ಶಬ್ದಗಳು ಹೊರಬೀಳುವ ಮೊದಲೇ ಅವು ಆತನ ತಾಟಿಗೆ ಬಿದ್ದಿದ್ದವು. ಈ ರೀತಿ ರಭಸದ ಮೇಳದಲ್ಲಿ ಇನ್ನೇನೂ ಕೇಳುವುದೇ ಬೇಡವೆಂದು ಊಟ ಮುಗಿಸಿ ಕಲ್ಯಾಣ ಮಂಟಪದ ಹೊರಬಂದಾಗ ಸೂಸಿ ಬಂದ ತಂಗಾಳಿ ಈತನ ಬೆವರಿನಿಂದ ತೊಯ್ದು ಬನಿಯನ್ನಿಗೆ ಸ್ಪರ್ಶಿಸಿ ಮುತ್ತಿಕ್ಕಲು ಸ್ವಲ್ಪ ಉಲ್ಲಸಿತನಾದ. ಸಂಗಾತಿಗಳೊಂದಿಗೆ ಮಾತನಾಡುತ್ತಲೇ ಶುದ್ಧ ಹೊಸ ಹವೆ ನಲಿದಾಟವನಾನಂದಿಸಿದ. ತೆಂಕಣ ಗಾಳಿ ಸೋಂಕಿದೊಡೆನ್ನ ಮನ...... ಎಂಬ ಕವಿವಾಣಿ ಕಿವಿಯಲ್ಲಿ ಗುನುಗುನಿಯೂ ಹೋಯಿತು. ಸುತ್ತುವರೆದವರೆಲ್ಲರದೂ ಒಂದೇ ಹಠ, ಊರು ಬಿಡುವ ಮೊದಲು ಆತ ಅವರ ಮನೆಗಳಿಗೆ ಬಂದು ಹೋಗಲೇಬೇಕು. ಕೇವಲ ಒಂದು ಕಪ್ಪು ಚಹವನ್ನಾದರೂ ಕುಡಿದು ಹೋಗಬೇಕು.

ಈಗ ಮಹೇಶನಿಗೆ ತೀರ ಗೊಂದಲವೆನಿಸತೊಡಗಿತು. ಯಾರ ಮನೆಗೆ ಬರುವೆನೆಂದು ಹೇಳುವುದು? ಎಲ್ಲರೂ ಆತ್ಮೀಯರಿಗೆ ಎರಡು ಮೂರು ವರ್ಷಗಳಿಗೊಮ್ಮೆ ಮಾತ್ರ ಬರುವ ತನಗೆ ಆಕಸ್ಮಾತ್ ಭೆಟ್ಟಿಯಾಗುವವರು. ಒಟ್ಟಿನಲ್ಲಿ ಎಲ್ಲರಿಗೂ ಕೇಳಿಕೊಂಡ. ತಾನು ಇಲ್ಲಿರುವುದು ಇನ್ನು ಕೇವಲ ಆರು ಗಂಟೆ. ರಾತ್ರಿ ಒಂಭತ್ತರ ಟ್ರೈನಿಗೆ ಹುಬ್ಬಳ್ಳಿಯಿಂದ ರಿಸರ್ವೇಶನ್ ಆಗಿದೆ. ಕಾರಣ ಅಷ್ಟರೊಳಗೆ ಈ ಸಾರೆ ಒಬ್ಬಿಬ್ಬರ ಮನೆಗೆ ಮಾತ್ರ ಖಂಡಿತ ಬರುವುದಾಗಿ ತಿಳಿಸಿದ ಯಾವುದಕ್ಕೂ ಅವರ ಫೋನ್ ನಂಬರ್ ಕೊಡಬೇಕೆಂದು ಕೇಳಿ ಪಡೆದುಕೊಂಡ ಹಾಗೂ ತಾನು ಭೇಟಿ ನೀಡುವುದಾದರೆ ಅಂತಹವರಿಗೆ ತಿಳಿಸಿ ಬರುವುದಾಗಿಯೂ ಹೇಳಿದ.

ಅವರೆಲ್ಲ ಹೋದ ಮೇಲೆ ತುಸು ಹಾಯೆನಿಸಿ ತನ್ನ ಕಾರೊಳಗೆ ಬಂದು ಕುಳಿತ. ಈಗ ಮೊದಲು ತಾನು ತನ್ನ ಪಿ.ಹೆಚ್.ಡಿ. ಗೈಡ್‌ರವರ ಮನೆಗೆ ಹೋಗಬೇಕು, ಅವರೊಡನೆ ಚರ್ಚೆಯಾದ ನಂತರ ಕೆಲ ಅಂಶಗಳ ಮೇಲೆ ಟಿಪ್ಪಣಿ ಮಾಡಿಕೊಳ್ಳಬೇಕು. ಏನಿಲ್ಲೆಂದರೂ ಎರಡು ತಾಸಿನ ಸಮಯ ಇದಕ್ಕೆ ಬೇಕೆ ಬೇಕು. ಉಳಿದ ವೇಳೆಯಲ್ಲಿ ಯಾರಾದರೊಬ್ಬರ ಮನೆಗೆ ಹೋದರಾಯಿತೆಂದ. ತಕ್ಷಣ ಆತನಿಗೆ ಸೀನಿಯಾರಿಟಿಯ ಮೇಲೆ ಎಂಬ ವಿಚಾರ ಹೊಳೆಯಿತು. ಎಷ್ಟಾದರೂ ಸರಕಾರಿ ಸೇವಕನಲ್ಲವೇ? ಈ ಪ್ರಮೋಷನ್, ಟ್ರ್ಯಾನ್ಸ್‌ಫರ್ ಸೀನಿಯರಾರಿಟಿ ಇನ್‌ಕ್ರಿಮೆಂಟ್ ಇತ್ಯಾದಿಗಳಂತಹ ಶಬ್ದಗಳಲ್ಲದೇ ಬೇರೆ ಬರಲುಂಟೆ? ತನ್ನಷ್ಟಕ್ಕೆ ತಾನೇ ತನ್ನೆಡೆಗೆ ನಕ್ಕೊಂಡ ಹೌದು ರವೀಂದ್ರನಾಥ ಠಾಗೂರ್ ಅವರೇ ಅಲ್ಲವೇ. ಮಾನವ ಆಗಾಗ ಹೀಗೆ ತನ್ನೆಡೆಗೆ ತಾನು ನಕ್ಕು, ತಾನು ಎಂಬ ಭಾವದ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕು ಎಂದಿದ್ದು. ಈ ವಿಚಾರದಿಂದಾಗಿ ಸ್ವಲ್ಪ ಹಾಯೆನಿಸಿತು. ಮನುಷ್ಯ ಅಹಂ ಅನ್ನು ಬಿಟ್ಟಾಗ ಆತನ ವ್ಯಕ್ತಿತ್ವಕ್ಕೊಂದು ಮೆರಗು ಬರುತ್ತದೆ. ದಾಸರೊಬ್ಬರ ಮಾರ್ಮಿಕ ನುಡಿ “ನಾ ಹೋದರೆ (ಸ್ವರ್ಗಕ್ಕೆ) ಹೋಗಬಹುದು" ಎಂಬುದೂ ಒಂದು ಜೀವನ ಪಾಠವೇ ಎಂದಂದುಕೊಂಡ. ಈಗ ತಾನೂ ತನ್ನ ಅಧಿಕಾರಶಾಹಿ ಅಹಂಭಾವದಿಂದ ಕೆಳಗಿಳಿದು ನೆಲದ ಮೇಲೆ ನಡೆಯಬೇಕೆಂದ. ಹಾಗೆಯೇ ನೆಲದ ಸ್ಪರ್ಶವನ್ನೇ ಮಾಡದ ಈಗಿನ ಪೀಳಿಗೆಯ ಬಗ್ಗೆ ವಿಚಾರಿಸತೊಡಗಿದ. ಹುಟ್ಟುತ್ತಲೇ ಹಾಸ್ಪಿಟಲಿನ ಟೇಬಲ್ಲುಗಳು, ನಂತರ ನಡೆದಾಡುವ ಮೊದಲೇ ಪಾದಗಳಿಗೆ ಕಾಲ್ ಚೀಲ, ಬೂಟು, ಚಪ್ಪಲಿಗಳು, ಶಾಲೆಗೆ ಹೋಗುವಾಗ ಅಥವಾ ಆ ಮೊದಲೇ ಯೂನಿಫಾರಂ ಬಟ್ಟೆ, ಸೂಟು, ಬೂಟುಗಳು, ಎಲ್ಲಿದೆ ಅವಕ್ಕೆ ಭೂ ಸ್ಪರ್ಶ? ಅಂದರೆ ಗ್ರೌಂಡ್ ರಿಯಾಲ್ಟೀಜ್! ಬಹುಶಃ ಇದರಿಂದಾಗಿಯೇ ನಮ್ಮ ನಗರೀಕೃತ ನೆಲೆಯಿಂದ ಬಂದ ತನ್ನ ಹಿರಿಯ ಅಧಿಕಾರಿಗಳೂ ವಾಸ್ತವ ಸತ್ಯಕ್ಕೆ ಅದೇ ಗ್ರೌಂಡ್ ರಿಯಾಲ್ಟೀಜ್‌ಗಳಿಗೆ ದೂರವಾಗಿ ಪ್ರಜೆಗಳಿಂದ ಅಂತರದಲ್ಲಿದ್ದು ಅಥವಾ ಅಂತರ ಕಾಯ್ದುಕೊಂಡು ಇಡೀ ಆಡಳಿತ ಯಂತ್ರವನ್ನು ಹಾಗೂ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತಾರಲ್ಲ ಎಂದಂದುಕೊಂಡ. ಮತ್ತೆ ಈಗ ಈ ಆಡಳಿತದ ಭೂತ ಬಿಟ್ಟೆನೆಂದರೂ ಬಿಡದೀ ಮಾಯೇ ಎಂಬಂತೆ ತನ್ನನ್ನಾವರಿಸಿದ್ದು ಆತನಿಗೆ ಸರಿಬೀಳಲಿಲ್ಲ. ಯಾರ ಮನೆಗೆ ಹೋಗುವುದು? ಅದೂ ಉಳಿಯುವ ಅಲ್ಪ ಸಮಯದಲ್ಲಿ? ಎಂಬುದನ್ನು ನಿರ್ಧರಿಸಲು ತಾನು ಕಂಡುಕೊಂಡ ದಾರಿಯೆಂದರೆ. ಯಾರ ಮನೆಗೆ ಈವರೆಗೂ

ಹೋಗಿಲ್ಲವೊ ಅಥವಾ ಹೆಚ್ಚು ಸುಧೀರ್ಘ ಸಮಯದಿಂದ ಹೋಗಿಲ್ಲವೋ ಅಂಥವರಲ್ಲಿಗೆ ಹೋಗುವುದು. ಇದನ್ನೆ ತನ್ನ Absentee Seniority ಎಂದಂದುಕೊಂಡ. ಆಗ ಆತನಿಗೆ ತಕ್ಷಣ ನೆನಪಾದ್ದು ವಸಂತಕುಮಾರನ ಹೆಸರು.

ವಸಂತಣ್ಣ ಎಂದನ್ನುಕೊಳ್ಳುತ್ತಿದ್ದಂತೆ ಮಹೇಶನ ಮನಸಲ್ಲಿ ಹುದುಗಿದ ನೆನಪಿನ ಬುತ್ತಿಗಂಟು ಬಿಚ್ಚಿದಂತಾಗಿ ಒಂದೊಂದೆ ಘಟನಾವಳಿಗಳು ಪ್ರೀತಿಯ ಭಕ್ಷ್ಯಗಳಂತೆ ಹೊರಬರತೊಡಗಿದವು. ಅವನಿಗೆ ಅತ್ಯಂತ ಅಪ್ಯಾಯಮಾನವಾದ ಸಂಗತಿಯೆಂದರೆ ಇತಿಹಾಸವನ್ನು ಗತಘಟನೆಗಳನ್ನು ಆಗಾಗ ಮರುಕಳಿಸಿ ಮೆಲ್ಲುವುದು. ತನ್ನ ಕೆಲಗೆಳೆಯರೆದುರು ಇದನ್ನು ಪಶು ಆನಂದ ಎಂದು ತಾನು ಆಗಾಗ ವ್ಯಾಖ್ಯಾನಿಸುತ್ತಿದ್ದ. ಅಂದರೆ ತಮ್ಮ ಎದುರು ಹಾಕಿದ ಮೇವನ್ನು ದನಕರುಗಳು ಗಬಗಬನೇ ಮೇಯ್ದು ಅದೆಲ್ಲ ಮುಗಿದ ಮೇಲೆ ಅವಸರದಲ್ಲಿ ತಿಂದುದನ್ನು ಹೊಟ್ಟೆಯಿಂದ ಮರುಕಳಿಸಿ ಬಾಯಿಗೆ ತಂದು ಪುನಃ ಅದಕ್ಕೆ ಮೆಲುಕು ಹಾಕುತ್ತ ಆನಂದಿಸುವಂತೆ ಮನುಷ್ಯನೂ ಹಳೆಯ ನೆನಪುಗಳನ್ನು ಹೊರದೆಗೆದು ಆನಂದಿಸುವುದೇ ಪಶು ಆನಂದ. ತನ್ನ ಶಬ್ದ ಸಂಶೋಧನೆ ಬಗ್ಗೆ ತಾನೇ ಅಭಿಮಾನಪಡುತ್ತ ಭೂತಕಾಲವನ್ನು ನೆನೆಯುವ ತನ್ನಾನಂದಕ್ಕೆ ಭಂಗ ಬರದಿರಲಿ ಎಂದೇ ಮಹೇಶ ನೆನಪಿನಾಳದಲ್ಲಿ ಹುದುಗಿಕೊಂಡು ತನ್ಮಯನಾದ. ತಾನಿನ್ನೂ ಆಗತಾನೇ ಹೈಸ್ಕೂಲು ಕಟ್ಟೆ ಹತ್ತುತ್ತಿದ್ದ ಸಮಯ. ಈ ವಸಂತಣ್ಣ ಬಿ.ಎ. ಮುಗಿಸಿಕೊಂಡು ನಿರುದ್ಯೋಗಿಯಾಗಿ ಅಲೆದಾಡುತ್ತಿದ್ದ. ಆದರೆ ಅದ್ಹೇಗೋ ಮಲ್ಲಕಂಬ ಯೋಗಾಸನಗಳಲ್ಲಿ ವಿಪರೀತ ಪರಿಣತಿ ಹೊಂದಿದ್ದ. ಕಿತ್ತು ತಿನ್ನುವ ಬಡತನದಲ್ಲೂ ಹಂಸಭಾವಿಯ ಈ ಹುಡುಗನ ಈ ಕೌಶಲ್ಯ ಕಂಡು ಹಾನಗಲ್ ಕುಮಾರ ಸ್ವಾಮಿಗಳ ಮಠಾಧ್ಯಕ್ಷರಿಗೆ ಯಾರೋ ಸುದ್ದಿ ತಲುಪಿಸಲು ಅವರ ನಾಲ್ಕು ವರ್ಷದ ಪದವಿ ವೇಳೆಯಲ್ಲಿ ವಸಂತಕುಮಾರನಿಗೆ ಆಶ್ರಯ ನೀಡಿದ್ದರು. ಹೆಚ್ಚಿನ ವ್ಯಾಸಂಗಕ್ಕೆ ಏನು ಮಾಡುವುದು? ಪಾಸ್ಕ್ಲಾಸಿನಲ್ಲಿ ಪದವೀಧರರಾದರೆ ಎಂ.ಎ.ಗೆ ಯಾರು ಪ್ರವೇಶ ನೀಡುತ್ತಾರೆ? ಅದೇಗೋ ಸ್ವಾಮಿಗಳು ಈ ಯುವಕನನ್ನು ಮಹೇಶನ ತಂದೆ ಹತ್ತಿರ ಕಳಿಸಿಕೊಟ್ಟಿದ್ದರು. ಮಹೇಶನಿಗೆ ಇನ್ನು ನೆನಪಿದೆ. ಅಂದು ಶಾಲೆಗೆ ಹೊರಟ ತಾನು ಅದ್ಯಾರೊ ಪ್ಯಾಂಟಿನವರು ತೀರ ಹೊಸಮುಖ ತಮ್ಮ ಗಲ್ಲಿಯಲ್ಲಿ ಪ್ರವೇಶಿಸಿದಾಗ ತಾನೇ ಮುಂದಾಗಿ "ಯಾರ್ ಬೇಕಾಗಿತ್ರಿ?" ಎಂದು ಆ ಯುವಕ ಇವನನ್ನು ಕೇಳುವ ಮೊದಲೇ ಪ್ರಶ್ನಿಸಿದ್ದ. ತನಗಿಂತ ತೀರ ಎತ್ತರದ (ಆದರೆ ಈಗ ಆತ ವಸಂತಣ್ಣನಿಗಿಂತಲೂ ಎತ್ತರವಾಗಿದ್ದಾನೆ. ಆ ಮಾತು ಬೇರೆ) ಇಸ್ತ್ರಿ ಇಲ್ಲದ ಬಟ್ಟೆಯ ಮ್ಲಾನ ಮುಖದ ಚಿಂತಾಕ್ರಾಂತ ಗುಳಿಬಿದ್ದ ಕಣ್ಣುಗಳ ಯುವಕನ ಮೇಲೆ ಮಹೇಶ ಸಹಜವಾಗಿ ಕರುಣಾಪೂರಿತನಾಗಿದ್ದ. ವಸಂತಕುಮಾರ್ ಹೋಗಬೇಕಿರುವುದು ತನ್ನ ಮನೆಗೇ ಎಂದು ಗೊತ್ತಾದಾಗ ಕುತೂಹಲ ಹೆಚ್ಚಾಗಿ ವಿಷಯವೇನೆಂದು ತಿಳಿದುಕೊಳ್ಳುವ ಬಯಕೆಯಾಗಿ, "ಓಹ್ ಅವರು ನಮ್ಮ ತಂದೆಯವರೇ, ಆದರ ಈಗಾಗಲೇ ಅವರು ತೋಟಕ್ಕೆ ಹೋಗಿ ಬಿಟ್ಟಿದ್ದಾರೆ. ಬರುವುದು ಇನ್ನೂ ಅರ್ಧಾತಾಸು" ಎಂದು ಹೇಳುತ್ತ ವಸಂತಕುಮಾರನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದ ಮಹೇಶ.

ಇಂದಿಗೆ ಸರಿಯಾಗಿ ಇಪ್ಪತ್ತಾರು ವರ್ಷವಾಗಿ ಹೋಗಿವೆ. ಆಗ ತನ್ನ ತಂದೆ ವಸಂತಕುಮಾರನಿಗೆ ತನ್ನ ಮನೆಯಲ್ಲಿ ಇಟ್ಟುಕೊಂಡರು. ದಿನಾಲೂ ತಮ್ಮೊಡನೆಯೇ ಆತನ ಊಟ, ವಸತಿ ಎಲ್ಲ ಬೆಳಿಗ್ಗೆ ಯೋಗಾಸನ ಸಾಯಂಕಾಲ ಮಲ್ಲಕಂಬ ಆತನ ದಿನಚರಿ, ಅವನೊಡನೆ ಮಹೇಶ ಹಾಗೂ ಇಬ್ಬರು ತಮ್ಮಂದಿರು ಜೊತೆ. ವಸಂತಕುಮಾರ್‌ಗಾಗಿ ಮಹೇಶ್ ತಂದೆ ತಮ್ಮ ಊರಲ್ಲಿ ಆಗಾಗ ಆತನ ಯೋಗಾಸನ ಮತ್ತು ಮಲ್ಲಕಂಬ ಪ್ರದರ್ಶನ ಏರ್ಪಡಿಸುತ್ತಿದ್ದರು. ಒಂದು ವರ್ಷದೊಳಗಾಗಿ ವಸಂತಕುಮಾರ್ ಹೀಗೆ ಯೋಗಾಸನ. ಮಲ್ಲಕಂಬ ಪ್ರದರ್ಶನ ನೀಡುತ್ತಿದ್ದಾಗ ಅರ್ಧಗಂಟೆ ಮೊದಲು ಮಹೇಶ ಹಾಗೂ ಆತನ ತಮಂದಿರು ಪ್ರದರ್ಶನ ನೀಡುವಂತಾಗಿದ್ದರು. ಅತ್ಯಂತ ಕಠಿಣತಮನಾದ ಯೋಗನಿದ್ರಾಸನ, ಕೂರ್ಮಾಸನ, ಏಕಪಾದ ಪಶ್ಚಿಮೋತ್ತಾಸನ ಹಾಗೂ ನವಲಿಗಳಂತಹವೂ ತಮಗೆ ಕರಗತವಾಗಿದ್ದಲ್ಲವೇ ಆಗ. ಸರಿಸುಮಾರು ಏನಿಲ್ಲೆಂದರೂ ಅರವತ್ತು ಆಸನಗಳನ್ನು ಲೀಲಾಜಾಲವಾಗಿ ಮಾಡಿತೋರಿಸುತ್ತಿದ್ದರು. ವಸಂತಣ್ಣನಂತೂ ಎಂಭತ್ನಾಲ್ಕು ಆಸನಗಳನ್ನು ಹಾಗೂ ಮಲ್ಲಕಂಬದ ಮೇಲಿನ

ವ್ಯಾಯಾಮವನ್ನೂ ಅತ್ಯಂತ ಸರಾಗವಾಗಿ ಪ್ರದರ್ಶಿಸುತ್ತಿದ್ದ. ಮಹೇಶನಿಗೆ ಎಲ್ಲ ಸ್ಪಷ್ಟವಾಗಿ ನೆನಪಿಗೆ ಬರತೊಡಗಿತು. ಒಂದು ತಿಂಗಳಿಗೆ ವಸಂತಕುಮಾರ್‌ನ ನಾಲ್ಕೈದು ಪ್ರದರ್ಶನಗಳು, ಶಾಲೆಗಳಿಗೆ ರಜೆಯಿದ್ದಾಗಲಂತೂ ಮಹೇಶ್ ಹಾಗೂ ಆತನ ತಮ್ಮಂದಿರು ಸದಾ ಅವನೊಡನೆ ವ್ಯಾಯಾಮ ಮಾಡುತ್ತ ತರಬೇತಿ ಪಡೆಯುತ್ತಿದ್ದರು. ನೀರಲ್ಲಿ ಮೀನು ಈಜಿದಂತೆ, ಗಾಳಿಯಲ್ಲಿ ಹಿಂಜಿದ ಅರಳೆಯ ಎಳೆಗಳು ತೇಲಿದಂತೆ ವಸಂತಕುಮಾರ್ ಯೋಗಾಸನ ಮಾಡುತ್ತಿದ್ದ. ಮಂಗಗಳೂ ನಾಚುವಂತೆ ಮಲ್ಲಕಂಬದ ಮೇಲೆ ಸರಬರನೇ ಇಳಿದೇರುತ್ತಿದ್ದ. ಕಂಬಕ್ಕೆ ಒಂದೇ ಕಾಲನ್ನು ತೊಡಕು ಹಾಕಿಕೊಂಡು ಇಡೀ ದೇಹವನ್ನು ಕಂಬದ ಹೊರಗೆ ತಂದು ಕೂಡಿದ ಜನರಿಗೆ ಎರಡೂ ಕೈ ಜೋಡಿಸಿ ನಮಸ್ಕಾರ ಮಾಡಿದಾಗ, ಅದರಂತೆಯೇ ಕಂಬದ ತುಟ್ಟತುದಿಗೆ ಹೋಗಿ ಒಂದೇ ಕಾಲನ್ನು ಮಾತ್ರ ತಳಕು ಹಾಕಿ ನೀಟಾಗಿ ಎದ್ದು ನಿಂತು ಕೈಯಿಂದ ಸದ್ದು ಹೊಡೆದಾಗ ಕೂಡಿದ ಜನರೆಲ್ಲ ತಮ್ಮ ನರನಾಡಿಗಳನ್ನು ಬಿಗಿ ಹಿಡಿದು ತೀವ್ರ ಆತಂಕದೊಂದಿಗೇನೆ ಹರ್ಷಗೊಂಡು ಚಪ್ಪಾಳೆ ತಟ್ಟುತ್ತಿದ್ದರು. ಅವರೆಷ್ಟೇ ಕೊಟ್ಟರೂ ಎಂದಿಗೂ ಎರಡು ನೂರು ರೂಪಾಯಿ ದಾಟಿದ್ದಿಲ್ಲ. ಅನಾಥನಿಗೆ ಅಷ್ಟೇ ಸಾಕಾಗಿತ್ತು. ಆದರೆ ಮಹೇಶನ ತಂದೆಯ ಉಪಚಾರ, ಉದಾರತನದ ಎದುರು ಇಡೀ ಊರಿನ ದೇಣಿಗೆಯ ಮೊತ್ತ ಕಡಿಮೆಯೆನಿಸುತ್ತಿತ್ತು. ವಸಂತನಿಗೆ ಬಟ್ಟೆ ಬರೆ ಹಾಸಿಗೆ ಒಳ್ಳೆಯ ಆಹಾರ ತಿರುಗಾಟಕ್ಕೆ ಕೈ ಖರ್ಚಿಗೆ ಹಣ ಎಲ್ಲದಕ್ಕೂ ಯಜಮಾನರ ಸಹಾಯ.

ಬಿ.ಎ. ಸಾಮಾನ್ಯ ಶ್ರೇಣಿಯಲ್ಲಿ ಪಾಸಾಗಿದ್ದುದರಿಂದ ವಸಂತಕುಮಾರ ಎಂ.ಎ. ಬದಲು ಬಿ.ಪಿ.ಈಡಿ (ಬ್ಯಾಚುಲರ್ ಆಫ್ ಪಿಜಿಕಲ್ ಎಜುಕೇಶನ್) ಮಾಡಲಿ ಎಂದು ಊರಲ್ಲಿ ಪರಿಣತರು ಅಭಿಪ್ರಾಯಪಟ್ಟಿದ್ದರಿಂದ ಅದನ್ನೇ ಮಾಡಿಸಬೇಕೆಂದು ಮಹೇಶ್ ತಂದೆ, ವಸಂತಕುಮಾರ್‌ಗೆ ಕಾಲೇಜ್ ಫೀ ಇತ್ಯಾದಿ ಎಲ್ಲ ವ್ಯವಸ್ಥೆ ಮಾಡಿದ್ದರು. ಹೀಗೆ ಐದು ವರ್ಷ ಆತ ಮಹೇಶ್ ಮನೆಯಲ್ಲಿ ಉಂಡು ಉಟ್ಟು ಬೆಳೆದ, ಈಗಲೂ ಮಹೇಶ್ ಆಗಾಗ ತನಗೆ ಸ್ವಲ್ಪ ಹೊಟ್ಟೆ ಮುಂದೆ ಬಂದಿದೆ ಅನಿಸಿದಾಗ ಯೋಗಾಸನ ನವಲಿಗಳನ್ನು, ಪ್ರಾಣಾಯಾಮವನ್ನು ಮಾಡುತ್ತಿರುತ್ತಾನೆ. ಕಾರಣ ವಸಂತಣ್ಣನ ನೆನಪು ಆತನಿಗೆ ಸದಾ ಹಸಿರಾಗಿ ಉಳಿಯುವಂತೆ ಮಾಡಿದೆ.

ಇಷ್ಟೆಲ್ಲವಿದ್ದರೂ ವಸಂತಕುಮಾರ್ ಮಹೇಶ್ ಭೆಟ್ಟಿಯಾಗುತ್ತಿದ್ದುದು ತೀರ ಕ್ವಚಿತ್ತ. ಈ ಮಧ್ಯ ಒಂದೆರಡು ಸಲ ಮಾತ್ರ ಬಸ್‌ಸ್ಟಾಂಡಿನಲ್ಲೋ ಯಾವುದೋ ಬಜಾರ್‌ನಲ್ಲಿಯೋ ಆಕಸ್ಮಿಕವಾಗಿ ಭೆಟ್ಟಿಯಾಗಿದ್ದಿತು. ಈಗ ಆ ಸುದೀರ್ಘ ಸಮಯದ ನಂತರ ಆತ ತನ್ನ ಮನೆಗೆ ಆಹ್ವಾನಿಸಿದ್ದಾನೆ. ಈಗಾಗಲೇ ಆತನ ಮಕ್ಕಳು ಬೆಳೆದು ದೊಡ್ಡವರಾಗಿರಲು ಸಾಕು. ತನಗಿಂತ ಹತ್ತು ಹನ್ನೆರಡು ವರುಷ ದೊಡ್ಡವನಲ್ಲವೇ ಆತ. ಇಷ್ಟು ದಿನಗಳ ಮೇಲಾದರೂ ಆತನ ಸಂಸಾರ ನೋಡಿದಂತಾಗುತ್ತದೆಂದು ಮಹೇಶ, ವಸಂತಕುಮಾರನ ಮನೆಗೇ ಹೋಗುವುದೆಂದು ನಿರ್ಧರಿಸಿದ. ಆತ ಕೊಟ್ಟ ಫೋನ್ ನಂಬರ್ ಹುಡುಕಿ ಫೋನ್ ಮಾಡಿದ. ಯಾರೋ ಮಧ್ಯ ವಯಸ್ಕ ಹೆಣ್ಣುಮಗಳೊಬ್ಬಳು ಆ ಕಡೆಯಿಂದ ಮಾತನಾಡಿ, ವಸಂತಕುಮಾರ್, ಇಲ್ಲವೆಂದು ಹೇಳಿದರು. ಆಗ ತನ್ನ ಬುದ್ಧಿ ಉಪಯೋಗಿಸಿ ಮಹೇಶ್, “ಅಕ್ಕಾವ್ರೆ ನಾನು ಮಹೇಶ್ ಶಿಗ್ಗಿ ಅಂತಾ. ದೊಡ್ಡೂರಿನವನು" ಎಂದ. ಆದರೆ ಆ ಕಡೆಯಿಂದ ಅದಕ್ಕೆ ಯಾವ ಪ್ರತಿಕ್ರಿಯೆಯೂ ಬಾರದಾದಾಗ ಕೊಂಚ ವಿಚಲಿತನಾದ. ಹಾಗೆಯೇ ಸ್ವಲ್ಪ ತಡೆದು ವಸಂತಕುಮಾರರವರಿಗೆ ಹೇಳಿ ಬಿಡಿ ಎಂದು ಫೋನ್ ಕೆಳಗಿಟ್ಟ. ಈವರೆಗೆ ಹಿಂದಿನ ಬಾಲ್ಯದ ನೆನಪಿನ ಎಳೆ ಸವತಿಕಾಯಿಗಳನ್ನು ಖುಷಿಯಿಂದ ಮೆಲುಕುತ್ತಿದ್ದ ಆತನಿಗೆ ಕಹಿಯಾದದ್ದೊಂದನ್ನು ಕಚ್ಚಿದಂತಾಯ್ತು. ನಿರಾಶೆಗೊಂಡ. ಐದು ಗಂಟೆ ಮೇಲೆ ನಿನಗಾಗಿ ಕಾಯುತ್ತಿರುತ್ತೇನೆಂದ ವಸಂತಣ್ಣ ಇನ್ನೂ ಮನೆಗ್ಯಾಕೆ ಬಂದಿಲ್ಲವೋ. ಈಗ ಸಮಯ ಆರು ಮುಕ್ಕಾಲು ಗಂಟೆ. ವಾಚನ್ನು ನೋಡುತ್ತಿದ್ದಂತೆ ಮತ್ತೆ ತುಸು ಹೆಚ್ಚು ಅಪ್ರತಿಭನಾದ. ಆಗ, ವಸಂತಣ್ಣ ಬಿ.ಪಿ.ಎಡ್.ಗೆ ಹೊರಟು ನಿಂತಾಗ ತನ್ನ ಕೈಯಲ್ಲಿಯ ಹೆಚ್.ಎಂ.ಟಿ. ವಾಚನ್ನೇ ತೆಗೆಯಿಸಿ ತನ್ನ ತಂದೆ ಅವರ ಬರಿಗೈಗೆ ಕಟ್ಟಿಸಿದ್ದರಲ್ಲವೇ. ಈಗ ವಸಂತಣ್ಣನೂ ಎಂ.ಪಿ.ಎಡ್. ಮುಗಿಸಿ ಕಾಲೇಜು ಪ್ರೊಫೆಸರ್ ಆಗಿ ವಿಭಾಗದ ಮುಖ್ಯಸ್ಥನಾಗಿದ್ದಾನೆ. ತನ್ನ ಮನೆಯವರೂ (ಹೆಂಡತಿ) ನೌಕರಿ ಮಾಡುವುದಾಗಿ ತಿಳಿಸಿದ್ದಾನೆ. ಆತನ ಆರ್ಥಿಕ

ಪರಿಸ್ಥಿತಿಯೂ ಚೆನ್ನಾಗಿದೆ. ಆಗಲಿ ಇನ್ನೂ ಚೆನ್ನಾಗಿ ಆಗಲಿ ಆತನ ಸ್ಥಿತಿ ಎಂದಂದುಕೊಂಡ ಮಹೇಶ. ಆತನೂ ತನ್ನಂತೆಯೇ ತನ್ನ ತಾಯಿಯ ತುತ್ತನ್ನು ತಿಂದು ಬೆಳದವನಲ್ಲವೇ. ಊರಲ್ಲಿಯ ಪ್ರತೀತಿ ಮಹೇಶನ ತಾಯಿಯ ಕೈಗುಣವೇ ಅಂತಹದ್ದೆಂದು. ಈ ನಿರಾಶೆಯಲ್ಲೂ ಮಹೇಶ ತನ್ನ ತಾಯಿಯ ಔದಾರ್ಯದ ಪ್ರಶಂಸೆಯನ್ನು ಜನ ಮಾಡುತ್ತಿದ್ದುದನ್ನು ನೆನಪಿಸಿಕೊಂಡು ಮತ್ತೆ ಪ್ರಫುಲ್ಲಿತನಾದ. ಇನ್ನಾರನ್ನೂ ಭೆಟ್ಟಿಯಾಗುವುದು ಬೇಡವೆಂದು ನಿರ್ಧರಿಸಿ ಎರಡೆರಡು ವಾರಪತ್ರಿಕೆ ಮಾಸಪತ್ರಿಕೆಗಳನ್ನು ಕೊಂಡುಕೊಂಡು ರೈಲ್ವೆ ಸ್ಟೇಶನ್ ಕಡೆ ಹೊರಡಲು ಚಾಲಕನಿಗೆ ಆಜ್ಞಾಪಿಸಿದ.

ಪ್ಲಾಟ್‌ಫಾರಂ ಉದ್ದಕ್ಕೂ ಜನವೋ ಜನ. ಎಲ್ಲರಿಗೂ ಅವರವರದೇ ಕೆಲಸ. ಅವರವರದೇ ಅವಸರ. ಅತ್ತಿಂದಿತ್ತ ಇತ್ತಿಂದತ್ತ ತಿರುಗಾಟ. ಹೌದು ಇಲ್ಲಿ ಎಲ್ಲರಿಗೂ ಒಂದಿಲ್ಲಾ ಒಂದು ಬಹು ಮುಖ್ಯ ಕಾರ್ಯವಿದ್ದೇ ಇದೆ. ತನಗೆ? ತನಗೂ ಇವರಂತೆಯೇ ಓಡೋಡಿ ಬಂದು ಗಾಡಿ ಹತ್ತುವ ಪ್ರಮೇಯ ಬರಬಹುದೆಂದುಕೊಂಡಿದ್ದ. ಆದರೆ ಆತನಿಗೆ ಈಗ ವಿಪುಲವಾದ ಸಮಯವಿದೆ. ಮತ್ತೆ ಠಾಕೂರರ ಒಂದು ಸಾಲು ಪದ್ಯವನ್ನು ನೆನಪಿಸಿಕೊಂಡ. "ಚಿಟ್ಟೆ ಕ್ಷಣ ಕ್ಷಣ ಗಳನ್ನೆಣಿಸುತ್ತದೆಯೇ ವಿನಹ ನಮ್ಮಂತೆ ದಿನಗಳನ್ನಲ್ಲ. ಅದರಿಂದಲದಕೆ ಸಮಯ ಸಾಕಷ್ಟಿದೆ" ಹೌದು ತಾನೂ ಈಗ ಕ್ಷಣ ಕ್ಷಣಗಳನ್ನು ಕಳೆಯಬೇಕೆಂದುಕೊಂಡ. ಇನ್ನೂ ನೂರಿಪ್ಪತ್ತೈದು ಮಿನಿಟುಗಳು. ವಿಮಾನದಲ್ಲಾದರೆ ದೂರದ ದೆಹಲಿಯನ್ನೇ ಮುಟ್ಟಬಹುದು. ಇರಲಿ ಪರವಾಗಿಲ್ಲವೆಂದು ಬೆಂಚೊಂದರ ಮೇಲೆ ಕುಳಿತು ಸುತ್ತಲೂ ಕಣ್ಣಾಡಿಸತೊಡಗಿದ. ಜನಾರಣ್ಯ! ಇದರಲ್ಲಿ ತಾನೂ ಒಂದು ತೃಣ ಇಲ್ಲಾ ಚಿಕ್ಕ ಕಂಟಿ. ನಸು ನಕ್ಕು ಹಾಗೆಯೇ "ಹೈ ಭೀಡ ಇತನಿ ಪರ್ ದಿಲ್ ಅಕೇಲಾ" ಎಂಬ ಮುಖೇಶನ ಹಾಡೊಂದನ್ನು ಗುನಗುನಿಸಿದ ಬೇರಾರಿಗೂ ಕೇಳಿಸದಂತೆ. ಇದೂ ಒಂದು ರೀತಿಯ ಮಾನವನ ಅಸ್ತಿತ್ವದ ಅಲ್ಪತನಕ್ಕೆ ಹಿಡಿದ ಕನ್ನಡಿಯೇ. ತಾನಿರುವಾಗಲೇ ಇಷ್ಟೊಂದು ಅಮುಖ್ಯನಾದರೆ ಮನುಷ್ಯ

ಇನ್ನು ಸತ್ತ ಮೇಲೆ...... ಛೇ ಆ ವಿಚಾರವೆಲ್ಲ ಈಗ್ಯಾಕೆ ಎಂದು ಕೈಯಲ್ಲಿ ಹಿಡಿದ ವಾರಪತ್ರಿಕೆ ತೆರೆದು ಓದುವುದರಲ್ಲಿ ನಿರತನಾದ.

ಸಮಯವನ್ನು ಹಿಡಿದಿಡುವುದು ಯಾರಿಂದಲಾದರೂ ಸಾಧ್ಯವಿದೆಯೇ? ನೋಡ ನೋಡುವಷ್ಟರಲ್ಲಿ ದಿನಗಳು ಮಾಸಗಳು ಉರುಳಿ ಹೋಗಿಬಿಡುತ್ತವೆ. ತನಗೆ ಎರಡು ಸುದೀರ್ಘ ಗಂಟೆಗಳ ವಿಪುಲ ಸಮಯವಿದೆಯೆಂದು ಅಂದುಕೊಂಡ ಮಹೇಶನವು ಈಗಾಗಲೇ ಆರು ತಿಂಗಳುಗಳು ಅರಿವಿಲ್ಲದಂತೆಯೇ ಗತಿಸಿಹೋಗಿವೆ. ಮಳೆಗಾಲ ಸರಿದು ಚಳಿ ಪಾದಾರ್ಪಣೆ ಮಾಡಿ ಎಲ್ಲೆಡೆ ತನ್ನ ಪ್ರಭಾವ ಬೀರುತ್ತಿದೆ. ಈವರೆಗೆ ಸೊಂಪಾಗಿ ಹಸಿರಾಗಿದ್ದ ಗಿಡಮರಗಳು ತಮ್ಮ ಗುಣಧರ್ಮಕ್ಕನುಗುಣವಾಗಿ ತಮ್ಮ ಎಲೆಗಳನ್ನು ಹಳದಿಯಾಗಿಸಿ, ಒಣಗಿಸಿ ಕೆಳ ಬೀಳಿಸುತ್ತಿದೆ. ವಯಸ್ಸಾದವರ ಮಾಂಸಖಂಡ ಕರಗಿ ನರನಾಡಿಗಳು ಎದ್ದು ಕಾಣುವಂತೆ ಈವರೆಗೆ ಪೊದೆಗಳ ಹಿಂದಡಗಿದ್ದ ಟೊಂಗೆಗಳು ಒಣಗಿ ಎದ್ದು ಕಾಣುತ್ತಿವೆ. ಆಕಾಶ ಶುಭ್ರವಾಗಿರುವ ಮೋಡಗಳನ್ನು ಹಿಡಿದಿಟ್ಟುಕೊಂಡಂತಿದೆ. ಒಣಗಾಳಿ, ತಾನೇ ಇಡೀ ಪರಿಸರದ ಒಡೆಯನೆಂಬಂತೆ ಅಳಿದುಳಿದ ಎಲೆ ಹೂಗಳೊಡನೆ ಸರಸ ಸಲ್ಲಾಪವಾಡುತ್ತಿದೆ. ಪೇಟೆಯಲ್ಲೂ ಇದರ ಪ್ರಭಾವ ತೀವ್ರವಗಿಯೇ ಆಗಿದೆ. ಮೂರ್ನಾಲ್ಕು ತಿಂಗಳ ಹಿಂದಷ್ಟೇ ರಿಯಾಯಿತು ದರದಲ್ಲಿ ದೊರೆಯುತ್ತಿದ್ದ ಸ್ವೆಟರ್ ಇನ್ನಿತರ ಉಣ್ಣೆ ಬಟ್ಟೆಗಳ ಮಾರಾಟದ ಬೆಲೆ ಏರಿ ನಿಂತಿದೆ. ಆದಾಗ್ಯೂ ವ್ಯಾಪಾರ ನಡೆದೇ ಇದೆ. ಸೇಲ್ ಸೇಲ್ (ಅರ್ಧ ಬೆಲೆ ಇತ್ಯಾದಿ) ಎಂದು ಸೂಚಿಸುವ ಫಲಕಗಳು ಅಂಗಡಿ ಮುಂಭಾಗದಿಂದ ಮರೆಯಾಗಿ ಹಿಂಭಾಗದ ಗೋಡೌನ್‌ಗಳಲ್ಲಿ ಬೆಚ್ಚಗೇ ಕುಳಿತಿವೆ. ಅವುಗಳ ಆ ಮುಖ್ಯ ಭಾಗದಲ್ಲಿ ನ್ಯೂ ಅರ್ರೈವಲ್ಸ್ (ಹೊಸಮಾಲು ಬಂದಿದೆ) ಎಂಬ ಭಿತ್ತಿ ಪತ್ರ ಇತ್ಯಾದಿಗಳು ಎದ್ದು ಕಾಣುತ್ತಿವೆ. ಕಾಲಚಕ್ರವೆಂದರೇ ಹೀಗೆ, ಹೊಸತಿಗಾಗಿ ಹಳೆಯದು ಜಾಗ ಖಾಲಿ ಮಾಡಬೇಕು. ಹಳೆ ಮಾಲಿಕತ್ವಕ್ಕೆ ಹೊಸತರ ಹುನ್ನಾರ ವಿಚಿತ್ರವೆನಿಸಿದರೂ ತಾನೂ ತನ್ನ ಆಗಮನದ ಪ್ರಾರಂಭದಲ್ಲಿ ಹೀಗೆಯೇ ಆಗಿನ ಯಾರದೊ ಆಗಿದ್ದ ಜಾಗೆಯನ್ನು ಆಕ್ರಮಿಸಿಕೊಂಡದ್ದನ್ನು ಮರೆತು ಬಿಟ್ಟಿರುತ್ತದೆ. ಈಗ ಇದು ನನ್ನದು

ಎಂದಂದುಕೊಂಡದ್ದು ಹಿಂದೆ ಯಾರದ್ದೂ ಆಗಿರುತ್ತದೆ ಮುಂದೆ ಇನ್ನಾರದೊ ಆಗಲೂ ಇರುತ್ತದೆ. ಇದು ಗೀತೋಪದೇಶದ ಸಾರವೂ ಕೂಡ. ಚಳಿ ತುಸು ಹೆಚ್ಚಾಗುತ್ತಿರಲು ಮೈಮೇಲೆ ರಗ್ಗನ್ನೆಳೆದುಕೊಂಡ ಮಹೇಶ್, ಕೈಯಲ್ಲಿಯ ಶ್ರೀಮದ್ಭಾಗವತ ಕಥಾ ಸಾರಾಂಶ ಎಂಬ ಹೊತ್ತಿಗೆಯನ್ನು ಮಾತ್ರ ಕೆಳಗಿಡಲಿಲ್ಲ. ಇದು ಎಷ್ಟನೇ ಸಾರೆಯೋ ತಾನು ಓದುತ್ತಿರುವುದು ಆತನಿಗೆ ಸರಿಯಾಗಿ ನೆನಪಿಲ್ಲ. ಓದಿದಾಗೊಮ್ಮೆ ಅಲ್ಲೊಮ್ಮೆ ಇಲ್ಲೊಮ್ಮೆ ಬೇರೆ ಬೇರೆ ಮಸಿಯ ಪೆನ್ನುಗಳಿಂದ ಅಲ್ಲಲ್ಲಿ ಗುರುತು ಹಾಕಿದ್ದನ್ನು ನೋಡಿದರೆ ಇದು ನಾಲ್ಕನೇ ಸಲವೆಂಬುದು ತಿಳಿದು ಬರುತ್ತದೆ. ಗಡಿಯಾರ ನೋಡಿದ. ಆಗಲೇ ರಾತ್ರಿ ಹತ್ತೂವರೆ ಇನ್ನು ಮಲಗಬೇಕೆಂದು ಬೆಡ್ ಲ್ಯಾಂಪ್ ಬಟನ್ನಿಗೆ ಕೈ ಹಾಕುವುದಕ್ಕೂ ಪಕ್ಕದಲ್ಲಿಯ ಫೋನ್ ಗಂಟೆ ಬಾರಿಸುವುದಕ್ಕೂ ಸಮನಾಯಿತು. ಯಾಕಾದರೂ ಈ ಟೆಲಿಫೋನ್ ಇಲಾಖೆಯವರು ರಾತ್ರಿ ಹತ್ತರ ನಂತರ ಮಾತನಾಡುವುದೆಂದರೆ ಎಲ್ಲಿಲ್ಲದ ಬೇಸರ, ಅದು ಬಾಲ್ಯದಿಂದಲೂ ನಡೆದು ಬಂದ ರೂಢಿ. ಈ ಜನಕ್ಕೆ ಕೇವಲ ತಮ್ಮ ಬಿಲ್ಲಿನ ಚಿಂತೆ. ತೀರ ಬೇಜಾರಿನಿಂದಲೇ ರಿಸೀವರ್ ಎತ್ತಿ ಹಲೋ ಹೇಳಿದ. ಆ ಕಡೆಯಿಂದ "ನಾನ್ರಿ ವಸಂತಕುಮಾರ್ ಮಾತಾಡೋದು" ಎಂಬ ಧ್ವನಿ. ತನ್ನ ಬಾಲ್ಯದೊಡನೆ ಬೆಸೆದುಕೊಂಡ ಆ ಹೆಸರು ಮಹೇಶನಿಗೆ ಒಂದು ತರದ ರೋಮಾಂಚನವನ್ನೇ ನೀಡಿತು. ಓಹ್ ಅಂದು ತಾನು ಅವರ ಮನೆಗೆ ಮತ್ತೊಮ್ಮೆ ಫೋನಾಯಿಸಲೇ ಇಲ್ಲ. ಪಾಪ ಏನು ತಿಳಿದುಕೊಂಡರೊ ಆಮೇಲೆ ಎಷ್ಟೊತ್ತು ಕಾಯ್ದುಬಿಟ್ಟರೊ ಇತ್ಯಾದಿ ಹಲವಾರು ಪ್ರಶ್ನೆ ವಿಚಾರಗಳು ಒಮ್ಮಿಂದೊಮ್ಮೆಲೆ ತಲೆಯೊಳಗೆ ನುಗ್ಗಿ ಬಂದವು. ಕಿರು ಅಪರಾಧಿಯರ ಇನ್ನೇನು ಕಮಿಸಿ ಎಂದು ಹೇಳಬೇಕು ಅಂದುಕೊಳ್ಳುವಷ್ಟರಲ್ಲಿಯೇ ಆ ಕಡೆಯಿಂದ "ಸಾರಿ ರೀ ಅವತ್ತು ತಾವು ಫೋನ್ ಮಾಡಿದಾಗ ನಾ ಇನ್ನೂ ಮನೆ ಮುಟ್ಟಿರಲಿಲ್ಲ. ಏನೋ ಸ್ವಲ್ಪ ಬೇರೆ ಕೆಲಸ ಬಿತ್ತು. ತಡವಾಗಿ ಮನೆಗೆ ಬಂದೆ ದಯವಿಟ್ಟು ಕ್ಷಮಿಸಬೇಕು." ಎನ್ನಬೇಕೆ ವಸಂತಕುಮಾರ್. ಮಹೇಶ್ ಕರಗಿ ಬಿಟ್ಟ. ಹಾಗೆಯೇ ಅವನ ಬಾಯಿಯಿಂದ ಶಬ್ದಗಳು ಝುರಿಯಾಗಿ ಹರಿಯತೊಡಗಿದವು. "ಛೇ ಛೇ ಹಾಗನ್ನಬ್ಯಾಡ್ರಿ ಅದಕ್ಯಾಕ ಅಷ್ಟು ಫೀಲ್ ಮಾಡಕೊಳ್ತೀರಿ. ಪರವಾಗಿಲ್ಲ ಬಿಡಿ, ಮತ್ತೊಂದು ಸಾರೆ ಬಂದಾಗ ಖಂಡಿತ ಬರ್ತೀನಿ, ಅದು ಇರ್ಲಿ, ಈಗೇನು ಇಷ್ಟೊತ್ತಿನ್ನಾಗ ಫೋನ್ ಮಾಡಿದ್ರಿ, ಏನ್ ವಿಷಯ?" ಎಂದು ನೇರ ವಿಷಯ ಪ್ರವೇಶಿಸಿದ ಬಲು ಉತ್ಸಾಹದಿಂದ ಮಹೇಶ. ಆಗ ವಸಂತಕುಮಾರ್ ವಿವರಿಸಿದ್ದು ಇಷ್ಟೆ. ಇನ್ನೆರಡು ವಾರಗಳಲ್ಲಿ ತಮ್ಮ ಮಗನ ಮದುವೆ ಇದೆ ಅದಕ್ಕೆ ಮಹೇಶ್ ತಪ್ಪಿಸದೇ ಬರಬೇಕು. ಆಗ ಎಲ್ಲರನ್ನು ಭೆಟ್ಟಿಯಾದಂತೆ ಆಗುತ್ತದೆ ಇತ್ಯಾದಿ....... ಕೊನೆಗೆ ಇನ್ನೇನು ಫೋನ್ ಇಡಬೇಕೆನ್ನುವಾಗ "ಅದಃ ಏನಿಲ್ಲ ನನ್ನ ಮಗ ಹೊಸ ಕಾರ್ ತೊಗೊಂಡಾನಾ. ಇಲ್ಲಿ ಡೀಲರ್ ಸಕ್ರಿಯವರು ಅದೇ ನಿಮ್ಮ ಸಂಬಂಧಿಕರಲ್ಲವೇ? ಏನೊ ಒಂಚೂರು ತಾವು ಒಂದ್ ಮಾತ ಅವರಿಗೆ ಹೇಳಿ...." ಎಂದು ತೀರ ಅನುಮಾನಿಸುತ್ತಿರುವಾಗ ಮಹೇಶ್ ನಡುವೆಯೇ ಬಾಯಿ ಹಾಕಿ, "ಓ ಅದಕ್ಕೇನಂತೆ ಹೇಳ್ತಿನಿ ಬಿಡಿ ಏನೂ ಕಾಳಜಿ ಮಾಡಬ್ಯಾಡಿ ಆದಷ್ಟು ಬೇಗ ಡೆಲಿವರಿ ಕೊಡಿ ಅಂತ ಖಂಡಿತ ಹೇಳ್ತೀನಿ" ಅಂದ. ಆತನ ಮಾತಿನಲ್ಲಿ ಖಚಿತತೆ ಇತ್ತು. ಸ್ಪಷ್ಟತೆ ಇತ್ತು. ಶಕ್ತಿಯಂತೂ ತಂತಾನೆ ಪ್ರದರ್ಶಿಸಲ್ಪಟ್ಟಿತ್ತು. ಸುತ್ತು ಬಳಸಿ ಮಾತನಾಡದ ಆತನಿಗೆ ನೇರ ನುಡಿ ರಕ್ತಗತವಾಗಿತ್ತು. ಪರೋಪಕಾರ ಬುದ್ಧಿಯಂತೆಯೇ. ವಸಂತಕುಮಾರ ಕೇಳುವುದೆಂದರೇನು? ತಾನು ಹೇಳದಿರಲಾಗುತ್ತದೆಯೇ? ಅದೂ ತನ್ನ ಸಂಬಂಧಿಕರ ಹತ್ತಿರವೇ ಕೆಲಸವಿದ್ದಾಗ, ಆದರೆ ಈ ನೇರ ಮಾತಿನ ಬಾಣ ಉದ್ದೇಶಿತ ಗುರಿಯನ್ನು ತಲುಪದೇ ನಿಷ್ಪ್ರಯೋಜನವಾದೀತೆಂಬ ಅರಿವಾಗಲಿ, ಅನುಮಾನವಾಗಲಿ ಮಹೇಶನಿಗೆ ಇರಲೇ ಇಲ್ಲ. ಆದರೆ ಆದದ್ದು ಮಾತ್ರ ಹಾಗೆಯೇ. ವಸಂತಕುಮಾರನ ಅಳಲು ಬೇರೆಯದೇ ಆಗಿತ್ತು. ಹಾಗೆ ಹೀಗೆ ಎನ್ನುತ್ತ ಕೊನೆಗೆ, "ಏನಿಲ್ಲ ನಿಮ್ಮ ಸಕ್ರಿ ಚಂದ್ರಣ್ಣಾರಿಗೆ ಹೇಳಿ ಸ್ವಲ್ಪ ಕನ್ಸೆಶನ್ ಕೊಡಿಸಬೇಕಿತ್ತು" ಮಹೇಶನಿಗೆ ಒಮ್ಮೆಗೇ ಏನೂ ತಿಳಿಯದಂತಾಯ್ತು. ತಾನೂ ಹೋದ ವರ್ಷ ಮಾರುತಿ 800 ಕಾರನ್ನು ಕೊಂಡುಕೊಂಡಿದ್ದರೂ ಇಂತಹ ಯಾವುದೇ ರಿಬೇಟ್ ವಗೈರೆ ಕೇಳಿರಲಿಲ್ಲ. ಅಂತಹದ್ದರಲ್ಲೆಲ್ಲ ಆತ ತೀರ ಹಿಂದುಳಿದವ. ಯಾರಿಗಾದರು ಏನಾದರೂ ಕೇಳುವುದೆಂದರೆ ಆತನಿಗೆ ಆಗುತ್ತಲೇ ಇರಲಿಲ್ಲ. ಆದರೆ ಇದರಂತೆಯೇ ಬೇರೆಯವರು ತನ್ನಲ್ಲಿ ಏನಾದರೂ ಕೇಳಿದಾಗ ಇಲ್ಲವೆಂದೆನ್ನಲೂ

ಆಗುತ್ತಿರಲಿಲ್ಲ. ಏನಾದರಾಗಲಿ ಎಂದುಕೊಂಡು ಆಯ್ತು ಅವರಿಗೆ ಹೇಳ್ತಿನಿ ಎಂದು ಫೋನ್ ಸಂಭಾಷಣೆಗೊಂದು ಕೊನೆ ಹಾಡಿದ.

ವಸಂತ್‌ಕುಮಾರ್‌ಗೇನೋ ಖುಷಿಯಾಗಿ ಸುಖ ನಿದ್ರೆ ಬಂದಿರಬಹುದು. ಆದರೆ ಮಹೇಶನದಂತೂ ಬಂದ ನಿದ್ರೆ ಹಾಳಾಗಿ ಹೋಗಿದ್ದಿತು. ತನಗ್ಯಾಕೆ ಇವರಂತಹ ಬುದ್ದಿ ಬರಲಿಲ್ಲ. ಸ್ವತಃ ಅಧಿಕಾರದಲ್ಲಿದ್ದರೂ ಈ ನಿರ್ಲಕ್ಷವೇಕೆ? ಯಾಕೆ ಈ ಹಿಂಜರಿಕೆ? ಅಥವಾ ಗರ್ವ ಎನ್ನಬಹುದೇ? ಛೇ ತಾನು ಆ ರೀತಿ ಬೆಳೆಯಲೇ ಇಲ್ಲವಲ್ಲ. ಯಾರನ್ನಾದರೂ ಏನಾದರೂ ಕೇಳುವುದೆಂದರೆ ತನ್ನ ಮೈಗೆ ಮುಳ್ಳು ಹಚ್ಚಿದಂತಾಗುತ್ತದೆ. ಅದೇ ಯಾರಿಗಾದರೂ ಸಹಾಯ ಮಾಡುವುದೆಂದರೆ ಉಕ್ಕಿ ಉಕ್ಕಿ ಬರುತ್ತದೆ. ಆದಾಗ್ಯೂ ಇಂದು ಮಾತ್ರ ಸ್ವಲ್ಪ ಸ್ವಲ್ಪವೇ ಮುಳ್ಳು ತಾಗಿದಂತಾಗುತ್ತಿದೆಯಲ್ಲ. ಎಲ್ಲ ವಿಚಿತ್ರವೆಂದಂದುಕೊಂಡ ತನ್ನಷ್ಟಕ್ಕೆ ತಾನು ಗಾದಿಯನ್ನು ಮುಟ್ಟಿ ಪರೀಕ್ಷಿಸಿಕೊಂಡ. ಮೆತ್ತಗೆ ನವಿರಾಗಿದೆ. ತೀರ ಹಿತವಾದದ್ದು. ಮೂರು ವರ್ಷಗಳಿಂದ ತನ್ನ ಸೇವೆಗೈಯುತ್ತಿದೆ. ಪಾಪ ಅದರದೇನು ತಪ್ಪು? ಗಾದಿಗೆ ಧನ್ಯವಾದಗಳೆಂದ. ವಸಂತಕುಮಾರನಿಗೇನೊ ಆಶ್ವಾಸನೆ ನೀಡದ್ದಾಯ್ತು, ನಾಳೆ ಚಂದ್ರಣ್ಣಗೆ ಹೇಳಬೇಕು ಎಂದೂ ಯಾವುದಕ್ಕೂ ಏನೂ ಹೇಳದಿದ್ದವ ಯಾರದೊ ಸಲುವಾಗಿ ಯಾವುದೋ ಒಂದು ಉಪಕಾರಕ್ಕಾಗಿ ಯೋಚಿಸಬೇಕು. ಅವರೇನು ತಿಳಿದುಕೊಳ್ಳುವರೊ ಎಂದೊ ಒಮ್ಮೆ ಮಾತನಾಡುವವ ಹೀಗೆ ನಾಳೆ ಒಮ್ಮೆಲೇ ಏಕಾಏಕಿ ಫೋನ್ ಮಾಡಿ ಸ್ವಲ್ಪ ರಿಯಾಯಿತಿ ಕೊಡಿ ದಯವಿಟ್ಟು ಎನ್ನಬೇಕೆ? ಛೇ ಇದೆಲ್ಲ ಏನು? ಯಾಕೆ ತಾನು ಹರಿಶ್ಚಂದ್ರನಾಗಬೇಕು? ಕನಸಿನಲ್ಲಿಯ ವಾಗ್ದಾದಕ್ಕಾಗಿ ಆತ ರಾಜ್ಯತ್ಯಾಗ ಮಾಡಿ ಕೊನೆಗೆ ಸುಡುಗಾಡು ಕಾಯ್ದನಲ್ಲ. ತಾನೂ ನಿದ್ದೆಗಣ್ಣಿನಲೇ ವಸಂತಣ್ಣನಿಗೆ ಆಗಲೀ ಎಂದು ಮಾತು ಕೊಟ್ಟು ಮುಂದೆ ಅದನ್ನು ನಡೆಸಿಕೊಡಬೇಕೆ? ಇಲ್ಲಾ ಮರೆತು ಬಿಡಬೇಕೆ? ಎಂದು ಹಾಗೊಮ್ಮೆ ಹೀಗೊಮ್ಮೆ ತನ್ನಷ್ಟಕ್ಕೆ ತಾನೇ ಪ್ರಶ್ನಿಸುತ್ತ ತನಗೆ ತೋಚಿದ ಉತ್ತರ ತಾನೇ ಕಂಡುಕೊಳ್ಳುತ್ತ ಅರ್ಧ ರಾತ್ರಿ ಕಳೆದ. ತೀರ ತಡವಾಗಿ ನಿದ್ರಾದೇವಿಯ ವಶವಾದ.

ಚಂದ್ರಣ್ಣನೇನೋ ತನ್ನ ಒಂದೇ ಒಂದು ಮಾತಿಗೆ ಒಪ್ಪಿಕೊಂಡು ಬಿಟ್ಟ. ಅಯ್ಯೋ ಅದೇನು ಮಹಾಬಿಡು ನೀನು ಹೇಳಿದ ಮೇಲೆ ಮುಗಿದೇ ಹೋಯಿತೆಂದ. ತನಗೆ ಬರುತ್ತಿದ್ದ ಕಮೀಶನ್‌ನಲ್ಲಿ ಮುಕ್ಕಾಲು ಭಾಗ ಬಿಟ್ಟುಕೊಡುವುದಾಗಿ ಹೇಳಿದ. ವಸಂತಕುಮಾರ್‌ಗೆ ಖುಷಿಯಾಗಿರಬೇಕು. ಹಾಗೆಯೇ ಆಗಿರಲಿ ಪಾಪ ಎಂದಂದುಕೊಂಡ. ಯಾಕೋ ಆತ ತಿರುಗಿ ಫೋನ್ ಮಾಡಿಯೇ ಇಲ್ಲ. ಲಗ್ನದ ಗದ್ದಲದಲ್ಲಿರಬೇಕು. ಮನೆಕಟ್ಟಿ ನೋಡು ಮದುವೆ ಮಾಡಿನೋಡು ಎಂದಿಲ್ಲವೇ? ಇಷ್ಟಾದರೂ ಹಿರಿಮಗನ ಮದುವೆಯೆಂದ ಮೇಲೆ ಕೇಳಬೇಕೆ? ನೂರಾರು ಕೆಲಸಗಳು, ಒತ್ತಡಗಳು, ಕಷ್ಟದಲ್ಲಿಯೇ ಬೆಳೆದುಬಂದ ಜೀವ ವಸಂತಕುಮಾರ್. ಈಗೆಷ್ಟು ಗಡಿಬಿಡಿಯಲ್ಲಿದ್ದಾರೆ.

ಕಚೇರಿಯಲ್ಲಿ ಟಪಾಲ್ ನೋಡುತ್ತಿದ್ದ ಮಹೇಶ್ ಚಂದ್ರೋದಯ ಅಂಡ್ ಕಂಪನಿ ಎಂಬ ಶುಭಾಶಯ ಪತ್ರ ನೋಡಿ ಪುಲಕಗೊಂಡ. ಓಹ್ ಆಗಲೇ ಸಂಕ್ರಾಂತಿ ಬಂದು ಬಿಟ್ಟಿತೇ ಎಂದು ಕ್ಯಾಲೆಂಡರ್ ಕಡೆ ನೋಡಿದ ಅರೇ ಇಂದೇ ಇದೆ. ನನ್ನ ಕಚೇರಿಗೆ ನಾಳೆ ರಜೆಯಿದ್ದುದರಿಂದ ಇದು ಗೊತ್ತಾಗಲೇಯಿಲ್ಲ. ಯಾವ ಹಬ್ಬ ಹುಣ್ಣಿಮೆಗಳು ಬಂದರೂ ಕಚೇರಿಗೆ ರಜೆಯಿದ್ದರೆ ಮಾತ್ರ ತನ್ನಂತಹವರಿಗೆ ತಿಳಿಯುವುದು ಎಂದು ನೌಕರರ ಹಣೆಬರಹಕ್ಕೆ ಹಳಿಯುತ್ತ ಶುಭಾಶಯ ಪತ್ರ ಬಿಡಿಸಿದ, ಎಲ್ಲಾ ಮುದ್ರಿತ ಸಂದೇಶ. ಆದರೂ ಕೊನೆಯಲ್ಲಿ ಒಂದೇ ಒಂದು ವಾಕ್ಯ ಕೈಯಿಂದ ಬರೆದಿದ್ದ ಚಂದ್ರಣ್ಣ. ನೀನು ಹೇಳಿದ ಪ್ರಕಾರ ಶ್ರೀ ವಸಂತ ಕುಮಾರ್ ಅವರಿಗೆ ಒಟ್ಟು ಹತ್ತು ಸಾವಿರ ರೂ. ಸೋಡಿ ನೀಡಿದ್ದೇನೆ. ಈ ಬಗ್ಗೆ ನಿನಗೂ ತಿಳಿದಿರಲು ಸಾಕು. ಅರೇ ಅಹುದಲ್ಲ ತನಗೂ ಇದು ತಿಳಿದ ವಿಷಯವೇ ಮತ್ಯಾಕೆ ಚಂದ್ರಣ್ಣ ಹೀಗೆ ಬರೆದ? ಇಲ್ಲಾ. ಇದು ತನಗೆ ತಿಳಿದಿದ್ದಾದರೂ ಹೇಗೆ? ಪ್ರಶ್ನೆ ತಿರುಗು ಮುರುಗಾಗಿ ಮಹೇಶನನ್ನು ಪೀಡಿಸತೊಡಗಿತು. ಅಂದರೆ ತನಗೆ ಈವರೆಗೆ ಇದರ ಅರಿವಿರಲಿಲ್ಲವೇ? ಚಂದ್ರಣ್ಣ ತನ್ನನ್ನು ಎಚ್ಚರಿಸಿದ್ದಾನೆಯೇ? ಹಾ! ತಪ್ಪು ತನ್ನದೇ ತಾನು ಫೋನ್ ಮಾಡಿದಾಗ (ಮಾಟೀಜ್ ಕಾರಿಗೆ ರಿಯಾಯ್ತಿ ನೀಡಲು) ಚಂದ್ರಣ್ಣ ಒಪ್ಪಿಕೊಂಡಾಗ ಕೇವಲ ತಾನು ಆಗಲೇ

ಥ್ಯಾಂಕ್ಸ್ ಎಂದು ಹೇಳಿ ನಂತರ ಆ ಬಗ್ಗೆ ಮರೆತೇ ಬಿಟ್ಟಿದ್ದನಲ್ಲ. ಇದು ಸರಿಯಿಲ್ಲವೆಂದೆನಿಸಿತು ಮಹೇಶನಿಗೆ. ಮಾತಿಗೆ ಮಾತು ಬಂದಾಗ ಮಾತ್ರ ಕಡ ಮರಳಿಸುವವನಂತೆ ಯಾಂತ್ರಿಕವಾಗಿ ಥ್ಯಾಂಕ್ಸ್ ಎಂದು ಎರಡಕ್ಷರ ಹೇಳಿದರೆ ಮುಗಿಯಿತೆ? ಕೂಡದು. ಕೆಲಸ ಆದ ಮೇಲೆ ಸೌಜನ್ಯಕ್ಕಾದರೂ ತಾನು ಚಂದ್ರಣ್ಣನಿಗೆ ಫೋನ್ ಮಾಡಿ ಕೃತಜ್ಞತೆ ಅರ್ಪಿಸಬೇಕಾಗಿತ್ತು ಎಂದುಕೊಂಡು ಶುಭಾಶಯ ಪತ್ರದಲ್ಲಿಯ ವಿಳಾಸದ ಕೆಳಗಿನ ದೂರವಾಣಿ ಸಂಖ್ಯೆಗೆ ಫೋನ್ ಹಚ್ಚಿದ. ಹಾಗೆಯೇ ತನ್ನ ಹಳೆಯ ಸಂಬಂಧಿಕರೊಡನೆಯ ಸಂಬಂಧವನ್ನು ಹೀಗೆ ನವೀಕರಿಸುವ ಒಂದು ಸದಾವಕಾಶವನ್ನು ತನಗೆ ಒದಗಿಸಿದ್ದಕ್ಕಾಗಿ ವಸಂತಕುಮಾರ್‌ಗೆ ಮನದಲ್ಲಿಯೇ ವಂದನೆ ಸಲ್ಲಿಸಿದ. ಆ ಕಡೆಯಿಂದ ಚಂದ್ರಣ್ಣನ ಧ್ವನಿ ಕೇಳುತ್ತಲೇ ಮಹೇಶ ಖುಷಿಯಿಂದ, “ಓ ಅಣ್ಣಾರೆ ಮೆನಿ ಮೆನಿ ಥ್ಯಾಂಕ್ಸ್, ಮೊದಲನೇದು ಸಂಕ್ರಮಣದ ಶುಭಾಶಯ ಕ್ಕಾಗಿ ಎರಡನೆಯದು ವಸಂತಕುಮಾರರಿಗೆ ರಿಬೇಟ್ ನೀಡಿದ್ದಕ್ಕಾಗಿ” ಎಂದಂದ. ಆ ಈ ಲೋಕಾಭಿರಾಮದ ಮಾತಾದ ಮೇಲೆ ಚಂದ್ರಣ್ಣ. “ಮೊನ್ನೆ ವಸಂತಕುಮಾರನ ಮಗನ ಮದುವೆಯಲ್ಲಿ ನೀನೇಕೆ ಕಾಣಲಿಲ್ಲ? ಆಗ ನೀ ಬಂದಿದ್ದರೆ ಇನ್ನೊಮ್ಮೆ ಭೆಟ್ಟಿಯಾಗಬಹುದಿತ್ತು” ಎಂದ. ಮಹೇಶನಿಗೆ ಒಮ್ಮೆಲೆ ದಿಗಿಲಾಗಿ ಹೋಯಿತು. ತನಗರಿವಿಲ್ಲದಂತೆಯೇ ಏನೇನೋ ಉತ್ತರ ನೀಡಿ ಸಂಭಾಷಣೆ ಮುಗಿಸಿದ. ಅರೇ ಆಗಲೆ ಆ ಮದುವೆ ಆಗಿ ಹೋಯಿತೆ? ತಾನೆ ಹೋಗಲಿಲ್ಲ? ಯಾಕೆ ಯಾಕೆ ಯಾಕೆ? ತನ್ನ ಎಲ್ಲಾ ಡ್ರಾಯರ್‌ಗಳನ್ನು ಹೊರಗೆಳೆದು ತಡಕಾಡಿದ. ಪಿ.ಎ.ಗೆ ಕರೆದು ಈ ಹಿಂದಿನ ಎರಡು ವಾರಗಳ ತನ್ನೆಲ್ಲ ವೈಯಕ್ತಿಕ ಪತ್ರಗಳ ಬಗ್ಗೆ ಕೇಳಿದ. ತೀರ ಸಿನ್ಸಿಯರ್ ಆದ ಪಿ.ಎ. ಇಡೀ ಟೇಬಲ್ ಡೈರಿಯನ್ನೇ ತಂದು ಒಂದೊಂದಾಗಿ ಅಲ್ಲಿಯ ಎಂಟ್ರಿಗಳನ್ನು ತೋರಿಸಿ ತಿರುಗಿ ಹೋದ. ತನಗೆ ಬಂದ ಎಲ್ಲಾ ಆಮಂತ್ರಣಗಳ ದಾಖಲೆ ಅಲ್ಲಿತ್ತು. ಅವುಗಳ ಮೇಲೆ ಕಣ್ಣಾಡಿಸಿದ ಮಹೇಶ ಹಾಗೆಯೇ ತನ್ನ ಕುರ್ಚಿಯ ಮೇಲೆ ಸ್ವಲ್ಪ ಹಿಂದಕ್ಕೆ ಒರಗಿ ಕಣ್ಮುಚ್ಚಿದ. ಯಾವುದೋ ಒಳ ಬೆಂಕಿಯನ್ನಾರಿಸಲು ಯತ್ನಿಸುತ್ತಿರುವ ಪ್ರಶಾಂತ ಚಿತ್ತ ಅವನ ಮುಖದ ಮೇಲೆ ಲಾಸ್ಯವಾಡತೊಡಗಿತು.

ಮಹೇಶ ಎಷ್ಟೊತ್ತು ಹೀಗೆಯೇ ಕಣ್ಮುಚ್ಚಿ ಕುರ್ಚಿಗೆ ಒರಗಿ ಕುಳಿತಿರುತ್ತಿದ್ದನೋ ಆತನ ಆಪ್ತ ಸಹಾಯಕ ಪುನಃ ಬಂದು ಸರ್ ಎಂದು ಏನೋ ಹೇಳಲು ಅವಸರದಲ್ಲಿ ಬಾಯ್ದೆರೆಯದೇ ಹೋಗಿದ್ದರೆ, ಏನೋ ತೀರ ಅರ್ಜೆಂಟ್ ಆಗಿ ತಮ್ಮ ತಂದೆಯವರು ಮಾತನಾಡಬೇಕಂತೆ ಸರ ಎಂದು ಹೇಳಿ ಆದೇಶಕ್ಕಾಗಿ ಕಾಯತೊಡಗಿದ. ಹಾಂ ಬೇಗ ಕನೆಕ್ಷನ್ ಕೊಡಿ ಎಂದಾಗ ಈಗಾಗಲೇ ತಾನು ಎತ್ತಿ ಇಟ್ಟ ರಿಸೀವರ್ ಕಡೆ ಕೈ ತೋರಿಸಿ ಆತ ಹೊರನಡೆದ. ತಿಳಿದ ಸುದ್ದಿ ಇಷ್ಟೆ ಇಂದು ಬೆಳಿಗ್ಗೆಯೇ ಮಹೇಶನ ತಾಯಿಗೆ ಲಘು ಹೃದಯಾಘಾತವಾಗಿ ಬಹಳ ಸೀರಿಯಸ್ ಇದ್ದಾರೆಂದೂ ಕೆ.ಎಲ್.ಇ. ಆಸ್ಪತ್ರೆಗೆ ಒಯ್ಯುತ್ತಿರುವುದರಿಂದ ತಾನೂ ನೇರವಾಗಿ ಅಲ್ಲಿಗೇ ಬರಬೇಕೆಂದೂ ತಿಳಿಸಲಾಯ್ತು. ತಕ್ಷಣ ಬಾಡಿಗೆಗೆ ಕಾರೊಂದನ್ನು ಮಾಡಿಕೊಂಡು ಮೇಲಾಧಿಕಾರಿಗಳ ಅಪ್ಪಣೆ ಪಡೆದು ಹುಬ್ಬಳ್ಳಿ ಕಡೆ ದೌಡಾಯಿಸಿದ. ನೂರು ಕಿಲೋಮೀಟರ್ ದಾರಿ ನೂರು ಮಿನಿಟುಗಳಲ್ಲಿ ಕ್ರಮಿಸಿ ಆಸ್ಪತ್ರೆ ತಲುಪಿದ. ಅಷ್ಟೊತ್ತಿಗಾಗಲೇ ಅವರ ತಾಯಿಯನ್ನು ಹೃದಯಬೇನೆಯ ತೀವ್ರ ನಿಗಾ ಘಟಕ (ಐ.ಸಿ.ಯು)ಗೆ ಒಯ್ಯಲಾಗಿತ್ತು. ಅನಿವಾರ್ಯವಾಗಿ, ಅಲ್ಲಿಯೇ ಹೊರಗಿದ್ದ ತನ್ನ ತಮ್ಮಂದಿರು ಸಹೋದರಿಯರು ಹಾಗೂ ಇನ್ನಿತರ ಸಂಬಂಧಿಗಳೊಡನೆ ಬೆರೆತು ತಾಯಿಯ ಕಾಯಿಲೆಯ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳತೊಡಗಿದ.

ಐ.ಸಿ.ಸಿ.ಯು.ದಿಂದ ಹೊರಬರುವ ಮೊದಲು ಹೃದಯದ ಶಸ್ತ್ರಚಿಕಿತ್ಸೆ ಆಗಿಯೇಬಿಟ್ಟಿತು. ಲಘು ಆಘಾತವೆಂದು ತಿಳಿಸಿದ್ದರೂ ಆದದ್ದು ಮಾತ್ರ ಮೇಜರ ಸರ್ಜರಿಯೇ. ನಾಲ್ಕು ಗಂಟೆ ಕಾಲ ಆಪರೇಶನ್ ಥೀಯೇಟರಿನಲ್ಲಿಯೇ ಅವ ಇರಬೇಕಾಯ್ತು. ತೀವ್ರ ಆತಂಕಕ್ಕೊಳಗಾಗಿದ್ದ ಮಹೇಶನ ತಂದೆಯನ್ನು ಕೇಂದ್ರವಾಗಿಟ್ಟುಕೊಂಡು ತಮ ತಮಗೆ ತಿಳಿದ ಸಮಾಧಾನ ಹೇಳುತ್ತಿದ್ದರು ಅವರ ಬಂಧು ಬಳಗ. ಅಂತೂ ಇಂತೂ ಎಲ್ಲಾ ಸರಾಗವಾಗಿ ಮುಗಿದು ಅವ್ವ ಹೊರಬಂದಾಗ ಎಲ್ಲರೂ ಹಾಯಾದ ಉಸಿರುಬಿಟ್ಟಿದ್ದರು. ಹೀಗೆ ಆಪರೇಷನ್ ಆದ ಮೇಲೂ ಆಸತ್ರೆಯಲ್ಲಿ ಒಂದುವರೆ

ತಿಂಗಳು ಇರಬೇಕಾಯ್ತು. ಆಗ ನೋಡಬೇಕು ಜನರ ಪ್ರವಾಹ, ನೆಂಟರು, ಇಷ್ಟರು, ಗುರುತಿನವರು, ಊರಿನವರು ಹೀಗೆಯೇ ಪ್ರತಿದಿನವೂ ಜನ ತಂಡತಂಡವಾಗಿ ಬಂದು ಮಹೇಶನ ತಾಯಿಯನ್ನು ನೋಡಿಕೊಂಡು ಇವರಿಗೆಲ್ಲಾ ಸಮಾಧಾನ ಹೇಳಿಹೋಗುವವರೆ. ತಾಯಿಯೇನೊ ಮಾತಾಡುವ ಸ್ಥಿತಿಯಲ್ಲಿ ಇರಲೇಯಿಲ್ಲ. ಡಾಕ್ಟರರು ಈ ಬಗ್ಗೆ ತೀರ ಕಟ್ಟುನಿಟ್ಟಿನ ಅಘೋಷಿತ ಕರ್ಫ್ಯೂ ಹಾಕಿದ್ದರು. ಮಹೇಶನಂತೂ ಪ್ರಾರಂಭದ ಹದಿನೈದು ದಿನ ರಜೆ ಹಾಕಿಯೇ ಅಲ್ಲಿ ಉಳಿದುಕೊಂಡು ಬಿಟ್ಟಿದ್ದ.

ಅವ್ವ ಕ್ರಮೇಣ ಕಣ್ಣೆರೆದು ಮೃದುವಾಗಿ ಮಾತನಾಡುವಂತಾದಳು. ಆಸ್ಪತ್ರೆಯ ಪಕ್ಕದ ಹೋಟೆಲ್ ಒಂದರಲ್ಲಿ ರೂಮು ಮಾಡಿಕೊಂಡಿದ್ದ ಮಹೇಶ ಎಂದಿನಂತೆ ಬೆಳಿಗ್ಗೆ ವಾಕಿಂಗ್‌ಗೆ ಹೋಗಲು ಸುರುಮಾಡಿದ್ದ. ಇಂದು ಅದಾವುದೊ ಒಳ್ಳೆ ಮೂಡ್‌ನಲ್ಲಿ ಸ್ವಲ್ಪ ಬೇಗ ಎದ್ದು ಹೊರಬಿದ್ದಿದ್ದ. ಹಾಗೇ ರಾಷ್ಟ್ರೀಯ ಹೆದ್ದಾರಿಗೆ ಸಮಾನಾಂತರವಿರುವ ಹೊಸೂರ್ ಉಣಕಲ್ ರಸ್ತೆ ಮೇಲೆ ನಡೆದ. ವಿದ್ಯಾನಗರ ದಾಟಿ ಲಿಂಗರಾಜನಗರಕ್ಕೆ ಬಂದಿದ್ದ. ಆ ಕಡೆ ಈ ಕಡೆ ಸುಂದರವಾದ ಗಿಡಮರಗಳು ಒಂದೇ ನಮೂನೆಯ ಕೆಲ ಮನೆಗಳು, ಮನೆಯ ಮುಂದೆ ಎದ್ದು ಕಾಣುವ ಕೈ ತೋಟಗಳು. ಅಕಸ್ಮಾತ್ ಎರಡುಮನೆಗಳ ಬೋರ್ಡ್‌ಗಳಲ್ಲಿ ಪ್ರೊ. ಸರ್ವೋತ್ತಮರಾವ್ ಹಾಗೂ ಪ್ರೊ. ವಸಂತಕುಮಾರ್ ಎಂದು ಬರೆದದ್ದು ಇವನ ಕಣ್ಣಿಗೆ ಬಿತ್ತು. ಅರೇ ಇಬ್ಬರೂ ತನಗೆ ಪರಿಚಿತರೇ. ಹಾಗೆಯೇ ವಾಚನ್ನು ನೋಡಿಕೊಂಡ. ಇನ್ನೂ ಆರುವರೆ, ಈಗ ಹೋಗಿ ಅವರಿಗೆ ತೊಂದರೆ ಕೊಡುವುದು ಸರಿಯಿಲ್ಲವೆಂದುಕೊಂಡು ತುಸುದೂರ ಹಾಗೆಯೇ ನಡೆದು ತಿರುಗಿ ಬಂದ. ಸೀದಾ ತನ್ನ ಅವ್ವನ ಹತ್ತಿರ ಹೋಗಿ ತಾನು ವಸಂತಕುಮಾರ್‌ನ ಮನೆ ನೋಡಿದ್ದಾಗಿ ಹೇಳಿ, ಆಕೆ ಉಣಿಸಿ ಬೆಳೆಸಿದ ಆತ ಹೇಗೆ ಈಗ ಸುಸ್ಥಿತಿಗೆ ತಲುಪಿದ್ದಾನೆಂದು ಹೇಳಬೇಕೆಂದುಕೊಂಡ. ಆದರೆ ಅವ್ವ ಔಷಧಿಯ ಪರಿಣಾಮವಾಗಿ ತುಸು ದೀರ್ಘ ನಿದ್ರೆಯಲ್ಲಿದ್ದುದರಿಂದ ಅದು ಸಾಧ್ಯವಾಗದಾಯಿತು.

ಇದಾದ ನಾಲ್ಕು ದಿನಗಳಲ್ಲಿ ಪ್ರೊ. ಸರ್ವೋತ್ತಮ ರಾವ್ ಆಸ್ಪತ್ರೆಗೆ ಬಂದು ಮಹೇಶನ ತಾಯಿಯನ್ನು ನೋಡಿಕೊಂಡು ಲೋಕಾಭಿರಾಮವಾಗಿ ಮಾತನಾಡುವಾಗ ಮಹೇಶ್ ಮೊನ್ನೆ ತನು ಪ್ರೊ.ರಾವ್ ಮನೆವರೆಗೂ ವಾಕಿಂಗ್‌ಗೆ ಬಂದ ವಿಷಯ ತಿಳಿಸಿದ. ಒಳಗೆ ಬಂದು ಒಂದು ಕಪ್ ಚಹಾ ಕುಡಿದು ಹೋಗಿದ್ದರೆ ತಮಗೆ ಖುಷಿಯಾಗುತ್ತಿತ್ತೆಂದು ಅವರು ಹೇಳಿದಾಗ ಮತ್ತೊಮ್ಮೆ ಬಂದಾಗ ಖಂಡಿತ ಬರುವುದಾಗಿ ತಿಳಿಸಿದ. ಬೀಳ್ಕೊಟ್ಟು ಹೋಗುವ ಸಮಯದಲ್ಲಿ ಹಾಗೆಯೇ "ಪ್ರೊಫೆಸರ್ ತಮ್ಮ ನೇಬರ್ ವಸಂತಕುಮಾರ್ ಇದ್ದಾರಲ್ರೀ" ಎಂದು ಕೇಳಿದ. ಅದಕ್ಕವರು 'ಹಾಂ ಹೌದ್ರಿ ಅವರೂ ಬರಬೇಕೆಂದಿದ್ದರು. ಏನೋ ಅರ್ಜಂಟ್ ಕೆಲಸ ಬಂದಿರಬೇಕು" ಎಂದುತ್ತರಿಸಿದಾಗ "ಏ ಇರ್ಲಿ ಬಿಡ್ರಿ ಹಂಗs ಸುಮ್ಮ ಕೇಳಿದ್ಯಾ" ಎಂದ ಮಹೇಶ.

ತಡವಾಗಿಯಾದರೂ ಪರವಾಗಿಲ್ಲ ಮಹೇಶನ ತಾಯಿ ಗುಣಮುಖವಾಗಿ ಮುಂದೊಂದು ತಿಂಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆಗೊಂಡು ತಮ್ಮೂರಿಗೆ ಮರಳಿ ಹೋದರು.

ಖಾನಾಪುರ ಪ್ರವಾಸ ಮುಗಿಸಿಕೊಂಡು ಮಹೇಶ ಕಚೇರಿಗೆ ಮರಳಿದಾಗ ಯಾರೋ ಯಜಮಾನರು ತನ್ನನ್ನು ಭೆಟ್ಟಿಯಾಗಲು ಮುಂಜಾನೆಯಿಂದಲೂ ಕಾಯುತ್ತಿದ್ದಾರೆಂದು ಸಿಪಾಯಿ ತಿಳಿಸಿದಾಗ ಅವರನ್ನು ಒಳ ಕಳಿಸಲು ಸೂಚಿಸಿ ಕಡತದಲ್ಲಿ ಮಗ್ನನಾದ. ಬಾಗಿಲು ತೆರೆದು ಅವರು ಒಳಬಂದರೂ ಅರಿವಿಲ್ಲದೆಯೇ ಏನೋ ಟಿಪ್ಪಣಿ ಮಾಡುತ್ತಿದ್ದ. ಮೃದುವಾಗಿ ಹೆಜ್ಜೆ ಸಪ್ಪಳ ಕಿವಿಗೆ ಬೀಳುತ್ತಲೇ ಮುಖ ಮೇಲೆತ್ತಿದ್ದ. ತಕ್ಷಣ "ನಮಸ್ಕಾರ್ರೀ" ಎಂದು ಒಂಟಿ ಕೈ ಎತ್ತಿದ ವಸಂತಕುಮಾರ್. ಪ್ರತಿ ನಮಸ್ಕರಿಸಿ ಅವರಿಗೆ ಕೂಡ್ರಲು ತಿಳಿಸಿ ಬಂದ ಸಮಾಚಾರವೇನೆಂದು ಕೇಳಿದ. ಕೇಳುವ ಮೊದಲು ತನ್ನ ಸಿಪಾಯಿ ಇವರಿಗೇಕೆ ಯಜಮಾನರೆಂದ ಎಂದು ತುಸು ತೀಕ್ಷ್ಣ ದೃಷ್ಟಿ ಹಾಯಿಸಿ ವಸಂತಕುಮಾರರ ಮುಖ ಮಯ ಮತ್ತೊಮ್ಮೆ ವೀಕ್ಷಿಸಿದ. ಅದೇ ಮುಖ ಇಪ್ಪತ್ತಾರು ವರ್ಷದ ಹಿಂದಿನ ಮುಖ. ಗುಳಿಬಿದ್ದ ಆಳ ಕಣ್ಣುಗಳು. ಕಿಂಡಿಯಿದ್ದ ಸ್ವಲ್ಪ ಮುಂದೆ ಬಂದ ಎರಡು ಹಲ್ಲುಗಳು, ತುಸು ಒಳ ಸೇರಿದ ಗಲ್ಲಗಳು ಒಟ್ಟಾರೆ ಮಾಂಸ ರಹಿತ ಮುಖ.

ಅದೇ ದೈನೇಸಿ ಕಳೆ, ತಲೆಕೂದಲು ಮಾತ್ರ ಸ್ವಲ್ಪ ವಿರಳವಾಗಿದೆ. ಇದ್ದುದರಲ್ಲಿ ಅರ್ಧದಷ್ಟು ಬಿಳಿಯಾಗಿವೆ. ತನಗೇನೋ ವಸಂತಕುಮಾರ್ ವಸಂತಣ್ಣನಂತೆ ಮಧ್ಯಮ ವಯಸ್ಕನಂತೆ ಕಂಡಿದ್ದ ಆದರೆ ಹೊಸದಾಗಿ ನೋಡಿದವರಿಗೆ ವಯಸ್ಸಾದವನಂತೆ ಕಂಡಿದ್ದರೆ ಅದರಲ್ಲಿ ಯಾವ ಆಶ್ಚರ್ಯವೂ ಇಲ್ಲವೆಂದಂದುಕೊಂಡ. ಅಷ್ಟರಲ್ಲಿ ವಸಂತಕುಮಾರ್, "ಏನಿಲ್ಲ, ಹಿರೆ-ಮಗಾ ಹೆಚ್ಚಿನ ವ್ಯಾಸಂಗಕ್ಕೆ ಯು.ಕೆ.ಗೆ. ಹೊಂಟಾನ, ಸ್ವಲ್ಪ ಅರ್ಜಂಟ್ ಐತಿ, ಪಾಸ್ ಪೋರ್ಟ್ ಸಲುವಾಗಿ ಧಾರವಾಡ ಎಸ್.ಪಿ.ಸರ್ಟಿಫಿಕೇಟ್ ಬೇಕಾಗೈತಿ. ಅವರು ಡಿಟೇಲ್ಸ್ ಎನ್‌ಕ್ವಾಯಿರಿ ಅಂತ ಇನ್ನೂ ಎಂಟತ್ತು ದಿನಗಳಾದ್ರೂ ಬೇಕಂತ ಹೇಳತಾರೆ. ಅದಕ್ಕೆ ಆ ಎಸ್.ಪಿ. ನಿಮ್ಮ ಗೆಳೆಯರು ಅಂತ ಗುರ್ತಾಗಿ ಬಂದೀನಿ. ಸ್ವಲ್ಪ ಒಂದ್ ಮಾತು ಅವರಿಗೆ ಹೇಳಿದ್ರ ಅನುಕೂಲಾಗತೈತಿ" ಈ ಸಾರೆ ಮಾತ್ರ ಮಹೇಶನಿಗೆ ವಸಂತಕುಮಾರ ತನ್ನ ಬಾಲ್ಯದ ಕುರುಹಾಗಲಿಲ್ಲ. ತನ್ನೂರಿನ ಹಳೆಯ ನೆನಪುಗಳು ಉಕ್ಕಿಬರಲಿಲ್ಲ. ಬದಲಾಗಿ ಅವ್ವ, ಆಸ್ಪತ್ರೆ, ಮಾಟಿಜ್ ಕಾರ್, ಎರಡು ಜೋಡಿ ಮನೆ ಇತ್ಯಾದಿಗಳು ಕಣ್ಣೆದುರು ಸುಳಿದಾಡತೊಡಗಿದವು. ತೀರ ಪ್ರಯಾಸಪಟ್ಟು ಅವುಗಳನ್ನು ಪಕ್ಕಕ್ಕೆ ಸರಿಸಿ ವಸಂತಕುಮಾರನಿಂದ ಅವನ ಮಗನ ಹೆಸರು, ವಯಸ್ಸು ಇತ್ಯಾದಿ ವಿವರಗಳನ್ನೆಲ್ಲ ಪಡೆದು, ತಾನು ಧಾರವಾಡ ಎಸ್.ಪಿ.ಗೆ ಹೇಳುವುದಾಗಿ ತಿಳಿಸಿದ. ಎದ್ದು ನಿಂತ ವಸಂತಕುಮಾರ ಯಾಕೋ ಬೇಗ ಹೋಗುವ ಲಕ್ಷಣ ಕಾಣಲಿಲ್ಲ. ಮಹೇಶ್ ಏನೆಂಬುವಂತೆ ಆತನ ಮುಖ ನೋಡಿದ. "ಅದೇ ಸ್ವಲ್ಪ ಭಾಳ ಅರ್ಜಂಟ್ ಇತ್ತು. ಅದಕ್ಕೆ ತಮಗ ಹೇಳೋನು ಅಂತ ಬಂದ್ಯಾ" ಎಂದು ಪುನಾರಾಲಾಪಿಸಿ ಮಹೇಶನ ಪಕ್ಕದಲ್ಲಿದ್ದ ಫೋನಿನ ಕಡೆ ದೃಷ್ಟಿ ಹಾಯಿಸಿದ. ಅರ್ಥ ತಿಳಿದುಕೊಂಡ ಮಹೇಶ್, "ಡೋಂಟ್ ವರಿ" ಎಂದು ಆಶ್ವಾಸನೆ ನೀಡಿ ಅವನನ್ನು ಕಳಿಸಿಕೊಟ್ಟ. ಸರಿಯಾಗಿ ಕಚೇರಿಯಿಂದ 5.30ಕ್ಕೆ ಎಂದೂ ಎದ್ದವನಲ್ಲ ಮಹೇಶ್. ಇಂದು ಏಕೋ ಮನಸು ಕದಡಿದಂತಾಗಿ ಮೇಲೆದ್ದ. ತೀರಾ ಕಳವಳಗೊಂಡಿದ್ದ ಹೀಗಾದಾಗ ತನ್ನ ಹಳೆಯ ಮಿತ್ರ ವೆಂಕಟೇಶನ ಕಡೆ ಹೋಗುವ ರೂಢಿಯಂತೆ ಸೀದಾ ಅವನಲ್ಲಿಗೆ ನಡೆದ.

ಮಹೇಶ್ ಹಾಗೂ ವೆಂಕಟೇಶರ ಅನ್ಯೋನ್ಯತೆ ಅಸದಳವಾದದ್ದು. ಇವನ ಹೊಟ್ಟೆಯೊಳಗಿನ ವಿಷಯ ಅವನಿಗೆ ಹೇಳಬೇಕು ಅವನ ಹೃದಯದೊಳಗಿನದೆಲ್ಲ ಇವನಿಗೆ ತಿಳಿಸಬೇಕು. ಆನಂದವೋ, ಆತಂಕವೊ, ಸುಖವೊ, ದುಃಖವೊ, ಒಟ್ಟಿನಲ್ಲಿ ಹಂಚಿಕೆಯಾಗಲೇಬೇಕು. ಈ ಕೊಡುಕೊಳ್ಳುವಿಕೆ ಮೂರು ದಶಕಗಳಿಂದಲೂ ಅವ್ಯಾವಹತವಾಗಿ ನಡೆದುಕೊಂಡು ಬಂದದ್ದು. ಈ ನಡುವೆ ಏಳೆಂಟು ವರ್ಷ ಇಬ್ಬರೂ ದೂರ ದೂರದಲ್ಲಿ ಕೆಲಸ ಮಾಡುತ್ತಿದ್ದುದರಿಂದ ಈಗಿನ ಈ ಸಾಮಿಪ್ಯ ಇನ್ನೂ ಅವರನ್ನು ಗಾಢವಾಗಿ ತಳಕುಹಾಕಿತ್ತು. ಅವರಿಬ್ಬರ ಬಲು ಅಬಿರುಚಿಯ ವಿಷಯವೆಂದರೆ ಮಾನವೀಯ ಸಂಬಂಧಗಳ ವಿವಿಧ ಮಗ್ಗಲುಗಳನ್ನು ವಿವರಿಸುವುದು. ವಿಶ್ಲೇಷಿಸುವುದು. ಹಾಗೆಯೇ ಮನುಷ್ಯನ ಹಿರಿಮೆ ಗರಿಮೆ, ನೀಚತನ, ಈರ್ಷೆ ಇತ್ಯಾದಿಗಳ ಕಾರಣದ ನೆಲೆ ಕಂಡುಕೊಳ್ಳುವುದು. ಯಾಕೆ ಈ ಮನುಷನೆಂಬ ಪ್ರಾಣಿ ತನ್ನ ಸ್ವಯಂ ಸಂತೋಷಕ್ಕಾಗಿ ಇತರರ ಆಸೆ ಆಕಾಂಕ್ಷೆಗಳನ್ನು ಬಲಿತೆಗೆದುಕೊಳ್ಳುತ್ತಾನೆ? ಈ ವಿಕಾರ ಮನೋಧರ್ಮದ ಬಗ್ಗೆ ತೀವ್ರ ಜಿಜ್ಞಾಸೆ ನಡೆಸಿ ಅದರ ಖಚಿತ ಮೂಲ ಯಾವುದೆಂಬ ನಿರಂತರ ಹುಡುಕಾಟ ಅವರಿಬ್ಬರ ಆಸಕ್ತಿಯ ಕೇಂದ್ರ. ಈಗಂತೂ ಮಹೇಶ್ ನೇರವಾಗಿ ಪ್ರಶ್ನಿಸಿಯೇ ಬಿಟ್ಟ. "ಅಲ್ಲೊ ವೆಂಕಟೇಶ್, ನೀನೆ ಹೇಳು ಇಪ್ಪತ್ತಾರು ವರ್ಷಗಳ ಬಳಿಕ ಭೆಟ್ಟಿಯಾದ ಆತ್ಮೀಯನೊಬ್ಬ ಮನೆಗೆ ಕರೆದು ಆ ಹೊತ್ತಿನಲ್ಲಿ ಆತನೇ ಮನೆಯಿಂದ ದೂರ ಉಳಿಯುವುದು, ಅನ್ನ ಹಾಕಿ ಸಲುಹಿದ ತಾಯಿಯಂತಹವರು ಸಾವು ಬದುಕಿನೊಡನೆ ಹೋರಾಟ ಮಾಡುತ್ತ ಕೇವಲ ಎರಡು ಕಿಲೋಮೀಟರ್ ದೂರದ ಆಸ್ಪತ್ರೆಯಲ್ಲಿ ನರಳುತ್ತಿದ್ದಾಗ ಹೋಗಿ ನೋಡಲಾಗದ್ದು, ಅತ್ಯಂತ ಬೇಕಾದವರಿಗೆ ತಮ್ಮ ಮಗನ ಲಗ್ನ ಪತ್ರ ಸಹಿತ ಕಳಿಸದಿರುವುದು ಇವೆಲ್ಲ ಇಷ್ಟೆಲ್ಲ ಕೇವಲ ಕಾಕತಾಳೀಯ ಅಥವಾ ಸಹಜ ಎಂದೆನ್ನುತ್ತೀಯಾ ನೀನು?" ಆಗ "ಇದೇನೊ ಕನಕನ ಮುಂಡಿಗೆಯಂತೆ ಮಾತುಗಳನ್ನು ಉರುಳಿಸಬೇಡ ನೇರ ವಿಷಯಕ್ಕೆ ಬಾ" ಎಂದ ವೆಂಕಟೇಶ್, ಈಗ ಮಹೇಶನಿಗೆ ಅನಿವಾರ್ಯವಾಯಿತು ವಸಂತಕುಮಾರನ ಹೆಸರು ಹೇಳುವುದು. ಹಾಗೆಯೇ ಮತ್ತೆ ಮುಂದೊರೆದು ಕೇಳಿದ,

"ನೀನೇ ಹೇಳು ವೆಂಕಟೇಶ್ ಒಂದು ಕೆಲಸ ಮಾಡಿಕೊಟ್ಟ ಮೇಲೆ ನಮ್ಮ ನೆನಪು ಆತನಿಗಾಗುವುದು ಮತ್ತೊಂದು ಕೆಲಸ ಬಂದಾಗ ಮಾತ್ರ ಅದೂ ಮುಗಿದ ನಂತರ ಮತ್ತೆ ನೆನಪಾಗುವುದು ಮೂರನೆಯ ಸಹಾಯ ಯಾಚಿಸಲು ಬಂದಾಗಲೇ. ಕೊನೆಗೆ ಥ್ಯಾಂಕ್ಸ್ ಹೇಳಲಾದರೂ ಆಯಾ ಕೆಲಸವಾದ ಮೇಲೆ ನನ್ನ ನೆನಪೇಕೆ ವಸಂತಕುಮಾರನಿಗೆ ಬರಲಿಲ್ಲ? ಇದೇ ವಿಚಾರ ನನಗೆ ಇದೀಗ ಆತ ಹೊರಟು ಹೋದಂದಿನಿಂದಲೂ ತಲೆಯಲ್ಲಿ ದೆವ್ವವಾಗಿ ಭೀಕರ ನೃತ್ಯ ಮಾಡುತ್ತಿದೆ" ಹೀಗೆ ತೀರ ನೋವಿನಿಂದ ಮಹೇಶ ತನ್ನ ಅಂತರಾಳವನ್ನು ತೆರೆದಿಟ್ಟ. ವೆಂಕಟೇಶನೂ ಸ್ವಲ್ಪ upset ಆದ ಈ ಘಟನಾವಳಿಗಳ ಚಿತ್ರ ವಿಚಿತ್ರ ತಿರುವುಗಳನ್ನು ನೋಡಿ. ಆದರೆ, ಆತನ ಎಂಜಿನ್ ಕಾಯ್ದಾಗ ಈತನದು ತಂಪುಗೊಳಿಸುವ ರೇಡಿಯೇಟರ್ ಕೆಲಸ, ಪರಿಸ್ಥಿತಿಯನ್ನು ನಿಭಾಯಿಸುವ ಹೊಣೆ. ಅದಕ್ಕಾಗಿ ತಕ್ಷಣ ಏನನ್ನೋ ನೆನಪಿಸಿಕೊಂಡ. ಹಾಗೆಯೇ ಮಹೇಶನಿಗೆ ತನ್ನಲ್ಲಿಯ ಒಂದು ಅನುಭವವನ್ನು ವಿವರಿಸತೊಡಗಿದ.

"ನಿನಗೂ ಗೊತ್ತಿದೆ ಮಹೇಶ್ ಅರ್ಜುನನದು. ಈಗ ಬೆಂಗಳೂರಿನಲ್ಲಿ ಡಿ.ಸಿ.ಪಿ.ಯಾಗಿದ್ದಾನಲ್ಲವೇ? ಆತನಿಗೆ ನಾನು ಏನೇನು ಮಾಡಿಲ್ಲ ಹೇಳು. ಕೆ.ಪಿ.ಎಸ್.ಸಿ. ಪರೀಕ್ಷೆ ತೆಗೆದುಕೊಳ್ಳುವಾಗಲೇ ನನ್ನಲ್ಲಿಯ ಪುಸ್ತಕ ನೋಟ್ಸ್ ಎಲ್ಲ ಉಪಯೋಗಿಸುತ್ತಿದ್ದ. ಮುಂದೆ ಡಿ.ಎಸ್.ಪಿ. ಆಗಿ ಆಯ್ಕೆಯಾದ. ನಾನು ಸಿಟಿಓ ಆದ್ದು ನಿನಗೂ ಗೊತ್ತಿದೆ. ಮದುವೆ ಹೊತ್ತಿನಲ್ಲಿ ವರದಕ್ಷಿಣೆ ಕಡಿಮೆಯಾಯಿತೆಂದು ಜಗಳ ತೆಗೆದಿದ್ದ. ಆ ಮೇಲೆ ಕಾರವಾರದಲ್ಲಿದ್ದಾಗ ಏನೋ ನೆಪ ಹೇಳಿ ಹೆಂಡತಿಯನ್ನು ಅವಳ ತವರುಮನೆಯಲ್ಲಿಯೇ ಬಿಟ್ಟಿದ್ದ, ಒಂದು ವರ್ಷವಾದರೂ ಕರೆದೊಯ್ಯಲಿಲ್ಲ. ನಾನು ಮಾತ್ರ ಆತನಿಗೆ ಬುದ್ಧಿ ಹೇಳಬಹುದೆಂದು ತಿಳಿದಿದ್ದ ಅವನ ಹೆಂಡತಿ ಮಲ್ಲಿಕಾ ನನಗೆ ಹಲವಾರು ಪತ್ರ ಬರೆದು ನಾನು ಅವಳ ಅಣ್ಣನಾಗಿ ಅವಳ ಬಾಳನ್ನು ಸರಿಮಾಡಬೇಕೆಂದು ವಿನಂತಿಸುತ್ತಿದ್ದಳು. ಕೊನೆಗೆ ನಾನು ಸ್ವತಃ ಕಾರವಾರಕ್ಕೆ ಹೋಗಿ ಒತ್ತಾಯ ಮಾಡಿ ಅರ್ಜುನನನ್ನು ಕರೆತಂದು ಅವರಿಬ್ಬರ ಎರಡನೇ ಪ್ರಥಮ ರಾತ್ರಿಯನ್ನು ನನ್ನ ಮನೆಯಲ್ಲೇ ಏರ್ಪಡಿಸಿದ್ದೆ. ಅವರ ಮೂರನೇ ಮಗು ಹೀಗೆ ಆದ ಪುನರ್ಮಿಲನದ ಫಲವೇ. ಮುಂದೆ ಈತನಿಗೆ ಪ್ರಮೋಷನ್ ಆಯಿತು. ಅದರ ಏನೋ ಗಡಿಬಿಡಿ ಮಾಡಿಕೊಂಡು ಬಿಟ್ಟ. ಲೋಕಾಯುಕ್ತಕ್ಕೆ ಸಿಕ್ಕಿಹಾಕಿಕೊಂಡ. ಅಲ್ಲಿ ಹಿಂದಿನ ತಾರೀಖು ಹಾಕಿದ್ದ ಕೃಷಿ ಉತ್ಪನ್ನದ ಕೆಲ ದಾಖಲೆ ಬೇಕಾಗಿದ್ದವು. ನನ್ನ ಅಣ್ಣನಿಗೆ ಹೇಳಿ ಬಹಳ ರಿಸ್ಕ್ ತೆಗೆದುಕೊಂಡು ಅದಕ್ಕೆಲ್ಲ ನಾನು ಸ್ವತಃ ತಿರುಗಾಡಿ ವ್ಯವಸ್ಥೆ ಮಾಡಿದೆ. ಕೇಸು ಡ್ರಾಪ್ ಆಯಿತು. ಅರ್ಜುನ್‌ಗೆ ಐ.ಪಿ.ಎಸ್. ಬರಲು ದಾರಿ ಸುಗಮವಾಯ್ತು. ಇದಾಗಿ ಕೇವಲ ನಾಲ್ಕು ವರ್ಷವಾಗಿದೆ ತಾನೆ. ಹೋದ ವರ್ಷ ಆತ ಇಲ್ಲಿಗೆ ಬಂದಿದ್ದ. ಅದೇಕೊ ಏನೋ ಇಲ್ಲಿಯ ನಮ್ಮ ಬೇರೆ ಬೇರೆ ಕಾಮನ್ ಗೆಳೆಯರನ್ನು ಭೆಟ್ಟಿಯಾಗಿ ಹೋದ. ಕೇಳಿದಾಗ ಆ ಗೆಳೆಯರು ಹೇಳಿದ್ದೇನು ಗೊತ್ತೆ, ಈ ರೀತಿ ಆತ ಬಂದದ್ದು ಇದು ಮೂರನೇ ಸಾರೆ ಅಂತೆ. ಇದು ಅಲ್ಲದೆ ಅಣ್ಣ ಅಣ್ಣನೆಂದು ಹಲಬುತ್ತ ಹಲವಾರು ಪತ್ರ ಬರೆದ, ಎರಡನೇ ಪ್ರಥಮ ರಾತ್ರಿಯ ಪೂರ್ವದಲ್ಲಿ ತನ್ನೆರಡು ಮಕ್ಕಳು ಹಾಗು ತಂದೆ ತಾಯಿಗಳೊಂದಿಗೆ ನನ್ನ ಮನೆಯಲ್ಲೇ ಬಿಡಾರ ಹೂಡಿದ್ದ ಆ ಮಲ್ಲಿಕಾ ಕೆಲ ಮದುವೆ ಮುಂಜಿವೆಗಳಿಗೆ ಇಲ್ಲಿಗೆ ಬಂದು ಹೋಗಿದ್ದಳಂತೆ. ಕೊನೆಗೆ ಅವಳಾದರೂ ನಮ್ಮ ಮನೆಗೆ ಬಂದು ಹೋಗಬಹುದಿತ್ತಲ್ಲ.

ಊಹಂ ಅವಳೂ ಬಂದಿರಲಿಲ್ಲ. ಇಷ್ಟೇ ಅಲ್ಲ ಅರ್ಜುನನಿಗೆ ಅವಳೇ ನಿಯಂತ್ರಿಸುತ್ತಿರಬಹುದೆಂಬುದನ್ನು ಕೇಳಿ ತತ್ತರಿಸಿ ಹೋದ ನಾನು ಆ ಇಡೀ ತಿಂಗಳು ಆ ಬಗ್ಗೆ ತೀವ್ರ ತಲೆಕೆಡಿಸಿಕೊಂಡಿದ್ದೆ. ಅರ್ಜುನನ ಜೊತೆ ಇವಳ ಸಮಾಗಮ ನಮ್ಮ ಮನೆಯಲ್ಲಿ ಆದಾಗ ನಾನು, ಮಲ್ಲಿಕಾ+ಅರ್ಜುನ = ಮಲ್ಲಿಕಾರ್ಜುನ ಎಂದಾಗುತ್ತದೆ. ಅಂದರೆ ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ವಚನದಂತೆ ಅವರ ದಾಂಪತ್ಯ ಸದಾ ಅನ್ಯೋನ್ಯವಾಗಿರಲೆಂದು ಹಾರೈಸಿ, ಆ ಬಗ್ಗೆ ಅವರಿಬ್ಬರ ವಚನ ತೆಗೆದುಕೊಂಡಿದ್ದೆ. ಇದೆಲ್ಲ ನೆನಪು ನನ್ನನ್ನು ಬಹಳಷ್ಟು ಕಾಡಿದಾಗಲೆಲ್ಲ ನಾನು ಒಬ್ಬನೆ ವಾಕಿಂಗ್ ನೆಪಮಾಡಿ ದೂರ ಹೋಗಿ ಕಣ್ಣೀರು ಹಾಕಿದ್ದೆ. ಯಾಕೆ ಅರ್ಜುನ ಹೀಗಾದ? ಏನಾಯಿತು ಮಲ್ಲಿಕಾಳಿಗೆ? ನನ್ನನ್ನು ತೀವ್ರ ಕಾಡಿದ ಯಕ್ಷ ಪ್ರಶ್ನೆಗಳಿವು. ಚಿಂತಿಸಿ ಚಿಂತಿಸಿ ಸಾಕಾಗಿ ಕೊನೆಗೆ ನನಗೆ

ನಾನೇ ಒಂದು ಸಿದ್ಧಾಂತವನ್ನು ಕಂಡುಕೊಂಡೆ. ಬಹುಶಃ ಬಹುಪಯೋಗಿಯಾದವನಿಂದ ಅತೀ ಲಾಭ ಪಡೆದ ಬಹುತೇಕರು ಹೀಗೆಯೇ ಬಿಹೇವ್ ಮಾಡಬಹುದೆಂದು ಒಂದು ನಡತೆಯ ಚೌಕಟ್ಟನ್ನು ಕಲ್ಪಿಸಿಕೊಂಡಿದ್ದೇನೆ. ಈಗ ಆ ಚೌಕಟ್ಟಿಗೆ/ಮಾದರಿಗೆ ಸರಿ ಹೊಂದುವ ಪ್ರಹಸನವೊಂದನ್ನು ವಸಂತಕುಮಾರನ ನಡತೆಯಲ್ಲಿ ನೀನು ಕಂಡುಕೊಂಡಿದ್ದೀಯ ಅಷ್ಟೇ. ನೋಡು ಜೀವನದಲ್ಲಿ ತೀರ ನೊಂದವರು, ಬೆಂದವರು, ದಿಕ್ಕುಗಾಣದಂತಾದವರು ಅಥವಾ ದಿಕ್ಕು ಗೆಟ್ಟವರು ತಮ್ಮ ಸಹಾಯಕ್ಕಾಗಿ ಎಲ್ಲೆಲ್ಲಾ ಯಾರನ್ನೆಲ್ಲ ಸಂಪರ್ಕಿಸುತ್ತಿರುತ್ತಾರೆ. ಆಗ ಸಹಜ ಉದಾರಿಗಳಾದವರು ಇಂತಹವರ ಬಗ್ಗೆ ಕರಗಿ ಕನಿಕರಪಟ್ಟು ನೊಂದವರ ಸಾಂತ್ವನದಷ್ಟೇ ತಮ್ಮ ಮನ ಸಮಾಧಾನಕ್ಕಾಗಿಯಾದರೂ ಸಹಾಯಹಸ್ತ ಚಾಚಿ ಎಲ್ಲ ಆಶ್ರಯ ನೀಡಿರುತ್ತಾರೆ. ಆದರೆ ಅದೇ ಆ ತೊಂದರೆಗಳೆಲ್ಲ ಕಾಣೆಯಾದ ಮೇಲೆ ಆಕಸ್ಮಾತ್ ಅವರೇ ಇವರಿಗಿಂತ ಉತ್ತಮ ಸ್ಥಿತಿಗೆ ಬಂದು ಬಿಟ್ಟರೆ ಬಹುಶಃ ಅವರಿಗೆ ತಮ್ಮ ಗತಕಾಲದ ನೆನಪು ಬೇಕಿಲ್ಲವೆನಿಸುತ್ತದೆ. ಸಹಾಯ ಮಾಡಿದ ನಮ್ಮಂತಹವರು ಅವರಿಗೆ ಅವರ ನೋವಿನ ದಿನಗಳನ್ನು ಮರುಕಳಿಸುವಂತೆ ಮಾಡುತ್ತೇವಲ್ಲವೇ? ಆದುದರಿಂದಲೇ ಹೀಗಾಗುವುದು. ಇದು ಮನುಷ್ಯ ಸ್ವಭಾವ, ಸಹಜ ಕ್ರಿಯೆ," ಇದನ್ನು ತೀರ ಆಸಕ್ತಿಯಿಂದ ಕೇಳುತ್ತಿದ್ದ ಮಹೇಶನಿಗೆ ಅದು ಅಕ್ಷರಶಃ ಸತ್ಯವೆಂದನಿಸಿತು. ಕೊಂಚ ಸಮಾಧಾನದಿಂದ ಮೇಲೆದ್ದ, ವೆಂಕಟೇಶನಿಗೆ ಬೈ ಹೇಳಿ ಮನೆ ಸೇರಿದ.

* * *

ಮರುದಿನ ಕಚೇರಿಗೆ ಬಂದಾಗ ಇನ್ನೂ ಮೇಜಿನ ಮೇಲಿದ್ದ ವಸಂತಕುಮಾರನ ಮಗನ ವಿವರಗಳ ಪೇಪರ್ ಮಹೇಶನನ್ನು ಸ್ವಾಗತಿಸುತ್ತಿತ್ತು. ತೊಲಗಾಚೆ ಪೀಡೆ ಎನ್ನುವುದೇ? ಛೇ ಸಲ್ಲದು. ಅವರ ನೋವುಗಳ ನೆನಪಾದ ನಾವು ಅವರಿಗೆ ನೋವಾದಾಗ ಮಾತ್ರ ನೆನಪಾಗುತ್ತೇವಲ್ಲವೇ ಎಂಬುದು ಮರುಕಳಿಸಿ ಧಾರವಾಡ ಎಸ್.ಪಿ.ಗೆ ಫೋನ್ ಮಾಡಲು ರಿಸೀವರ್ ಎತ್ತಿಕೊಂಡ. ಇಪ್ಪತ್ತಾರು ವರ್ಷಗಳ ಹಿಂದಿನ ಅದೇ ಮ್ಲಾನ ಮುಖವೊಂದು ಅವನೆದುರು ಕ್ರಮೇಣ ಗೋಚರಿಸತೊಡಗಿತು.

❖

# ಘಾತ

ಹುಸೇನಸಾಬ ಮಾಸ್ತರರ ಎಂದಿನ ವಾಕಿಂಗ್ ಅಂದು ಸುಖಕರವಾಗಲಿಲ್ಲ. ಚುಮು ಚುಮು ಬೆಳಗಿನ ಹೊತ್ತಿನಲ್ಲಿ, ತಮ್ಮ ದಿನಚರಿಯ ಅವಿಭಾಜ್ಯ ಅಂಗವಾದ ಗಾಳಿಹವಾ ಸೇವನೆಯ ಕನಕಾಪುರ ರಸ್ತೆಯ ಈ ವಾಕಿಂಗ್‌ನಲ್ಲಿ ಇಂದು ಕರೆಂಟು ಶಾಕ್ ಹೊಡೆದಂತೆ ಅವರಿಗೆ ಲೈನ್‌ಮನ್ ನಾಗಣ್ಣನ ಹೆಣ ಗೋಚರಿಸಬೇಕೆ? ಲೈಟಿನ ಕಂಬದ ಕೆಳಗೆ ಯಾರೊ ಮಲಗಿದ್ದಾರಲ್ಲ ಇನ್ನೂ, ಸೂರ್ಯವಂಶಿಗಳು ಎಂದು ಸಮೀಪ ಹೋಗಿ ನೋಡಿದರೆ, ತೆರೆದ ಬಾಯಿ, ವಕ್ರ ಕಣ್ನೋಟ, ತಟಸ್ಥ ದೇಹದ ಈ ವಿರಾಟ್ ಸ್ವರೂಪ, ತಮ್ಮ ಇಡೀ ದೇಹದ ಕರೆಂಟ್ ಒಮ್ಮೆಲೇ ಹೋದಂತೆ ಮಾಸ್ತರರು ಸಿಮೆಂಟಿನ ಲೈಟ್ ಕಂಬದಂತೆ ಸ್ತಬ್ದ ಚಿತ್ರವಾದರು. ತುಸು ಹೊತ್ತಿನ ನಂತರ ಜೋರಾಗಿ ಉಸಿರಾಡತೊಡಗಿದ ಅವರು, ತಾವಿನ್ನೂ ಸತ್ತಿಲ್ಲ ನಾಗಣ್ಣನ ಜೊತೆಗೇ ಎಂದು, ಎದೆಗೆ ಕೈ ಹಚ್ಚಿಕೊಂಡು ಖಾತ್ರಿ ಮಾಡಿಕೊಂಡರು. ತಮ್ಮಷ್ಟಕ್ಕೆ ತಾವೇ ಪುನರ್ಜನ್ಮದ ಶಕ್ತಿ ಮರುಕಳಿಕೆಯನ್ನು ಅನುಭವಿಸುತ್ತ. ಪಟಪಟನೆ ಮರಳಿ ಊರಕಡೆ ದಾಪುಗಾಲು ಹಾಕಿದರು. ಒಂದೂವರೆ ಕಿಲೋಮೀಟರ್ ದೂರವನ್ನು ಕೇವಲ 11 ಮಿನಿಟುಗಳಲ್ಲಿ ತಲುಪಿ ಮಸೀದಿಯ ಮುಂದಿರುವ ದೊಡ್ಡಪ್ಪನ ಮನೆ ಬಾಗಿಲು ಬಡೆದರು. ಅಲ್ಲಿ ಸ್ಫೋಟಿಸಿದ ನಾಗಣ್ಣನ ಸಾವಿನ ಸುದ್ದಿ, ಊರು ಏಳುವ ಮೊದಲೇ ಓಣಿ ಓಣಿಗಳಲ್ಲಿ ಗುನುಗುನಿಸಿತು. ಮೊದಮೊದಲು ಕೇವಲ ಹಿರಿಯರ ಬಾಯಿಗೆ ಸೀಮಿತವಾಗಿದ್ದದ್ದು, ಕೆಲ ಕಿರಿಯರ ಕಿವಿಗೂ ಬೀಳುತ್ತಲೇ, ಕಾಲಿಗೂ ಸುದ್ದಿಯ ವಿದ್ಯುತ್ ಸಂಚರಿಸಿ, ಹೆಣ ಬಿದ್ದಕಡೆ ಅವರ ಓಟಕಿತ್ತರು.

ಸೂರ್ಯನ ಕಿರಣಗಳು ನಾಗಣ್ಣನ ಶವವನ್ನು ಪೂರ್ತಿ ಸ್ಪರ್ಶ ಮಾಡುವ ಮೊದಲೇ ಊರಿನ ಹಿರಿಕಿರಿಯರೆಲ್ಲ ಸುತ್ತರ ಜಮಾಯಿಸಿ, ಜೀವಂತ ಗೋಡೆ ನಿರ್ಮಿಸಿ, ಹೆಣ ವೀಕ್ಷಣೆಯಲ್ಲಿ ಆ ಸೂರ್ಯದೇವನಿಗೂ ಪೈಪೋಟಿ ಒಡ್ಡಿದರು. ಸೂರ್ಯನ ಬಿಸಿಲು ಪೂರ್ತಿ ಆ ಜಡ ದೇಹದ ಮೇಲೆ ಬಿದ್ದು, ಹೆಣದ ಸಮ್ಯಕ್ ದರ್ಶನ ಮಾಡಿಕೊಳ್ಳಲು ಆ ಸೂರ್ಯ ಕೂಡಾ ಜನರ ನೆಟ್ಟ ನೆತ್ತಿ ಮೇಲೆ ಬರುವ ತನಕ ತಾನೇ ಕಾಯಬೇಕಾಯಿತು. ಅಷ್ಟೊತ್ತಿಗಾಗಲೇ ಸುದ್ದಿ ಗಾಳಿಯ ಬೆನ್ನೇರಿ, ತನಗೆ ಬೇಕಾದ, ಬೇಡವಾದ ಊಹಾಪೋಹದ ಸುಗಂಧ, ದುರ್ಗಂಧಗಳನ್ನು ಪೂಸಿಕೊಂಡು ತಾಲ್ಲೂಕು ಕೇಂದ್ರಕ್ಕೂ, ಪೋಲೀಸು ಠಾಣೆಗೂ ತಲುಪಿಬಿಟ್ಟಿತು. ಪರ ಊರಿನವರ ಸಾವಿನ ಸುದ್ದಿ ಬೇರೆಯವರಿಗೆ ಒಂದಿನಿತೂ ಇಷ್ಟದ ವಸ್ತುವಾಗದಿದ್ದರೂ, 'ಧಡಲ್‌ಬಾಜಿ' ದೈನಿಕದ ಮುದ್ರಕ, ಸಂಪಾದಕ, ಪ್ರಕಾಶಕ ಮೇಲೆ ವಿತರಕ ಸುಬ್ಬಣನಿಗೆ ಮೃಷ್ಟಾನ್ನ ಭೋಜನದಂತೆ, ಅಯಾಚಿತವಾಗಿ ದಕ್ಕಿದ ದೇವರ ವರದಂತೆ ಗೋಚರಿಸಿಬಿಟ್ಟಿತು.

ಕೆಲ ತಿಂಗಳ ಹಿಂದೆಯೇ ಕೆ.ಇ.ಬಿ.ಯಲ್ಲಿಯ ಕುತಂತ್ರದ ಬಗ್ಗೆ ತಹಸೀಲಾಫೀಸಿನ ಭಯಂಕರ ಭ್ರಷ್ಟಾಚಾರದ ಬಗ್ಗೆ, ಪೋಲೀಸರ ದುರಾಡಳಿತದ ಬಗ್ಗೆ, ಇತ್ಯಾದಿ ಹೀಗೆಯೇ ಮುದ್ರಿಸಿ ಅಗಾಧ ಜನಪ್ರಿಯತೆ ಗಳಿಸಿಕೊಂಡಿದ್ದ ಸುಬ್ಬಣ್ಣನಿಗೆ, ನಾಗಣ್ಣ ಸತ್ತಿದ್ದು ಸಂತೋಷದ ಹಾಗೂ ಅಷ್ಟೇ ಚಾಲೆಂಜಿನ ಒಂದು ಪ್ರಕರಣ ಎನಿಸತೊಡಗಿತು. ಸೆಕೆಂಡ್ ಹ್ಯಾಂಡ್ ಮಾರುತಿ ವ್ಯಾನ್ ಒಂದನ್ನು ಕೊಂಡುಕೊಳ್ಳಲು ಇನ್ನೂ ಮೂವತ್ತು ಸಾವಿರ ಕೂಡಿಸಬೇಕಿದ್ದ ಆತನ ಮನಸ್ಸು ಒಮ್ಮೆಲೇ ಅದರ ಬದಲಾಗಿ ಹೊಸದನ್ನೇ ಕೊಳ್ಳುವ ತವಕ ತೋರಿಸತೊಡಗಿತು. ತಕ್ಷಣ ಆತ, ಇಪ್ಪತ್ತು ಕಿಲೋಮೀಟರ್ ದೂರವಿದ್ದ ಲೈನಮನ್ ನಾಗಣ್ಣನ ಹಳ್ಳಿಗೆ ಬಸ್ ಹಿಡಿದ. ಆದರೆ ಆತನ ಮನೋಲಹರಿ ಮಾತ್ರ. ಹೊಸಕಾರಿನಿಂದ ಕೆಳಗಿಳಿಯಲೇಯಿಲ್ಲ. ಹೋದ ದೀಪಾವಳಿಯಲ್ಲೇ ನಾಗಣ್ಣ ತನಗೊಂದು ಜೊತೆ ಶರ್ಟ್, ಪ್ಯಾಂಟ್ ಬಟ್ಟೆ ಕೊಟ್ಟಿದ್ದನಲ್ಲವೇ? ಆಗಲೇ ಆತನ ಮನೆಯಲ್ಲಿಯ ವಸ್ತುಗಳನ್ನು ನೋಡಿ ತಾನೇನಂದಕೊಂಡಿದ್ದ? ಅದು ಒಬ್ಬ ಭಾರಿ ಶ್ರೀಮಂತರ ಮನೆಗೇನೂ ಕಡಿಮೆ ಇರಲಿಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರ್ರೋ, ಮತ್ತಾವುದೋ ಗೆಜೆಟೆಡ್ ಅಧಿಕಾರಿಯ ಮನೆಯೊಡನೆಯೊ ಹೋಲಿಸುವಂತಹದ್ದಿತ್ತು. ತನ್ನ ಮನೆಯೂ ಯಾವಾಗ ಹಾಗಾಗುತ್ತದೆಯೋ, ತಾನಿನ್ನು ಮೇಲೆ ಯಾವ ಅಧಿಕಾರಿ, ರಾಜಕಾರಣಿಗಳ ಗೆಳೆತನವನ್ನು ಮಾಡಬಾರದು. ಆದಷ್ಟು ದೂರವಿದ್ದು ಆಟ ಆಡಿಸಬೇಕವರಿಗೆ, ಸಲಿಗೆ ಬೆಳೆಸಿದರೆ ತನ್ನ ಬಗ್ಗೆ ಉದಾಸೀನತೆ, ನಿರ್ಲಕ್ಷ್ಯ ಬಂದುಬಿಟ್ಟೀತೆಂದು ವಿಚಾರಿಸುತ್ತ, ಕಾರು, ಬಂಗ್ಲೆ, ಆಳುಕಾಳು, ದೊಡ್ಡ ಪ್ರಿಂಟಿಂಗ್ ಪ್ರೆಸ್, ವಿತರಣಾ ವಾಹನಗಳು, ಇತ್ಯಾದಿಗಳ ಬಗ್ಗೆಯೇ ಸುತ್ತಾಡಿದ ಆತನ ಮನಸ್ಸು ಬಸ್ ನಿಂತಾಗಲೇ ತನ್ನ ನಾಗಾಲೋಟ ನಿಲ್ಲಿಸಿತು.

ಪರವೂರಿನಿಂದ ಬಂದ ಪ್ರಥಮ ಪ್ರೇಕ್ಷಕ ಸುಬ್ಬಣ್ಣನೇ, ಊರಿನ ಮಾಜಿ ಸರಪಂಚ ರುದ್ರಗೌಡರನ್ನು ನೋಡಿ, ಅವರು ಎರಡೂ ಕೈ ಜೋಡಿಸಿ ನಮಸ್ಕರಿಸಿದಾಗ ಒತ್ತಾಯಪೂರ್ವಕವಾಗಿ ಒರಟುತನವನ್ನು ತಂದುಕೊಂಡು, ಹಾಗೆಯೇ ಗೋಣು ಹಾಕಿ, ವಿಪರೀತ ಕೆಲಸದಲ್ಲಿರುವವನಂತೆ ಸೀದಾ ಶವದ ಕಡೆಗೆ ನಡೆದ. ಕೊರಳಲ್ಲಿಯ ಯಾಶಿಕಾ ಕೆಮರಾದಿಂದ ವಿವಿಧ ಕೋನಗಳಲ್ಲಿ ಅದರ ಹಲವಾರು ಫೋಟೋ ಕ್ಲಿಕ್ಕಿಸಿದ. ಹೆಣದ ಮೇಲೆಯೇ ಕೇಂದ್ರೀಕೃತವಾದ ಜನರ ಲಕ್ಷ್ಯ ಬೇರೆಡೆ ವಾಲಿಸಲಿಲ್ಲ. ಆ ಸಾವಿನ ಜಾಡು ಹಿಡಿದು, ಯಾವ ಯಾವುದೋ ವಿಚಾರ ಲೆಕ್ಕಾಚಾರಗಳ ಹುನ್ನಾರ ಹಾಕತೊಡಗಿದ್ದ, ಹುಟ್ಟು ಸಾವುಗಳ ನಡುವಿನ ಅಂತರ ಎಷ್ಟೊಂದು ಅತ್ಯಲ್ಪ ಎಂಬ ವಾದವನ್ನು ಪುಷ್ಟೀಕರಿಸುವಂತೆ ತದೇಕಚಿತ್ತದಿಂದ ತನ್ನ ವ್ಯೂಹ ರಚನಾ ಕಾರ್ಯದಲ್ಲಿ ಮಗ್ನನಾಗಿದ್ದ. ನಾಗಣ್ಣನ ಸಾವು ಬೀಜಾಸುರನ ರಕ್ತದ ಹನಿಗಳಂತೆ ವಿಧವಿಧದ ಯೋಜನೆಗಳನ್ನು ಹುಟ್ಟುಹಾಕತೊಡಗಿತ್ತು. ಈಗ ಆತನ ತನ್ನ ಬಿಗಿ ಧೋರಣೆಯನ್ನು ತುಸು ಸಡಿಲಿಸಿ, ಮೃದು ಮಾಡಿಕೊಳ್ಳಲು ಪ್ರಯತ್ನಿಸಿದ. ಹಾಗೆಯೇ ಕೆಲ ಹಿರಿಯರನ್ನು ಪ್ರಶ್ನಿಸಲೂ ಉದ್ದೇಶಿಸಿದ.

ಯಾರನ್ನೇ ಕೇಳಿದರೂ, ಅದೊಂದು ಅಪಘಾತವೆಂದೋ, ಸಹಜ ಸಾವು ಎಂದೂ ಉತ್ತರ. ಅಂದರೆ ವಿದ್ಯುತ್ ಕಂಬವನ್ನೇರಿದ ನಾಗಣ್ಣ, ಅಲ್ಲಿನ ಕರೆಂಟಿನ ಶಾಕ್‌ನಿಂದಲೇ ಸತ್ತ ಎಂಬುದು. ಏಕಮೇವ ಪ್ರಥಮ ಹಾಗೂ ಪ್ರತ್ಯಕ್ಷದರ್ಶಿ ಹುಸೇನಸಾಬ ಮಾಸ್ತರರಂತೂ ಇದೇ ಅಭಿಪ್ರಾಯ ಬಿಟ್ಟು ಬೇರೇನನ್ನೂ ಹೇಳಲು ತಯಾರಿರಲಿಲ್ಲ. ಆದರೆ ಸುಬ್ಬಣ್ಣನ ತರ್ಕ ತಕ್ಷಣ ಬೇರೆ ಜಾಡನ್ನು ಹಿಡಿಯತೊಡಗಿತ್ತು. ಪ್ರಶ್ನೆಗಳ ಸುರಿಮಳೆಯಿಂದ ತನಗೆ ಬೇಕಾದ ಪೈರು ಬೆಳೆಯಲಾರದೆಂದು ಮನಗಂಡು ಆತ ಬೇಗ ಬೇಗ ಎಲ್ಲ ಕೆಲಸ ಮುಗಿಸಿಕೊಂಡು ತಿರುಗಿ ತನ್ನ ಮುದ್ರಣಾಲಯಕ್ಕೆ ಬಂದ. ಯೋಚನೆಗೆ ಮೂರ್ತರೂಪ ಕೊಡಲು ಸಿಗರೇಟ್ ಸೇದುವ ಹವ್ಯಾಸ ಬೆಳೆಸಿಕೊಂಡಿದ್ದರಿಂದ ಆಗಲೇ ಒಂದೆರಡು ಪ್ಯಾಕೆಟ್ ಮುಗಿಸಿಯೂ ಬಿಟ್ಟಿದ್ದ. ಇದು ಎಲ್ಲರೆನ್ನುವಂತೆ ಸಹಜ ಸಾವೇ ಆಗಿದೆಯೆಂದು ವರದಿ ಮಾಡಿಬಿಟ್ಟರೆ..... ಅದೇನು ಸ್ವಾರಸ್ಯ? ಅದಕ್ಕಿಂತಲೂ ಹೆಚ್ಚು ಏನು ಲಾಭ? ಹೊಸ ಕಾರು..... ಬಂಗ್ಲೆ..... ಇವೆಲ್ಲ ಇನ್ನೂ ಎಷ್ಟು ದಿವಸ? ನಾಗಣ್ಣನ ಸಾವು ಸಾವೇ ಅಲ್ಲ...... ಅದು ಕೊಲೆ ಎಂದು ಆಗಿಬಿಟ್ಟರೆ...... ಈಗ ಆತ ತಡ ಮಾಡಲಿಲ್ಲ. ಅದು ಕೊಲೆಯೇ ಎಂದು ನಿರ್ಧರಿಸಿ, ತನ್ನ ಊಹಾ ಯೋಜನೆಯ ಮಹಲಿಗೆ ಬುನಾದಿ ಹಾಕಿದ. ಅದಕ್ಕೆ ಬೇಕಾಗುವ ಸಾಹಿತ್ಯ, ಸಲಕರಣೆ, ಸಾಮಾಗ್ರಿಗಳ ಬಗ್ಗೆ ತಲೆಕೆಡಿಸಿಕೊಳ್ಳತೊಡಗಿದ. ಕೇಂದ್ರಿಕೃತ ಸಾದಾಬಿಸಿಲಿನ ಕಿರಣಗಳೇ ಕೆಳಕ್ಕೆ ಹಿಡಿದ ತೆಳು ಹಾಳೆಯನ್ನು ಸುಟ್ಟು ಹಾಕುವಂತೆ, ಸುಬ್ಬಣ್ಣನ ಗಹನ ವಿಚಾರದಿಂದಾಗಿ ಕೆ.ಇ.ಬಿ. ಕಚೇರಿಯ, ಇಡೀ ತಾಲ್ಲೂಕಿನ ಚಿತ್ರದ ಮುಂದೆ ಹಿಡಿದ ಪರದೆ ಸರಿದುಹೋಗಿ ಒಂದು ಸ್ಪಷ್ಟ ದೃಶ್ಯ ಗೋಚರವಾಗತೊಡಗಿತು. ತಾಲ್ಲೂಕಿನ ಇಲಾಖಾ ಹೆಡ್ (ತಲೆ) ಎ.ಇ.ಇ.ಯಿಂದ ಹಿಡಿದು (ಪಾದ) ಲೈನ್‌ಮನ್‌ಗಳವರೆಗೂ ತನಗೆ ಗೊತ್ತಿದ್ದ, ಗೊತ್ತಿಲ್ಲದ ಎಲ್ಲರನ್ನೂ ಸ್ಮರಿಸಿಕೊಂಡ. ಅಧಿಕಾರಿಗಳು, ನೌಕರರು, ಅವರ ಕುಟುಂಬದವರು ಹೀಗೆಯೇ... ಹಾಂ, ಹೌದು, ಇವರೆಲ್ಲರಲ್ಲಿ, ಈಗಿನ ಸಂದರ್ಭಕ್ಕೆ, ನಾಗಣ್ಣನ ಹೆಂಡತಿ ಬಹು ಪ್ರಮುಖ ವ್ಯಕ್ತಿ ಎಂದಂದುಕೊಂಡ. ಹೋದ ವರ್ಷ ತಾನು ಅವರ ಮನೆಗೆ ಹೋದಾಗ ನೋಡಿದ್ದ ಅವಳನ್ನು ನಾಗಣ್ಣ ಐವತ್ತು ಸಮೀಪಿಸುತ್ತಿದ್ದರೂ ಅವರ ಹೆಂಡತಿ ಮಾತ್ರ ಮೂವತ್ತರ ಸಮೀಪವಿರಬಹುದೆನಿಸುವಷ್ಟು ಅಂತರ ಅವರಿಬ್ಬರ ವ್ಯಕ್ತಿತ್ವದಲ್ಲಿ. ಇಲ್ಲಿಯೇ ಇದೆ ಪಾಯಿಂಟ್ ಎಂದಂದುಕೊಂಡ. ನಾಗಣ್ಣನ ಮೇಲಧಿಕಾರಿ, ಜೆ.ಇ, ಬಹಳ ಕಿರಿ ವಯಸ್ಸಿನವ. ಎಂಟ್ಹತ್ತು ವರ್ಷ ಸರ್ವೀಸ್ ಆಗಿರಬೇಕಷ್ಟೇ. ಎಷ್ಟು ಕೊಬ್ಬು ಅವನಿಗೆ, ಬಲೆ ಹಾಕಲೇಬೇಕು. ಬಿಡಬಾರದು ಅವನನ್ನು ಎಂದಂದುಕೊಂಡ. ಒಂದು ಕಲ್ಲಲ್ಲಿ ಎರಡಲ್ಲ ಮೂರು ಹಕ್ಕಿ, ಮೂರೇ ಯಾಕೆ, ನೂರು ಹಕ್ಕಿ ಹೊಡೆವಷ್ಟು ತನಗೆ ತಾಕತ್ತು ಬರುತ್ತಿದೆ ಎಂದೆನಿಸಿತವನಿಗೆ.

ಪಂಚನಾಮಾ, ಪೋಸ್ಟ್‌ಮಾರ್ಟಂ ಇತ್ಯಾದಿ ಎಲ್ಲ ಮುಗಿಸಿ, ಶವಸಂಸ್ಕಾರಕ್ಕೆ ಅನುವು ಮಾಡಿಕೊಟ್ಟು, ಉಸ್ಸೆಪ್ಪಾ ಎಂದು ಪೊಲೀಸರು ಎರಡು ದಿನ ನಿರುಮ್ಮಳವಾಗಿದ್ದರೆ, ಇಂದು ಎಸ್.ಐ., ಟೇಬಲ್ ಮೇಲಿಟ್ಟ ದೈನಿಕ 'ಧಡಲ್ ಬಾಜಿ'ಯ ಕಪ್ಪು ದಪ್ಪಕ್ಷರಗಳು, 'ನಾಗಣ್ಣನ ಕೊಲೆ ಸಹಜ ಸಾವಾಗಿ ಮಾರ್ಪಾಟು' ಎಂದು ಉಲ್ಲೇಖಿಸಬೇಕೆ? ಬಿಸಿಲಲ್ಲು ನಡುಕ ಅನುಭವಿಸಿದ ಎಸ್.ಐ., ಕೆಳಗಿನ ವಿವರಗಳನ್ನೂ ಓದದೆ ಸೀದಾ ಇನ್ಸ್‌ಪೆಕ್ಟರ್ ಕಡೆ ದೌಡಯಿಸಿದ. ಆಗಲೇ ಸಾಕಷ್ಟು ಸರ್ವೀಸ್ ಆಗಿದ್ದ ಇನ್ಸ್‌ಪೆಕ್ಟರ್ ಅವರು, ತಮ್ಮ ಮುಖದಲ್ಲಿ ದುಗುಡ ತೋರಿಸದೇ ತುಸು ಆತಂಕದಿಂದಲೇ ವಿವರಗಳನ್ನು ಓದತೊಡಗಿದರು.

ವರದಿಯಲ್ಲಿ ಎಲ್ಲ ಏರುಪೇರಾಗಿತ್ತು. ಮಜಾದ ಮನುಷ್ಯ ಯುವ ಜೆ.ಇ.ಗೂ ದಿವಂಗತ ನಾಗಣ್ಣನ ಹೆಂಡತಿಗೂ ಅನೈತಿಕ ಸಂಬಂಧವಿತ್ತೆಂದೂ ನಾಗಣ್ಣ ಅದಕ್ಕೆ ಅಡ್ಡ ಬಂದಿದ್ದರಿಂದ ಅವನನ್ನು ಸಂಚು ಮಾಡಿ ಕೊಲೆ ಮಾಡಲಾಗಿದೆಯೆಂದೂ ಅದರಲ್ಲಿ ತೀವ್ರ ಸಂಶಯ ವ್ಯಕ್ತಮಾಡಲಾಗಿತ್ತು. ಲೈನ್ ಮನ್ ನಾಗಣ್ಣ ಲೈಟ್ ಕಂಬ ಏರುವುದು ಗೊತ್ತಾಗಿಯೇ ಆ ಕಂಬದ ವೈರ್‌ಗಳಲ್ಲಿ ವಿದ್ಯುತ್ ಹರಿಸಲಾಗಿತ್ತೆಂದೂ, ಅದರಿಂದಲೇ ನಾಗಣ್ಣ ಶಾಕ್ ಹೊಡೆದು ಸತ್ತಿದ್ದೇ ಹೊರತು ಬೇರೇನೂ ಅಲ್ಲ ಎಂಬುದನ್ನು ಮುಖ್ಯಾಂಶಗಳಲ್ಲಿ ಬರೆಯಲಾಗಿತ್ತು. ನಾಗಣ್ಣ ಸತ್ತ ಮರುದಿನವೇ ತಮಗೊಂದು ಅನಾಮಿಕ ಪತ್ರ ಬಂತೆಂದೂ ಅದರ ಗುಮಾನಿಯ ಜಾಡು ಹಿಡಿದು ಗೌಪ್ಯ ವಿಚಾರಣೆ ಮಾಡಲಾಗಿ, ಈ ಸ್ಫಟಿಕದಂತಹ

ಮೇಲ್ನೋಟದ ಸತ್ಯ ಹೊರಬಿತ್ತೆಂದೂ ಸಂಪಾದಕರು ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಆದಾಗ್ಯೂ, ಹೆಚ್ಚಿನ ತನಿಖಾ ವಿವರಗಳಿಗೆ ಮುಂದಿನ ಸಂಚಿಕೆ ನೋಡಲೂ ತಿಳಿಸಿದ್ದರು.

ಇದೇ ಸುದ್ದಿಯನ್ನು ಓದಿದ ಜೆ.ಇ.ಯ ಜಂಘಾಬಲವೇ ಉಡುಗಿಹೋಯಿತು. ಈಗ ತನ್ನ ನೌಕರಿ ಉಳಿಸಿಕೊಳ್ಳುವ ತೀವ್ರ ಚಿಂತೆ ಶುರುವಾಯಿತವನಿಗೆ. ತನ್ನ ಮೇಲಧಿಕಾರಿಗಳನ್ನೆಲ್ಲಾ ನೆನೆಸಿಕೊಂಡ ಅವನಿಗೆ, ಹೊಸದಾಗಿ ಅಧಿಕಾರ ವಹಿಸಿಕೊಂಡ ನಿಗಮದ ನಿರ್ದೇಶಕರ ಚಿತ್ರ ಕಣ್ಮುಂದೆ ಬಂತು. ಒಂದೆ ಒಂದು ವಾರದಲ್ಲೇ ಇಬ್ಬರು ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ನಾಲ್ಕು ಅಸಿಸ್ಟೆಂಟ್ ಇಂಜಿನಿಯರ್‌ಗಳು, ಬಿಲ್ಲಿಂಗ್ ಕ್ಲರ್ಕ್ ಇತ್ಯಾದಿಗಳನ್ನು ಅಮಾನತ್ತುಗೊಳಿಸಿದ ಅವರು, ಈ ಜೆ.ಇ.ಗೆ ನರಕಾಸುರನ ಅಪರಾವತಾರವೇನೋ ಎಂದೆನಿಸತೊಡಗಿದರು. ಇಡೀ ನಿಗಮದಲ್ಲಿ ಎಲ್ಲೇ ಏನೇ ನಡೆದರೂ ತನಗೆ ತಿಳಿಯಲೇಬೇಕೆಂಬ ಇರಾದೆಯಿಂದ ದಿನಕ್ಕೊಮ್ಮೆಯಾದರೂ ಇ.ಇ.ಗಳಿಗೆ, ಚೀಫ್ ಇಂಜಿನಿಯರ್‌ಗಳಿಗೆ ಫೋನಾಯಿಸುವ ಈ ನಿರ್ದೇಶಕರು, ಮೂರು ದಿನ ದೆಹಲಿಯಲ್ಲಿ ಮೀಟಿಂಗ್‌ವೊಂದಕ್ಕೆ ಹೋಗಿದ್ದರಿಂದ ಇನ್ನೂ ತಾನು ಸೇವೆಯಲ್ಲಿದ್ದೇನೆ ಎಂದುಕೊಂಡ ಆ ಜೆ.ಇ. ಆದರೆ ಈ ಅನಿಸಿಕೆ ಬಹಳ ದಿನ ಉಳಿಯಲಿಲ್ಲ. ಅಂದೇ ಸಾಯಂಕಾಲ ಫೋನ್ ಬಂತು. ದೆಹಲಿಯಿಂದ ಬೆಂಗಳೂರಿಗೆ ಹೋಗದೇ ಗೋವಾಕ್ಕೆ ಬಂದು, ಸೀದಾ ಇಲ್ಲಿಗೆ ಬರುವುದಾಗಿ ನಿರ್ದೇಶಕರು ಹೇಳಿದ್ದಾಗಿ ಹುಬ್ಬಳ್ಳಿಯ ಚೀಫ್ ಇಂಜಿನಿಯರ್ ತಿಳಿಸಿ, ಅಂದೇ ರಾತ್ರಿ ಅಡ್ವಾನ್ಸ್ ಕ್ಯಾಂಪಿಗಾಗಿ ತಾವೂ ಶಿರಹಟ್ಟಿಗೆ ಬಂದೇಬಿಟ್ಟರು. ರಾತ್ರಿಯಿಡೀ ವಿಚಾರಿಸಿದರೂ ಆ ಪೇಪರಿನಲ್ಲಿ ಬಂದ ಸುದ್ದಿಯ ಹಿನ್ನೆಲೆ ತಿಳಿಯಲಾಗಲಿಲ್ಲ. ಆದರೆ ಜೆ.ಇ. ಅಂತಹ ಮನುಷ್ಯನಲ್ಲವೆಂಬುದು ಇಲಾಖೆಯ ಎಲ್ಲರ ಒಮ್ಮತದ ಅಭಿಪ್ರಾಯವಾಗಿತ್ತು.

ಪ್ರವಾಸಿ ಮಂದಿರದ ಪೋರ್ಟಿಕೋದಲ್ಲಿ ನಿಂತ ಕರಿಯ ಕಾರಿನಿಂದ ಹೊರಬಂದ ನಿಗಮದ ನಿರ್ದೇಶಕರನ್ನು, ಕೋಣನ ಮೇಲಿಂದ ಕೆಳಗಿಳಿಯುವ ಯಮಧರ್ಮನಂತೆ ಕಲ್ಪಿಸಿಕೊಂಡು, ಮನದಲ್ಲಿ ನೂರಾರು ದೇವರನ್ನು ನೆನೆಯುತ್ತ, ಒಳಗೊಳಗೇ ನಡುಗುತ್ತ ಮೂಲೆಯಲ್ಲಿ ನಿಂತಿದ್ದ ಜೆ.ಇ., ನಾಲ್ಕು ತಾಸಿನ ಪ್ರವಾಸದ ಆಯಾಸದ ಕಿಂಚಿತ್ತೂ ಕುರುಹನ್ನು ತೋರಿಸದ ನಿರ್ದೇಶಕರ ಪ್ರಫುಲ್ಲಿತ ಮುಖ ಕಂಡು ಇದ್ದುದರಲ್ಲಿ ಸ್ವಲ್ಪ ಆಶಾವಾದಿಯಾದ. ಚೀಫ್ ಇಂಜಿನಿಯರ್ ಹಾಗೂ ಇತರ ಹಿರಿಯ ಅಧಿಕಾರಿಗಳ ಜೊತೆ ಸುದೀರ್ಘ ಸಮಾಲೋಚನೆ ಮಾಡಿದ ನಿರ್ದೇಶಕರು, ತಾವು ಹುಬ್ಬಳ್ಳಿ, ಬೆಂಗಳೂರಿಗೆ ಫೋನ್ ಮಾಡಿ ಮಾತನಾಡಬೇಕಿದೆ ಎಂದು ಹೇಳಿ, ಕೋಣೆಯಲ್ಲಿ ಒಬ್ಬರೇ ಬಾಗಿಲು ಹಾಕಿಕೊಂಡರು. ತಮ್ಮ ಹಳೆಯ ಸ್ನೇಹಿತ ಪತ್ರಕರ್ತರೊಂದಿಗೆ ಫೋನ್‌ನಲ್ಲಿ ಚರ್ಚಿಸಿದರು.

ಆ ಸುದೀರ್ಘ ಸಮಾಲೋಚನೆಯಲ್ಲಿ ಯತಿರಾಜ್, ಶಿವಾಜಿರಾವ್ ಬಹು ಉಪಯುಕ್ತ ಸಲಹೆ ನೀಡಿದರು. ಅವರ ಪ್ರಕಾರ, ರಾಜಕಾರಣಿಗಳು, ಅಧಿಕಾರಗಳು, ತಮ್ಮಂತಹ ದೊಡ್ಡ ಪತ್ರಿಕೆಯವರಿಗೆ ಹೆದರಬೇಕಿಲ್ಲವಂತೆ. ಯಾಕೆಂದರೆ ಅವರು ಯಥಾವತ್ತಾಗಿ ಹಾಗೂ ಸತ್ಯಕ್ಕೆ ಸಮೀಪವಿರುವ ವಿಷಯಗಳನ್ನು ಮಾತ್ರ ವರದಿ ಮಾಡಬೇಕಾಗುತ್ತದಂತೆ. ತಿರುಚಿ ತಿರುಚಿ ಬರೆಯುವುದು ಅವರಿಗೆ ಸಾಧ್ಯವಿಲ್ಲವಂತೆ, ಆದರೆ ಅದೇ ವರದಿಗಾರ, ಸಂಪಾದಕ, ಪ್ರಕಾಶಕ, ವಿತರಕ ಇತ್ಯಾದಿ ಎಲ್ಲಾ ಆಲ್ ಇನ್ ಒನ್ ಆಗಿರುವವರಿಗೆ ಎಲ್ಲಾ ಸ್ವಾತಂತ್ರ್ಯವೂ ಇರುತ್ತದೆ. ಇದನ್ನೇ ಕೆಲವರು ಸ್ವೇಚ್ಛೆಯಾಗಿಸಿಕೊಂಡಾಗ, ಭ್ರಷ್ಟ ಅಧಿಕಾರಿಗಳು, ನೌಕರರು, ಧುರೀಣರು ಗಡಗಡ ನಡುಗಲೇಬೇಕಾಗುತ್ತದೆ ಅಂತಹವರ ಎದುರು..... ಹೀಗೆ ಎಲ್ಲವನ್ನೂ ವಿವರಿಸಿದರು. ಅದರಂತೆ ನಿರ್ದೇಶಕರು, ಪ್ರೆಸ್ ಆಕ್ಟ್, ಇಂಡಿಯನ್ ಪೀನಲ್ ಕೋಡ್, ಎವಿಡೆನ್ಸ್ ಆಕ್ಟ್ ಎಲ್ಲ ತರಿಸಿ ಆ ಹಿರಿಯ ಪತ್ರಕರ್ತ ಮಿತ್ರರು ಹೇಳಿದ ಸೆಕ್ಷನ್‌ಗಳನ್ನೆಲ್ಲ ತಿರುವಿ ಹಾಕಿ ಹಾಕಿ ಮನನ ಮಾಡಿಕೊಂಡರು.

ಮರುದಿನ ಬೆಳಿಗ್ಗೆಯೇ ಬಂದು ತಮ್ಮೆದುರು ಹಾಜರಾದ ಜೆ.ಇ.ಗೆ ನಿರ್ದೇಶಕರು ಏನೆಂದು ಕಣ್ಸನ್ನೆಯಿಂದಲೇ ಕೇಳಿದಾಗ, ಆತನ ಉಸಿರು ಹೊರಬರುವ ಬದಲು ತಿರುಗಿ ಒಳಸೇರಿ, ಗಂಟಲಲ್ಲೇ ಶಬ್ದಗಳು ಸತ್ತುಹೋಗಿ

ತಡವರಿಸತೊಡಗಿದ. ಸತ್ಯ ಏನೆಂದು ಪ್ರಶ್ನಿಸಿದಾಗ, ಅರೆಬರೆ ನಿಟ್ಟುಸಿರು, ಅರೆಬರೆ ಶಬ್ದಗಳು, ಆತ ವಿವರಿಸತೊಡಗಿದ, "…..ಸರ್ ನಾನೇನೂ ಸತ್ಯಹರಿಶ್ಚಂದ್ರನಲ್ಲ. ಆದರೆ ಇಂತಾ ನೀಚ ಕೆಲಸಕ್ಕೆ ಕೈ ಹಾಕುವವನೂ ನಾನಲ್ಲ. ಅಂತಾ ಧೈರ್ಯ ನನ್ನದಲ್ಲ……. ಈಗೆರಡು ತಿಂಗಳಿಂದ ನೀವು ನಮ್ಮ ನಿಗಮದ ಮಾಸಿಕ 'ಆಶಾ ಕಿರಣ'ದಲ್ಲಿ ನೀಡುವ ಸಂದೇಶವನ್ನು ತಪ್ಪದೇ ಓದುತ್ತಿದ್ದೇನೆ. ನಮ್ಮ ಎಲ್ಲಾ ಹಿರಿಯ ಅಧಿಕಾರಿಗಳನ್ನು ಕರೆ ಕಳಿಸಿ, ಸಾಮೂಹಿಕ ಪ್ರತಿಜ್ಞೆ ಮಾಡಿಸಿ ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲವೆಂದು ಅವರಿಂದ ನೀವು ಪ್ರಮಾಣವಚನ ಪಡೆದಿದ್ದು, ನಾವು ಹಾಗೂ ನಿಗಮ, ಅಧಿಕಾರ ದರ್ಪದಲ್ಲಿ ಮೆರೆಯದೇ ವಿದ್ಯುತ್ ಮಾರುವ ಹಾಗೂ ಸರಕಾರಕ್ಕೆ ಲಾಭ ಮಾಡಿಕೊಡುವ ಒಂದು ಕಮರ್ಷಿಯಲ್ ಏಜೆನ್ಸಿಯಾಗಿ ಕೆಲಸ ಮಾಡಬೇಕು ಎಂದು ಸಾರಿದ್ದು ನನಗೆಲ್ಲ ಗೊತ್ತಿದೆ ಸರ್. ಆದ್ದರಿಂದ ನಾನೂ ಆ ದಿಶೆಯಲ್ಲಿ ಸ್ವಲ್ಪವಾದರೂ ಪ್ರಯತ್ನ ಮಾಡಲೇಬೇಕೆಂದು ಅಂದುಕೊಂಡಿದ್ದೇನೆ ಸರ್. ಲಂಚ ನನ್ನಲ್ಲಿ ಪಾಪಪ್ರಜ್ಞೆ ಮೂಡಿಸುತ್ತಿದ್ದೆ. ನಿಮ್ಮ ಮನೆಯಲ್ಲಿ ಈವರೆಗೂ ಒಂದು ಒಳ್ಳೆಯ ಸೋಫಾ ಕೂಡಾ ಇಲ್ಲ ಎಂದು ಇತ್ಯಾದಿಯಾಗಿ ಬಹಳ ಕೇಳಿದ್ದೇನೆ. ಇದೆಲ್ಲ ನೆನಸಿಕೊಂಡಾಗ ನನ್ನನ್ನು ತೀವ್ರ ಅಪರಾಧಿ ಮನೋಭಾವ ಕಾಡುತ್ತದೆ…..' ಹೀಗೆಯೇ ಹೇಳುತ್ತ ತಾನೂ ಪ್ರಾಮಾಣಿಕ ಪಥದಲ್ಲಿ ಸಾಗುವ ಪ್ರಯತ್ನ ಮಾಡುತ್ತಿರುವುದನ್ನು ಅವರಿಗೆ ಮನವರಿಕೆ ಮಾಡಿಕೊಡಲೆತ್ನಿಸಿದ. ನಡುನಡುವೆ ಬೆವರು ಒರೆಸಿಕೊಳ್ಳುವುದು, ತೊದಲುವುದು, ನಡೆದೇ ಇದ್ದರೂ ತಾನೇನು ಹೇಳಬೇಕೆಂದಿದ್ದನೋ ಅದನ್ನೆಲ್ಲ ಹೇಳಿದ ಸಂತೃಪ್ತಿಯಿಂದ ನಿರ್ದೇಶಕರ ಕೋಣೆಯಿಂದ ಹೊರಬಿದ್ದ ಜೆ.ಇ. ಇತ್ತ ಹೊಸ ಕಾರಿನ ಕನಸನ್ನು ಕಾಣುತ್ತಲೇ, ಆ ಜೆ.ಇ. ತನ್ನೆಡೆಗೆ ಆಗ ಬರಬಹುದು ಈಗ ಬರಬಹುದು ಎಂದು ಕಾದು ಕುಳಿತ ಸುಬ್ಬಣ್ಣನಿಗೆ ಚೂಪು ಮೀಸೆಯ ಪೊಲೀಸ್ ಪೇದೆಯೊಬ್ಬ ಪ್ರತ್ಯಕ್ಷವಾಗಬೇಕೆ?' ಆತ ಸೀದಾ ಬಂದು, ಯಾವುದೋ ಒಂದು ಮೊಹರ್‌ಬಂದ್ ಲಕೋಟೆಯನ್ನು ಸುಬ್ಬಣ್ಣನ ಕೈಗಿತ್ತ, ಆತುರದಿಂದ ಒಡೆದು ನೋಡಬೇಕೆಂದುಕೊಳ್ಳುವಾಗಲೇ, ನಡುವೆಯೇ ತಡೆದು, ಲಕೋಟೆ ಕೊಟ್ಟಿದ್ದಕ್ಕೆ ಇವರ ಸಹಿ ಪಡೆದು ಆತ ಹೊರಟುಹೋದ. ಒಳಗೇನಿರಬಹುದು? ಅಂಚೆ ಇಲಾಖೆಯವರ ಬದಲು ಪೊಲೀಸರ್ಯಾಕೆ ತನಗೆ ಆ ಪತ್ರ ತಂದುಕೊಟ್ಟರು? ತಾನಾದರೂ ಆ ಲೇಖನದಲ್ಲಿ ಪೊಲೀಸರ ಬಗ್ಗೆ ಏನನ್ನೂ ಆರೋಪಿಸಿಲ್ಲ. ಏನಿರಬಹುದು ಎಂಬ ಅಗಾಧ ಕಾತರದಿಂದ ಲಕೋಟೆ ಒಡೆದು ಪತ್ರ ಬಿಡಿಸಿದರೆ…… ನಿಗಮದ ನಿರ್ದೇಶಕರಿಂದಲೇ ಪತ್ರ, ಮಾನ್ಯರೆ ಎಂದು ಪ್ರಾರಂಭಿಸಿದ ಒಕ್ಕಣೆ ತನಗೆ ತೀರ ಹೊಸದೆನಿಸತೊಡಗಿತ್ತು. ಮೊದಮೊದಲು ನಿಗಮದ ಕಾರ್ಯವೈಖರಿ, ಪ್ರಾಮಾಣಿಕ ಪ್ರಯತ್ನ, ಅಲ್ಲಿ ಬೇರೂರಿದ ಭ್ರಷ್ಟಾಚಾರದ ನಿರ್ಮೂಲನೆ ಎಲ್ಲರ ಹೊಣೆ ಎಂಬ ಸಂಕ್ಷಿಪ್ತ ವಿವರಣೆ ಹಾಗೂ ಈ ದಿಶೆಯಲ್ಲಿ ಸುಬ್ಬಣ್ಣ ತನ್ನ ಪತ್ರಿಕೆಯಲ್ಲಿ ತೋರಿದ ಉತ್ಸಾಹ, ಕಾಳಜಿ, ಪರಿಶ್ರಮದ ಬಗ್ಗೆ ಮೆಚ್ಚುಗೆ, ಎಲಾ ಇವನ, ಎಲ್ಲಾ ಉಲ್ಟಾಪಲ್ಟಾ ಓದುತ್ತಿದೆಯಲ್ಲ ಎಂಬ ಭಾವನೆ ಆವರಿಸಿತವನಿಗೆ. ತನ್ನ ಲೇಖನವೂ ಒಂದು ಸಹಕಾರವೇ ಎನ್ನುತ್ತಿದ್ದಾರಲ್ಲ ಈ ವಿಚಿತ್ರ ನಿರ್ದೇಶಕರು ಎಂದಂದುಕೊಳ್ಳುತ್ತಲೇ ಕೊನೆಯ ಪುಟಕ್ಕೆ ಬಂದ. ಅಲ್ಲಿಯ ವಿವರಣೆ ಮಾತ್ರ ಸುಬ್ಬಣ್ಣನಿಗೆ ಹಿಡಿಸದಾಯ್ತು. ಆ ವರದಿಯಿಂದ ನಿಗಮದ ಘನತೆಗೆ ಧಕ್ಕೆ ಬಂದುದಾಗಿಯೂ ಹಾಗೂ ದಿವಂಗತ ನಾಗಣ್ಣನ ಹೆಂಡತಿಗೆ ಘೋರ ಅಪಮಾನವಾಗಿರುವುದಾಗಿಯೂ ತಿಳಿಸಿ, ಈ ಬಗ್ಗೆ ಆಕೆ ನೀಡಿದ ಹೇಳಿಕೆಯ ಪ್ರತಿಯನ್ನೂ ಮತ್ತೆ ಜೆ.ಇ. ಯ ಹೇಳಿಕೆಯನ್ನೂ ಲಗತ್ತಿಸಿ ಐದು ಲಕ್ಷ ರೂಪಾಯಿ ಮಾನಹಾನಿ ಖಟ್ಲೆಯೊಂದನ್ನು ಹೂಡಲು ಯಾಕೆ ಕ್ರಮ ಕೈಗೊಳ್ಳಬಾರದೆನ್ನುವುದಕ್ಕೆ ಮೂರು ದಿನಗಳ ಒಳಗಾಗಿ ಉತ್ತರಿಸಬೇಕೆಂದು ನೋಟೀಸು ಕೊಡಲಾಗಿತ್ತು. ತೀವ್ರ ಕಸಿವಿಸಿಗೊಂಡ ಸುಬ್ಬಣ್ಣ ತಾನೊಂದು ಬಗೆದರೆ ದೈವವೊಂದು ಒಗೆಯುತ್ತಿದೆಯೇ? ಅಕಸ್ಮಾತ್ ಹಾಗೇನಾದರೂ ಆದದ್ದೇ ಆದರೆ ತನಗೆ ಹೊಸ ಕಾರಿನ ಕನಸೊತ್ತಿಟ್ಟಗಿರಲಿ, ಇದ್ದ ಮುರುಕು ಮನೆಯನ್ನೂ ಮಾರಬೇಕಾಗುವುದೇ? ಛೇ, ಹಾಗಾಗಕೂಡದು ಎಂದಂದುಕೊಂಡ, ಸೀದಾ ತನ್ನ ವಕೀಲರ ಮನೆ ಕಡೆ ನಡೆದ.

ಸುಬ್ಬಣ್ಣನ ಚಿಂತೆ ಹೀಗಿರಲು, ಜೆ.ಇ.ಯ ಅಳುಕೇ ಬೇರೆಯದಾಗಿತ್ತು. ಪ್ರಸ್ತುತ ಪ್ರಕರಣದಲ್ಲಿ ತನ್ನದೇನೂ ತಪ್ಪಿಲ್ಲದಿದ್ದರೂ, ನಿರ್ದೇಶಕರು ಹೇಳಿದ ಕಡೆಗೆಲ್ಲ ತಾನು ಸಹಿ ಹಾಕಬಾರದಿತ್ತೇನೋ. ಸುಬ್ಬಣ್ಣನ ವಿರುದ್ಧ ನಿಲ್ಲುವುದೆಂದರೆ....... ಏನೋ ಒಂದು ತರದ ಭಯ ಹಾಗೂ ಆತಂಕದಲ್ಲಿ ಒದ್ದಾಡತೊಡಗಿದ್ದನವ. ಇಂದೇ ಹೊರಟುಹೋದ ನಿರ್ದೇಶಕರ ಹಿಂದೆಯೇ ಬಸ್ ಹಿಡಿದು ಸುಬ್ಬಣ್ಣನೂ ಬೆಂಗಳೂರಿಗೆ ಹೋದನಂತೆ ಎಂಬುದು ತಿಳಿದಾಗಲಂತೂ ಆತನಿಗೆ ಎದೆ ಢವಢವಿಕೆ ತೀವ್ರವಾಗತೊಡಗಿತ್ತು. ತನ್ನ ಹಳೆಯ ಯಾವುದಾದರೂ ಪ್ರಕರಣವನ್ನು ಸುಬ್ಬಣ್ಣ ಕೆದರಿ ತೆಗೆಯುವನೆ? ಇರಲಿಕ್ಕಿಲ್ಲ. ತಾನಾದರೂ ಅಂತಹ ಭಾನಗಡಿಯನ್ನೇನೂ ಮಾಡಿಲ್ಲವಲ್ಲ. ಆದಾಗ್ಯು ಇದೇ ಸಮಯವೆಂಬ ಯಾವುದಾದರೂ ಕಾಂಟ್ರ್ಯಾಕ್ಟರ್ ವಗ್ಯೆರೆ ಸುಬ್ಬಣ್ಣನ ಜೊತೆ ಶಾಮೀಲಾಗಿ ಏನಾದರೂ ಪಿತೂರಿ ಮಾಡಿದರೆ....... ಇಲ್ಲ ಹಾಗೇನಾಗಲಿಕ್ಕಿಲ್ಲ. ಈಗ ತಾನಂತೂ ಅವರ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದನ್ನೂ ಬಿಟ್ಟುಬಿಟ್ಟಿದಾಗಿದೆ. ಇದರಿಂದಾಗಿ ಅವರ ಲಾಭಾಂಶದಲ್ಲೂ ಏರಿಕೆಯಾಗಿದೆ. ಹೋದವಾರವೇ ದೊಡ್ಡ ಆಫರ್ ಒಂದನ್ನು ತಿರಸ್ಕರಿಸಿಯೂ ಆಗಿದೆ. ಮೈ ಮೇಲಿನ ಧೂಳೂ ಹೋಗಿಸಲು ಸ್ನಾನ ಮಾಡಿ ಸ್ವಚ್ಛವಾಗಿಸುವ ಪ್ರಯತನ್ನ ನಡೆಸಿದವನಂತೆ, ಆತನೂ ತನ್ನ ಪೂರ್ವಾಶ್ರಮದ ವಾಸನೆಯ ಪೊರೆಯನ್ನು ಕಳಚಿ ಹೊರಬರುವ ಪ್ರಯಾಸದ ಪ್ರಯತ್ನ ನಡೆಸಿದ್ದ.

ಇತ್ತ ವಿಧಾನಸೌಧದಲ್ಲಿ ಮಧ್ಯಾಹ್ನ ಸಭೆಯೊಂದನ್ನು ಮುಗಿಸಿಕೊಂಡು, ಕಚೇರಿ ಕಡೆ ಬಂದು, ತನ್ನ ಕುರ್ಚಿಯಲ್ಲಿ ಕುಳಿತ ನಿರ್ದೇಶಕರಿಗೆ ಟಪ್ಪಾಲ್ ಬಂಡಲ್ಲಿನ ಎಲ್ಲಕ್ಕೂ ಮೇಲಟ್ಟಿದ್ದ 'ಢದಲ್ ಬಾಜಿ' ದೈನಿಕ ಕಣ್ಣಿಗೆ ಬಿತ್ತು. ಮೊನ್ನೆಯಷ್ಟೇ ಅವರಿಗೆ ಪರಿಚಯವಾದ ಆ ಪತ್ರಿಕೆಯ ಮುಖಪುಟದ ದಪ್ಪಕ್ಷರಗಳಲ್ಲಿ 'ನಾಗಪ್ಪನ ಸಾವಿನ ಬಗೆಗಿನ ಸಂಶಯ ಸಂಪೂರ್ಣ ನಿವಾರಣೆ' ಎಂಬ ತಲೆಬರಹದಡಿ ವಿವರವಾದ ಅಗ್ರಲೇಖನ ಎದ್ದುಕಾಣುತ್ತಿತ್ತು. ತಮ್ಮಷ್ಟಕ್ಕೆ ಆನಂದವನ್ನನುಭವಿಸುತ್ತ ನಿರ್ದೇಶಕರು, ತಮ್ಮ ಪಿ.ಎ.ಗೆ ಹುಬ್ಬಳ್ಳಿಯ ಚೇಫ್ ಇಂಜಿನಿಯರ್‌ಗೆ ಫೋನ್ ತೆಗೆದುಕೊಳ್ಳಲು ಹೇಳಿದರು. ಮಾನಹಾನಿ ಖಟ್ಲೆಗೆ ಮೊದಲೇ ಪ್ರಕರಣ ಇಷ್ಟೊಂದು ಸಲೀಸಾಗಿ ಮುಗಿದುಹೋದ ಖುಷಿ ಅವರಲ್ಲಿ ಎದ್ದು ಕಾಣುತ್ತಿತ್ತು. ಆದರೆ ಸುಬ್ಬಣ್ಣನಿಗೆ ಆದ ಆಘಾತ, ಹಾನಿ ಯಾವುವೂ ಅವರ ಗಮನಕ್ಕೆ ಕೊನೆತನಕವೂ ಬರದೇ ಹೋದವು.

# ಅನುಭೋಗ

"ಎಲ್ಲಾ ಬಿಟ್ಟು ಕೊಲ್ಲಾಪುರಕ್ಕೆ ಖಾಯಂ ಆದೆಯಲ್ಲೋ ಮಾರಾಯಾ" ಎಂದು ನನ್ನ ಮಿತ್ರರನೇಕರು ನನ್ನನ್ನು ಛೇಡಿಸಿದ್ದುಂಟು. ಮಾಡುವುದೇನು? ಹೆಣ ಹೊರುವವನಿಗೆ ಮುಂದಾದರೇನು ಒಂದಾದರೇನು? ಹೊಟ್ಟೆ ಹೊರೆಯಲೊಂದು ನೌಕರಿ ಮಾಡಬೇಕು. ಸಿಕ್ಕಿದ್ದು ಇಲ್ಲಿ. ನನಗೆ ಹುಬ್ಬಳ್ಳಿ ಧಾರವಾಡ ಬೆಳಗಾವಿಯಲ್ಲಿ ನೌಕರಿ ಕೊಡಲು ಸಂಬಂಧಿಕರೇ ಜಾತಷ್ಟರೇ? ಪಾಲಿಗೆ ಬಂದದ್ದು ಪಂಚಾಮೃತವೆನ್ನುವಂತೆ, ದೂರದ ಊರಾಗಿದ್ದರೂ ಬೇರೆ ರಾಜ್ಯವಾಗಿದ್ದರೂ ಕೊಲ್ಲಾಪುರದಲ್ಲಿಯ ಈ ನೌಕರಿ ಹಿಡಿಯಬೇಕಾಯಿತು. ನನ್ನ ವಿಭಾಗದಲ್ಲಿ ನಾನೇ ಅತೀ ಹೆಚ್ಚು ಗುಣಗಳನ್ನು ಪಡೆದಿದ್ದರಿಂದ ಹಾಗೂ ನನಗೆ ಕಲಿಸಿದ ಪ್ರೊಫೆಸರೊಬ್ಬರು ಆಯ್ಕೆ ಸಮಿತಿಯಲ್ಲಿ ವಿಷಯ ತಜ್ಞ ಸದಸ್ಯರಾಗಿದ್ದರಿಂದ ನನ್ನಾಯ್ಕೆ ಸುಲಭವಾಗಿದ್ದರೂ ಸವದತ್ತಿ ಎಲ್ಲಮ್ಮನ ಆಶೀರ್ವಾದದಿಂದಲೇ ಮಹಾಲಕ್ಷ್ಮೀಯ ಊರಾದ ಕೊಲ್ಲಾಪುರದಲ್ಲಿ ತನ್ನ ಮಗನಿಗೆ ಈ ನೌಕರಿ ಎಂಬ ಸುಯೋಗ ಒದಗಿ ಬಂದಿದೆಯಂದು ನನ್ನ ತಾಯಿಯ ಅಂಬೋಣವಾಗಿತ್ತು.

ಇಲ್ಲಿಂದ ಎರಡು ನೂರು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಹಿಡಿದು ದಕ್ಷಿಣಾಭಿಮುಖವಾಗಿ ಹೊರಟು ಎಡಕ್ಕೆ ತಿರುಗಿ, ಮತ್ತೆ 60 ಕಿ.ಮೀ. ಹೋದರೆ ನನ್ನ ಹಳ್ಳಿ ಬರುತ್ತದೆ. ಬಯಲು ಸೀಮೆಯ ಈ ಹಳ್ಳಿಯಲ್ಲಿ ಹದಿನಾರು ವರ್ಷ

ಕಳೆದ ನನ್ನೂರು ಕನಕಾಪೂರವೆಂದರೆ ನನಗೆ ಪಂಚಪ್ರಾಣ. ಅಲ್ಲಿಯ ಹಳೆಯ ಲಂಗೋಟಿ ದೋಸ್ತರೆಂದರೆ ಈಗಲೂ ನನ್ನ ಮೈಯಲ್ಲಿ ರೋಮಾಂಚನ, ಮನದಲ್ಲಿ ಪುಳಕ. ಅದ್ಯಾವ ಸಂಬಂಧ ಬೆಸೆದುಕೊಂಡಿದೆಯೋ ನನಗೇ ತಿಳಿಯದು. ಮೂರು ನಾಲ್ಕು ವರ್ಷಗಳಿಗೊಮ್ಮೆ ಹಳ್ಳಿಗೆ ಹೋಗುವ ನಾನು ಹೆಚ್ಚು ದಿನ ಅಲ್ಲಿರದಿದ್ದರೂ ಸಿಕ್ಕಷ್ಟೇ ಗೆಳೆಯರನ್ನು ಮಾತಾಡಿಸಿಕೊಂಡು, ಹರಟೆಹೊಡೆದು ಹಿಂದಿನ ನೆನಪುಗಳನ್ನೆಲ್ಲ ಮರುಕಳಿಸಿಕೊಂಡು, ಕೆನೆಮೊಸರು ಬೆಣ್ಣೆ ತುಪ್ಪವನ್ನೆಲ್ಲ ಸವಿದು, ಜೋಳದ ಸುಗ್ಗಿಯಾಗಿದ್ದರೆ ಬೆಳೆಸಿ ತಿಂದು ಮಜ್ಜಿಗೆ ಕುಡಿದು ತೋಟದ ಭಾವಿಯಲ್ಲಿ ಈಸ್ಯಾಡಿ ಡುಮಕಿ ಹೊಡೆದು ಬರುತ್ತಿದ್ದೆ.

ನನ್ನ ಹಳ್ಳಿ ಕಡೆ ಪ್ರಯಾಣದ ಅವಿಭಾಜ್ಯ ಅಂಗವೆಂದರೆ ಧಾರವಾಡದಲ್ಲಿ ನಮ್ಮೂರಿನವನೇ ಆದ ಚಡ್ಡಿದೋಸ್ತ್ ರಾಜಾನ ಭೆಟ್ಟಿ. ಆತನ ಕಾಲೇಜಿಗೆ ಸೂಟಿ ಇದ್ದಾಗಲೆಲ್ಲಾ ನನ್ನ ಜೊತೆ ಆತನೂ ಕನಕಾಪೂರಕ್ಕೆ ಖಂಡಿತ ಬರುತ್ತಾನೆ. ಮಹಾಮಾತುಗಾರನವ. ರಾತ್ರಿಯಿಡೀ ಹೇಳಿದರೂ ಮುಗಿಯುವುದಿಲ್ಲ ಹಳೆಯ ಅನುಭವಗಳದ್ದು. ಮಾನಯ್ಯನ ಗುಂಡಿಯಲ್ಲಿ ಎತ್ತು ಎಮ್ಮೆಗಳ ಮೈ ತೊಳೆಯುತ್ತ ಅವುಗಳ ಬಾಲ ಹಿಡಿದುಕೊಂಡು ದೂರದವರೆಗೂ ತೇಲುತ್ತ ಹೋಗುತ್ತಿದ್ದುದನ್ನು, ಹೊಸದಾಗಿ ಜೋಳದ ಸೊಪ್ಪೆಯ ಬಣವಿಗಳನ್ನು ಒಟ್ಟಿದಾಗ ಅವುಗಳ ಮೇಲೆ ಬೋರಲಾಗಿ ಡಬ್ಬಾಕಿರುವ ಮಣ್ಣಿನ ಚಟಗಿಗಳನ್ನು ಕೌರವರೆಂದು ಭಾವಿಸಿ ನಾವೆಲ್ಲ ಪಾಂಡವರಾಗಿ ಕಲ್ಲಿನಿಂದ ಹೊಡೆದು ಹೊಡೆದು ಅವುಗಳನ್ನೆಲ್ಲ ಒಡೆಯುತ್ತಿದ್ದುದು, ಊರ ಹನುಮಂತನ ಗುಡಿಯಿಂದ ಆಗಸರ ಗುಂಡಿನವರೆಗೂ ಕೈಯಲ್ಲಿಯ ಹಿತ್ತಾಳೆ ತಂಬಿಗೆಗಳನ್ನು ಉರುಳಿಸುತ್ತ ಹೋಗುತ್ತಿದ್ದುದನ್ನು, ಬ್ರಾಹ್ಮಣರ ಕಮಲಾಬಾಯಿಯು ಗುಡಿಯಲ್ಲಿ ಹನುಮಂತನ ಸುತ್ತ ಪ್ರದಕ್ಷಿಣೆ ಹಾಕುವಾಗ ಅವಳ ವಿರುದ್ಧ ದಿಕ್ಕಿನಲ್ಲಿ ಅವಳಿಗೆ ತುಸು ಕೈ ತಾಗಿಸಿ ಪ್ರದಕ್ಷಿಣೆ ಹಾಕಿ ಅವರ ಮಡಿ ಕೆಡಿಸಿ ಕೇಕೆ ಹೊಡೆಯುತ್ತ ಓಡುತ್ತಿದ್ದುದು, ಒಂದೇ ಎರಡೇ, ಮಾತನಾಡುತ್ತ ಆಡುತ್ತ ನಗುತ್ತ ನಗುತ್ತ ಒಂದೆರಡು ಸಾರೆ ಬೆಳಕೇ ಹರಿದದ್ದು ಗೊತ್ತಾಗಿರಲಿಲ್ಲ.

ನಿನ್ನೆಯೇ ರಾಜೂನ ಪತ್ರ ಬಂದಿದೆ. ಎಷ್ಟು ದಿನವಾಯ್ತೋ ಭೆಟ್ಟಿಯಾಗಿ. ಹೊಸದೊಂದು ಕವನ ಸಂಕಲನ ಬಿಡುಗಡೆ ಮಾಡುತ್ತಿದ್ದೇನೆ. ಮುಂದಿನ ತಿಂಗಳ ಎಂಟನೇ ತಾರೀಖಿಗೆ ತಪ್ಪದೇ ಬಾ. ಊರಿಗೂ ಹೋಗಿ ಬರೋಣವಂತೆ, ನಾಲ್ಕು ದಿನ ರಜೆ ಹಾಕಿ ಬಾ....." ಎಂದು ಒತ್ತಾಯಿಸಿದ್ದ. ಐದು ವರ್ಷಗಳಾದವು ಊರಿಗೆ ಹೋಗದೆ ! ರಾಜೂನ ಕವನ ಸಂಕಲನದ ಬಿಡುಗಡೆ ಸಮಾರಂಭ ನನ್ನ ಕಾರ್ಯ ಬಾಹುಲ್ಯದಿಂದ ನನಗೂ ತುಸು ಬಿಡುಗಡೆ ಮಾಡುವುದಲ್ಲಾ ಎಂದು ಉಬ್ಬಿಹೋದೆ.

ಕವನ ಸಂಕಲನ ಮೊದಲೆಯದಾದರೂ ಬಿಡುಗಡೆ ಸಮಾರಂಭಕ್ಕೆ ರಾಜು ಕುಲಪತಿಗಳನ್ನೇ ಕರೆದಿದ್ದ. ಅಧ್ಯಕ್ಷತೆ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರದ್ದು. ಈ ಸಾರೆ ರೀಡರ್ ಹುದ್ದೆ ಮೇಲೆ ಕಣ್ಣವನಿಗೆ, ತನ್ನ ಮೆರಿಟ್ ಇಂತಹ ಗಣ್ಯರ ಗಮನಕ್ಕೆ ಬರಲೇಬೇಕೆನ್ನುವುದನ್ನು ಚೆನ್ನಾಗಿ ಅರಿತವ. ಅತೀ ಹೆಚ್ಚು ಜನರಿರದಿದ್ದರೂ ಭೇಷ್ ಪರವಾಗಿಲ್ಲ ಅನ್ನುವಷ್ಟು ಅಚ್ಚುಕಟ್ಟಾಗಿ ಸಮಾರಂಭ ನೆರವೇರಿಸಿದ. ರಾತ್ರಿ ಎಂದಿನಂತೆ ಊರ ಹೊರಗಿನ ಬಾರ್ ಒಂದಕ್ಕೆ ಕರೆದೊಯ್ದ. ನಡೆ-ನುಡಿ ಹಾವಭಾವ ಎಲ್ಲದರಲ್ಲೂ ತನ್ನ ಕಾವ್ಯಗಳ ಮೆರಗು ಹೊರಸೂಸುತ್ತಿದ್ದ. ಎರಡು ಪೆಗ್ ಹಾಕುತ್ತಲೇ ಕಾವ್ಯ ಗೀತೆಗಳಾಗತೊಡಗಿದವು. ಜಾನಪದ ಶೈಲಿಯಲ್ಲಿ ದಾಟಿ ಹಚ್ಚಿ ತನ್ನ ನಾಲ್ಕೈದು ಕವನಗಳನ್ನು ಹಾಡಿಯೇ ಬಿಟ್ಟ. ಕೊನೆಯ ಹಾಡಿಗೆ ಬಂದಾಗ, ನಾವು ವಿದ್ಯಾರ್ಥಿಗಳಾಗಿದ್ದಾಗ ನ್ಯೂ ಬ್ಲಾಕ್ ಹಾಸ್ಟೆಲ್‌ನಲ್ಲಿ ಹೇಗೆ ಇಂತಹ ಹಾಡುಗಳನ್ನು ಹಾಡುತ್ತಿದ್ದೇವೆಂದು ನೆನಪಿಸಿದ. 'ರಾಧಿಕೆ ನಿನ್ನ ಸರಸವಿದೇನೆ....' ಎಂದು ಹಾಡುತ್ತಾ ಧ್ವನಿ ಎತ್ತರಿಸಬೇಕಾದಾಗ ಕಾಟಿನ ಮೇಲೆ ಹತ್ತಿ ಇನ್ನೂ ಧ್ವನಿ ಹೆಚ್ಚು ಎತ್ತರಿಸಬೇಕೆಂದರೆ ಈ ಮುಚ್ಚರದಾನಿ ಅಟೆದು ತಡೆಯುತ್ತದೆಂದು ಆತ ಹೇಳುತ್ತಿದ್ದುದನ್ನು ನೆನಪಿಸಿದೆ. ಹಳೆಯ ನೆನಪು ಕೆದಕಿಬಿಟ್ಟರೆ ರಾಜು ಬಹಳ ಭಾವುಕನಾಗುತ್ತಾನೆ. ನಾನೂ ಅಷ್ಟೇ, ಇದರಲ್ಲಿ ಇಬ್ಬರಿಗೂ ಬಹಳ ಪೈಪೋಟಿ ಎನ್ನುವಷ್ಟು ಹಚ್ಚಿಕೊಂಡಿದ್ದೇವೆ ನಾವು

ಜೊತೆ ಕಳೆದ ಇತಿಹಾಸವನ್ನು, ನನ್ನ ನಾಲಿಗೆ ನೂರಾರು ವಿಷಯ ಹೊರಗೆಡವಬೇಕೆಂದರೂ ಆತ ಅಮಲೇರಿಸಿಕೊಂಡಿದ್ದರಿಂದ ಅವುಗಳನ್ನು ಬಾಯಿಯಲ್ಲೇ ಅದುಮಿ ಹಿಡಿದು ಅವನ ಮಾತುಗಳಿಗೆ ಸೈಡ್ ಕೊಡಬೇಕಾಯ್ತು. 'ದೋಸ್ತ್ ಊರಿಗೇನೋ ಹೋಗಬೇಕಂತೀದಿ. ನಾಳೆ ಹೋಗಿನೂ ಬಿಡೋಣ. ಆದರ ಊರಿಗೆ ಹೋಗೋದು ಅಂದ್ರ ನನಗ ಹೊಟ್ಟ್ಯಾಗಿನ ಕರಳು ಕಿತ್ತು ಬಂದಾಂಗ ಆಗತದೋ......' ತೀರಾ ಭಾವುಕನಾಗಿ ಮತ್ತೊಂದು ಗುಟುಕು ಹಾಕಿರ. ಮಧ್ಯದ ಈ ನೀರವತೆಯಲ್ಲಿ ನನಗೆ ಮಾತನಾಡಬೇಕೆನಿಸಿದರೂ ಆತ ಏನಾದರೊಂದು ಹೊಸ ವಿಷಯ ಹೇಳಹೊರಟಿರುವನೆಂದೆನಿಸಿ ಮತ್ತೆ ಸೈಡ್ ಕೊಟ್ಟೆ. ಹೊರಟಿತು ವಾಘ್ಝರಿ ರೈಲು, 'ಮೊನ್ನೆ ಪತ್ರಾ ಬರೆದಾಗ ಇದನ್ನು ಬರೀಬೇಕೆನಿಸಿತ್ತು. ಅದರ ನೀ ಇಲ್ಲಿಗೆ ಬರಾವ ಅದೀ ಅಂತ ಈಗ ಹೇಳಾಕಹತ್ತೀನಿ. ನೀ ನಂಬತೀಯೋ ಇಲ್ಲೊ ಶಿವನ್ಯಾಗ ಕುಷ್ಟರೋಗ ಸುರುವಾಗೇತಂತ, ಕೈಯಿ ಕಾಲು ಬಾತುಕೊಂಡು ಅಲ್ಲಲ್ಲೆ ಕೀವಾ ಬರಾಕಹತ್ತೇತಂತ.....' ಕೇಳುತ್ತಲೇ ನನಗೆ ಅಲ್ಲಿಂದ ಎತ್ತಿ ರಸ್ತೆಯ ಮೇಲೆ ಹೋಗುತ್ತಿರುವ ಟ್ರಕ್ಕಿನ ಅಡಿಗೆ ಒಗೆದಂತಾಯಿತು. ಹೇಗೋ ಸಾವರಿಸಿಕೊಂಡು 'ಏನ್ ಹೇಳತೀಯೋ....... ನಿಶೇದಾಗ ಅದೀ ಏನ್ ಮತ್ತ? ಅದೆಂಗ್ ಸಾಧ್ಯಾ ಅಂತೀನಿ, ಇರಾಕಿಲ್ಲ ನೋಡೋ, ಮತ್ತೇನರ ಆಗಿರಬೇಕು. ಕುಷ್ಟರೋಗಾ ಅಂದ್ರ ಸಾಮಾನ್ಯ ಏನು? ಈಗ ಅದು ಇಲ್ಲ ಇಲ್ಲಾ. ಭಾಳ ಕಮ್ಮಿ ಅಂತ ಎಷ್ಟ ಪ್ರಚಾರ ಮಾಡತಾರ್. ಯಾರ್ ಹೇಳಿದ್ರು ಇದನ್ನ ನಿನ್ಗ' ಎಂದು ಉದ್ವೇಗದಿಂದಲೇ ಕೇಳಿದೆ. ಇಂತಹ ಮಹಾರೋಗವೊಂದು ಅಷ್ಟು ಸಣ್ಣ ವಯಸ್ಸಿನವನಿಗೆ ಆಗುವುದೆಂದರೆ..... ನನ್ನ ಎದೆ ಡವ ಡವ ಎನ್ನತೊಡಗಿತ್ತು. "ನನಗೂ ನಂಬಾಕ ಆಗಿರಲಿಲ್ಲ. ಆದ್ರೆ ಮೊನ್ನೆ ನಮ್ಮೂರಿನ ಸುರೇಶ...... ಅಂದ್ರ ಶೆಟ್ಟರ ಮಾಸ್ತರ ಮಗಾ ಎಂ.ಎ. ಪ್ರೀವಿಯಸ್‌ಗೆ ಅದಾನ. ಅವನೇ ನೋಡಿಕೊಂಡು ಬಂದಾನ, ಖರೇ ಅಂತ. ಈಗ ಶಿವನಾಗ ಮುಖಾಮುಚಗೊಂಡ ಅಡ್ಯಾಡತಾನಂತ, ಕಾಲು ಎಳದು ಎಳದು ಹಾಕ್ತಾನಂತ. ಪರಿಸ್ಥಿತಿ ಭಾಳ ಕಟ್ಟೈತಂತ....' ಇನೂ ಏನೇನು ಹೇಳುತ್ತಿದ್ದ. ನನಗೆ ತಡೆಯಲಾಗಲಿಲ್ಲ. ಕಣ್ಣಲ್ಲಿ ನೀರು ದಳದಳನೇ ಇಳಿಯತೊಡಗಿದವು. ಉಂಡ ಮೃಷ್ಟಾನ್ನ ವಾಂತಿಯಾಗುವಷ್ಟು ವಿಷವಾಗಿ ಹೊಟ್ಟೆಯಲ್ಲಿ ತಳಮಳ ಸಂಕಟ ಆಗತೊಡಗಿದವು. ಹಾಗೆಯೇ ಕರವಸ್ತ್ರ ತೆಗೆದು ಒರೆಸಿಕೊಂಡೆ, ವಿಷಯ ಸುಳ್ಳಾಗಲಿ ಎಂದು ಆತ ದೇವರನ್ನು ಮೊರೆಹೋಗುತ್ತಿತ್ತು. ಸ್ಮಶಾನಮೌನ ಆವರಿಸತೊಡಗಿತು. ತಾಳಲಾರದೇ ಎದ್ದು ಅಲ್ಲೇ ಸಮೀಪವಿದ್ದ ಸಣ್ಣ ಹಸಿರು ಗಿಡದ ಬದಿಗೆ ಹೋಗಿ ನಿಂತುಕೊಂಡೆ.

ಶಿವನ್ಯಾ ನನ್ನ ಹಾಗೂ ರಾಜೂನ ಜೊತೆಗಾರ. ಮೂವರೂ ಕೂಡಿ ಆಡಿ ಓದಿ ಉಂಡು ಬೆಳೆದವರು. ಎಂಥಾ ಆತ್ಮೀಯತೆ! ಒಂದು ದಿನ ಒಬ್ಬರನ್ನೊಬ್ಬರು ನೋಡದಿದ್ದರೆ ಏನೋ ಕಳಕೊಂಡವರಂತೆ ಕಸಿವಿಸಿ. ಯಾರಾದರೂ ಊರಿಗೆ ಹೋಗಬೇಕಾಗಿ ಬಂದರೆ, 'ಎರಡೇ ದಿನಾನೋ ಬಂದ್ ಬಿಡ್ತಿನಿ' ಎಂದು ಆಶ್ವಾಸನೆ. ಸೂಟಿ ಬಂದಿತೆಂದರಂತೂ ಮುಗಿದೇ ಹೋಯ್ತು. ಮಧ್ಯಾಹ್ನದ ಊಟಕ್ಕೆ ಮೂವರೂ ಕೂಡಲೇಬೇಕು. ರೊಟ್ಟಿಯೊಳಗಿನ ಪಲ್ಲೆ ಚಟ್ನಿ ಪರಸ್ಪರ ಹಂಚಿಕೊಂಡು ತಿನ್ನುವುದೆಂದರೆ ಪಂಚಪ್ರಾಣ. 'ಸಹನೌಭುನಕ್ತು' ತತ್ವದ ಅಕ್ಷರಶಃ ಅನುಷ್ಠಾನ. ಬ್ರಹ್ಮ ವಿಷ್ಣು ಮಹೇಶ್ವರರೆಂದು ಓಣಿಯವರೆಲ್ಲರ ಕಡೆಯಿಂದ ನಮಗೆ ರೂಢನಾಮ. ಆಟಪಾಟಗಳಲ್ಲೆಲ್ಲ ತುಸು ಹೆಚ್ಚುಕಡಿಮೆ ಮೂವರೂ ಸಮಸಮ. ಮೊದಲ ಮೂರು ಸ್ಥಾನಗಳು ನಮ್ಮಲ್ಲಿಯೇ ಬರಬೇಕು. ಹದಿನಾರು ವರ್ಷಗಳವರೆಗಿನ ಆ ದೋಸ್ತಿ ವರ್ಣಿಸಲು ಶಬ್ದಗಳೇ ಸಾಲವು. ಎಂತಹ ಅನ್ಯೋನ್ಯತೆ, ಎಂತಹ ಗಾಢ ಸಂಬಂಧ, ಜಗತ್ತಿನಲ್ಲಿಯ ಅತ್ಯಂತ ಅವಿನಾಭಾವವಾದ ಮಾನವೀಯ ಸಂಬಂಧಗಳಿಗೆ ಯಾವ ಕಟ್ಟಳೆಯೂ ಇರಲು ಸಾಧ್ಯವಿಲ್ಲ. ಅವು ಸೀಮಾತೀತವಾದವುಗಳು' ಎಂಬ ಮಾತು ನನಗೆ ನೆನಪಿಗೆ ಬಂತು. ಶಿರಹಟ್ಟಿ ತಾಲೂಕಾಮಟ್ಟದ ಕಬಡ್ಡಿ ಪಂದ್ಯಾಟವೊಂದರ ಫೈನಲ್‌ನಲ್ಲಿ ಲಕ್ಷ್ಮೇಶ್ವರದ ತಂಡಕ್ಕೆ ಸೋತಾಗ, ಮೂವರೂ ತೆಕ್ಕೆಬಿದ್ದು ಅತ್ತಿದ್ದು, ಮುಂದಿನ ಮೂರು ದಿನ ಊರಲ್ಲಿ ಬೇರೆಯವರಿಗೆ ಮುಖ ತೋರಿಸದೇ ಮನೆಯಲ್ಲೇ ಉಳಿದುಕೊಂಡದ್ದು, ಎಸ್‌ಎಸ್‌ಎಲ್‌ಸಿಯಲ್ಲಿ ಮೂವರೂ ಮೊದಲ ವರ್ಗದಲ್ಲಿ ಬಂದಾಗ ಜೊತೆಯಾಗಿಯೇ ಇನ್ನುಳಿದ ಗೆಳೆಯರಿಗೆ ಬಿರಂಜಿ ಅನ್ನದ ಊಟ ಹಾಕಿಸಿ

ನಲಿದದ್ದು. ಹೀಗೇ ನನ್ನೊಡನೆ ಸುಖ-ದುಃಖ ನೋವು-ನಲಿವುಗಳನು ಸಮಸಮವಾಗಿ ಹಂಚಿಕೊಂಡು ಬೆಳೆದ ಶಿವನ್ಯಾಗೆ ಈಗ ಈ ರೋಗ? ನನ್ನ ಮೈಯಲ್ಲೇ ಹುಣ್ಣಾಗಿ ಕೀವು ಬಸಿಯತೊಡಗಿದಂತೆ ಯಾತನೆಯಾಗಿ ದುಃಖ ಉಕ್ಕೇರುತ್ತಿತ್ತು. 'ಕಿಸ್ ತನ್‌ಕೊ ಚುವಾ ತೂನೆ ವೋ ಕೈಸೆ ಚುಪಾವೂ' (ನೀ ಮುಟ್ಟಿರುವ ದೇಹವನ್ನು ಅದ್ಹೇಗೆ ಮುಚ್ಚಿಕೊಳ್ಳಲಿ) ಎಂಬ ರುಡಾಲಿ ಸಿನೇಮಾದ ಹಾಡು ನನಗೆ ಯಾಕಾದರೂ ಅಷ್ಟೊಂದು ಹಿಡಿಸಿತ್ತೋ ಎಂದೆನಿಸಿ, ಪುನಃ ಅದು ಮನದಲ್ಲೊಮ್ಮೆ ಸುಳಿದುಹೋಯಿತು. ಎದುರಿನ ಗಿಡದ ಸುಂದರ ಹಸಿರು ಎಲೆಗಳು ಒಮ್ಮೆಲೆ ಕೆಂಪು ಕೆಂಡವಾಗಿ ಸುಡತೊಡಗಿದವು. ಬೀಸುವ ಗಾಳಿ ನಿಂತುಹೋಗಿ ನಿರ್ವಾತ ನಿರ್ಮಾಣವಾಗಿ ಉಸಿರುಗಟ್ಟಿ ಸಾಯುವ ಯಾತನೆಯಾಗತೊಡಗಿತು. 'ಬಾರಪಾ ಬಾರೋ' ಎಂದು ರಾಜೂ ಕೂಡಾ ಅತೀವ ವೇದನೆಯಲ್ಲಿಯೇ ಕೂಗಿದಾಗ ವಾಸ್ತವಕ್ಕೆ ಬಂದು ನನ್ನ ಆಸನಕ್ಕೆ ತಿರುಗಿದೆ. 'ಏನ್ ಮಾಡಾಕ್ ಆಗ್ತೈತಿ ದೋಸ್ತ. ಎಲ್ಲಾ ಮಾಡಿದುಣ್ಣೋ ಮಾರಾಯಾ ಅಂತಾರಲ್ಲೋ ಸುಳ್ಳಲ್ಲ. ಎಷ್ಟು ಉರದಾ ಅಂತೀ ಅವಾ. ನಿನಗೊತ್ತಿಲ್ಲ. ಈಗ 14-15 ವರ್ಷದ ಹಿಂದ ಇಲ್ಲೇ ಹುಬ್ಬಳ್ಯಾಗ ನಾಟಕ್‌ದಾಗ ಪಾರ್ಟ್ ಮಾಡತಿದ್ದಾ. ದಿನಲೂ ಪೇಪರಿನ್ಯಾಗ ಇವ್ನ ಫೋಟೋ. ನಾಯಕನ ಪಾತ್ರದಲ್ಲಿ ಶಿವನಾಗ್, ಎಂ.ಎ, ಎಂದು ಹಾಕಿಸುತ್ತಿದ್ದರು. ಪಕ್ಕದಲ್ಲೇ ಕನ್ನಡದ ಖ್ಯಾತ ಮಾಜಿ ನಾಯಕಿಯೊಬ್ಬಳ ಚಿತ್ರವೂ ಇರುತ್ತಿತ್ತು. ನೂರು ಪ್ರಯೋಗಗಳಲ್ಲಿ ಇಂತಹ ಮೂವರು ನಟಿಯರ ಬದಲಾವಣೆ. ಆದರೆ ನಾಯಕ ಮಾತ್ರ ಈತನೇ. ಐವತ್ತನೇ ಪ್ರಯೋಗಕ್ಕೆ ಬಹಳ ಒತ್ತಾಯ ಮಾಡಿದ್ದಕ್ಕೆ ನಾನೂ ಹೋಗಿದ್ದೆ. ಈಗಾಗಲೇ ಎರಡು ಖ್ಯಾತ ನಟಿಯರ ಜೊತೆ ಸಂಬಂಧ ಬೆಳೆದಿರುವುದಾಗಿ ಸಿಕ್ಕ ತುಸು ಹೊತ್ತಿನಲ್ಲೇ ರಸವತ್ತಾಗಿ ವಿವರಿಸಿದ್ದ. ಕೈಯಲ್ಲಿ ಹಣ ಮೈಯಲ್ಲಿ ನೆಣ ಇದ್ದವನೇ ನಿಜವಾದ ಜಾಣ ಎಂಬ ಯಾವುದೋ ಹಳೆ ನಾಟಕವೊಂದರ ಡೈಲಾಗ್ ಹೊಡೆದು ಅವಸರವಸರವಾಗಿ ಮೇಕಪ್ ರೂಮಿಗೆ ತೆರಳಿದ್ದ. ಅದನ್ನು ಕೇಳುತ್ತಲೇ ನನಗೆ ಅವರ ಹಿಂದಿನ ಕೆಲ ಲೀಲೆಗಳು ಕಣ್ಣೆದುರು ಬರತೊಡಗಿದವು.

ಹತ್ತನೇ ವರ್ಗದಲ್ಲಿದ್ದಾಗಲೇ ಮೇಲಿನ ಓಣಿ ಹುಡುಗಿಯೊಬ್ಬಳೊಡನೆ, ಮತ್ತೆ ರಾಮಗೇರಿಯ ತನ್ನ ದೂರದ ಸಂಬಂಧಿಕರ ಮಗಳೊಬ್ಬಳು ಪರೀಕ್ಷೆ ಬರೆಯಲು ಕನಕಾಪುರಕ್ಕೆ ಬಂದಾಗ ಬಣವಿ ಹಿಂದೆ ಕೂಡಿಕೊಳ್ಳುತ್ತಿದ್ದುದನ್ನು ಆತ ಹೇಳುತ್ತಿದ್ದುದು ಕಿವಿಯಲ್ಲಿ ಗುನುಗುಡಿಸಿ ಅದನ್ನೇ ನೋಡುತ್ತಿದ್ದಂತೆ ಕಣ್ಣಲ್ಲಿ ಚಿತ್ರ ತೇಲಿ ಬರತೊಡಗಿತು. ಬಾರ್ ಮುಚ್ಚುವ ಹೊತ್ತಾಯಿತೆಂದು ಮಾಲಿಕ ಬಂದು ಹೇಳುತ್ತಲೇ ಬಿಲ್ ಕೊಟ್ಟು ಜಾಗ ಖಾಲಿ ಮಾಡಿದೆವು. ದಾರಿಯಲ್ಲಿ ಕರಾಳ ರಾತ್ರಿಗಿಂತ ಗಾಢವಾಗಿ ಮನೋವೇದನೆ ಕಾಡುತ್ತಿತ್ತು, ಹಿತವಾಗಿ ಬೀಸುತ್ತಿದ್ದ ತಂಗಾಳಿ ಪರಿಣಾಮ ಬೀರದೇ ಹೋಗಿತ್ತು. ಆ ನೀರವ ವಾತಾವರಣದಲ್ಲೇ ನಾಳೆ ಊರಿಗೆ ಹೋಗಿ ಶಿವನಾಗನನ್ನು ನೋಡಿ ಮಾತನಾಡಿಸಿ ಬರಬೇಕೆಂದು ನಿರ್ಧಾರ ತೆಗೆದುಕೊಂಡೆವು.

ಊರು ಮುಟ್ಟುತ್ತಲೇ ಸಂಜೆ ಶಿವನಾಗನನ್ನು ನೋಡಲು ಅವನ ಮನೆಗೆ ಹೋದೆವು. ಕಟ್ಟೆಯ ಮೇಲಿನ ಕುರ್ಚಿಗಳ ಮೇಲೆ ಕೂಡಲು ಹೇಳಿ ಅವನ ಮುದಿತಾಯಿ ಒಳಗೆ ಹೋದಳು. ತುಸು ಹೊತ್ತಿನಲ್ಲಿ ಶಿವು ಪ್ರತ್ಯಕ್ಷನಾದ. ನಂಬಲಸಾಧ್ಯ! ತಲೆಗೊಂದು ಹೊಲಸಾದ ಟರ್ಕಿ ಟಾವೆಲ್ ಅದರೊಳಗೇ ಕೈಗಳನ್ನು ತೂರಿಸಿಕೊಂಡು ಬಂದು ತುದಿಗಟ್ಟೆಗೆ ಕುಳಿತುಕೊಳ್ಳತೊಡಗಿದ. 'ಈ ಕಡೆ ಬಾ', 'ನಾ' ಎನ್ನುವ ಶಬ್ದ ನನ್ನ ಬಾಯಲ್ಲಿ ಅರ್ಧಕ್ಕೆ ಉಳಿದದ್ದು ಕೇಳಿ ಆತನೇನು ಅಂದುಕೊಂಡನೋ ಎಂದು ನಾನು ಕಸಿವಿಸಿಗೊಳ್ಳುತ್ತಿರುವಾಗಲೇ ಆತ, 'ಏ ಇಲ್ಲೇ ಇರ್ಲಿ ಬಿಡೋ, ಇದು ಅಂದಾಕರ ಕೆಟ್ ಸೂಳೆಮಗಂದ ರೋಗ, ತೀರ ಸಮೀಪ ಬರಬಾರ್ದು.' ಎಂದು ಏನೂ ಆಗಿಲ್ಲವೇನೋ ಎಂಬಂತೆ ಉತ್ತರಿಸಿದ. ಅದು ನನ್ನನ್ನು ನೇರವಾಗಿ ತಟ್ಟಿತು. ದೇವರಮನಿ ಮಾಸ್ತರು ಲೆಕ್ಕ ಮಗ್ಗಿ ಕೇಳುವಾಗಿನ ಪೈಪೋಟಿಯಲ್ಲಿ ನನ್ನನ್ನು ಆತ ಸೋಲಿಸಿದಂತಾಯ್ತು ನನ್ನ ಸ್ಥಿತಿ. ಊದಿದ ಕಣ್ಣು ಯಾವುದೋ ಲೋಕವೊಂದನ್ನು ಅರಸುತ್ತ ಮುನ್ನಡೆಯುತ್ತಿವೆಯೋ ಅಥವಾ ಸ್ಮಶಾನದ ತೀವ್ರ ಹುಡುಕಾಟದಲ್ಲಿವೆಯೋ ಎಂಬಂತೆ ಭಾಸವಾಗುತ್ತಿತ್ತು. ಕಪ್ಪಾಗಿ ಸುಕ್ಕುಗಟ್ಟಿ ಬಿರಿದುಕೊಳ್ಳುತ್ತಿರುವ ಹಣೆ, ಅದರಲ್ಲಿ ಮುಚ್ಚಿಹೋದ ಹುಬ್ಬುಗಳು. ಹೊರಗಿನ ನಸುಗೆಂಪು ಬಣ್ಣದ ಸೂರ್ಯನ

ಕಿರಣಗಳು ಒಮ್ಮೆಲೇ ಬೆಳೆದು ಚೂಪು ಚೂಪಾಗಿ ಕೂರಂಬುಗಳಂತೆ ನನ್ನ ಕಣ್ಣುಗಳಲ್ಲಿ ಇರಿಯತೊಡಗಿದವು. ಮತ್ತೆ ಬಸಿಯತೊಡಗುವುದರಲ್ಲಿತ್ತು ಕಣ್ಣೀರು. ತಾಳಿಕೊಂಡೆ. ಶಿವನಾಗ ಮುಂದುವರೆಸಿದ್ದ 'ಇಬ್ರೂ ಒಮ್ಮೆಲೆ ಬಂದ್ರೆಲ್ಲಾ, ಭಾಳ ಖುಷಿ ಆತು. ಬಂದದ್ದೆಲ್ಲಾ ಅನುಭವಿಸಬೇಕಲ್ಲಾ. ಔಷಧ ತೊಗೊಳ್ಳಾಕ ಸುರು ಮಾಡೀನಿ ನಾಲ್ಕೈದು ತಿಂಗಳಾತು, ಒಂಚೂರು ಗುಣಾ ಈಗ. ನೋಡೋಣ, ಆರಾಮ ಆತು ಆತು ಇಲ್ಲಾಂದ್ರ ಇಲ್ಲ. ನಂದರ್ ಏನ್ ಉಳದೈತಿ ಇನ್ನ ಹೆಂಡತೀನೂ ಸತ್ತು ಎರಡು ವರ್ಷ ಆತು. ಇರಾವ್ ನಾ ಒಬ್ಬನ; ಮನಸ್ ಗಟ್ಟಿ ಮಾಡೀನಿ' ಎಂದಂದು ತುಸು ತಡೆದ. ನಂತರ 'ಯಾರೇನು ಮಾಡುವರು ಯಾರಿಂದಲೇನಿಹುದು ಪೂರ್ವ ಜನ್ಮದ ಕರ್ಮ ವಿಧಿ ತಾ ಬೆನ್ನಬಿಡದು' ಎಂದು ಯಾವುದೋ ನಾಟಕವೊಂದರ ಹಾಡಿನ ಸಾಲುಗಳನ್ನು ಹೇಳಿದ. ನಾಟಕದ ಬೆಂಬತ್ತಿಹೋಗಿ, ಭ್ರಮಾಲೋಕದಲ್ಲಿ ವಿಹರಿಸಿ ಬಂದ ಶಿವುಗೆ ಜೀವನದ ವಾಸ್ತವತೆ ಕ್ರೂರವಾಗಿಯೇ ಕೈಕೊಟ್ಟಿತ್ತು. ಬಾಳ ಭವಿಷ್ಯವನ್ನೆಲ್ಲಾ ನುಂಗಿಹಾಕಿತ್ತು. ಸೋಲಿನ ಸತ್ಯಾಂಶ ಒಪ್ಪಿಕೊಳ್ಳದೇ ಆತ ಅಂಗೈ ಅಗಲದ ಬಟ್ಟೆಯಲ್ಲಿ ಇಡೀ ಮೈ ಮುಚ್ಚಿಕೊಳ್ಳಲು ಪ್ರಯಾಸಪಡುತ್ತಿದ್ದನಾದರೂ ಮಾನದ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಂತೆ ಕಾಣಲಿಲ್ಲ. ಆತನ ವಿಚಿತ್ರ ಧೈರ್ಯಕಂಡು ಒಳಗೊಳಗೆ ತೀವ್ರ ಅಳುಕುತ್ತಿದ್ದ ನನಗೆ ಮತ್ತೊಮ್ಮೆ ಆತ ಮಗ್ಗಿ ಹೇಳುವಲ್ಲಿ ನನ್ನನ್ನು ಸೋಲಿಸಿದಂತಾಯ್ತು. ಈತ ಏನೋ ನಮ್ಮಿಂದ ಮುಚ್ಚಿಡುತ್ತಿರಬಹುದೇ. ಚಿಕ್ಕವರಿದ್ದಾಗಿನ ಪೈಪೋಟಿಗಳನ್ನೇ ನೆನೆದು, ಇನ್ನೂ ನಮ್ಮನ್ನು ದೂರ ಇಟ್ಟೇ ಈ ನಿಲುವು ತೋರಿಸುತ್ತಿದ್ದಾನೆಯೇ. ಇಂತಹ ಸಂದರ್ಭಗಳಲ್ಲಾದರೂ ತನ್ನ ಸೋಲನ್ನೊಪ್ಪಿಕೊಂಡು ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಬಾರದೇಕೆ? ನಾವೇನು ಅಷ್ಟೊಂದು ಪರಕೀಯರೆ? ಆಘಾತ ಪಶ್ಚಾತ್ತಾಪಗಳು ಈತನ ಸನಿಹ ಸುಳಿಯುತ್ತಿರುವ ಲಕ್ಷಣಗಳೇ ಕಾಣುತ್ತಿಲ್ಲವಲ್ಲ? ಎಂದುಕೊಳ್ಳುತ್ತಿರುವಾಗಲೇ, ಆತನೇ ಮತ್ತೆ ಮಾತು ಮುಂದುವರೆಸಿ “ಇರ್ಲಿ ಬಿಡ್ರಿ, ಬರೀ ನಂದೇ ಆಯ್ತು ನಿಮ್ಮದೇನ್ ಸಮಾಚಾರ. ಪೇಪರಿನ್ಯಾಗ್ ಓದ್ತಿರ್ತಿನಿ ಆಗಾಗ ಇಬ್ಬರ್ ಸುದ್ದಿನೂ, ಇವತ್ತ ಮುಂಜಾನೆ ನೆನಪಾಗಿತ್ತು. ರಾಜೂನ ಪುಸ್ತಕ ಬಿಡುಗಡೆ ಆತೂ ಅಂತ ಯಾರೋ ಓದಿ ಹೇಳಿದ್ರು. ನೀನೂ ಏನರ ಬರಿದಿದ್ದೀಯ ಅಥವಾ ಪಿ.ಎಚ್.ಡಿ. ಮಾಡಿ ಸುಮ್ಮನ ಕುಂತೀಯ. ನೀ ಬರೀಬೇಕಪ್ಪಾ ಭಾಳ ಚೊಲೋ ಐತಿ ನಿನ್ನ ಶೈಲಿ.

ಐದಾರು ವರ್ಷದ ಹಿಂದ್ ಒಂದ್ ಕತೀ ಓದಿದ್ನಿ, ಆಮ್ಯಾಲೆ ಏನೂ ಬರೀಲೇ ಇಲ್ಲ ಏನು? ಬರ್ಯೋದು ಬಿಡಬ್ಯಾಡ.....' ನನ್ನನ್ನುದ್ದೇಶಿಸಿ ಇನ್ನೂ ಏನೇನೋ ಅತೀ ಸಹಜವಾಗಿಯೇ ಹೇಳುತಿದ್ದ. ಎಲಾ ಇವನ! ನಮಗೆಷ್ಟು ಯಾತನೆಯಾಗುತ್ತಿದೆ! ಈತ ಬರವಣಿಗೆ ಬಗ್ಗೆ ಹೇಳುತಿದ್ದಾನೆ. ಬೆಳಿಗ್ಗೆ ದಾರಿಯುದ್ದಕ್ಕೂ ಆತನ ರೋಗ ವಾಸಿಯಾಗಲು ನಾವೇನಾದರೂ ಸಹಾಯ ಮಾಡಲೇಬೇಕು. ಅವನ ಕಮರಿಹೋದ ಆಶಾ ಭಾವನೆಗಳನ್ನು ಪುನಃ ಚಿಗುರಿಸಬೇಕು. ಆತ್ಮಹತ್ಯೆಗೆ ಪ್ರಯತ್ನಿಸುತ್ತಿರುವುದು ಕಂಡುಬಂದರೆ ಬೇಂದ್ರೆಯವರ ‘ನಿದ್ದೆಗೊಮ್ಮೆ ನಿತ್ಯಮರಣ ಎದ್ದ ಸಲ ನವೀನ ಜನನ' ಎಂಬ ಕವನವೊಂದರ ಸಾಲುಗಳನ್ನು ನೆನಪಿಸಿ ಆತನಲ್ಲಿ ಜೀವನದ ಬಗ್ಗೆ ಮತ್ತೆ ವಿಶ್ವಾಸ ಕುದುರುವಂತೆ ಮಾಡಬೇಕು. ಹೊತ್ತಿಗಾಗದ ಗೆಳೆಯರು ಗೆಳೆಯರೆ? ಹೀಗೆಲ್ಲಾ ಯೋಚಿಸಿಕೊಂಡು ಬಂದ ನಮಗೆ ಈತನ ಮಾತಿನ ಶೈಲಿ ಮನೋಧರ್ಮ ಬೆಚ್ಚಿ ಬೀಳಸಿದವು. ನೊಂದುಕೊಂಡ ನಮ್ಮ ಸ್ಥಿತಿ ನೋಡಿ ನಮ್ಮನ್ನೇ ಸಂತೈಸುವ ಮಾತುಗಳನ್ನಾಡುತ್ತಿದ್ದಾನೆ. ಮೂಗು ಹೋದರೂ ಮೂಗಿನ ಹೊರಳೆಗಳಿವೆ ಎಂಬ ಜಂಭದಲ್ಲಿಯೇ ಇದ್ದಾನೆ. ಎಂತಹ ವಿಚಿತ್ರ, ಕೊನಗೆ ನಿಸಹಾಯಕರಾಗಿ, ‘ಏನಾದರೂ ಸಹಾಯ ಬೇಕಾದರೆ ಹೇಳು' ಎಂದು ಆಶ್ವಾಸನೆ ನೀಡುತ್ತ ಇಬ್ಬರೂ ಎದ್ದೆವು.

ನಮ್ಮನ್ನು ನೋಡಿ ಶಿವನಾಗ ತೀವ್ರ ನೋವು ಅನುಭವಿಸಿ ಗೋಳಾಡಬಹುದೆಂದು ಇನ್ನೂ ಏನೇನೋ ತಿಳಿದಕೊಂಡಿದ್ದ ನಮಗೆ ಆತನು ಆ ಪರಿಸರಕ್ಕೆ ಹೊಂದಿಕೊಂಡ ಸ್ಥಿತಿ ಸ್ಥಿತಪ್ರಜ್ಞನೊಬ್ಬನನ್ನು ನೆನಪಿಸಿ ಭ್ರಮನಿರಸನ ಮಾಡುತ್ತಿದ್ದರೂ ನಮ್ಮಲ್ಲಿಯ ನೋವನ್ನು ಮಾತ್ರ ದ್ವಿಗುಣಗೊಳಿಸುತ್ತಿತ್ತು.

❖

ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿಯೆಂದರೆ ಸಾಮಾನ್ಯವೇ. ರಾಜ್ಯಕ್ಕೆ ರಾಜ್ಯವೇ ಎದ್ದು ಕುಳಿತಿತ್ತು. ಬೆಂಗಳೂರಂತೂ ರಾಜಕೀಯವಾಗಿ ಹೊತ್ತಿ ಉರಿಯುತ್ತಿತ್ತು. ಪತ್ರಿಕೆಗಳಿಗೆ ಟಿ.ವಿ.ಚಾನೆಲ್‌ಗಳಿಗೆ ಇನ್ನಿತರ ಎಲ್ಲ ಮಾಧ್ಯಮದವರಿಗೆ ಈ ಸುದ್ದಿಯನ್ನು ಬಿಟ್ಟು ಬೇರೆಯದನ್ನು ಮುಖಪುಟಕ್ಕೆ ಹಾಕಲು ಮುಖ್ಯಾಂಶಗಳಲ್ಲಿ ಬಿತ್ತರಿಸಲು, ಮನಸ್ಸೇ ಇರಲಿಲ್ಲ. ನೋಡಿದೆಡೆಯೆಲ್ಲ ಇದೇ ಮಾತು, ಇದರದೇ ಮಾತು. ಇನ್ನೊಂದು ವಾರದಷ್ಟೊತ್ತಿಗೆ ಹೊಸ ಮುಖ್ಯಮಂತ್ರಿ ಆಯ್ಕೆ ಆಗಬೇಕು. ಪ್ರಸ್ತುತ ಮುಖ್ಯಮಂತ್ರಿ ಶಿವೋತ್ತಮರಾವ್‌ರವರು ತಮಗೆ ಎಪ್ಪತ್ತೈದು ತುಂಬಿದ್ದರಿಂದ ಇನ್ನು ತಾವು ಸಕ್ರಿಯ ರಾಜಕಾರಣದಿಂದ ನಿವೃತ್ತರಾಗಲಿರುವುದಾಗಿ ಘೋಷಿಸಿ ಆಗಲೇ ಎರಡು ತಿಂಗಳಾಗಿದೆ. ಅವರು ಹಾಗೆ ವಯಸ್ಸಿನ ಕಾರಣ ನೀಡಿದ್ದರೂ ಅಸಲು ಕಾರಣಗಳು ಬೇರೆಯೇ ಆಗಿದ್ದವೆಂಬುದನ್ನು ರಾಜಕೀಯರ ಅಲ್ಪಸ್ವಲ್ಪ ಜ್ಞಾನವಿದ್ದವರೆಲ್ಲರೂ ಬಲ್ಲರು. ಪಕ್ಷದಲ್ಲಿ ಉಲ್ಬಣಿಸುತ್ತಿದ್ದ ಭಿನ್ನಮತ ಒಂದೆಡೆಯಾದರೆ, ಕ್ಷೀಣಿಸುತ್ತಿರುವ ಆರೋಗ್ಯ ಮತ್ತೊಂದೆಡೆಯಾಗಿತ್ತು. ಮಹಾ ಚಾಣಾಕ್ಷ ಅವರು, ಏನು ತೋರುತ್ತದೆಯೋ ಅದು ಸತ್ಯವಲ್ಲ. ಯಾವುದು ಸತ್ಯವೊ ಅದು ತೋರುವುದಿಲ್ಲ, ಎಂಬ ಗಾದೆ ಮಾತಿನ ವ್ಯಾಖ್ಯಾನವಿದ್ದಂತಿದ್ದರು. ರಾಜಕಾರಣದಲ್ಲಿ ತೀರ ಪಳಗಿದ, ನೆಹರು, ಮುರಾರ್ಜಿ, ಜೊತೆ ಸುದೀರ್ಘ ಒಡನಾಟ ಮಾಡಿದ ಅತ್ಯಂತ ಅನುಭವಿ ಕುಳ. ಈಗಲಾದರೂ ಅಷ್ಟೇ. ರಾಜ್ಯದ ಚುಕ್ಕಾಣಿ ಬೇರೆಯವರಿಗೆ ವಹಿಸಿದರೆ, ಕೇಂದ್ರದಲ್ಲಿ ಹಣಕಾಸು, ರಕ್ಷಣೆ ಮುಂತಾದ ಪ್ರಮುಖ ಇಲಾಖೆಗೆ ಇವರನ್ನು ಸಚಿವರನ್ನಾಗಿ, ಅವರದೇ ಪಕ್ಷ ಅಲ್ಲಿರುವುದರಿಂದ, ಆರಿಸುವ ಸ್ಪಷ್ಟ ಲಕ್ಷಣಗಳೂ ಕಂಡುಬರುತ್ತಿವೆ. ವರಿಷ್ಠರ ಒತ್ತಾಯಕ್ಕೆ ಮಣಿದು ಎಂದು ಆಗ ಅವರು ಅಧಿಕಾರ ವಹಿಸಿಕೊಂಡರೆ ಯಾರೂ ಆಶ್ಚರ್ಯಪಡಬೇಕಿಲ್ಲ.

ಶಿವೋತ್ತಮರಾಯರೇನೊ ತಮ್ಮ ಇಂದಿನ ಹಾಗೂ ಮುಂದಿನ ವ್ಯವಸ್ಥೆಯ ನಿರೀಕ್ಷೆಯ ಪ್ರವಾಹದಲ್ಲಿ ಪದತ್ಯಾಗದ ವಿಚಾರ ತೇಲಿ ಬಿಟ್ಟಿದ್ದರು. ಆದರೆ ಈ ಧಾರೆಯಲ್ಲಿ ತೇಲುತ್ತಿರುವವರು ಕೆಲವರಾದರೆ ಮುಳುಗುತ್ತಿರುವವರೂ ಹಲವರಾಗಿದ್ದರು. ಮುಖ್ಯಮಂತ್ರಿ ಗದ್ದುಗೆಯ ಎನಿತು ದೂರವನ್ನು ಈಜಿ ತಲುಪುವುದು ಎಲ್ಲರಿಗೂ ಸಾಧ್ಯವಾಗುವ ಮಾತೆ? ನಾ ನೀ ಎನ್ನುವ ನಾಲ್ಕು ಭಾರಿ ಕುಳಗಳು ತಮ್ಮ ತಮ್ಮ ಹಿಂಬಾಲಕರು, ಬೆಂಬಲಿಗರೊಂದಿಗೆ ಶಕ್ತಿ ಪ್ರದರ್ಶನಕ್ಕೆ ತೊಡಗಿದ್ದರು. ಬಸವೇಗೌಡರು, ಎಸ್.ಕೆ. ಸರ್ ದೇಸಾಯಿಯವರು, ಆರ್. ವಿ. ಪಾಟೀಲರು - ಈ ಮೂವರಲ್ಲಿ ಒಬ್ಬರೆಂದು ಈಗ ಕೆಲದಿನಗಳಿಂದ ವದಂತಿ ಹರಡಿ ಬಿಟ್ಟಿದೆ. ಮೊದಲ ಇಬ್ಬರು ಪ್ರಮುಖ ಕೋಮಿನವರಾಗಿದ್ದರೆ ಆರ್.ವಿ.ಪಾಟೀಲರು ಹಿಂದುಳಿದ ವರ್ಗದ ನೇತಾರರಾಗಿದ್ದರು. ಈಗಾಗಲೇ ಜಾತಿಯ ಲೆಕ್ಕಾಚಾರ ಹಿಡಿಯುವುದಿಲ್ಲವೆಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಹಲವಾರು ಬಾರಿ ಘೋಷಿಸುತ್ತಿದ್ದುದರಿಂದ, ಮುಖ್ಯಮಂತ್ರಿ ಆಯ್ಕೆ ಜಾತಿ ಆಧಾರದ ಮೇಲೆಯೇ ಖಂಡಿತ ಆಗುತ್ತದೆಂದು ಅನುಭವಿ ಧುರೀಣರ ಧೋರಣೆಯಾಗಿತ್ತು. ಅದು ಹಾಗಾಗಬಾರದೆಂದು ಎರಡನೇ ಸಾಲಿನಲ್ಲಿದ್ದ ಬಹುತೇಕ ಎಲ್ಲ ಜಾತಿಯ ಪ್ರತಿನಿಧಿಗಳು ಒಂದೆಡೆ ತಂತಾನೇ ಧೃಡೀಕರಣಗೊಳ್ಳತೊಡಗಿದ್ದರು. ಈ ಮೂವರಲ್ಲಿ ಇಬ್ಬರಂತೂ ಎಪ್ಪತ್ತು ವರ್ಷ ದಾಟಿದವರು, ಇನ್ನೊಬ್ಬರು ಅರವತ್ತರ ಅಂಚಿನಲ್ಲಿದ್ದವರು. ರಾಜಕಾರಣದಲ್ಲಿ ಏನನ್ನಾದರೂ ಮಾಡಬೇಕೆಂದರೆ ಅದನ್ನು ಸಮರ್ಥಿಸಿಕೊಳ್ಳಲು ನೂರು ಕಾರಣಗಳಿರುತ್ತವೆ, ಹಾಗೆಯೇ ಯಾವುದನ್ನಾದರೂ ಮಾಡದೇ ಇರಲೂ ಅದಕ್ಕೆ ಸರಿಸಮಾನದ ಸಕಾರಣಗಳೂ ದೊರೆಯುತ್ತವೆ. ಯಾವುದರ ಬಗ್ಗೆ ತೀರ ತಲೆಕೆಡಿಸಿಕೊಳ್ಳುವುದಾಗಲಿ, ಹುಡುಕಾಟ ಮಾಡುವುದಾಗಲಿ ಬೇಕಾಗಿಯೇ ಇಲ್ಲ. ಇಂತಹ ಒಂದು ಏನಕೇನ ಪ್ರಕಾರಣೇನ ಎಂಬಂತೆ ಮುಖ್ಯಮಂತ್ರಿ ಪದಕ್ಕೆ ನಾಲ್ಕನೆ ಹೆಸರು ಹುಟ್ಟುಹಾಕಿದಾಗ ಎದ್ದು ಬಂದದ್ದು ಸನ್ಮಾನ್ಯ ಶ್ರೀ ಅಪ್ಪಾಸಾಹೇಬ್ ದೇಶನೂರ್‌ರವರದು.

ಆ ನೆಲೆ ಈ ನೆಲೆ ತಿಳಿದವರಿಲ್ಲ ಎಂದು ಈವರೆಗೆ ಏನೇನೋ ಗಾದೆ ಮಾತು ಮಾಡಿದ್ದರೂ, ರಾಜಕಾರಣದ ನೆಲೆ ತಿಳಿದವರಂತೂ ಖಂಡಿತ ಇರಲಿಕ್ಕಿಲ್ಲ. ಅಂತೆಯೇ ರಾಜಕಾರಣದಲ್ಲಿ ಖಾಯಂ ಮಿತ್ರರಾಗಲಿ ಖಾಯಂ ಶತ್ರುವಾಗಲಿ

ಯಾರೂ ಇರುವುದಿಲ್ಲ ಎಂಬಂತಹ ಹಲವಾರು ನಾಣ್ಣುಡಿಗಳು ಹುಟ್ಟಿಕೊಂಡಿವೆ. ಪ್ರೀತಿ ಹಾಗೂ ಯುದ್ಧದಲ್ಲಿಯಂತೆ ರಾಜಕಾರಣದಲ್ಲಿ ಏನಾದರೂ ಸೈ ಅದನ್ನು ಮಾಡಿದರಾಯಿತು. Nothing succeeds like Success (ವಿಜಯಕ್ಕೆ ಪರ್ಯಾಯವಾದದ್ದು ಬೇರೇನೂ ಇಲ್ಲ) ಎಂಬುದಂತೂ ಇಲ್ಲಿ ನೂರಕ್ಕೆ ನೂರು ಸತ್ಯ. ಮೈಸೂರಿನ ಕಡೆಯವರಂತೂ ರಾಜಕಾರಣವನ್ನು ಪಶ್ಚಿಮವಾಹಿನಿ ಎಂದು ಕರೆದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಪೂರ್ವಕ್ಕೆ ನದಿ ಹರಿಯುತ್ತಿದೆ ಎಂದು ಯಾರಾದರೂ ಸರ್ಧೆಗೆ ಇಳಿದರೆ ಅದೇ ನದಿ ಇಲ್ಲಿ ಪಶ್ಚಿಮಾಭಿಮುಖವಾಗಿದೆ. ಬಹುಶಃ ಇದರಂತೆಯೇ ಇದೆ ರಾಜಕಾರಣ, ಹಣ್ಣು ಹಣ್ಣು ಮುದುಕಿಯೊಬ್ಬಳು ಮೂವತ್ತು ಕಿಲೋಮೀಟರ್ ದೂರದ ಮಗಳ ಮನೆಗೆ ಹೋಗಿದ್ದಳು. ಗ್ರಾಮ ಪಂಚಾಯ್ತಿ ಚುನಾವಣೆ ಬಂತು, ಮುದುಕಿಗೆ ಮೈಯಲ್ಲಿ ಹುಷಾರಿರಲಿಲ್ಲ. ಆದರೆ ತನ್ನೂರಲ್ಲಿಯೇ ಕೊಟ್ಟ ಇನ್ನೊಬ್ಬ ಮಗಳ ಮಗ ಚುನಾವಣೆಗೆ ನಿಂತಿದ್ದಾನೆ. ಮುದುಕಿ ನಡುಗುತ್ತ, ತೇಕುತ್ತ ತಾನು ತನ್ನೂರಿಗೆ ಹೋಗಲು ಹಠಮಾಡಿ ಹೊರಟು ಬಂದು ಚುನಾವಣಾ ಜಾಗೆ ತಲುಪಿದ್ದಳು. ಎಲ್ಲರಿಗೂ ಆನಂದ ಮುದುಕಿ ಕೊನೆಗೂ ಮೊಮ್ಮಗನಿಗೆ ಹಿಂದಿನ ಎಲ್ಲ ವೈಮನಸ್ಸು ಮುರಿದು ಮತ ನೀಡಲು ಬಂದಳೆಂದು, ಸಹಜವಾಗಿ ಕೇಳಿದಾಗ ಅವಳು ವಿವರಣೆ ನೀಡಿದ್ದು ನೋಡಿ: "ಹೌದು ನಾನು ಮತ ಚಲಾಯಿಸಲೆಂದೇ ಬಂದೆ. ಚಲಾಯಿಸದಿದ್ದರೆ ಹೇಗೆ? ಅದೂ ಮೊಮ್ಮಗ ನಿಂತಾಗ, ಅವರಿಗೂ ತೋರಿಸಬೇಕಿತ್ತು ಅಮ್ಮ (ಅಜ್ಜಿ) ಹೇಗೆ ಎಂದು ಬರ್ಲಿ ಅವನು ಹೇಗೆ ಆರಿಸಿ ಬರುತ್ತಾನೋ ನಾನೂ ನೋಡೇ ಬಿಡುತ್ತೇನೆ" ಆಗ ತಿಳಿಯಿತು ಜನಕ್ಕೆ ಅಜ್ಜಿ ಯಾರ ಕಡೆ ಮತ ಹಾಕಿದ್ದಳೆಂದು. ಇದೆಲ್ಲ ನಮ್ಮ ರಾಜಕೀಯ ಪ್ರಜ್ಞೆಯ ಪರಿಣಾಮ ಅಷ್ಟೆ. ಪ್ರಜಾತಂತ್ರದ ವ್ಯವಸ್ಥೆ ಬ್ರಿಟಿಷರು ಹಾಕಿಕೊಟ್ಟ ಒಂದು ಉತ್ತಮ ಬಳುವಳಿ ಆಗಿದ್ದಾಗ್ಯೂ ಅದನ್ನು ನಾವು ಹೇಗೆ ಉಪಯೋಗಿಸುತ್ತೇವೋ ಅದರ ಮೇಲೆ ನಿಂತಿದೆ ಅದರ ಜಯಾಪಜಯ.

ಅನಕ್ಷರಸ್ಥ ತೀರ ವಯಸ್ಸಾದವರ ಮತದಾನದ ಹಕ್ಕೇ ಅಷ್ಟೊಂದು ಶಕ್ತಿಶಾಲಿಯಾಗಿರುವಾಗ ಇನ್ನು ಲಕ್ಷಾಂತರ ಜನರ ಪ್ರತಿನಿಧಿಗಳಾದ ಶಾಸಕರ, ನೇತಾರರ ಬಗ್ಗೆ ಹೇಳೂವುದೇನಿದೆ. ಒಬ್ಬೊಬ್ಬರದೂ ಒಂದೊಂದು ಆಳ. ಅದನ್ನು ಮೀರಿದ ಆಳ ಇದು. ಇದನ್ನು ಮೀರಿದ್ದು ಮತ್ತೊಂದು. ಒಟ್ಟಿನಲ್ಲಿ ಅಳೆಯಲಾಗದ ಆಳಗಳೇ ಬಹುತೇಕ ಎಲ್ಲ. ಇದೇ ವರ್ಷ ನಾಲ್ವತ್ತನಾಲ್ಕನೇ ವಯಸ್ಸಿಗೆ ತಲುಪಿದ ಅಪ್ಪಾ ಸಾಹೇಬ; ಈಗಾಗಲೇ ಮೂರು ಬಾರಿ ಆರಿಸಿ ಬಂದಿದ್ದಾರೆ. ಒಟ್ಟು ಆರು ವರ್ಷ ಮಂತ್ರಿಯಾಗಿ ಪ್ರಮುಖ ಖಾತೆಗಳನ್ನು ನಿರ್ವಹಿಸಿದ್ದಾರೆ ಈಗ ಇವರಿಗಿಂತ ಹತ್ತಾರು ಜನ ಹಿರಿಯರಿದ್ದಾಗ್ಯೂ. 42 ಜನ ಶಾಸಕರು ಇವರಿಗೆ ಬೆಂಬಲ ಸೂಚಿಸಿ ಸಹಿ ಮಾಡಿದ್ದರೆ, ಇನ್ನೂ ಮಾಡುವವರಿದ್ದಾರೆ. ಇದನ್ನು ತಿಳಿದ ಅವರು ಒಂದು ರೀತಿಯ ಸೋಜಿಗ, ಸಂತಸದಲ್ಲಿದ್ದಾರೆ. ಅನೇಕ ಸಾರೆ ಇದು ಹೀಗೇಕೆ ಆಯಿತು ಅದು ಹಾಗೇಕೆ ಆಯಿತು ಎನ್ನುವುದು ಅತೀ ನಿಗೂಢವಾಗಿಯೇ ಇರುತ್ತದೆ. ಬಹಳಷ್ಟು ಒಳಶಕ್ತಿಗಳು ಹಲವಾರು ದಿಕ್ಕು ದಿಶೆಗಳಲ್ಲಿ ಕೆಲಸ ಮಾಡುತ್ತಿರುತ್ತವೆ. ಭೌತಿಕ, ರಾಸಾಯನಿಕ ಕ್ರಿಯೆಗಳಿಗಿಂತಲೂ ಹೆಚ್ಚು ಸಂಕೀರ್ಣವಾಗಿ ರಾಜಕೀಯ ದಾಳಗಳು ಪ್ರಯೋಗಿಸಲ್ಪಟ್ಟಿರುತ್ತವೆ. ಇಂತಹ ಒಂದು ಉದಾಹರಣೆ ಅಪ್ಪಾಸಾಹೇಬ ದೇಶನೂರವರದ್ದಾಗಿತ್ತು. ಜಾತಿ, ಕೋಮು, ಪ್ರದೇಶ, ಹಣ, ಪ್ರತಿಭೆ...... ಹೀಗೆ ಒಂದು ಎರಡೇ ನಾನಾ ಶಕ್ತಿಗಳು ಇಲ್ಲಿ ಕೆಲಸ ಮಾಡಿದ್ದವು. ಸ್ಪರ್ಧೆಯಲ್ಲಿ ನಂಬರ್ ಒಂದು ಎಂದು ಪರಿಗಣಿಸಲ್ಪಟ್ಟ ಸರ್ ದೇಸಾಯಿ ಯವರು ಹಾಗೂ ಅಪ್ಪಾ ಸಾಹೇಬರೂ ಒಂದೇ ಜಾತಿಗೆ ಸೇರಿದವರಾಗಿದ್ದರು ಹಾಗೂ ಅಕ್ಕಪಕ್ಕದ ಜಿಲ್ಲೆಯವರೂ ಆಗಿದ್ದರು.

ಸರ್ ದೇಸಾಯಿಯವರ ವೈರಿಯೆಂದೇ ಪರಿಗಣಿಸಲ್ಪಟ್ಟ ಬಸವೇಗೌಡರೇ ಅಪ್ಪಸಾಹೇಬ್ ದೇಶನೂರವರ ಹಿಂದೆ ಇದ್ದಾರೆ ಹಾಗೂ ಮುಖ್ಯಮಂತ್ರಿ ಶಿವೋತ್ತಮರಾಯರಿಗೆ ಪರಮಾಪ್ತನಾಗಿದ್ದ ಅಪ್ಪಾಸಾಹೇಬರಿಗೆ ಒಳಗೊಳಗೇ ಸಹಜವಾಗಿ ಮುಖ್ಯಮಂತ್ರಿಯವರ ಬೆಂಬಲವೂ ಇದೆ ಎಂಬ ದಟ್ಟ ವದಂತಿಯೂ ಹರಡಿದೆ. ತಾವು ಬಹುಸಂಖ್ಯಾತ ಶಾಸಕರ ಅಭಿಪ್ರಾಯಕ್ಕೆ ಮಣಿಯುವುದಾಗಿಯೂ ಇದರಂತೆಯೇ ನಿರ್ಣಯ ಕೈಗೊಳ್ಳುವುದಾಗಿಯೂ ಮುಖ್ಯಮಂತ್ರಿಗಳು ಹೇಳಿಕೆ ನೀಡುತ್ತಲೇ ಬಂದಿದ್ದಾರೆ. ಆದರೆ ವಸ್ತುಸ್ಥಿತಿಯಿದ್ದದ್ದು ಮಾತ್ರ ಇಷ್ಟು; ಅಂದಾಜು ನಾಲ್ವತ್ತೆರಡು ಜನ ವಿವಿಧ

ಜಾತಿಗಳ ಕೋಮುಗಳ ಶಾಸಕರು ಅಪ್ಪಾಸಾಹೇಬರನ್ನು ಬೆಂಬಲಿಸಿ ಸಹಿ ಮಾಡಿದ್ದು ಇನ್ನೂ ಹತ್ತು ಹದಿನೈದು ಜನ ಶಾಸಕರು ಸಹಿ ಮಾಡಲು ತಯಾರಿರುವುದು ಮತ್ತು ಅಪ್ಪಸಾಹೇಬರು ಮುಖ್ಯಮಂತ್ರಿಗಳಿಗೆ ಆಪ್ತರಾಗಿದ್ದುದು. ಉಳಿದಂತೆ ಎಲ್ಲವೂ ಉಹಾಪೋಹ ಮಾತ್ರ. ಹಾಗೆ ನಿರ್ದಿಷ್ಟವಾಗಿ ಎಲ್ಲ ಗೊತ್ತಾಗುವಂತಿದ್ದರೆ ಅದು ರಾಜಕಾರಣವಾದರೂ ಹೇಗಾದೀತು?

ಈ ವಸ್ತುಸ್ಥಿತಿಯ ಅರಿವಿದ್ದ ಅಪ್ಪಾಸಾಹೇಬರು ಕೊಂಚ ರೋಮಾಂಚಿತರಾಗಿದ್ದರೂ ಅದನ್ನು ಬಹಿರಂಗವಾಗಿ ತೋರ್ಪಡಿಸಲು ತೀರ ಅನುಮಾನಿಸುತ್ತಿದ್ದರು. ಇದು ಸಕಾರಣವೇ ಆಗಿತ್ತು. ಈಗಾಗಲೇ ತಮ್ಮದೇ ಜಾತಿಯ ಸರ್ ದೇಸಾಯಿಯವರು ಈ ಹಿಂದೆ ಒಮ್ಮೆ ಸ್ಪರ್ಧೆಯಿಂದ ಹಿಂದೆ ಸರಿದು ಶಿವೋತ್ತಮರಾಯರ ಹೆಸರನ್ನು ಸೂಚಿಸಿ, ತಮಗೆ ಸಚಿವ ಸಂಪುಟದಲ್ಲಿ ಎರಡನೇ ಸ್ಥಾನವನ್ನು ಭದ್ರಪಡಿಸಿಕೊಂಡಾಗಿದೆ ಅಲ್ಲದೇ ವಯಸ್ಸು ಹಾಗೂ ರಾಜಕೀಯ ಜೇಷ್ಠತೆಯೂ ಅವರ ನೆರವಿಗೆ ಬರಲಿದೆ. ಆದರೆ ಬಹುಸಂಖ್ಯಾತ ಶಾಸಕರಿಗೆ ಅವರ ಒಳಮುಖಿ ಧೋರಣೆ ಬಿಗಿ ಸ್ವಭಾವ ಹಿಡಿಸುತ್ತಿಲ್ಲವಾಗಿವೆ. ಎರಡು ಬಾರಿ ಮಂತ್ರಿಯಾಗಿ, ಮೂರು ವರ್ಷ ವಿರೋಧ ಪಕ್ಷದ ನಾಯಕರಾಗಿ ಒಂದು ಅವಧಿ ಪಕ್ಷದ ರಾಜ್ಯಾಧ್ಯಕ್ಷರಾಗಿ ಯಾವುದೇ ಪರಿಣಾಮಕಾರಿ ಕೆಲಸ ಮಾಡಿಲ್ಲವೆಂದು ಹಾಗೂ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆರಿಸಿದಲ್ಲಿ ಪಕ್ಷದ ಸಂಘಟನೆಯಲ್ಲಿ ಅವರು ಯಾವ ಪ್ರಭಾವವನ್ನೂ ಬೀರಲಾರರೆಂಬುದು - ಈ ಮೂರು ಅಂಶಗಳು ಸರ್ ದೇಸಾಯಿಯವರ ವಿರೋಧಿ ಅಲೆಗೆ ಕಾರಣವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಬಹುತೇಕ ಶಾಸಕರು ಅಡ್ಡಗೋಡೆ ಮೇಲೆ ಕುಳಿತು, ವರಿಷ್ಠ ಮಂಡಳಿಯ ಒಲವು ನಿಲುವುಗಳನ್ನು ವಿಶ್ಲೇಷಿಸುತ್ತಿದ್ದಾರೆ. ತಾವು ಯಾವುದೇ ಗುಂಪು ರಾಜಕೀಯಕ್ಕೆ ಹಾಗು ವ್ಯಕ್ತಿ ನಿಷ್ಠೆಗೆ ಒಳಗಾಗದೇ ಕೇವಲ ಮೇಲಿನವರ ಆದೇಶ ಪಾಲಿಸುವುದಾಗಿ ಹೇಳುತ್ತಿದ್ದಾರೆ.

ಮತ್ತೊಂದು ಕಡೆ ಬಸವೇಗೌಡರು ತಮ್ಮ ಕೋಮಿನ ಮೂವತ್ತು ಜನರಲ್ಲದೇ ಇನ್ನಿತರ ಹತ್ತಾರು ಶಾಸಕರನ್ನು ಸದಾ ತಮ್ಮೊಡನೆ ಇಟ್ಟುಕೊಂಡು, ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ನಡೆದಲ್ಲಿ ಇನ್ನೂ ಇಪ್ಪತ್ತೈದು ಜನರ ಮತವನ್ನು ನಿರಾತಂಕವಾಗಿ ಪಡೆಯುವುದಾಗಿ ಆಪ್ತವಲಯಲ್ಲಿ ಹೇಳಿ ಆರೀತಿ ಪ್ರಚಾರ ಪಡೆದುಕೊಂಡಿದ್ದಾರೆ. ಅವರ ಸುದೀರ್ಘ ಅನುಭವ, ಶಾಸಕರ ಬೆಂಬಲ, ಈವರೆಗೂ ದಕ್ಷಿಣ ಭಾಗಕ್ಕೆ ಪ್ರಾತಿನಿಧ್ಯವಿಲ್ಲದ್ದು. ಕ್ರಿಯಾಶೀಲರೆಂಬ ಹೆಗ್ಗಳಿಕೆ ಅವರ ನೆರವಿಗೆ ಬರಲಿವೆ. ತೀರ ಚಾಣಾಕ್ಷರೂ ಆಗಿರುವ ಅವರ ಸರ್‌ದೇಸಾಯಿಯವರಿಗೆ ಶಾಸಕರ ಬೆಂಬಲ ಕಡಿಮೆಯೆಂಬುದನ್ನು ಸಾಬೀತುಪಡಿಸಲೆಂದೇ ತಮ್ಮ ಕೆಲ ಆಪ್ತರನ್ನು ಕಳಿಸಿ ಅಪ್ಪಾ ಸಾಹೇಬರೂ ಮುಖ್ಯಮಂತ್ರಿ ಪದವಿಗೆ ಒಬ್ಬ ನಿರೀಕ್ಷಿತ ಅಭ್ಯರ್ಥಿ ಆಗಿ ಹೊರಹೊಮ್ಮುವಂತೆ ನೋಡಿಕೊಂಡಿದ್ದಾರೆ.

ತಮ್ಮ ಪಕ್ಷ ಬಡವರ, ಹಿಂದುಳಿದವರ ಪಕ್ಷವೆಂದು ಚುನಾವಣಾ ಪ್ರಣಾಳಿಕೆಯಲ್ಲಿಯೇ ಮುಖ್ಯಾಂಶವನ್ನಾಗಿರಿಸಿ ಆರಿಸಿ ಬಂದು ಆಡಳಿತ ನಡೆಸುತ್ತಿದ್ದುದರಿಂದ ಒಮ್ಮೆಯಾದರೂ ಆ ಕೋಮುಗಳಿಗೆ ಪ್ರಾತಿನಿಧ್ಯ ದೊರಕಿಸಲೇಬೇಕೆಂದು ಆರ್.ವಿ. ಪಾಟೀಲರ ನಿಲುವು. ಎಲ್ಲ ಹಿಂದುಳಿದವರನ್ನು, ದಲಿತರನ್ನು ಹಾಗೂ ಅಲ್ಪಸಂಖ್ಯಾತರನ್ನು ಒಟ್ಟಾಕಿದರೆ ತಮಗೆ ಇನ್ನಿತರರಿಗಿಂತ ಹೆಚ್ಚಿನ ಸಂಖ್ಯೆಯ ಶಾಸಕರ ಬೆಂಬಲ ಬರುತ್ತದೆಂದೂ ಈ ಬಗ್ಗೆ ವರಿಷ್ಠರು ತಮಗೆ ಒಲವು ಸೂಚಿಸಬೇಕೆಂದೂ ಅವರ ಅಹವಾಲಾಗಿತ್ತು. ಕಂದಾಯ ಹಾಗೂ ನಗರಾಭಿವೃದ್ಧಿಯಂತಹ ಮಹತ್ವದ ಖಾತೆಗಳನ್ನು ನಿಭಾಯಿಸಿದ್ದರೂ ಒಂದಾದರೂ ಭ್ರಷ್ಟಾಚಾರದ ಅಥವಾ ಸ್ವಜಾತಿ ಪಕ್ಷಪಾತದ ಆರೋಪ ತಮ್ಮ ಮೇಲಿಲ್ಲವೆಂಬುದನ್ನು ಎತ್ತಿ ತೋರಿಸುತ್ತ ಈ ಪ್ರಾಮಾಣಿಕತೆಯ ಇಮೇಜ್ ತಮ್ಮ ಸಹಾಯಕ್ಕೆ ಬರುತ್ತದೆಂದು ನಂಬಿಕುಳಿತಿದ್ದಾರೆ. ಈಗ ಪಕ್ಷಕ್ಕೆ ಇಂತಹ ಸ್ವರೂಪ ಕೊಡಬೇಕಾಗಿದ್ದು ಇನ್ನೊಂದು ವರ್ಷದಲ್ಲಿ ಬರಲಿರುವ ಮಹಾ ಚುನಾವಣೆಯಲ್ಲಿ ಪಕ್ಷ ಮರಳಿ ಅಧಿಕಾರಕ್ಕೆ ಬರಲು ಇದು ಅನಿವಾರ್ಯವೆಂಬುದು ಅವರ ವಾದ.

ತೀರ ಬಿರುಸಿನ ಚಟುವಟಿಕೆಗಳು ತಾರಕಕ್ಕೆ ಮುಟ್ಟಿರುವಾಗಲೇ ತಾವು ಮುಖ್ಯಮಂತ್ರಿ ಆದರೆ ಅಪ್ಪಸಾಹೇಬರಿಗೆ ಉಪಮುಖ್ಯಮಂತ್ರಿ ಸ್ಥಾನವನ್ನು ನೀಡುವುದಾಗಿ ಬಸವೇಗೌಡರು ಸಂದೇಶ ಕಳಿಸಿಯೇ ಬಿಟ್ಟರು. ಈಗ ನಿಜವಾಗಿಯೂ

ಅಪ್ಪಾಸಾಹೇಬರಿಗೆ ದಿಗಿಲಿಟ್ಟುಕೊಂಡಿತು. ಏನು ಮಾಡುವುದು? ಯಾವ ಹೆಜ್ಜೆ ಮುನ್ನಿಡುವುದು? ಬಸವೇಗೌಡರ ಜೊತೆ ಕೈಗೂಡಿಸುವುದೇ? ಅಥವಾ ತಾವೇ ಸ್ಪರ್ಧಿಸುವುದೇ? ನೂರಾರು ಪ್ರಶ್ನೆಗಳು ತಲೆ ತಿನ್ನತೊಡಗಿದವು. ಲೆಕ್ಕಾಚಾರದ ಮೇಲೆ ಲೆಕ್ಕಚಾರ ಸುರುವಾಯಿತು. ತಾನು ಅಭ್ಯರ್ಥಿಯೆಂದು ಈಗ ಬೆಂಬಲ ಸೂಚಿಸಿರುವ ಶಾಸಕರು ಅಕಸ್ಮಾತ್ ತಾನು ಬಸವೇಗೌಡರ ಬೆಂಬಲಕ್ಕೆ ನಿಂತು ಉಪಮುಖ್ಯಮಂತ್ರಿ ಸ್ಥಾನ ಒಪ್ಪಿಕೊಳ್ಳುತ್ತೇನೆಂದರೆ ಆ ಬೆಂಬಲ ಮುಂದುವರಿಸಿಯಾರೆ? ಸರ್ ದೇಸಾಯಿಯವರನ್ನು ಬೇಡವೆನ್ನುವವರು ಬಸವೇಗೌಡರನ್ನು ಸ್ವೀಕರಿಸಿಯಾರೆ? ವಿಚಾರಿಸಿದಷ್ಟು ಕಗ್ಗಂಟಾಗುತ್ತ ಸಂಕೀರ್ಣವಾಗುತ್ತ ಬರುವ ಸಮಸ್ಯೆಯಿದು ಎಂದಂದುಕೊಳ್ಳುತ್ತ ಯಾವ ಮಾರ್ಗ ತೋಚದೇ ಮುಖ್ಯಮಂತ್ರಿಗಳನ್ನೇ ಕೇಳಿದರಾಯಿತೆಂದಂದುಕೊಂಡರು. ತಾನು ಬರುವುದಾಗಿ ತಿಳಿಸಿ, ತುಸು ಗೌಪ್ಯ ವಿಷಯವೆಂದಾಗ ಅವರಿಂದ ರೂಢಿಯಂತೆ ರಾತ್ರಿ ಹನ್ನೊಂದಕ್ಕೆ ಬುಲಾವ್ ಬಂದಿತು.

ಬ್ಲೂ ಲೇಬಲ್ ಸ್ಕಾಚ್ ವಿಸ್ಕಿ, ಲಕ ಲಕನೇ ಹೊಳೆಯುವ ಕಟ್ ಗ್ಲಾಸಿನಲ್ಲಿ ತನಗಾಗಿ ಕಾಯುತ್ತಿದ್ದರೂ ಅಪ್ಪಸಾಹೇಬರು ತೀರ ಚಿಂತಿತರಾಗಿ ಆ ಕಡೆ ಲಕ್ಷ್ಯ ಹಾಕದೇ ಕುಳಿತಿದ್ದರು. ಎಂದುನ ತಮ್ಮ ಮುಗುಳ್ನಗೆಯೊಂದಿಗೆ ಮುಖ್ಯಮಂತ್ರಿಗಳು, "ಪರವಾಯಿಲ್ಲ ಅಪ್ಪಾ ಸಾಬ್ ಮೊದಲು ಸುರು ಮಾಡಿ, ನಂತರ ಚಿಂತನ ಮಂಥನ" ಎಂದರು. ಇಂದಿನ ಸಮಸ್ಯೆ ಎಂದಿನದಂತಲ್ಲವಾದ್ದರಿಂದ ಅಪ್ಪಾಸಾಹೇಬರಿಗೆ ಗ್ಲಾಸ್ ಎತ್ತಿಕೊಳ್ಳುವ ಉತ್ಸಾಹವಿರಲಿಲ್ಲ. ಯಾಂತ್ರಿಕವಾಗಿ ಕೈಯಲ್ಲೆತ್ತಿ ಚಿಯರ್ಸ್ ಹೇಳಿದರು. ತಮ್ಮ ನೀಟಾದ ಮೂಗು, ಅದರ ಕೆಳಗೆ ಮೇಲ್ತುಟಿಯ ಮೇಲೆ ನಲಿಯುವ ಮುಕ್ಕಾಲು ಬಿಳಿ ಕಾಲು ಕಪ್ಪನೆ ಮೀಸೆ, ಇಂತಹ ಪಾರ್ಟಿಗಳಲ್ಲಿ ರಾಜಕೀಯವನ್ನೇ ಮರೆತು ಒಂದು ಹೊಸ ಲೋಕ ಪ್ರವೇಶಿಸುವ ಮುಖ್ಯಮಂತ್ರಿಗಳು ಮೊದಲ ಸಿಪ್ ಒಳಹಾಕಿ ಎಡಗೈಯಿಂದ ತನ್ನ ತುಟಿಗಳನ್ನು ಮೃದುವಾಗಿ ಬರೆಸಿಕೊಂಡು, ದೇಶದ, ರಾಜ್ಯದ ಸಮಸ್ಯೆಗಳಿಗೆ ರಾಜಕೀಯೇತರ ಪರಿಹಾರ ಹೇಗೆ ಸಾಧ್ಯವೆಂದು ತಮ್ಮ ವಿಶಿಷ್ಟ ಶೈಲಿಯಲ್ಲಿ ವಿವರಿಸತೊಡಗಿದರು. ಅಧಿಕಾರವನ್ನೇ ಪರಮಗುರಿಯನ್ನಾಗಿಸಿ ಜೀವಮಾನವಿಡೀ ಅದಕ್ಕಾಗಿಯೇ ಹೆಣಗುವ ವಿವಿಧ ರಾಜಕೀಯ ಮುಂದಾಳುಗಳು ಹಾಗೂ ಅದಕ್ಕೆ ಪೂರಕವಾಗಿ ನಿರ್ಮಾಣವಾದ ವ್ಯವಸ್ಥೆ ಹೇಗೆ ಜಿಡ್ಡು ಹಿಡಿದು ಹೋಗಿ, ಇಡೀ ಮುಖ್ಯವಾಹಿನಿಯೇ ಮಲೆತೆ ನಿಂತ ನೀರಾಗಿದೆಂದು ಬಲು ಮಾರ್ಮಿಕವಾಗಿ ಮುಂದೊರೆಸತೊಡಗಿದರು. ಹಾಗೆಯೇ ಅಬ್ರಾಹಂ ಲಿಂಕನ್, ಚರ್ಚಿಲ್, ಜೆ.ಪಿ., ಲೋಹಿಯಾ ಹೇಗೆ ತಮ್ಮ ತಮ್ಮ ಧೋರಣೆ ಹಾಗೂ ಸಿದ್ಧಾಂತಗಳಿಗೆ ಬದ್ಧರಾಗಿ ಹೋರಾಡಿದರೆಂಬುದನ್ನೂ ಪ್ರಸ್ತಾಪಿಸಿದರು ಗಾಂಧಿವಾದ, ಸಮಾಜವಾದ ಹಾಗೂ ಮಾರ್ಕ್ಸ್‌ವಾದ ಒಂದಕ್ಕೊಂದು ವಿರುದ್ಧವಾಗಿರಬೇಕಿಲ್ಲ. ಇವೆಲ್ಲವುಗಳ ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡ, ನಮ್ಮ ದೇಶದ ಈಗಿನ ಹಿತಾಸಕ್ತಿಗೆ ಪೂರಕವಾಗಬಲ್ಲ ಒಂದು ನವೀನ ಸಿದ್ಧಾಂತ ಹೊರಹೊಮ್ಮಬೇಕಿದೆ. ಇಂತಹದಕ್ಕಾಗಿ ಎದೆಗಾರಿಕೆಯುಳ್ಳ ಹೊಸರಕ್ತದ, ಹೊಸಧೋರಣೆಯ ಸಮನ್ವಯ ನಾಯಕತ್ವದ ಅವಶ್ಯಕತೆಯಿದೆ ಎಂದವರು ಮೈ ಮರೆತು ಹೇಳುತ್ತಿರುವಾಗ...... ಅಪ್ಪಾ ಸಾಹೇಬರ ತಲೆಯಲ್ಲಿ ಮಿಂಚೊಂದು ಹೊಳೆದುಹೋಯಿತು. ಹೊಸರಕ್ತವೆಂದರೆ ತನ್ನನ್ನು ಮುಖ್ಯಮಂತ್ರಿಗಳು ಉದ್ದೇಶಿಸಿರಬಹುದೇ? ಅಥವಾ ಹೊಸ ಧೋರಣೆಯ ಸಮನ್ವಯ ಎಂದರೆ ತಾವೇ ಮುಂದು ವರೆಯಲು ಇಚ್ಛಿಸಿದ್ದಾರೋ...... ಒಮ್ಮೆಲೇ ಯಾವುದೂ ಸ್ಪಷ್ಟವಾಗಲಿಲ್ಲ. ರಾಜಕೀಯವನ್ನು ರಾತ್ರಿ ಪಾಟಿಗಳಲ್ಲಿ ಹೆಚ್ಚಾಗಿ ಮಾತನಾಡಿದ ಮುಖ್ಯಮಂತ್ರಿಗಳು ಇಂದು ಮಾತ್ರ ಅದರ ಸುತ್ತವೇ ತಿರುಗುತ್ತಿದ್ದುದು ಅಪ್ಪಾಸಾಹೇಬರಿಗೆ ಹರ್ಷ ಆತಂಕ ಎರಡನ್ನೂ ಉಂಟು ಮಾಡಿತ್ತು.

ಕೊಂಚ ನಿರಾತಂಕದ ವಾತಾವರಣದ ರೂಪುಗೊಳ್ಳಲೆಂದು, "ಸರ್ ಈ ಟರ್ಫ್ (ಹುಲ್ಲು ಹಾಸು) ಮೆಕ್ಸಿಕನ್ನೋ, ಆಸ್ಟ್ರೇಲಿಯನ್ನೊ? ನೈಸ್ ಫೀಲಿಂಗ್" ಎಂದು ತನ್ನ ಬರಿಗಾಲಿನಿಂದ ಒಂದೆರಡು ಸಾರೆ ಅದನ್ನು ಸವರಿ ಪ್ರಶ್ನಿಸಿದರು. ಮುಖ್ಯಮಂತ್ರಿಗಳೂ ಸಾವಕಾಶವಾಗಿ ಆ ಕಡೆ ಲಕ್ಷ್ಯ ಹಾಕುತ್ತಿರುವಂತೆಯೇ ಇದೇ ತಕ್ಕ ಸಮಯವೆಂದು, 'ಮೊದಲಿನ ಆ ಎರಡು ಕಪ್ಪವು ಡಾಬರ್‌ಮನ್‌ಗಳಲ್ಲಿ ಸರ್? ಇದೇನು ಬಿಳೀ ಲಾಬ್ರಡಾರ್ ಬಂದಿದೆಯಲ್ಲ. ಬಿಲ್ ಕ್ಲಿಂಟನ್‌ದೂ ಇದೇ

ಇದೆಯಲ್ಲ ಸರ್?" ಎಂದು ನಾಯಿಗಳ ವಿಷಯ ಹರಿಬಿಟ್ಟರು ತಾನು ಬಂದದ್ದೇ ರಾಜಕೀಯ ಮಾತನಾಡಲು ಆದರೆ ಧೈರ್ಯ ಸಾಲುತ್ತಿಲ್ಲ. ತನ್ನ ಬಗ್ಗೆ ಮುಖ್ಯಮಂತ್ರಿಗಳಿಗೇ ಹೆಚ್ಚು ತಿಳುವಳಿಕೆ ಇದೆ, ಆಸಕ್ತಿ ಇದೆ. ಕಾರಣ ತಾನಾಗಿಯೇ ಯಾಕೆ ಅದನ್ನು ಪ್ರಸ್ತಾಪಿಸಬೇಕೆಂದು ಅಪ್ಪಾಸಾಹೇಬ ಒಳಗೊಳಗೇ ಹಿಂದೇಟು ಹಾಕುತ್ತಿದ್ದುದ್ದು ಸ್ಪಷ್ಟವಾಗಿತ್ತು.

ಹಾರುವ ಹಕ್ಕಿಯ ಪುಕ್ಕಗಳನ್ನೆಣಿಸಬಲ್ಲವರೆಂದು ಪ್ರಖ್ಯಾತಿ ಪಡೆದ ಮುಖ್ಯಮಂತ್ರಿಗಳ ಕುಶಾಗ್ರಬುದ್ಧಿಗೆ ಏನು ತಾನೇ ಹೊಳೆಯುವುದಿಲ್ಲ? ಎದುರಿಗೆ ಕುಳಿತ, ತನಗಿಂತಲೂ ಮೂವತ್ತು ವರ್ಷಕಿರಿಯನಾದ ಅಪ್ಪಾಸಾಹೇಬರ ಮನದೊಳಗಿನ ಗೊಂದಲವನ್ನು ಅವರ ಮುಖದ ಮೇಲಿನ ರೇಖೆಗಳ ಚಲನವಲನಗಳಿಂದಲೇ ಎಕ್ಸ್ ರೇ, ಸಿ.ಟಿ. ಸ್ಕ್ಯಾನ್ ಮಾಡಿದ್ದರವರು. ಆತನ ವಯಸ್ಸಿನಲ್ಲಿ ತಮ್ಮ ವಿಚಾರ ಶೈಲಿ, ಹವ್ಯಾಸ ಎಲ್ಲ ಅಪ್ಪಾ ಸಾಹೇಬರಂತೇ ಇದ್ದುವಲ್ವೆ? ಈಗ ಆತ ಯಂಗ್‌ಟರ್ಕ್ ನಮೂನೆ ಗಡ್ಡ ಬಿಟ್ಟಿದ್ದಾನೆ. ತಾವೂ ಕೇವಲ ಮೀಸೆ ಬೆಳೆಸಿದ್ದರು. ಅವರ ತುಂಬುಗಲ್ಲಗಳು ಅಲ್ಪಸ್ವಲ್ಪ ಉದ್ರೇಕಗೊಂಡಾಗಲೂ ಕೆಂಪೇರಿಬಿಡುತ್ತವೆ. ತನ್ನಂತೆಯೇ ಅಪ್ಪಸಾಹೇಬನೂ ಇಂಗ್ಲೀಷ್ ಹಿಂದಿ ಎರಡನ್ನೂ ನಿರರ್ಗಳವಾಗಿ ಮಾತನಾಡುತ್ತಾನೆ. ಹೀಗೆ ತಮ್ಮ, ಅವನ ಹೋಲಿಕೆ ಮುಖ್ಯಮಂತ್ರಿಗಳಿಗೇ ತೀರ ವಿಚಿತ್ರವೆನಿಸಿದರೂ ಆತನ ಮನಸಿನಲ್ಲಿ ನಡೆದ ತುಮುಲದ ಅರಿವಂತೂ ಅವರಿಗೆ ಯಾವಾಗಲೋ ಆಗಿತ್ತು.

ಹಾಗೆ ಹೀಗೆ ಸುತ್ತು ಬಳಸಿ ಪರೋಕ್ಷವಾಗಿ ವಿಷಯ ಪ್ರಸ್ತಾಪಿಸುತ್ತಿದ್ದ ಮುಖ್ಯಮಂತ್ರಿಗಳು, ಒಳಹುದುಗಿದ ಮದ್ದು ಹಾರಲೆಂದು ಕೊನೆಗೆ ಈ ಮಾತನ್ನು ತೇಲಿಸಿಬಿಟ್ಟರು. "ಅಪ್ಪಾಸಾಬ್ ಈಗಾಗಲೇ 45 ಜನ ಸಹಿ ಹಾಕಿದ್ದರಲ್ವೆ?" - ಬಂದೂಕು ಸಿಡಿದಂತೆ ವಿಷಯ ಇಷ್ಟೊಂದು ನೇರವಾಗಿ ತನ್ನೆದುರು ನಿಲ್ಲುತ್ತದೆಂದು ಅಪ್ಪಾಸಾಹೇಬರಿಗೆ ಅನಿಸಿರಲಿಲ್ಲ. ಇದು ಅನಿರೀಕ್ಷಿತವೇನಲ್ಲದಿದ್ದರೂ ತಕ್ಷಣಕ್ಕೆ ಕೊಂಚ ವಿಚಲಿತರಾದರು. ಸಾಯಂಕಾಲದಿಂದ ರಾತ್ರಿ ಹತ್ತರವರೆಗೆ ಮತ್ತೆ ಮೂರು ಜನ ಸಹಿ ಹಾಕಿದ್ದು ಇಷ್ಟು ಬೇಗನೇ ಮುಖ್ಯಮಂತ್ರಿಯವರಿಗೆ ತಿಳಿದದ್ದು ಅಪ್ಪಾಸಾಹೇಬರನ್ನು ಸ್ವಲ್ಪ ಕದಡಿ ಬಿಟ್ಟಿತು. ತೀರ ಹುಷಾರಾಗಿರಬೇಕು ತಾನು ಇವರೆದುರು ಎಂದುಕೊಂಡರು. ಹಾಗೆಯೇ, "ಸರ್ ನಂದೇನಿದ್ದರೂ ನಿಮ್ಮ ಬಲವೇ ಬಲ, ಅಲ್ಲದೇ ಇದು ಎಲ್ಲರಿಗೂ ತಿಳಿದ ವಿಷಯವೇ. ನಾನು ಅದಕ್ಕಿಂತ ತುಸು ಹೆಚ್ಚೂ ಇಲ್ಲ, ಇಷ್ಟು ಕಡಿಮೆಯೂ ಇಲ್ಲ. ಇನ್ನು ಕೇವಲ ಒಂದು ವರ್ಷಕ್ಕೆ ಯಾಕೀ ಹರಸಾಹಸ. ಪಕ್ಷವನ್ನು ಪುನಃ ಅಧಿಕಾರಕ್ಕೆ ತರುವ ಖಾತಿ ನಿಮ್ಮನ್ನು ಬಿಟ್ಟರೆ ಮತ್ಯಾರಿಗೆ ಇದೆ ಸರ್? ಇದೇ ನಮ್ಮೆಲ್ಲರ ಒತ್ತಾಸೆಯೂ ಆಗಿದೆ. ತಾವು ಏನೋ ದಿಢೀರ್ ಆಗಿ ತಮ್ಮ ನಿರ್ಧಾರ ಘೋಷಿಸಿಬಿಟ್ಟಿರಿ, ನಮಗೆ ಕೊಂಚ ಮುನ್ಸೂಚನೆ ಸಿಕ್ಕದ್ದರೂ ಪರಿಣಾಮ ಬೇರೆಯೇ ಆಗುತ್ತಿತ್ತು. ನಮ್ಮ ಸಲುವಾಗಿಯಾದರೂ ನೀವು ಇರಲೇಬೇಕಾಗಿತ್ತು. ಅಪ್ಪಾಸಾಹೇಬರು ಕರುಳು ಕಿತ್ತು ಬರುವಂತೆ ಸತ್ಯವನ್ನೇ ಅರಸುತ್ತಿದ್ದರೂ ಮುಖ್ಯಮಂತ್ರಿಗಳ ಶೋಧನಾ ಮನಸ್ಸು ಬೇರೇನೇನೊ ಕಂಡುಕೊಳ್ಳುತ್ತಿತ್ತು. ಅಪ್ಪಾಸಾಹೇಬರು ನಮ್ಮೆಲ್ಲರ ಆಸೆ ಎಂದರೇ ವಿನಹ ಎಲ್ಲರ ಎಂಬ ಶಬ್ದ ಉಪಯೋಗಿಸಲಿಲ್ಲ. ಮೇಲಾಗಿ ನೀವು ಇರಲೇಬೇಕಾಗಿತ್ತು ಎಂದರಲ್ಲದೇ ನೀವು ಇರಿ ಎಂದು ಖಂಡತುಂಡವಾಗಿ ಹೇಳಲಿಲ್ಲವಲ್ಲ ಎಂದು ತನ್ನದೇ ಆದ ವಿಶ್ಲೇಷಣಾ ಪರಿಣಾಮಗಳನ್ನು ಅದು ಹೊರಹೊಮ್ಮಿಸುತ್ತಿತ್ತು. ಹೀಗೆ ಸೂಕ್ಷ್ಮಾತಿಸೂಕ್ಷ್ಮ ವಿಪರೀತ ನಿರ್ಣಯಗಳನ್ನು ಮುಖ್ಯಮಂತ್ರಿಗಳೂ ತಮ್ಮೊಳಗೇ ಕೈಗೊಳ್ಳುತ್ತಾರೆಂದು ಸ್ವಲ್ಪವಾದರೂ ತಮಗೆ ಸುಳಿವು ಸಿಕ್ಕಿದ್ದರೆ ಬಹುಶಃ ಅಪ್ಪಸಾಹೇಬರು ಘಂಟಾಘೋಷವಾಗಿ ನೀವೇ ಮುಂದೊರೆಯಬೇಕು ಎಂದು ಹೇಳುತ್ತಿದ್ದರಷ್ಟೇ ಅಲ್ಲ ಏನಾದರೂ ಮಾಡಿ ಕನಿಷ್ಠ ಪಕ್ಷ 80-85 ಶಾಸಕರ ಸಹಿ ಮಾಡಿಸಿ ತರುತ್ತಿದ್ದರು. ಆದರೆ ಮನಸ್ಸಿನಲ್ಲೇ ಮಂಡಿಗೆ ತಿಂದರೆ ಗೋಧಿ ಲೆಕ್ಕ ಕೊಡುವವರ್ಯಾರೆಂಬಂತಾಗಿತ್ತು ಮುಖ್ಯಮಂತ್ರಿಗಳ ಸ್ಥಿತಿ.

ಇಷ್ಟೆಲ್ಲವಾದರೂ ತಾನು ಬಂದ ವಿಷಯ ಪ್ರಸ್ತಾಪವಾಗಲಿಲ್ಲ ಹಾಗೂ ಸಮಸ್ಯೆ ಬಗೆಹರಿಯದೇ ಹೆಗ್ಗಣ ಒಳಗಿಟ್ಟು ಗುದ್ದು ಮುಚ್ಚಿದಂತಾಗಿತ್ತು ಅಪ್ಪಾಸಾಹೇಬರಿಗೆ. ಆಗಲೇ ಮೂರನೇ ಪೆಗ್ ಕೂಡಾ ಮುಗಿದಿತ್ತು. ಯಾವುದೋ ಭಂಡ ಧೈರ್ಯ ಒಳಗೊಳಗೆ ಕುದಿಯುತ್ತಿದ್ದ ಪ್ರಶ್ನೆಯನ್ನು ಸ್ಫೋಟಿಸತೊಡಗಿತು, "ಹೇಳಿ ಸರ್, ನನಗೆ ಆದೇಶ ಕೊಡಿ. ಈಗ

ನಾನೇನು ಮಾಡಬೇಕು. ನೀವು ಬೇಡವೆಂದರೆ ಮಾತ್ರ ನಾನು ಹಿಂತೆಗೆದುಕೊಳ್ಳುವವ. ತಮ್ಮ ಕೃಪೆಯಿಲ್ಲದೇ ಕಣಕ್ಕಿಳಿಯುವವನು ನಾನಲ್ಲ" ನೇರವಾಗಿ ಮುಖ್ಯಮಂತ್ರಿಗಳ ಕಣ್ಣಲ್ಲಿ ಕಣ್ಣಿಟ್ಟರು. ಈಗ ಉತ್ತರ ಕೊಡದೇ ಇರಲು ಮುಖ್ಯಮಂತ್ರಿಗಳಿಗೆ ಸಾಧ್ಯವಾಗಲೇ ಇಲ್ಲ. ಅವರೂ ಗ್ಲಾಸಿನ ನಾಲ್ಕನೇ ಸುತ್ತು ಎತ್ತಿಕೊಂಡಿದ್ದರಿಂದ ಯಾವುದನ್ನೂ ತೀರ ಮರೆ ಮಾಚುವುದೂ ಸಾಧ್ಯವಾಗಲಿಲ್ಲ. ಅಂತೆಯೇ 'ಅಪ್ಪಾಸಾಬ್ ನಿಮಗೂ ಗೊತ್ತಿದೆ ಸಂಪೂರ್ಣ ಆಯ್ಕೆ ನನ್ನದು ಅಲ್ಲವೆಂದು. ನಮ್ಮ ಆಶೆಗಳೆಲ್ಲಾ ನೆರವೇರುವಂತಿದ್ದರೆ...... ಛೇ, ಬಿಡಿ ನಿಮ್ಮನಲ್ಲದೇ ಬೇರೆ ಯಾರನ್ನು ತಾನೇ ನಾನು ಸೂಚಿಸಲಿ? ಆಯ್ಕೆ, ಆಶೆ, ಅಕಾಂಕ್ಷೆಗಳು ಒಂದೆಡೆಯಾದರೆ, ಒತ್ತಡಗಳು, ಅನಿವಾರ್ಯತೆಗಳು ಮತ್ತೊಂದೆಡೆ. ಪ್ರಜಾಪ್ರಭುತ್ವದ ಈ ಪಕ್ಷ ವ್ಯವಸ್ಥೆಯಲ್ಲಿ ವೈಯಕ್ತಿಕ ಬೇಕು ಬೇಡಗಳು ತೀರ ಗೌಣವಾಗಿ ಹಲವಾರು ಸಂದರ್ಭಗಳು ಅನೇಕ ಸಾರೆ ನಮ್ಮ ಅಸ್ಥಿತ್ವವನ್ನೇ ಅಲ್ಲಾಡಿಸಿಬಿಡುತ್ತವೆ..... ಈಗಾಗಲೇ ಒಮ್ಮೆ ಸರ್‌ದೇಸಾಯಿಯವರು ಹಿಂದೆ ಸರಿದೂ ಆಗಿದೆ. ಪಕ್ಷದ ವರಿಷ್ಠರ ನಿಲುವೂ ಬಹುಶಃ ಅವರೆಡೆಗೆ ವಾಲಬಹುದಾಗಿದೆ. ಕಾರಣ ಈಗ ನಾವು ಬಹಳ ಹುಷಾರಾಗಿ ಚದುರಂಗದ ಕಾಯಿಗಳನ್ನು ಚಲಾಯಿಸಬೇಕಾಗಿದೆ. ಏನಾದರೂ ತುಸು ಹೆಚ್ಚು ಕಡಿಮೆಯಾದರೂ ತೀರ ವಿಪರೀತಕ್ಕಿಟ್ಟುಕೊಂಡುಬಿಡುತ್ತವೆ......" ಕೊನೆಗೂ, ಮುಖ್ಯಮಂತ್ರಿಗಳ ಈ ಮಾತಿನಿಂದ ಒಂದು ನಿರ್ದಿಷ್ಟ ಸಲಹೆ ಸಿಕ್ಕಂತಾಗಿದ್ದರಿಂದ ತನ್ನ ಮುಖ್ಯಮಂತ್ರಿ ಪದವಿಯ ಕ್ಲೇಮ್‌ಗೆ ಹಿನ್ನಡೆಯಾಗಿದ್ದರೂ ಅಪ್ಪಾ ಸಾಹೇಬರು ತುಸು ಸಮಾಧಾನದ ಉಸಿರುಬಿಟ್ಟರು.

ತಮ್ಮ ಜೀವನದ ಅತ್ಯಂತ ಶ್ರೇಷ್ಠ ಅವಕಾಶದಿಂದ ದೂರ ಉಳಿಯಲು ನಿರ್ಧರಿಸಿಯೂ ಅಪ್ಪಾ ಸಾಹೇಬರು ನಿರಾಶೆಗೊಳ್ಳದೇ ಇರಲು ಅವರದೇ ಆದ ಸಮಾಜಾಯಿಷಿಗಳಿದ್ದವು. ತಮಗಿನ್ನೂ ಸಾಕಷ್ಟು ವಯಸ್ಸಿದೆ ಈಗಲೇ ದುಡುಕಿ ಅಮಂಗಲ ಮಾಡಿಕೊಂಡರೆ ಭಗ್ನ ಮೂರ್ತಿಗೆ ಎಂದೂ ಪೂಜೆ ಸಿಗದಂತಾಗಬಾರದು ತಮ್ಮ ಅವಸ್ಥೆ, ತಮ್ಮವರೇ ಆದ ತಮ್ಮ ಭಾಗದ ತೀರ ಹಿರಿಯರಾದ ಸರ್ ದೇಸಾಯಿಯವರಿಗೆ ಹಲವಾರು ಮಠಾಧೀಶರೂ ಅಲ್ಲಲ್ಲಿ ರಾಜ್ಯಾದ್ಯಂತ ಬೆಂಬಲ ವ್ಯಕ್ತಪಡಿಸಿದ್ದೂ ಇತ್ಯಾದಿಗಳೆಲ್ಲ ಅವರ ಮುಂದಿದ್ದವು. ಒಳಜಗಳಗಳನ್ನು ಮುರಿದು ಇಡೀ ಸಮಾಜ ಒಟ್ಟಾಗಿ ಒಬ್ಬರೇ ಅಭ್ಯರ್ಥಿಗಳನ್ನು ಆರಿಸುವಲ್ಲಿ ಸಹಾಯ ಸಹಕಾರ ತೋರಬೇಕೆಂದು ತಮ್ಮ ಕೋಮಿನ ಅಖಿಲ ಭಾರತ ಹಾಗೂ ರಾಜ್ಯ ಸಂಘಟನೆಗಳು ಕರೆಕೊಟ್ಟಿದ್ದು, ಬಹುಸಂಖ್ಯಾತರು ಹಿರಿಯರಾದ ಸರ್‌ದೇಸಾಯಿಯವರನ್ನೇ ಬೆಂಬಲಿಸಬೇಕೆಂಬ ಉದ್ದೇಶದಿಂದಲೇ ಆಗಿದೆಂದಂದುಕೊಂಡರು. ಮೇಲಾಗಿ ತಮಗೆ ಮುಖ್ಯಮಂತ್ರಿಗಳ ಬೆಂಬಲದ ಅನಿಶ್ಚಿತತೆಯೂ ಮತ್ತೊಂದು ಕಾರಣವಾಗಿತ್ತು.

ಹೀಗಾಗಿ ಈಗ ಅಪ್ಪಾ ಸಹೇಬರಿಗೆ ಸರಿಯೆನಿಸಿದ್ದು ಒಂದೇ ಒಂದು ದಾರಿ, ತಾವೂ ಸರ್‌ದೇಸಾಯಿಯವರನ್ನು ಬೆಂಬಲಿಸುವುದು. ಎಷ್ಟಾದರೂ ಅವರು ತನ್ನ ತಂದೆಯ ಜೊತೆಗೇ ಒಮ್ಮೆ ಶಾಸಕರಾಗಿದ್ದವರಲ್ಲವೇ? ಹಿರಿಯರು, ಆದರಾಗಲಿ ಎಂದು ತಮ್ಮನ್ನೇ ತಾವು ಸ್ಪರ್ಧೆಯಿಂದ ಹಿಂದೆಗೆದುಕೊಂಡರು. ಇದರ ಕೊಂಚ ಸುಳಿವು ಸಿಕ್ಕ ಬಸವೇಗೌಡರು ಕೆಂಡಮಂಡಲವಾದರು. ಬೇರೆ ಬೇರೆ ಜಾತಿಯ ಶಾಸಕರನ್ನು ಕರೆದು ಹೇಗೆ ಅಪ್ಪಾಸಾಹೇಬ್ ಕೇವಲ ಜಾತಿವಾದಿ ಎಂದು ಜರಿಯತೊಡಗಿದರು. ಅವರೆಲ್ಲ ತಮ್ಮ ತಮ್ಮ ಜಾತಿಯನ್ನು ಕಡೆಗಣಿಸಿ ಅವರ ಹಿಂದೆ ಹೋದದ್ದು ಮಹಾಪರಾಧವೆಂದು ಅವರೆಲ್ಲರಿಗೆ ಮನದಟ್ಟಾಗುವಂತೆ ಮಾಡತೊಡಗಿದರು. ಬರೀ ಜಾತಿಯ ಆಧಾರದ ಮೇಲೆಯೇ ಆಯ್ಕೆ ಆಗುವುದಾದರೆ ತಾವೇಕೆ ಕಣದಿಂದ ಹಿಂದೆ ಸರಿಯಬೇಕು. ಏನಾದರಾಗಲಿ ಸರ್ಧೆ ಆಗಿಯೇ ತೀರಲಿ ಎಂದು ಅನ್ನತೊಡಗಿದರು. ಅಂತಹ ಪ್ರಸಂಗ ಬಂದರೆ ಪಕ್ಷ ಇಬ್ಬಾಗವಾದರು ಪರವಾಗಿಲ್ಲವೆಂದೆನ್ನುವ ಮಟ್ಟಕ್ಕೆ ಬಿಸಿ ಏರತೊಡಗಿತು.

ಅಪ್ಪಾಸಾಹೇಬರಿಗೆ ತಾವು ಹಾಗೂ ತಮ್ಮಂತಹ ಎರಡನೇ ಸಾಲಿನ ನಾಯಕರ ಕೆಲಸ ಈಗ ಪಕ್ಷವನ್ನು ಹೋಳಾಗುದರಿಂದ ತಪ್ಪಿಸುವುದೇ ಆಗಿದೆಂದೆನಿಸತೊಡಗಿತು. ಆದುದರಿಂದ ಪಾತ್ರ ಬದಲಾವಣೆ ಅನಿವಾರ್ಯವಾಯಿತು.

ಸ್ವತಃ ಮುಖ್ಯಮಂತ್ರಿ ಪದವಿಗೆ ಲಗ್ಗೆ ಹಾಕಿ, ಕದಡಿದ ವಾತಾವರಣರನ್ನು ಮತ್ತಷ್ಟು ಕಲಕುವ ಮನಸ್ಸಿರಲಿಲ್ಲ ಅವರಿಗೆ. ಮೂಲವೆಂದರೆ ಪಕ್ಷ, ಅದೆ ಹೆತ್ತ ತಾಯಿಯಿದ್ದಂತೆ. ಪಕ್ಷದ್ರೋಹ ನೀಚತನ. ಹಾಗೆ ಪಕ್ಷ ಒಡೆಯುವ ಬದಲು, ಅದಕ್ಕೆ ರಾಜೀನಾಮೆ ನೀಡಿ ಶಾಸಕ ಪದ ತ್ಯಜಿಸಿ, ಬೇರೆ ಪಕ್ಷದಿಂದ ಅಥವಾ ಸ್ವತಂತ್ರವಾಗಿ ಆರಿಸಿ ಬರಬೇಕೆ ವಿನಃ ಈ ವಿದ್ರೋಹಿ ಚಟುವಟಿಕೆ ಸಲ್ಲದೆಂಬುದೇ ಅವರ ಹಾಗೂ ಅವರಂತಹವರ ಸ್ಪಷ್ಟ ನಿಲುವಾಗಿತ್ತು. ಈ ವಿಷಯದಲ್ಲಿ ಮುಖ್ಯಮಂತ್ರಿಗಳ ನಿಲುವೊ ಅದೇ ಆಗಿತ್ತು. ತಾವು ಹುಟ್ಟಿದಂದಿನಿಂದಲೂ ಇದೇ ಪಕ್ಕದಲ್ಲಿದ್ದು ಹೇಗಾದರಾಗಲಿ, ಏನಾದರಾಗಲಿ ಪಕ್ಷ ಹೋಳಾಗುವುದು ಹಾಗೂ ಮುಪ್ಪಿನಾವಸ್ಥೆಯಲ್ಲಿ ಇಂತಹದ್ದಕ್ಕೆಲ್ಲ ಸಾಕ್ಷಿಯಾಗುವುದೂ ಅವರಿಗೆ ಬೇಡವಾಗಿತ್ತು. ಪಕ್ಷದ ಒಗ್ಗಟ್ಟು ಅವರ ಪ್ರಾಮಾಣಿಕ ಅಪೇಕ್ಷೆ ಆಗಿತ್ತು. ಪಕ್ಷದ ಒಗ್ಗಟ್ಟಿನೊಂದಿಗೆ ತಮ್ಮ ಭವಿಷ್ಯವನ್ನು ಕಾಣುವ ಅಪ್ಪಾ ಸಾಹೇಬರಂತಹವರಿಗೆ ಇದೊಂದು ದೊಡ್ಡ ಶ್ರೀರಕ್ಷೆಯೆನಿಸಿತ್ತು.

ದೀಪ ಆರುವಾಗ ಕೆಲಸಾರೆ ತುಸು ದೊಡ್ಡದಾಗಿ ಆಗಿ ಆರುತ್ತದೆ. ಹಾಗೆಯೇ ಯಾವುದೋ ಒಂದು ಮಹತ್ವದ ಕೆಲಸ ಮುಗಿಯುವಾಗಲೂ ತೀರ ಗಲಾಟೆ ಗದ್ದಲವಾಗುವ ಸಂಭವ ಇರುತ್ತದೆ. ಇನ್ನೆರಡು ರಾತ್ರಿ ಒಂದು ಹಗಲು ಮುಗಿದರೆ ನಾಡಿದ್ದು ಬೆಳಿಗ್ಗೆ ಒಂಭತ್ತು ಗಂಟೆಗೆ ಶಾಸಕಾಂಗ ಪಕ್ಷದ ಸಭೆ ನಡೆದು ನಾಯಕನನ್ನು ಆರಿಸಿ ಮುಖ್ಯಮಂತ್ರಿ ಗದ್ದುಗೆಗೆ ಹೊಸಬರನ್ನು ಕೂಡಿಸುವ ಅತ್ಯಂತ ಗುರುತರವಾದ ಘಟನೆ ನಡೆಯಲಿದೆ ಪ್ರತಿ ಕ್ಷಣವೂ ಹೊಸ ಹೊಸ ಹೊಂದಾಣಿಕೆ ವಿಭಿನ್ನ ಕೂಡುವಿಕೆ ಕಳೆಯುವಿಕೆ ಅಗಲುವಿಕೆ, ಆಶ್ವಾಸನೆ, ಆಸೆ, ನಿರಾಶೆ ಎಲ್ಲ ನಡೆಯುತ್ತಲೇ ಇವೆ. ಇಪ್ಪತ್ತೈದು ಶಾಸಕರು ಬಂದು ಅಪ್ಪಾ ಸಾಹೇಬರ ಮನೆಯಲ್ಲಿ ಸಭೆ ನಡೆಸಿ ಯಾವುದೇ ಪರಿಸ್ಥಿತಿಯಲ್ಲೂ ತಮ್ಮ ಗುಂಪಿಗೆ ಕನಿಷ್ಟ ಪಕ್ಷ ಅರೇಳು ಮಂತ್ರಿ ಪದವಿ ದೊರಕಿಸಿಕೊಡಬೇಕು ಎಂದು ಪಟ್ಟು ಹಿಡಿದರು. ಈ ವಿಷಯವನ್ನು ಸಂಭಾವ್ಯ ಅಭ್ಯರ್ಥಿ ಸರ್‌ದೇಸಾಯಿಯವರಿಗೆ ತಿಳಿಸಬೇಕು. ಅವರ ಸಚಿವ ಸಂಪುಟದಲ್ಲಿ ಈ ಗುಂಪಿನವರಿಗೆ ಒಳ್ಳೊಳ್ಳೆ ಖಾತೆಗಳನ್ನು ನೀಡಬೇಕು ಇತ್ಯಾದಿಯಾಗಿ ಮೌಖಿಕ ಠರಾವುಗಳೂ ಪಾಸಾಗುತ್ತಿದ್ದವು. ಯಾವುದೇ ವಿಷಯದಲ್ಲೂ ರಾಜಿ ಮಾಡಿಕೊಳ್ಳದೇ ತಮ್ಮೆಲ್ಲ ಬೆಂಬಲಿಗರಿಗೆ ಸರಿಯಾದ ಸ್ಥಾನಮಾನಗಳು ಸಿಗುವಂತೆ ನೋಡಿಕೊಳ್ಳಬೇಕೆಂದೂ ಅವರಲ್ಲಿ ಕೇಳಿಕೊಳ್ಳಲಾಯಿತು ಇಲ್ಲಿ ಹೀಗೆ ನಡೆದಿದ್ದರೆ ಆ ಕಡೆ ಬಸವೇಗೌಡರ ಪಾಳೆಯದಲ್ಲಿ ಮತ್ತೊಂದು ತೆರನಾದ ವಾತಾವರಣ ಸೃಷ್ಟಿಯಾಗಿತ್ತು.

ಮುಖ್ಯಮಂತ್ರಿ ಪದವಿಗೆ ತಮ್ಮ ಛಾನ್ಸ್ ಕಡಿಮೆಯಾಗಿದ್ದು ತಿಳಿದು ಬಸವೇಗೌಡರು ಎಲ್ಲವನ್ನೂ ಅಲ್ಲೋಲ ಕಲ್ಲೋಲ ಮಾಡಲು ವಿಚಾರಿಸುತ್ತಿದ್ದರು. ತಮ್ಮೆಲ್ಲ ಬೆಂಬಲಿಗರೊಂದಿಗೆ ಗುಪ್ತ ಸಮಾಲೋಚನೆ ನಡೆಸಿದ್ದರು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು ಹಾಲಿ ಮುಖ್ಯಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತ ಸರ್‌ದೇಸಾಯಿಯವರನ್ನು ಹಳಿಯುತ್ತ ಗಾಯಗೊಂಡ ಹುಲಿಯಂತಾಗಿದ್ದರು. ಪಕ್ಷದ ಬಹುತೇಕ ವರಿಷ್ಠರೆಲ್ಲರಿಗೂ ಅವರನ್ನು ಸಮಾಧಾನಪಡಿಸುವುದೇ ಪ್ರಮುಖ ಕೆಲಸವಾಗಿತ್ತು. ಮುಖ್ಯಮಂತ್ರಿಗಳೂ ಕೂಡ ತಮ್ಮ ಅಹಂ ಅನ್ನು ಬದಿಗಿಟ್ಟು ಬಸವೇಗೌಡರನ್ನು ಸಂತೈಸಲು ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಮುಖ್ಯಮಂತ್ರಿ ಪದವಿಗೆ ಅಪ್ಪಾಸಾಹೇಬರ ಹೆಸರೂ ಓಡಾಡಿದ್ದರಿಂದ ಅವರೂ ಕೂಡ ಬಸವೇಗೌಡರನ್ನು ಕಂಡು ಯಾವುದೇ ದುಡುಕಿನ ಕ್ರಮಕೈಗೊಳ್ಳಬಾರದೆಂದು ಅವರ ಮನ ಒಲಿಸಲು ಪ್ರಯತ್ನಸಿಬೇಕೆಂದು ಮುಖ್ಯಮಂತ್ರಿಗಳ ಅಭಿಲಾಷೆಯೂ ಆಗಿತ್ತು.

ಈ ನಡುವೆ ಪಕ್ಷದ ರಾಜ್ಯಾಧ್ಯಕ್ಷರೂ, ಮುಂದಿನ ಮುಖ್ಯಮಂತ್ರಿ ಯಾರೇ ಆದರೂ ಆ ಆಯ್ಕೆ ಆದದ್ದು ಮಾತ್ರ ಒಮ್ಮತದ ಅಭ್ಯರ್ಥಿಯೆಂದು ಜನರಿಗೆ ತೋರಿಸಬೇಕಾಗಿತ್ತು. ಹೀಗಾಗಿ ಆ ಬಗ್ಗೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೆಂದು ಮನಃಪೂರ್ವಕ ಪ್ರಯತ್ನಿಸುತ್ತಿದ್ದರು. ಪಕ್ಷದ ಪ್ರಮುಖರನ್ನೆಲ್ಲ ಕರೆದು ಸಭೆಗಳನ್ನು ಮನ ಒಲಿಸುವಿಕೆ ರಾಜಿ ಇತ್ಯಾದಿಯನ್ನು ಬಹಳ ಮುತುವರ್ಜಿಯಿಂದ ಮಾಡುತ್ತಿದ್ದರು. ತಮ್ಮ ವರ್ಚಸ್ಸು ಬೆಳೆಸಿಕೊಳ್ಳಲು ಇದೊಂದು ಸೂಕ್ತ ಸಮಯ ಬೇರಿಲ್ಲವೆಂಬುದು ಅವರ ಲೆಕ್ಕಾಚಾರವಾಗಿತ್ತು. ಕಾರಣ ಈಗ ಉಳಿದ 26 ಘಂಟೆಗಳ ಒಂದೊಂದು ಕ್ಷಣವನ್ನೂ

ಅವರು ತಮ್ಮ ರಾಜಕೀಯ ಲಾಭಕ್ಕಾಗಿ ಮೀಸಲಿಡುತ್ತಿದ್ದರು. ಹಿರಿಯ ಕಿರಿಯ ನಾಯಕರನ್ನೆಲ್ಲ ಕರೆಸಿ ತಾವು ಎಲ್ಲರಿಗೂ ಆತ್ಮೀಯ ಹಾಗೂ ಪ್ರಭಾವಿ ನಾಯಕ ಎಂಬುದನ್ನು ಸ್ಥಾಪಿಸಲೆತ್ನಿಸುವುದೊಂದಿಗೇನೇ ಅಕಸ್ಮಾತ್ ಹೊಸ ಮುಖ್ಯಮಂತ್ರಿ ಆಯ್ಕೆ ತೀರ ಕಗ್ಗಂಟಾಗಿ ಬಿಟ್ಟರೆ ತಾವೂ ಒಂದು ಕೈ ನೋಡಬೇಕೆಂದು ಒಳಗೊಳಗೇ ತವಕಪಡುತ್ತಿದ್ದರು. ಆದರೆ ಅವರು ಹಾಲಿ ಮುಖ್ಯಮಂತ್ರಿಗಳ ಕೈಗೊಂಬೆಯಾಗಿ ಇತ್ತೀಚಿನ ಎರಡು ವರ್ಷಗಳಲ್ಲಿ ನಡೆದುಕೊಂಡ ರೀತಿ ಪಕ್ಷದಲ್ಲಿ ಎಲ್ಲರಿಗೂ ತಿಳಿದ ವಿಷಯವೇ ಆಗಿತ್ತು. ಹೀಗಾಗಿ ಅವರನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಆದಾಗ್ಯೂ ತೋರಿಕೆಗೆಯಾದರೂ ಅವರಲ್ಲಿಗೆ ಎಲ್ಲರೂ ಬರಲೇಬೇಕಾಗಿತ್ತು. ಹಿಗೊಂದು ಗಳಿಗೆಯಲ್ಲಿ ಅಪ್ಪಾಸಾಹೇಬರು ಅವರಲ್ಲಿಗೆ ಬಂದು ಚರ್ಚಿಸುತ್ತಿದ್ದರು. ಆ ಹೊತ್ತಿಗೆ ಅಲ್ಲಿ ಮುಖ್ಯಮಂತ್ರಿಗಳು ಹತ್ತಿಪ್ಪತ್ತು ಶಾಸಕರು, ನೂರಾರು ಕಾರ್ಯಕರ್ತರೊಂದಿಗೆ ಸರ್‌ದೇಸಾಯಿಯವರನ್ನು ಕರೆದುಕೊಂಡು ಬಂದರು. ಹಿರಿಯರು ಬಂದರೆಂದು ಅಪ್ಪಾಸಾಹೇಬ ಎದ್ದು ನಿಂತು ಸ್ವಾಗತಿಸತೊಡಗಿದರು. ಸರ್ ದೇಸಾಯಿಯವರ ಮುಖಾಮುಖಿಯಾದಾಗ ಬಹಳ ಖುಷಿ ಹಾಗೂ ಅಭಿಮಾನದಿಂದ ನಮಸ್ಕರಿಸಿ ಮುಗುಳ್ನಗೆ ಸೂಸಿದರು. ಆದರೆ ವಿಚಿತ್ರವೆಂಬಂತೆ ಸರ್ ದೇಸಾಯಿಯವರು ಇವರೆಡೆ ಯಾಂತ್ರಿಕವಾಗಿ ಬರೀ ಗೋಣುಹಾಕು ಮುನ್ನಡೆದರು. ಇಂತಹ ಸಣ್ಣ ವಿಷಯವನ್ನು ಅಪ್ಪಸಾಹೇಬರು ಸರಳವಾಗಿ ತೆಗೆದುಕೊಳ್ಳದ ಸ್ವಭಾವದವರಾಗಿದ್ದರು.

ತಾವು ತಾವಾಗಿಯೇ ಸರ್‌ದೇಸಾಯಿಯವರಿಗೆ ಅನುಕೂಲ ಆಗಲಿ ಎಂದು ಸ್ಪರ್ಧೆಯಿಂದ ಹಿಂದೆ ಸರಿದದನ್ನು ತಮ್ಮ ಅಶಕ್ತಿಯೆಂದು ತಿಳಿದುಕೊಂಡರೊ ಇವರು ಎಂದು ಅಪ್ಪಾಸಾಹೇಬ ಚಿಂತಿತರಾದರು. ತಾನು ಎದ್ದು ನಿಂತು ನಮಸ್ಕರಿಸಿ ಮುಗುಳ್ನಕ್ಕು ಸ್ವಾಗತಿಸಿದರೆ ಅವರು ಮುಖ ಬಿಗಿ ಮಾಡಬೇಕೆ? ಪ್ರಾಯಶಃ ತನ್ನ ಬಗ್ಗೆ ಅವರಿಗೆ ಎಲ್ಲೊ ಇರಿಸು ಮುರಿಸಾಗಿರಬೇಕು. ಆದರೆ ಈವರೆಗೆ ಆದುದರಲ್ಲಿ ತನ್ನ ತಪ್ಪೇನಿದೆ? ಬೇರೆ ಬೇರೆ ಜಾತಿಯ ಶಾಸಕರೂ ಕೂಡ ತನ್ನ ಬೆಂಬಲಕ್ಕಿದ್ದಿರಲಿಲ್ಲವೇ? ಮುಖ್ಯಮಂತ್ರಿಗಳೂ ಆಕಸ್ಮಾತ್ ತಾನೂ ಹಠಹಿಡಿದಿದ್ದರೆ....... ತನಗೇ ಬೆಂಬಲಿಸುತ್ತಿದ್ದರು. ಸರ್‌ದೇಸಾಯಿಯವರ ಈ ತಪ್ಪು ಗ್ರಹಿಕೆಯನ್ನು ಹೋಗಲಾಡಿಸಲು ಈಗ ತಾನು ಬಸವೇಗೌಡರ ಮನ ಒಲಿಸಿ ಅವರು ಹಿಂದೆ ಸರಿಯುವಂತೆ ಮಾಡಲು ಪ್ರಯತ್ನಿಸಬೇಕು ಹಾಗೂ ಇದನ್ನು ಸರ್‌ದೇಸಾಯಿವರಿಗೆ ತಿಳಿಯುವಂತೆ ಮಾಡಬೇಕು. ಯಾವುದೇ ತಪ್ಪು ಗ್ರಹಿಕೆಗೆ ಅವಕಾಶವಾಗದಂತೆ ಅವರಿಗೆ ಮನವರಿಕೆ ಮಾಡಿಕೊಡಬೇಕು. ಇದೇ ಸರಿಯಾದ ದಾರಿಯೆಂದು ಮನೆಕಡೆ ಹೆಜ್ಜೆ ಹಾಕಿದರು.

ಎಲ್ಲರಿಗೂ ಇಂದು ಕೊನೆ ದಿನ ತಮ್ಮ ತಮ್ಮ ತಯಾರಿ ಮಾಡಿಕೊಳ್ಳಲು, ಬೆಳಿಗ್ಗೆಯಿಂದಲೇ ಬಸವೇಗೌಡರನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದ ಅಪ್ಪಾ ಸಾಹೇಬರಿಗೆ ಅವರು ಸಿಕ್ಕಿದ್ದು ಮಧ್ಯರಾತ್ರಿ ಸರಿದ ಮೇಲೆಯೇ. ಏನಾದರಾಗಲಿ ತನ್ನ ಕರ್ತವ್ಯ ತಾನು ಮಾಡಿದರಾಯಿತು. ಪಕ್ಷದ ಹಿತದೃಷ್ಟಿಯಿಂದ ಹಾಗೂ ತನ್ನ ಮೇಲಾವರಿಸಿರುವ ಸರ್‌ದೇಸಾಯಿಯವರ ಸಂಶಯದ ಮೋಡ ಸರಿಸುವ ಇರಾದೆಯಿಂದ ಅಪ್ಪಸಾಹೇಬರು ಬಸವೇಗೌಡರನ್ನು ಭೆಟ್ಟಿಯಾಗಲು ನಡೆದರು. ಮಧ್ಯರಾತ್ರಿಯ ಹಿತವಾದ ಗಾಳಿಯಲ್ಲೂ ಗೌಡರ ಸಿಟ್ಟು ಸಂಕಟ ನೋವುಗಳ ಕಿಚ್ಚು ಕಿಂಚಿತ್ತೂ ಕಡಿಮೆಯಾಗಿಲ್ಲವೆಣಿಸಿತವರಿಗೆ. ಇಬ್ಬರೇ ಒಳಕೋಣೆಯಲ್ಲಿ ಹೋಗಿ ದೀರ್ಘ ಚರ್ಚೆ ನಡೆಸಿದರು. ತಮ್ಮ ಭವಿಷ್ಯವನ್ನು ತಾವೇ ಸೀಮಿತಗೊಳಿಸಿಕೊಳ್ಳುತ್ತಿರುವುದಾಗಿ ಗೌಡರು ಅಪ್ಪಸಾಹೇಬರಿಗೆ ಅರಿವು ಮಾಡಿಕೊಡತೊಡಗಿದರು. ರಾಜಕಾರಣದಲ್ಲಿ ಇವರಿಗಿಂತ ಇಪ್ಪತ್ತು ವರ್ಷ ತಾವು ಅನುಭವಿಗಳಿರುವುದಾಗಿಯೂ ಒಮ್ಮೆ ಕೈ ತಪ್ಪಿದ ಅವಕಾಶ ಮತ್ತೆಂದೂ ತಿರುಗಿ ಬಾರದೇ ಹೋಗಬಹುದೆಂದೂ ವಿವರಿಸುತ್ತ “ಅಪಾರ್ಚುನಿಟೀಸ್ ಕಮ್ ರೇರ್ಲಿ ಇನ್ ಒನ್ಸ್ ಲೈಫ್, ದ ವೈಜ್ ಮೇಕ್ ಯೂಜ್ ಆರ್ಫ್ ದೆಮ್ ಅಂಡ್ ಓನ್ಲಿ-ದ ಫೂಲ್ಸ್‌ಲೆಟ್ ದೆಮ್ ಗೊ ಬಾಯ್ ದೆಮ್‌ಸೆಲ್ವೆಜ್” ಎಂಬ ಇಂಗ್ಲೀಷ್ ಗಾದೆ ಹೇಳಿ ತಾವಿಬ್ಬರೂ ಈಗ ಮೂರ್ಖರಂತೆ ವರ್ತಿಸುತ್ತಿರುವುದಾಗಿ ಸ್ಪಷ್ಟಪಡಿಸಿದರು. ತಾವು ನೀಡಿದ ಆಮಂತ್ರಣ ಹಾಗೂ ಹುದ್ದೆಯನ್ನು ಅಪ್ಪಾಸಾಹೇಬರು ನಿರ್ಲಕ್ಷಿಸಿದ್ದನ್ನು ಅವರ ರಾಜಕೀಯ ಜೀವನದ ದೊಡ್ಡ

ಹಿನ್ನೆಡೆಯೆಂದು ವ್ಯಾಖ್ಯಾನಿಸಿದರು. ತಾವಾದರೂ ಕೂಡ ಅಪ್ಪಾಸಾಹೇಬರ ಬೆಂಬಲದ ಮೇಲೆ ಅವಲಂಬಿತರಾಗಿದ್ದುದರಿಂದ ಹಾಗೂ ಈಗ ಅದು ಇಲ್ಲದಂತಾದಾಗ ಸ್ಪರ್ಧೆಗೆ ಹಿಂದೇಟು ಹಾಕುತ್ತಿರುವುದಾಗಿ ಬಹಳ ತಡವಾಗಿ ತಿಳಿಯಪಡಿಸಿದರು. ಯಾವುದಕ್ಕೂ ನಾಳೆ ಬೆಳಿಗ್ಗೆಯೇ ಕೊನೆಯ ತೀರ್ಮಾನ ಮಾಡುವುದಾಗಿಯೂ ಒಂದು ಗುಪ್ತ ಬಾಂಬ್ ಒಳಗಿಟ್ಟಂತೆ ಮಾತನಾಡಿದರು. ಅದಾಗ್ಯೂ ತಾನು ಬಂದು ಕೆಲಸ ಇಷ್ಟಾದರೂ ಫಲ ಕಂಡಿತಲ್ಲ ಎಂದು ಅಪ್ಪಸಾಹೇಬರಿಗೆ ಅತೀವ ಆನಂದವಾಯಿತು. ಇಷ್ಟೊತ್ತಿಗಾಗಲೇ ರಾತ್ರಿ ಎರಡು ಗಂಟೆ ದಾಟಿತ್ತು. ಇನ್ನೇನು ಹೊರಡಲು ಅಣಿಯಾಗಿ ಮೇಲೆಳಬೇಕೆಂದೆನ್ನುವಾಗಲೇ ಹೊರಗಿನಿಂದ ಬಾಗಿಲು ಬಡಿದ ಶಬ್ದವಾಯಿತು. ಸ್ವತಃ ಬಸವೇಗೌಡರೇ ಹೋಗಿ ಬಾಗಿಲು ತೆರೆದರು. ಆಳುಮಗ ಮೆಲುದನಿಯಲ್ಲಿ ಏನನ್ನೋ ಹೇಳಿ ಹೋದನು. ಆಗ ತಕ್ಷಣ ಗೌಡರು, “ಆಗಲಿ ಅಪ್ಪಾಸಾಹೇಬರೆ ಥ್ಯಾಂಕ್ ಯು, ನಮಸ್ಕಾರ. ನೀವು ಇನ್ನು ಬರಬಹುದು” ಎಂದು ಏನೋ ಹೇಳಲು ಹೋದ ಅವರನ್ನು ವಿನಯದಿಂದಲೇ ಬೀಳ್ಕೊಟ್ಟರು. ಹೋಗುವಾಗ ನೋಡಿದರೆ ಅಲ್ಲಿ ಸರ್ ದೇಸಾಯಿ ಪಕ್ಕದ ಹಾಲ್‌ನಲ್ಲಿ ಕಾಯುತ್ತ ಕುಳಿತಿದ್ದರು. ತಾನು ಅಲ್ಲಿಗೆ ಹೋಗಿ ಮಾತನಾಡಿಸಬೇಕೆನಿಸುವಷ್ಟರಲ್ಲಿ ಬಸವೇಗೌಡರು ಅವರನ್ನು ಆತ್ಮೀಯವಾಗಿ ಸ್ವಾಗತಿಸುತ್ತ ಅದೇ ಆಪ್ತಾಲೋಚನಾ ಕೊಠಡಿಗೆ ಕರೆದೊಯ್ಯತೊಡಗಿದರು. ಇಬ್ಬರು ಹಿರಿಯರ ನಡುವೆ ತಾನು ಮಧ್ಯ ಪ್ರವೇಶಿಸುವುದು ಸರಿಯಲ್ಲ ಹಾಗೂ ಈಗಾಗಲೇ ತಮ್ಮ ಕೆಲಸ ತಾವು ಮಾಡಿದ್ದಾಗಿದೆ. ಅಲ್ಲದೆ ತಮಗೆ ಬೀಳ್ಕೊಟ್ಟೂ ಆಗಿದೆ ಎಂದು ಅಪ್ಪಸಾಹೇಬರು ಹಾಗೇಯೇ ಹೊರಬಂದರು.

ಬಹುತೇಕ ಎಲ್ಲರೂ ನಿರೀಕ್ಷಿಸಿದಂತೆ ಸರ್ ದೇಸಾಯಿಯವರು ಶಾಸಕಾಂಗ ಪಕ್ಷದ ನಾಯಕನಾಗಿ ಒಮ್ಮತದಿಂದ ಆಯ್ಕೆಯಾದರು. ತೀವ್ರ ನಿರಾಶೆಗೊಂಡಿದ್ದರೂ ಬಸವೇಗೌಡರೇ ಅವರ ಹೆಸರನ್ನು ಸೂಚಿಸಬೇಕೆಂದು ವರಿಷ್ಠರ ಆದೇಶವಿದ್ದುದರಿಂದ ಅದನ್ನು ಗೌಡರು ಶಿರಸಾವಹಿಸಿದ್ದರು. ಹಾಗೆಯೆ ವೀಕ್ಷಕರಾಗಿ ಬಂದ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಗಳು ಬಸವೇಗೌಡರು ಉಪಮುಖ್ಯಮಂತ್ರಿ ಸ್ಥಾನದಲ್ಲಿರಬೇಕೆಂದು ಅಧ್ಯಕ್ಷರ ನಿರ್ದೇಶನವಿದೆ. ಎಂದಾಗ ಇಡೀ ಸಭೆ ಹೋ! ಎಂದು ಹರ್ಷೋದ್ಗಾರ ಮಾಡಿತು. ಎಲ್ಲಕ್ಕೂ ಹೆಚ್ಚಾಗಿ ಅಪ್ಪಾಸಾಹೇಬ ಹಾಗೂ ಮಿತ್ರರಿಗೆ ಏನಾದರಾಗಲಿ ಪಕ್ಷದ ಇಬ್ಬಾಗ ತಪ್ಪಿತಲ್ಲ ಎಂದು ಒಂದು ಹೆಚ್ಚಿನ ಸಮಾಧಾನವಾಗಿತ್ತು. ಹನ್ನೊಂದು ಗಂಟೆಗೆ ಪ್ರಮಾಣವಚನ. ಇಡೀ ಮಂತ್ರಿಮಂಡಲ ರಚನೆಯಾಗಲಿದೆಯಂದು ತಿಳಿದುಬಂತು. ತನ್ನ ಐವರು ಬೆಂಬಲಿಗರ ಹೆಸರನ್ನು ಪುನಃ ಪುನಃ ನಿಯೋಜಿತ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರಿಗೆ ಅಪ್ಪಾಸಾಹೇಬರು ತಿಳಿಸಿದ್ದರೂ ಆಯಿತು. ಸಚಿವಸಂಪುಟ ಯಾದಿ ಹೊರಬಿತ್ತು. ಅಪ್ಪಸಾಹೇಬರು ಸೂಚಿಸಿದ್ದ ಆ ಎಲ್ಲ ಹೆಸರುಗಳೂ ಇದ್ದವು. ಆದರೆ ಒಂದೇ ಒಂದು ಸಣ್ಣ ಅವಘಡವಾಗಿತ್ತು. ಅದೇ ಅಪ್ಪಸಾಹೇಬರ ಹೆಸರೇ ಕಾಣದಾಗಿತ್ತು!

❖

## ಋಣ

ಮನೆಯ ಭಾವಣಿಯ ಕಟ್ಟೆಮೇಲೆ ಕುಳಿತ ಸೀತಾಬಾಯಿಯ ದೃಷ್ಟಿ ಪೌಳಿಯ ಹೊರಗಡೆ ತನ್ನ ಮರಿಗಳೊಂದಿಗೆ ಆಡುತ್ತಿದ್ದ ತಾಯಿಕೋಳಿಯ ಮೇಲೆ ಬಿತ್ತು. ಕೊಕ್, ಕೊಕ್, ಕೊಕ್, ಎನ್ನುತ್ತ ಎರಡೂ ಕಾಲಿನಿಂದ ಕಸಗೆ ಬರುತ್ತಲೇ ಮುಖ ಮೇಲೆತ್ತಿ ಕತ್ತನ್ನು ಅತ್ತಿತ್ತ ತಿರುಗಿಸಿ ನೋಡುತ್ತಿತ್ತು. ಜೊತೆಯಲ್ಲಿ ಆಡುತ್ತಿದ್ದ ಐದಾರು ಮರಿಕೋಳಿಗಳು ತಾಯಿ ಹೆಕ್ಕಿ ತೆಗೆದ ಹುಳು ಹುಪ್ಪಡಿಗಳನ್ನು ತಿನ್ನುವುದದರಲ್ಲಿ ಮಗ್ನವಾಗಿದ್ದವು. ಮಕ್ಕಳಿಗೆ ಆಹಾರ ಒದಗಿಸುತ್ತಲೇ ಅವುಗಳ ರಕ್ಷಣೆಯ ಕಡೆಗೂ ಅದರ ಗಮನವಿರುವುದನ್ನು ಧ್ಯಾನಿಸುತ್ತಿದ್ದಾಗಲೇ ಸೀತಾಬಾಯಿಗೆ ಒಮ್ಮೆ ತನ್ನ ನಾಲ್ಕು ಮಕ್ಕಳ ನೆನಪು ಬಂದು ಹೋಯಿತು.

ಹೀಗೇ ಪ್ರತಿದಿನ ಆಕಳಿಗೆ ಕರು ಬಿಟ್ಟಾಗ, ಎಮ್ಮೆ ತನ್ನ ಕಂದನ ಮೈ ನೆಕ್ಕುವಾಗ, ಮನೆಯ ಕುಂಬಿಯ ಮೇಲೆ ಕುಳಿತು ಹಕ್ಕಿ ತನ್ನ ಮರಿಗಳಿಗೆ ಮನೆ ಮುಂದೆ ಒಣಹಾಕಿದ ಅಕ್ಕಡಿ ಕಾಳುಗಳನ್ನು ಚುಂಚದಿಂದ ಬಾಯಲ್ಲಿ ಇಡುವಾಗ ಅನೇಕ ಬಾರಿ ಅವಳು ತನ್ನ ಮಕ್ಕಳು ಮೊಮ್ಮಕ್ಕಳನ್ನು ನೆನೆಯುತ್ತಲೇ ಇರುತ್ತಾಳೆ. ಕೆಲ ಸಾರೆ ತನ್ನ ನೆನಪು ಅವರಿಗೂ ಆಗುತ್ತದೋ ಇಲ್ಲವೋ ಎಂದು ತನ್ನೊಳಗೇ ನಿಡುಸುಯ್ಯುತ್ತಾಳೆ. ಎಲ್ಲರು ಇದ್ದರೂ ತನಗಾರೂ ಇಲ್ಲ ಸಾಕೀ ಜೀವನ ಎಂದುಕೊಳ್ಳುತ್ತಾಳೆ.

ಕೊನೆಮಗಳ ಮದುವೆಯಾಗಿ ಹದಿನಾರು ವರ್ಷವಾಗಿ ಹೋಯಿತು. ಗಂಡ ಜಹಗೀರದಾರ ನಾಲ್ಕು ವರ್ಷದ ಹಿಂದೆ ತೀರಿಕೊಂಡಿದ್ದರು. ಅಂದಿನಿಂದ ಇಂದಿನವರೆಗೂ ಒಂಟಿಜೀವನ. ಹೂವಪ್ಪನ ಗಾಣದೆತ್ತಿನ ಹಾಗೆ ಇನ್ನೂ ಎಷ್ಟು ವರ್ಷ ಸುತ್ತಬೇಕೋ. ಈ ಪಶು ಪಕ್ಷಿಗಳ ಹಾಗೆಯೇ ಕುಟುಂಬದ ಎಲ್ಲ ಸದಸ್ಯರೂ ಕೊನೆಯವರೆಗೂ ಕೂಡಿಯೇ ಇರುತ್ತಿದ್ದರೆ ಎಷ್ಟೊಂದು ಚೆಂದವಿರುತ್ತಿತ್ತು ಎಂದುಕೊಳ್ಳುತ್ತಾಳೆ. ಆದರೆ ಹಿರಿಮಗಳ ಮದುವೆ ಹದಿನೇಳಾದರೂ ಆಗದಿದ್ದಾಗ ಗಂಡನಿಗಿಂತ ಹೆಚ್ಚು ತಾನೇ ಕಂಗಲಾಗಿರಲಿಲ್ಲವೇ? ಜೀವನವೇ ಹೀಗೆ, ಇದ್ದಾಗ ಕಳಿಸಬೇಕೆನಿಸುತ್ತದೆ, ದೂರವಾದಾಗ ಕೂಡಿರಬೇಕೆನಿಸುತ್ತದೆ. ಎಲ್ಲ ದೈವದಾಟ ನಮ್ಮ ಕೈಯಲ್ಲೇನಿದೆ ಎಂದು ದೊಡ್ಡೂರ ಬಸವಣ್ಣನನ್ನು ನೆನೆಯುತ್ತಾಳೆ. ಅವನು ಮನಿ ದೇವರು ಅವರ ಕೃಪೆಯಿಂದಲೇ ಈವರೆಗೂ ಎಲ್ಲ ಸುಸೂತ್ರವಾಗಿ ನಡೆದಿದ್ದು ಆದಷ್ಟು ಬೇಗ ತನಗೊಂದು ಮುಕ್ತಿ ಕೊಡಿಸಪ್ಪಾ ಎಂದೂ ಪಶ್ಚಿಮ ದಿಕ್ಕಿಗೆ ಕೈ ಜೋಡಿಸುತ್ತಾಳೆ. ಹೀಗೆ ಅವಳು ಕಣ್ಮುಚ್ಚಿ ನಮಸ್ಕರಿಸುವುದಕ್ಕೂ "ಅವ್ವಾರೆ ಟಪಾಲ್ ಬಂದೈತಿ" ಎಂದು ಮನೆಯಾಳು ಲಕ್ಷ್ಮಿ ಲಕೋಟೆಯೊಂದನ್ನು ತೋರಿಸುವುದಕ್ಕೂ ಸಮನಾಗುತ್ತದೆ. ಕಣ್ತೆರೆದು ಅದನ್ನು ಇಸಿದುಕೊಳ್ಳುತ್ತಾ "ಓದುವ ಚಸ್ಮಾ ತತಾ" ಎಂದು ಹೇಳಿ ಕೊಂಚ ಖುಷಿಯಿಂದ ಮನೆಯೊಳಗೆ ನಡೆಯುತ್ತಾಳೆ.

ರಮೇಶನ ಪತ್ರ ಬಿಡಿಸುತ್ತ ಸೀತಾಬಾಯಿ ಗಾಳಿಯಲ್ಲಿ ತೇಲತೊಡಗಿದಳು. ರಮೇಶ ತನ್ನ ಮೊಮ್ಮಗ-ಖಾಸ ಅಲ್ಲದಿದ್ದರೂ-ತನ್ನಕ್ಕನ ಮಗಳ ಮಗ. ದೊಡ್ಡ ಸಾಹೇಬನಾಗಿ ಧಾರವಾಡಕ್ಕೆ ಬಂದಿದ್ದಾನಂತೆ; ಬಂದು ಆಗಲೇ ಮೂರು ತಿಂಗಳಾಗಿದ್ದರೂ ಒಮ್ಮೆಯೂ ಇತ್ತ ಬರದೇ ಪತ್ರ ಬರೆದಿದ್ದಾನಲ್ಲಾ ಎಂದು ತುಸು ಮುನಿಸುಗೊಂಡು ವಾಸ್ತವಕ್ಕೆ ಬಂದಳು. ಇಡೀ ಜಿಲ್ಲೆಯೇ ಆತನಿಗೆ ಬರುತ್ತದಂತೆ, ಯಾಕೆ ಬರಬಾರದಾಗಿತ್ತು. ಏನೋ ಕಚೇರಿ ಕೆಲಸದ ನೆವ ಹಾಕಿಕೊಂಡು? ಇರಲು ಇಷ್ಟಾದರೂ ನೆನಪಿಸಿದ್ದಾನಲ್ಲಾ ಎಂದು ಸ್ಥಿತಪ್ರಜ್ಞ ಸಮಾಧಾನ ತಂದುಕೊಂಡಳು.

ನಾಲ್ಕೈದು ವರ್ಷದ ಹಿಂದೊಮ್ಮೆ ಸಿಕ್ಕಾಗ "ನೀನಃ ನನ್ನ ಖರೆ ಅಮ್ಮಾಬೆ. ನಮ್ಮವ್ವಾ ಹಗಲೆಲ್ಲ ಹೇಳ್ತಿರ್ತಾಳಾ ಅಕೀ ಕೂಸಾಗಿದ್ದಾಗ ನಿನ್ನ ಹತ್ರ ಇದ್ದು ಬೆಳೆದಿದ್ದನ್ನ....." ಅದೆಲ್ಲ ನೆನಪಾಗಿ ಸೀತಾಬಾಯಿಯ ಮೈ ರೋಮಾಂಚನಗೊಳ್ಳುತ್ತದೆ.

ರಮೇಶನ ತಾಯಿ ಗೀತಾ ಮೂರು ತಿಂಗಳಿದವಳಿದ್ದಾಗಲೇ ಅವಳ ತಾಯಿ ಅಂದರೆ ಸೀತಾಬಾಯಿಯ ಖಾಸ ಅಕ್ಕನಿಗೆ ಯಾವುದೋ ಖಾಯಿಲೆಯಾಗಿ ಎದೆ ಹಾಲು ಬತ್ತಿ ಹೋಗಿ, ಅವಳನ್ನು ಮಾತಾಡಿಸಲು ಹೋದ ಇವಳ ಕೊಳ್ಳಿಗೇ ಗೀತಾ ಬಿದ್ದದ್ದು, ತನ್ನ ನಡುವಿನ ಮಗಳು ಅದೇ ತಾನೇ ಮೊಲೆ ಬಿಟ್ಟಿದ್ದು ಆದರೂ ಎದೆ ಹಾಲು ಭರ್ಪೂರ ಇದ್ದದ್ದು, ಜಹಗೀರದಾರರು ಅತ್ಯಂತ ಕರುಣಾಮಯಿ ಗೀತಾಳನ್ನು ಸ್ವತಃ ಎತ್ತಿಕೊಂಡು ತಮ್ಮೂರಿಗೆ ತಂದದ್ದು ಮುಂದೆ ಆರು ತಿಂಗಳು ತನ್ನ ಎದೆ ಹಾಲನ್ನೇ ಅವಳಿಗೆ ಕುಡಿಸಿ ಬೆಳೆಸಿದ್ದು ಇನ್ನೂ (ಈಗ ಎದೆ ಹಾಲು ಬತ್ತಿದ್ದರೂ) ನೆನಪು ಮಾತ್ರ ತೊರೆಸಿದ ಮೊಲೆಯ ಹಾಲಿನಂತೆ ತಾನೇ ಉಕ್ಕಿ ಹೊರ ಹರಿಯುತ್ತದೆ.

ಸೀತಮ್ಮ, ಮೊಮ್ಮಗನ ಪತ್ರವನ್ನು ಮೃದುವಾಗಿ ಎದೆಗವಚಿಕೊಳ್ಳುತ್ತಾಳೆ. ಎಷ್ಟು ಅಭಿಮಾನ ಇಟ್ಟಾನ ಈ ಹುಡುಗ; ಪೋಷಿಸಿ ಬೆಳೆಸಿದ ಮಕ್ಕಳಿಗೆ ನೆನಪಿದೆಯೋ ಇಲ್ಲವೋ? ಈತನೆಷ್ಟು ನೆನೆಸುತ್ತಾನೆ? ತನ್ನ ಯಜಮಾನರ

ಹಾಗೆಯೇ ಬಹಳ ಉದಾರಿ ಇರಬೇಕು ಎಂದು ದಿನದ ನೂರನೇ ಸಲ ಗಂಡನನ್ನು ಸ್ಮರಿಸಿದಳು. ಇತಿಹಾಸದ ಪುಟಗಳು ತಂತಾನೆ ತೆರೆದುಕೊಳ್ಳುತ್ತವೆ.

ಸೀತಾಬಾಯಿ ಹುಟ್ಟಿದ್ದು ಹಿರೆಕೊಪ್ಪದ ಪಕ್ಕದ ಊರು ಜೋಡಳ್ಳಿ, ನಾಲ್ಕು ಊರಿನ ವತನದಾರ ಗೌಡಕಿ ಮನೆತನ. ಒಬ್ಬ ಅಣ್ಣ, ಒಬ್ಬ ಅಕ್ಕ, ಸ್ಫುರದ್ರೂಪಿ, ಅನೇಕರು ನೋಡಬಯಸಿದ್ದರೂ ಯಾರಿಗೂ ತೋರಿಸದೇ ತಾವೇ ಹುಡುಕ್ಯಾಡಿ ವರನನ್ನು ಆರಿಸಿದ್ದರು ಅವರ ತಂದೆ. ಸೀತಾಬಾಯಿಯ ಕೈ ಹಿಡಿದ ಗಂಡನೂ ಕಟ್ಟುಮಸ್ತಾದ ಆಳು. ಉದ್ದನೆಯ ಮೂಗು, ಸುಂದರ ಕಣ್ಣು, ಅಗಲಾದ ಹಣೆ, ಎಲಲ್ಕೂ ತಿಲಕವಿಟ್ಟಂತೆ ಚೂಪದ ಕೋರೆ ಮೀಸೆ. ಇಪ್ಪತ್ತನೇ ವಯಸ್ಸಿಗೇ ನಾಲ್ಕೈದು ಕುಸ್ತಿ ಕಣಗಳಲ್ಲಿ 'ಫರ್ಸಿ ಪೈಕಿ' ಕಡೆ ಹಿಡಿದಿದ್ದ. ನೋಡಿದವರ್‍ಯಾರೂ 'ಒಲ್ಲೆ' ಅನ್ನುವ ಹಾಗೆಯೇ ಇರಲಿಲ್ಲ. ಮೇಲೆ ಎಂಬತ್ತು ಎಕರೆ ಜಮೀನು.

ಪ್ರಾರಂಭದ ದಾಂಪತ್ಯ ಜೀವನ ಸೀತಾಬಾಯಿಗೆ ಸ್ವರ್ಗಕ್ಕೆ ಕಿಚ್ಚು ಹಚ್ಚಿಸಿತ್ತು. ಯಾವುದಕ್ಕೂ ಕೊರತೆ ಇರಲಿಲ್ಲ. ಗುಣಸ್ವಭಾವಗಳಲ್ಲಿ ಗಂಡ ಒಳ್ಳೆಯವನಾಗಿದ್ದರಿಂದ ಯಾವ ಕುಂದೂ ಇರಲಿಲ್ಲ. ಇಂಥ ಸುಖದ ಬಾನಂಗಳದಲ್ಲಿ ಬರಸಿಡಿಲಿನಂತೆ ಬಂದು ಎರಗಿದ್ದು ಅವನ ಅಕಾಲಿಕ ಸಾವು. ಆದರೂ ಹೇಗೇಗೋ ಚೇತರಿಸಿಕೊಂಡು ಜೀವನ ಸಾಗಿಸಿದ್ದಳು, ಇಪ್ಪತ್ತು ಕೂರಿಗೆ ಹೊಲದ ಎಂಟು ಎತ್ತಿನ ಕಮತವನ್ನು ಒಬ್ಬಳೇ ದೇಖರೇಖೆ ಮಾಡುತ್ತಿದ್ದಳು. ಗಂಡನಿದ್ದಾಗ ಕೇವಲ ಹೊಲ ನೋಡಲು ವರ್ಷಕ್ಕೊಮ್ಮೆಯೊ ಎರಡು ಸಾರೆಯೋ ಹೋಗುತ್ತಿದ್ದ ಸೀತಾಬಾಯಿಗೆ ಒಕ್ಕಲುತನದ ಅಲ್ಪಸ್ವಲ್ಪ ಮಾತ್ರ ಮಾಹಿತಿ ಇತ್ತು. ಅದನ್ನೇ ಹಿನ್ನೆಲೆಯಾಗಿಟ್ಟುಕೊಂಡು ಆಳುಕಾಳುಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತ ಎಲ್ಲ ನಿಭಾಯಿಸಿಕೊಂಡು ಬರುತ್ತಿದ್ದಳು.

ಯಜಮಾನನ ಸಾವಿನಿಂದ ಚೇತರಿಸಿಕೊಂಡ ಸೀತಾಬಾಯಿಗೆ ಘನಘೋರ ಆಘಾತವಾಗಿದ್ದು ತನ್ನ ಏಕಮೇವ ಮಗ ಎಲ್ಲಕ್ಕೂ ಹಿರಿಯನಾಗಿದ್ದರೂ ಹೊಲಮನಿಗಳನ್ನು ನೋಡಿಕೊಳ್ಳುವುದನ್ನು ಬಿಟ್ಟು, ದೂರದ ಪುಣೆಯಲ್ಲಿಯೇ ಮನೆ ಕಟ್ಟಿಸಿಕೊಂಡು ಖಾಯಂ ನೆಲಸುವುದಾಗಿಯೂ ಹೇಳಿದಾಗ, ಹೆಂಡತಿಯ ಕೈಗೊಂಬೆ, ತಾಯಿಯ ಬಗ್ಗೆ ಕೃತ್ರಿಮ ಪ್ರೀತಿ. ಸೀತಾಬಾಯಿಗೆ ಎಲ್ಲ ತಿಳಿಯದೇ? ವಿಲ ವಿಲ ಒದ್ದಾಡಿದಳು. ಅನೇಕ ರಾತ್ರಿಗಳನ್ನು ಚಿಂತೆಯಲ್ಲಿಯೇ ನಿದ್ರಾಹೀನಳಾಗಿ ಕಳೆದಿದ್ದಳು.

ಅವಳೆದುರೇ ಐವತ್ತು ಎಕರೆ ಜಮೀನು ಮಾರಿಕೊಂಡ ಮಗ. ತಲೆತಲಾಂತರದಿಂದ ಬಂದ ಬಂಗಾರದಂತಹ ಹೊಲಗಳಿಗೆ ಅವನ ಅವಸರದಿಂದಾಗಿ ಹೇಳಿಕೊಳ್ಳುವಂತಹ ಬೆಲೆಯೂ ಬರಲಿಲ್ಲ. ಎಲ್ಲ ಮುಗಿದ ಮೇಲೆ

"ನೀ ಏನೂ ಚಿಂತಿ ಮಾಡಬ್ಯಾಡ್ ಅವ್ವಾ, ಬೇಕಾದರೆ ನೀನೂ ಬಂದು ಅಲ್ಲೆ ಪುಣಾದಾಗ ಇದ್ದುಬಿಡು" ಅಂದ.

"ಅಲ್ಲಿ ನನ್ನ ಜೊತೆ ಅಂತ ಅನ್ನಲಿಲ್ಲವಲ್ಲ ಈ ಮಗ ಮಹರಾಯ ಕಾಟಾಚಾರಕ್ಕಾದರೂ" ಎಂದು ತನ್ನಲ್ಲಿಯೇ ಕೊರಗಿಕೊಂಡಳು.

ಮಗನು ಹಚ್ಚಿದ ಈ ಚಿಂತೆಯ ಬೆಂಕಿ ಮನಸ್ಸನ್ನು ಸುಡುತ್ತಿದ್ದಾಗಲೇ ಹೋದವರ್ಷ ನಡೆದ ಘಟನೆಯೊಂದು ಅವಳ ಮನಃಪಟಲದ ಮೇಲೆ ಪುನಃ ಸುಳಿಯಿತು.

ತನ್ನ ಅಕ್ಕನ ಗಂಡನಿಗೆ ಬಹಳ ಅಡಚಣೆ ಇದೆಯೆಂದು ತನ್ನಿಂದ ಕೆಲ ವರ್ಷಗಳ ಹಿಂದೆ ಮೂವತ್ತು ಸಾವಿರ ರೂಪಾಯಿ ಕೈಗಡ ತೆಗೆದುಕೊಂಡ ಅಕ್ಕ, ತಾನು ಕೇಳಲು ಹೋದಾಗ ಮಾಡಿದ ರಂಪವೆಷ್ಟು? ಬಡ್ಡೀ ಲೆಕ್ಕ ಹಾಕಿದರೆ ಎರಡು ಪಟ್ಟು ಆಗುತ್ತಿತ್ತು. ಆದರೆ ಕೊಟ್ಟ ಅಸಲಿಗೂ ಗತಿಯಿಲ್ಲ. ಆ ವರ್ಷ ಸೀತಾಬಾಯಿಯ ಪೀಕುಗಳೂ ಸರಿಯಾಗಿ ಬಂದಿರಲಿಲ್ಲ. ಗಂಡನೊಡನೆ ಒಂದು ತಾಸು ಮಾತನಾಡಿ ಬಂದ ಅಕ್ಕ ಹಣ ಕೊಡುವ ಬಗ್ಗೆ ಚಕಾರ ಎತ್ತಲಿಲ್ಲ. ಕೊನೆಗೆ ಹೊರಟು ನಿಂತು.

“ಈಗ ಸ್ವಲ್ಪನಾದ್ರೂ ಕೊಟ್ಟಿದ್ರ ಚೋಲೊ ಇತ್ತು ಯಕ್ಕಾ” ಎಂದಾಗ “ಇಷ್ಟಾಗ ಪೀಡಿಸ್ತಿಯವಾ ನಾವು ದೊಡ್ಡ ತಪ್ಪು ಮಾಡೇವಿ ನಿನ್ನ ಹತ್ರ ಸಾಲಾ ಮಾಡಿ, ಏನರ ಮಾರಿಯಾದರೂ ತಿರುಗಿ ಕೊಡತೇವಿ ಅಂತಾ ಹೇಳ್ಯಾರ ಅವ್ರು” ಎಂದು ತನ್ನ ಗಂಡನ ಮಾತನ್ನು ಸೀತಾಬಾಯಿಗೆ ಹೇಳಿದ ಅಕ್ಕ ಊಟ ಮಾಡಿಕೊಂಡು ಹೋಗು ಎಂದು ಕೂಡಾ ಅನ್ನಲಿಲ್ಲ.

ಈ ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಕೆಡಿಸುವ ಕೆಟ್ಟ ಕಸುವು ಉಳ್ಳದ್ದು ಎಂದಂದುಕೊಂಡು, ಬಂದ ದಾರಿಗೆ ಸುಂಕವಿಲ್ಲದೇ ಮರಳಿದ್ದಳು.

ಬಂದ ಒಂದು ವಾರದಲ್ಲಿ ಅಕ್ಕನ ಗಂಡ ಎದೆನೋವಿನಿಂದ ಹಾಸಿಗೆ ಹಿಡಿದ. ಇವಳು ಬಂದು ಪೀಡಿಸಿದ್ದಕ್ಕೇ ಆಯಿತೆಂದು ಅಕ್ಕ ಹೋದವರೆದುರು ಬಂದವರೆದುರು ಆಡಿಕೊಂಡು ಅತ್ತಿದ್ದು ಸೀತಾಬಾಯಿಯ ಕಿವಿಗೆ ಬಿದ್ದ ಎಷ್ಟೋ ದಿನ ಅವಳೂ ಹಾಸಿಗೆ ಹಿಡಿದಿದ್ದಳು. ಎಂತಹ ಜಗತ್ತು; ಋಣಗೇಡಿ ಜನ, ಸಹಾಯವನ್ನೂ ಮಾಡಿಸಿಕೊಳ್ಳುತ್ತಾರೆ, ಮೇಲೆ ಅಪವಾದದ ಗೂಬೆಯನ್ನು ಕೂಡಿಸುತ್ತಾರೆ. ತಿರುಗಿ ಹಣ ಕೊಡುವುದು ಒತ್ತಟ್ಟಿಗಿರಲಿ, ಇಸಿದುಕೊಂಡದ್ದಕ್ಕೆ ಕೃತಜ್ಞತೆಯೂ ಬೇಡವೇ? ಕೊನೆಯ ಮಗಳು ಬಂದು ಒಂದು ತಿಂಗಳು ಇದ್ದು ಆರೈಕೆ ಮಾಡಿ ಹೋಗಬೇಕಾಯಿತು. ಏನೋ ಹೆಣ್ಣು ಮಕ್ಕಳು ಕರುಣ ಕಕ್ಕುಲಾತಿ ಇಟ್ಟುಕೊಂಡಿದ್ದಾರೆ. ಆಗೀಗ ಮೊಮ್ಮಕ್ಕಳೂ ಬಂದು ಇದ್ದು ಹೋಗುತ್ತಿರುತ್ತಾರೆ. ಹೀಗೆ ಮನೆಯಲ್ಲಿಯ ಒಂಟಿತನದ ಬೇಜಾರು ಕಳೆಯಲು ಮಕ್ಕಳು ಮೊಮ್ಮಕ್ಕಳನ್ನು ಆಗಾಗ ಕರೆಯಿಸಿಕೊಂಡು ಇಟ್ಟುಕೊಳ್ಳುತ್ತಿರುತ್ತಾಳೆ. ಎಷ್ಟಂದರೂ ಎಲ್ಲರಿಗೂ ಅವರವರ ಸಂಸಾರದ ಜವಾಬ್ದಾರಿ, ಮಕ್ಕಳಿಗೆ ಶಾಲೆ ಕಾಲೇಜು.

ಅಂದಿನಿಂದ ಹಾಸಿಗೆ ಹಿಡಿದ ಅಕ್ಕನ ಗಂಡ ಮೇಲೇಳಲಿಲ್ಲ. ಮುಂದೆ ಏಳೆಂಟು ತಿಂಗಳಲ್ಲಿ ಕೊನೆಯುಸಿರೆಳೆದ. ಕೊಟ್ಟ ಹಣದ ಜೊತೆಗೆ ಪ್ರೀತಿಯೂ ಹೋಯಿತು. ಹಣ ಕೇಳಲು ಕಳಿಸಿದರೆ, ಇಸಿದುಕೊಂಡವರೇ ಹೋದರಲ್ಲಾ ಬೇಕಾದರೆ ಕೋರ್ಟಿಗೆ ಹೋಗಿ ತೆಗೆದುಕೊಳ್ಳಲು ಹೇಳೆಂದು ಹೇಳಿ ಕಳಿಸಿದಾಗ ಸೀತಾಬಾಯಿಯ ಜಂಘಾಬಲವೇ ಉಡುಗಿ ಹೋಗಿತ್ತು.

ಈಗ ಅದೆ ಅಕ್ಕನ ಮೊಮ್ಮಗನ ಪತ್ರ ಬಂದಿದೆ. ಓದುತ್ತ ಹರ್ಷಚಿತ್ತಳಾದಳು. ಮುಂದಿನ ಮಂಗಳವಾರ ತನ್ ಭೆಟ್ಟಿಯಾಗಲು ಬರುತ್ತಾನಂತೆ ಎಷ್ಟೆಲ್ಲಾ ಬರೆದಿದ್ದಾನೆ. ತಾನು ಸಣ್ಣವನಿದ್ದಾಗ ಇಲ್ಲಿ ಆಟವಾಡುತ್ತಿದ್ದುದು, ತನ್ನ ಜೊತೆ ಮಜ್ಜಿಗೆ ಕಡೆಯುವುದನ್ನು, ಆಕಳು ಎಮ್ಮೆ ಹಿಂಡುವುದನ್ನು ಕಲಿಯಲು ಪ್ರಯತ್ನಿಸುತ್ತಿದ್ದದ್ದನ್ನು, ಬಿಸಿ ರೊಟ್ಟಿ ಮೇಲೆ ತಾಜಾ ಹೂ ಬೆಣ್ಣೆಯನ್ನು ಹಾಕಿ ಅದು ಕರಗುತ್ತಿರುವಂತೆಯೇ ಸ್ವಲ್ಪ ಉಪ್ಪು ಸೇರಿಸಿ ರೊಟ್ಟಿ ಮುರಿಯುತ್ತ ಮುರಿಯುತ್ತ ಕರಗುವ ಬೆಣ್ಣೆಯನ್ನು ಅದಕ್ಕೆ ಸವರಿಕೊಂಡು ತಿನ್ನುವುದು, ಜೋಳ ತೆನೆ ಹಾಕಿದಾಗ “ಸೀತನಿ” ಗೆ ಈ ಊರಲ್ಲೇ ನಾನು ಕೇಳಿದ್ದು ಎಂದು ತನ್ನೂರಿನ ಭಾಷೆಗೂ ಇಲ್ಲಿನ ಭಾಷೆಗೂ ಕೊಂಚ ಅಲ್ಲಲ್ಲಿ ಹೇಗೆ ಫರಕು ಇದೆ ಎಂದು ಆಗಾಗ ಹೇಳುತ್ತಿದ್ದುದೂ ಸೀತಾಬಾಯಿಗೆ ನೆನಪಾಯಿತು.

ನೀವ್ಯಾಕ “ಸೀತನಿ” ಅಂತೇರಿ ಗೊತ್ತೈತೇನು? ಎಂದು ತಾನೇ “ಸಿಹಿಯಾದ ತಿನಿಸಿಹಿತಿನಿ, ಅದರ ರೂಪಾಂತರವೇ “ಸೀತನಿ” ಆಗಿದೆ ಎಂದು ಅವ ಹೇಳಿದ್ದು ಈಕೆಗೆ ಇನ್ನೂ ನೆನಪಿನಲ್ಲಿದೆ. ಕೊನೆಗೆ ಸೀತಾಬಾಯಿಯ ಅಕ್ಕನ ಅಂದರೆ-ಅವನ ಅಜ್ಜಿಯ ಧೋರಣೆ, ಇವಳ ಹಣ ಹಿಂದಿರುಗಿಸದೇ ಇದ್ದದ್ದು, ತನಗೆ ಸರಿ ಬಂದಿಲ್ಲವೆಂದೂ ಅದನ್ನು ತಿರುಗಿ ಕೊಡಿಸಲು ಪ್ರಯತ್ನಿಸುವುದಾಗಿಯೂ ತಿಳಿಸಿದ್ದ.

ಇವನೇನೊ ಕೊಡಿಸುತ್ತೇನೆ ಅನ್ನುತ್ತಾನೆ. ಆದರೆ ತನ್ನಕ್ಕ ಬಲು ಹಟಮಾರಿ, ಇವರ ಮಾತನ್ನು ಕೇಳಬೇಕಲ್ಲ? ಏಹ್ ರಮೇಶ ಈಗ ದೊಡ್ಡ ಸಹೇಬನಾಗಿಲ್ಲವೇ? ಬೇಕಾದರೆ ಆತ ಯಾರ ಜಮೀನನ್ನಾದರೂ ಹರಾಜು ಹಾಕಿಸಿ ವಸೂಲಿ ಮಾಡಿಸಿ ಕೊಡುವ ಅಧಿಕಾರವಿದೆಯಂತೆ ಅವನಿಗೆ ಒಳ್ಳೆಯದೇ ಆಯಿತು ದೇವರು ಕಣ್ಣ ತೆರೆದ.

ಅಕ್ಕನಿಂದ ತನಗಾದ ಅವಮಾನ ಅನ್ಯಾಯ ಸರಿಪಡಿಸಿಕೊಳ್ಳಲೇಬೇಕು ಎಂದು ತಾನೂ ಹಠಕ್ಕೆ ಬಿದ್ದಳು. ಅವಳು ಎಷ್ಟು ಕೃತಘ್ನ? ಅವಳಿಗೆ ತಂಗಿ ಅನ್ನುವ ಪ್ರೀತಿ ಎಳ್ಳಷ್ಟೂ ಬೇಡವೇ? ಹೇಗೆ ಕೆಡಿಸುತ್ತಿದ್ದಾಳೆ ತನ್ನ ಹೆಸರನ್ನು, ಮೊನ್ನೆ ಫಕೀರಪ್ಪನ ಎದುರೂ ಈ ವಿಷಯ ಪ್ರಸ್ತಾಪಿಸಿದ್ದನ್ನು ಆತನ ಬಂದು ಹೇಳಿದ್ದನಲ್ಲಾ. ಹಣ ಇಸಿದುಕೊಂಡಿದ್ದನ್ನು ತಿರುಗಿ ಕೊಡಲಾಗದಿದ್ದರೆ ಸುಮ್ಮನೇ ಇರುವುದು ಬಿಟ್ಟು ಮೇಲೆ ಅದೇ ಚಿಂತೆಯಲ್ಲಿಯೇ ತನ್ನ ಗಂಡನಿಗೆ ಹಾರ್ಟ್‌ಫೇಲ್ ಆಯಿತೆಂದು ಊರಿಗೆಲ್ಲಾ ಬೊಗಳೆ ಬಿಡುತ್ತಿದ್ದಾಳೆ. ನೋಡುತ್ತೇನೆ ತಾನೂ ಒಂದು ಕೈ ಎಂದುಕೊಂಡಳು. ಹೇಗೂ ರಮೇಶನ ಪತ್ರವೂ ಆಶ್ವಾಸನೆ ನೀಡುತ್ತಿದೆಯಲ್ಲಾ. ಎಷ್ಟೊಂದು ಸಹಾಯ ಆಯಿತು? ಎಲ್ಲ ರಮೇಶ ಬಂದಾಗ ತೀರ್ಮಾನಿಸುವುದೆಂದು ಅವನು ಬರುವ ಹಾದಿ ಮೇಲೆ ಕಣ್ಣ ನೆಟ್ಟಳು. ಆತನಿಗೆ ಏನೇನು ಇಷ್ಟವೋ ಅದನ್ನೆಲ್ಲ ಮಾಡಿಸಿ ಇಡಬೇಕು ಎಂದುಕೊಂಡು ಅದಕ್ಕಾಗಿ ಸಜ್ಜು ಮಾಡಿಕೊಳ್ಳತೊಡಗಿದಳು.

ಇತ್ತ ರಮೇಶ ಎಂದಿನ ತನ್ನ ಕೆಲಸ ಕಾರ್ಯಗಳಲ್ಲಿ ಮಗ್ನನಾಗಿದ್ದ. ತಾನು ಹಿರೇಕೊಪ್ಪಕ್ಕೆ ಹೋಗುವುದಾಗಿ ಪತ್ರ ಬರೆದು ಹಾಕಿದಾಗ ಆತನಿಗೆ ಯಾವುದೋ ಒಂದು ಒಳ್ಳೆ ಕೆಲಸ ಮಾಡಿದ ಆನಂದ ಸಿಕ್ಕಿತ್ತು. ಸೀತಮ್ಮ ಎಷ್ಟೊಂದು ಉದಾರಿ, ಪ್ರೀತಿಯ ಕಾರಂಜಿ ಅವಳು. ಎಷ್ಟು ಜನರಿಗೆ ಸಹಾಯ ಮಾಡಿದ್ದಾಳೆ. ತನ್ನ ತಾಯಿಗೆ ಆಕೆ ಮೊಲೆ ಹಾಲನ್ನು ನೀಡದೇ ಹೋಗಿದ್ದರೆ..... ಅವಳು ಉಳಿಯುತ್ತಲೇ ಇರಲಿಲ್ಲ. ಹಾಗಾದಾಗ ತಾನಂತೂ ಈ ಲೋಕವನ್ನು ಕಾಣವದೂ ಅಸಾಧ್ಯದ ಮಾತೇ ಆಗುತ್ತಿತ್ತು. ಈ ದೇಹದಲ್ಲಿ ಸೀತಮ್ಮನ ಹಾಲಿನ ಅಂಶ ಇದ್ದೇ ಇರಬೇಕು ಎಂದು ತನ್ನ ಮೈ ಕೈಗಳನ್ನು ನೋಡಿಕೊಂಡ. ತನ್ನ ತಂದೆ ತಾಯಿಗಳಿಗಿಂತ ತಾನು ತುಸು ಹೆಚ್ಚು ಕೆಂಪಾಗಿದ್ದುದಕ್ಕೆ ಸೀತಮ್ಮನ ಎದೆ ಹಾಲಿನ ಪರಿಣಾಮವೇ ಕಾರಣವಿರಬಹುದೇನೋ ಎಂದು ತನ್ನೊಳಗೇ ಅಂದುಕೊಳ್ಳುತ್ತ ಮುಗುಳ್ನಕ್ಕ. ಮುಂದಿನ ವಾರ ಹೋಗಬೇಕೆಂದು ನಿಶ್ಚಯಿಸಿಯೂಕೊಂಡ. ಇಂಟರ್‌ಕಾಂ ಟ್ರಿನ್....... ಟ್ರಿನ್..... ಎಂದಾಗ ಹಲೋ ಸರ್ ಎಂದ, ಬಾಸ್ ಬರಲು ಹೇಳಿ ಫೋನ್ ಇಟ್ಟಾಗ ಅವರ ಚೇಂಬರ ಕಡೆ ಹೋದ. ಕೈಯಲ್ಲಿಯ ಪತ್ರವೊಂದನ್ನು ಇವನಿಗೆ ಕೊಡುತ್ತ ಬಾಸ್ "ಕಂದಾಯ ಕಾರ್ಯದರ್ಶಿಗಳು ಬರುವವರಿದ್ದಾರೆ. ಅವರು ಬಹಳ ಸಿಟ್ಟಿನವರು ಎಲ್ಲ ಕೆಲಸಗಳಲ್ಲೂ ನೂರಕ್ಕೆ ನೂರು ಪ್ರಗತಿ ನಿರೀಕ್ಷಿಸುವವರು. ಬಹಳ ಕಾಳಜಿಯಿಂದ ನೋಟ್ಸ್ ತಯಾರಿಸಿ ಸಿಬ್ಬಂದಿಗೆಲ್ಲ ಹೇಳಿ" ಎನ್ನುತ್ತಾ ಬರಪರಿಹಾರ ಸಭೆಗಾಗಿ ವ್ಯವಸ್ಥೆ ಮಾಡಲು ತಿಳಿಸಿದರು.

ವಾಪಸು ಬಂದು ವಿವರ ನೋಡಿದರೆ ತಾನು ಸೀತಮ್ಮನನ್ನು ನೋಡಲು ಹೋಗಬೇಕೆಂದುಕೊಂಡ ದಿನಕ್ಕೆ ಹೊಂದಿಕೊಂಡ ಮಾರನೇ ದಿನವೇ ಇದೆ ಈ ಸಭೆ, ಸಭೆಗೆ ತಯಾರಿ ಮಾಡುವುದನ್ನು ಬಿಟ್ಟು ರಜೆ ಹೋಗಬೇಕೆಂದು ಹೇಗೆ ಕೇಳುವದು? ತುಮುಲದಲ್ಲಿ ಬಿದ್ದವ ಆಯಿತು ಎರಡು ದಿನ ತಡವಾದರೂ ಸಭೆ ಮುಗಿದ ಮರುದಿನವೇ ಹೋಗಬೇಕೆಂದು ನಿರ್ಧರಿಸಿಕೊಂಡ. ಸೀತಮ್ಮ ಮರೆಯಾಗಿ ಕಚೇರಿ ಕೆಲಸ ಮನಸ್ಸಿನಲ್ಲಿ ನೆಲೆಸಿತು.

ಅಂತೂ ಇಂತೂ ಬರ ಪರಿಹಾರ ಸಭೆ ಯಾವ ತೊಂದರೆಯೂ ಇಲ್ಲದೆ ಮುಗಿಯಿತು. ಮೇಲೆದ್ದ ಕಂದಾಯ ಕಾರ್ಯದರ್ಶಿಗಳು ಬಾಸ್ ಅವರನ್ನು ಅಭಿನಂದಿಸಿ ಹೊರ ನಡೆದಾಗ ರಮೇಶ್ ನೆಮ್ಮದಿಯ ಉಸಿರು ಬಿಟ್ಟು ತನ್ನ ಕೋಣೆಯ ಕಡೆ ನಡೆದ. ಹಿರೇಕೊಪ್ಪದಿಂದ ಈ ಹಿಂದೆ ಎರಡು ಸಾರೆ ಫೋನ್ ಬಂದಿತ್ತೆಂದೂ ತಾವು ಸಭೆಯಲ್ಲಿದ್ದುದರಿಂದ ಎಂದಿನ ಆದೇಶದಂತೆ "ನಂತರ ಮಾಡಿ" ಎಂದು ತಾನು ಹೇಳಿದ್ದಾಗಿಯೂ ಪಿ.ಎ. ವರದಿ ಒಪ್ಪಿಸಿದ. ತುಸು ಹೊತ್ತಿನಲ್ಲಿ ಮತ್ತೆ ಫೋನ್ ಬಂತು. ಯಾರೋ ಸಂಬಂಧಿಕರು ಮಾತನಾಡಿ ಸೀತಮ್ಮನಿಗೆ ಮೈಯಲ್ಲಿ ಹುಷಾರಿಲ್ಲವೆಂದೂ ಪಕ್ಕದ ಊರಿನ ದವಾಖಾನೆಗೆ ಕರೆದುಕೊಂಡು ಹೋಗಿದ್ದಾರೆಂದೂ ತಿಳಿಸಿದರು. ಐದಾರು ದಿನ ಮನಸ್ಸಿನಿಂದ ಮರೆಯಾದ ಸೀತಮ್ಮನ ಚಿತ್ರ ಧುತ್ತೆಂದು ಮತ್ತೆ ತೇಲಿ ಬಂತು. "ಛೇ ತಾನು ನಿನ್ನೆಯೇ ಹೋಗಿದ್ದರೆ ಎಷ್ಟೊಂದು ಚೆನ್ನಾಗಿತ್ತು. ಮುದುಕಿ ಏನು ತಿಳಿದುಕೊಂಡಿತೊ' ಎಂದು ಕೊರಗಿದ. ಮರುದಿನ ಬೆಳಿಗ್ಗೆಯೇ ಅವಳನ್ನು ನೋಡಲು ಧಾವಿಸಿದ.

ರಮೇಶ ಹಿರೇಕೊಪಕ್ಕೆ ಬಂದದ್ದೇನೋ ಆಯಿತು. ಆದರೆ ಅಷ್ಟರೊಳಗೆ ಸೀತಮ್ಮನ ಪ್ರಾಣಪಕ್ಷಿ ಹಾರಿ ಹೋಗಿತ್ತು. ಆಗಲೇ ಸಾಕಷ್ಟು ಜನ ಸೇರಿದ್ದರು. ಸಂಬಂಧಿಕರು ಅಳುವುದು ದೂರದಿಂದಲೇ ಕಿವಿಗೆ ಬಡೆಯುತ್ತಿತ್ತು. ಈತ ಬಂದದ್ದ ನೋಡಿ ರಣಹಲಿಗೆ ಬಡಿಯುವವರು ಜೋರಾಗಿ ಬಾರಿಸತೊಡಗಿದರು. ಭಜನೆ ಮ್ಯಾಳದವರು

"ಹುಟ್ಟಿದ್ದು ಹೊಲಿಮನಿ ಬಿಟ್ ಹೊಂಟೊ ಕಾಯ್ ಮನಿ ಎಷ್ಟಿದ್ದರೇನಿದು ಖಾಲಿ ಮನಿ...... ಖಾಲಿಮನಿ" ಎಂದು ಶರೀಫರ ಹಾಡನ್ನು ಚೀರಿ ಚೀರಿ ಹಾಡುತ್ತಿದ್ದುದೂ ಕೇಳಿಸುತ್ತಿತ್ತು.

ಅವಳನ್ನು ನೋಡಲು ಮಾತನಾಡಿಸಲು ಬಂದ ರಮೇಶ ಸೀತಮ್ಮನ ಸ್ಮಶಾನಯಾತ್ರೆಯಲ್ಲಿ ಭಾಗಿಯಾಗಬೇಕಾಯಿತು. ಅದನ್ನೆಲ್ಲ ಭಾರಮನಸ್ಸಿನಿಂದಲೇ ಮುಗಿಸಿಕೊಂಡ ರಮೇಶನಿಗೆ ಕೂಡಿದವರೆಲ್ಲಾ ಹೇಳಿದ್ದು ಒಂದೇ ಮಾತು; ಮೊನ್ನೆ ಬೆಳಿಗ್ಗೆ ಒಂಭತ್ತು ಘಂಟೆಯಿಂದ ತೀವ್ರ ಎದೆನೋವು ಬಂದ ಸೀತಮ್ಮ "ರಮೇಶ ಬಂದ್ನಾ, ರಮೇಶ ಬಂದ್ನಾ" ಎಂದು ಬಡಬಡಿಸುತ್ತಿದ್ದಳಂತೆ: ದವಾಖಾನೆಗೆ ಸಾಗಿಸುತ್ತಿದ್ದಾಗಲೂ ಅವನನ್ನೇ ಕೇಳುತ್ತಾ ಕೇಳುತ್ತಾ ಕೊನೆಯುಸಿರೆಳೆದಳಂತೆ. ಮಗ, ಮಕ್ಕಳು, ಮೊಮ್ಮಕ್ಕಳು ಎಲ್ಲರನ್ನೂ ಬಿಟ್ಟು ತನ್ನನ್ನೇ ನೆನೆಯುತ್ತಿದ್ದ ಕೇಳಿ ರಮೇಶನಿಗೆ ಅದವ ಜನ್ಮದ ಸಂಬಂಧವೋ ಅವಳ ತನ್ನ ನಡುವೆ ಎನಿಸಿ ತೀವ್ರ ಯಾತನೆಯಾಯಿತು. ತಾನು ಮೊನ್ನೆ ಬಂದು ಹೋಗಿ ಬಿಟ್ಟಿದ್ದರೆ ಸೀತಮ್ಮ ಸಾಯುತ್ತಲೇ ಇರಲಿಲ್ಲವೇನೋ ಅನ್ನಿಸಿತು. ಎಂಥಾ ಪ್ರಮಾದವಾಗಿ ಬಿಟ್ಟಿತು ತನ್ನಿಂದ, ಅವಳು ಏನನ್ನಾದರೂ ಹೇಳುವದಿತ್ತೋ ಏನೋ, ತಾನು ಹೇಗೆ ಮಾಡಿ ಅವಳ ಋಣ ತೀರಿಸಬೇಕು.

"ನೀ ಏನೂ ಚಿಂತಿಸಬ್ಯಾಡಾ ನಾ ಬಂದು ಎಲ್ಲಾ ಸರಿ ಮಾಡ್ತಿನಿ" ಎಂದು ತಾನು ಬರೆದದ್ದು ಕೇವಲ ಹುಸಿ ಭರವಸೆ ಎಂದು ಸೀತಮ್ಮ ಅಂದುಕೊಂಡಳೋ ಏನೋ. ತನ್ನ ಬೇರೆಯಾದ ಹಿರಿಮಗ, ಮೋಸ ಮಾಡಿದ ಅಕ್ಕ ಇವರ ಸಾಲಿನಲ್ಲೇ ತನ್ನನ್ನು ನಿಲ್ಲಿಸಿ ತೂಕ ಮಾಡಿಬಿಟ್ಟಳೋ? ಇಲ್ಲ ಸೀತಮ್ಮ ನಾ ಹಾಗಲ್ಲ ಎಂದು ತನ್ನಷ್ಟಕ್ಕೇನೆ ಅಂದುಕೊಳ್ಳುತ್ತ ಅವಳ ಉಳಿದ ಕೆಲಸವನ್ನಾದರೂ ಮಾಡಿಕೊಡಬೇಕೆಂದು ನಿರ್ಧರಿಸಿದ.

ಉಳಿದದ್ದಾರೂ ಏನು? ಅದನ್ನು ಮಾಡಿ ಏನು ಮಾಡುವುದು? ಅವಳೇ ಇಲ್ಲದಾಗ "ಅವಳ ಆತ್ಮ' ಕ್ಕೆ ಶಾಂತಿ? ಏನೂ ತಿಳಿಯದವನಂತೆ ಮರುಪ್ರಯಾಣ ಬೆಳೆಸಿದ ಭಾರಹೃದಯ ಹೊತ್ತುಕೊಂಡು.

❖

# ಜೋಳದ ಬುಟ್ಟಿಯೊಳಗಿಂದ

ಎಲ್ಲ ಹಳ್ಳಿಗಳಲ್ಲಿಯಂತೆಯೇ ಆಗ ಗೋವನಾಳದಲ್ಲಿಯೂ ಈಗಿನ ಹಾಗೆ ವಿದ್ಯುತ್‌ಚಾಲಿತ ಹಿಟ್ಟಿನ ಗಿರಣಿಗಳಿರಲಿಲ್ಲ. ಡೀಜೆಲ್‌ನಿಂದ ನಡೆಯುವವೇ ಎಲ್ಲ. ಕೃಷ್ಣಪ್ಪನ ಹಿಟ್ಟಿನ ಗಿರಣಿ ಸುರುವಾಗುತ್ತಲೇ ಚುಕ್-ಚುಕ್ ಚುಕ್-ಚುಕ್ ಎಂಬ ಸದ್ದು ಅರ್ಧ ಊರಿಗೇ ಕೇಳುತ್ತಿತ್ತು. ಹೊಗೆ ಉಗುಳುವ ಪೈಪಿನ ತುದಿಗೆ ಅಡ್ಡಲಾಗಿ ಸಣ್ಣ ಡಬ್ಬಿಯೊಂದನ್ನು ಕಟ್ಟಿದ್ದರಿಂದ ಸರ್ವಸಾಧಾರಣ ಎಲ್ಲರೂ ಹಾಗೇ ಮಾಡುತಿದ್ದರು ಆಗ - ಈ ಶಬ್ದ ಒಳ್ಳೇ ತಾಳಬದ್ಧವಾಗಿ ಹೊರಹೊಮ್ಮುತ್ತಿತ್ತು. ಗಿರಣಿಯ ಸಮೀಪ ಹೋದವರಿಗೆ ಮಾತ್ರ ಚಟ್ ಪಟ್ ಚಟ್ ಪಟ್ ಎನ್ನುವ ಉದ್ದವಾದ ಗರಗರ ತಿರುಗುತ್ತಿರುವ ಪಟ್ಟಾದ ಶಬ್ದವೂ ಕಿವಿಗೆ ಬಡಿಯುತ್ತಿತ್ತು. ಇಡೀ ಊರಲ್ಲಿ ಇಂತಹವು ಎರಡೇ ಗಿರಣಿಗಳು. ಮೇಲಿನ ಓಣಿಯಲ್ಲಿ ಚನ್ನಪ್ಪನದು, ಒಕ್ಕಲಗೇರಿ, ನೇಕಾರ ಓಣಿ, ಕುರುಬಗೇರಿಗಳಿಗೆ ಈ ಕೃಷ್ಣಪ್ಪನದು. ಶನಿವಾರದ ಸಂತೆಯ ದಿನವಂತೂ ಗಿರಣಿಯಲ್ಲಿ ಹನುಮಂತನ ಬಾಲದಂತೆ ಬುಟ್ಟಿಗಳ ಉದ್ದಾದ ಸಾಲು. ಮರಗಳ ಪಕ್ಕದಲ್ಲಿ ನಿಂತು ಹರಟೆ ಹೊಡೆಯುವ ಹೆಣ್ಣು, ಗಂಡುಗಳ ಚಿಕ್ಕ ಚಿಕ್ಕ ಗುಂಪುಗಳು, ತಮ್ಮ ಸರದಿಗಾಗಿ ಕಾಯುವ ಕೆಲಸ ಅವರಿಗೆ ಪರಿಪಾಠವಾಗಿ ಹೋಗಿತ್ತು.

ಕೃಷ್ಣಪ್ಪನ ಗಿರಣಿಯನ್ನು ಎಡಕ್ಕೆ ಮಾಡಿಕೊಂಡು ತುಸುಮುಂದೆ ಹೋಗಿ ಪುನಃ ಎಡಕ್ಕೆ ತಿರುಗಿ 10-12 ಮನೆಗಳನ್ನು ದಾಟಿದರೆ ನಮ್ಮ ಕಾಶಪ್ಪನ ಮನೆ. ಕಾಶಪ್ಪ ತುಸು ಹೆಚ್ಚು ವಯಸ್ಸಾದ ಮೇಲೆ ಮದುವೆ ಆದವ. ಅವನಿಗೊಬ್ಬ ತಮ್ಮ ದೇವಣ್ಣ, ಇಬ್ಬರ ನಡುವಿನ ಅಂತಹ ಹತ್ತು ವರ್ಷಗಳೇ ಹೆಚ್ಚು ಕಡಿಮೆ. ಅವನಿಗೊಬ್ಬ ಅಕ್ಕ ರಾಮವ್ವ. ಅವಳಿಗೆ ಇಬ್ಬರು ಹೆಣ್ಣು ಮಕ್ಕಳು ಭದ್ರವ್ವ, ದ್ಯಾಮವ್ವ, ಇಬ್ಬರನ್ನೂ ತನ್ನ ಇಬ್ಬರು ತಮ್ಮಂದಿರಿಗೇ ಕೊಡಬೇಕೆಂದು ಅಕ್ಕಹಠ ಹಿಡಿದದ್ದರಿಂದ ಅನಿವಾರ್ಯವಾಗಿ ಕಾಶಪ್ಪ ಒಪ್ಪಿಕೊಳ್ಳಲೇಬೇಕಾಗಿತ್ತು. ದೇವಣ್ಣನದೋ ಅಪರೂಪದ ಜೋಡಿ. ಆದರೆ ಕಾಶಪ್ಪನಿಗೂ ಅವನ ಹೆಂಡತಿ ಭದ್ರವ್ವನಿಗೂ ವಯಸ್ಸಿನ ಅಂತರ 16 ರಿಂದ 18 ವರ್ಷಗಳು ಅನ್ನುವುದನ್ನು ಬಿಟ್ಟರೆ ಮತ್ತೇನೂ ಹೇಳಿಕೊಳ್ಳುವಂತಹ ಊನವಿರಲಿಲ್ಲ. ಆದರೂ ಹಳ್ಳಿಯಲ್ಲಿ ವಯಸ್ಸಾದವನ ಹೆಂಡತಿ ಎಂಬ ಕೀಳರಿಮೆಯ ಹೆಗ್ಗಳಿಕೆ ಅವನ ಹೆಂಡತಿ ಭದ್ರವ್ವನಿಗೆ ತಪ್ಪಿರಲಿಲ್ಲ. ಹೆಸರಿಗೆ ತಕ್ಕಂತೆಯೇ ಭದ್ರವ್ವ ಗಟ್ಟಿಮುಟ್ಟಾದ ಸಮತೋಲ ದೇಹ ರಚನೆ ಹೊಂದಿದ್ದಳು. ಗೋಧಿಗೆಂಪಿನ ದುಂಡುಮುಖದ, ನೀಳ ಮೂಗಿನ ತುಂಬು ಕಳೆಯ ತುಂಬಿದೆದೆಯ ಅವಳನ್ನು, ತುಸು ಹೆಚ್ಚು ಕಡಿಮೆ ಅವಳ ಹಾಗೆಯೇ ಕಾಣುವ ಅವಳ ತಂಗಿ ದ್ಯಾಮವ್ವಳನ್ನು ನೋಡಿ ಯಾರಾದರೂ ಸೈ ಆಕರ್ಷಣೆಗೆ ಒಳಗಾಗಲೇಬೇಕು.

ಇದ್ದ ಸ್ವಂತ ನಾಲ್ಕು ಕೂರಿಗೆ ಹೊಲವಲ್ಲದೇ ಮತ್ತೆ ಎರಡು ಕೂರಿಗೆ ಬೇರೆಯವರ ಹೊಲವನ್ನು ಕೋರು ಲಾವಣಿ ಮಾಡುತ್ತಾ ತಮ್ಮ ಬಾಳ್ವೆಯನ್ನು ಸೊಗಸಾಗಿ ಸಾಗಿಸಿದ್ದರು ಕಾಶಪ್ಪ, ದೇವಣ್ಣ, ಆದರೆ ಅದೊಂದು ದಿನಃ

ಭದ್ರವ್ವ, ದ್ಯಾಮವ್ವರ ತಾಯಿ ರಾಮವ್ವ ಹೆಚ್ಚಾಗಿ ಎಲ್ಲೂ ಹೋಗುವವಳಲ್ಲ, ಆದರೆ ಅಂದು ಶೇಖರಪ್ಪನ ಮನೆಗೆ ಬಂದಿದ್ದಳು. ಮೈ ಕೈಯಿಂದ ಭಾರೀ ದಪ್ಪವಾಗಿದ್ದ ಅವಳು ಕುಳಿತರೆ ಎರಡು ಜನರ ಸ್ಥಳ ಬೇಕು. ಗುಂಗುರು ಕೂದಲುಗಳನ್ನು ಗಂಟು ಹಾಕಿ ಹಿಂದೆ ಕಟ್ಟಿಕೊಂಡ ದೊಡ್ಡ ತುರುಬು, ತಲೆತುಂಬ ಶೆರಗು, ಅಗಲ ಹಣೆ, ಎರಡೂ ಕೈಗಳಲ್ಲಿ ಬಂಗಾರದ ಎರಡೆರಡು ಪಾಟ್ಲಿ ಬಿಲ್ವಾರಗಳು, ಶೇಖರಪ್ಪ ಅವಳಿಗೆ ಸೋದರ ಸಂಬಂಧಿ. ಇಡೀ ಊರಲ್ಲಿಯೇ ಭರ್ಜರಿ ಕುಳ. ಬಿಕ್ಕುತ್ತಲೇ ರಾಮವ್ವ "ನೋಡು ತಮ್ಮಾ ವಿಷಯಾ ಬೆಳೆದು ಊರಿಗೆಲ್ಲ ಗೊತ್ತಾತಂದ್ರ ನೀನ ನನಗೆ ಮತ್ತೆ ಮೊದ್ಲ ಯಾಕ್ ಹೇಳಿಲ್ಲ ಅಂತ ಬೈಯಾಂವ, ಒಟ್ಟಿನ್ಯಾಗ ನನಗ ದಿಕ್ಕು ತೋಚದ್ಹಂಗ ಆಗೈತಿ" ಎಂದು ನಿಡುಸುಯ್ದಳು. ಗದ್ಗದಿತ ಧ್ವನಿಯಲ್ಲಿ ದುಃಖ ಆತಂಕ ಎದ್ದು ಕಾಣುತ್ತಿದ್ದವು. ತನ್ನ ಯಾವತ್ತಿನ ಗಂಭೀರ ಗತ್ತಿನಲ್ಲೇ ಶೇಖರಪ್ಪ "ಅಷ್ಟ್ಯಾಕ ಮನಸ್ಸಿಗೆ ಕೆಟ್ಟ ಮಾಡಿಕೋತಿ ರಾಮವ್ವಕ್ಕ ಅಂಥಾದೇನು ಆಗೈತಿ ಈಗ. ಸಮಾಧನಾ ಮಾಡಿಕೊ. ಯಾಕ ನಾವಿಲ್ಲೇನು ನಿನಗ? ಧೈರ್ಯಾ ತೊಗೊ. ವಿಷಯ ಏನು ಸರಿಯಾಗಿ ನೆಟ್ಟಗ ಹೇಳು." ಅಪ್ಪಣೆ ಕೊಡಿಸಿದ ಕೂಡಲೇ ರಾಮವ್ವ "ಏನ್ ಹೇಳ್ಲಿ ತಮ್ಮಾ ಹೇಳಾಕ ನಾಚಿಗಿ ಬರ್ತೈತಿ, ನಾಲಿಗೆ ಹೊಲಸ ಆಗ್ತೈತಿ. ನನ್ನ ಹೆಣ್ಣು ಮಕ್ಕಳ ಮರ್ಯಾದೀಗಿ ಕುತ್ ಬಂದೈತಿ" ಅರ್ಧದಲ್ಲೇ ತಡವರಿಸತೊಡಗಿದಳು. ಕೇಳುತ್ತಲೇ ತೀವ್ರ ಆತಂಕಕ್ಕೊಳಗಾದ ಶೇಖರಪ್ಪಗೆ ಸಿಟ್ಟೂ ಏರತೊಡಗಿತು. "ಏನಂದೀ.... ಮರ್ಯಾದಿ ಹೋಗೂಂತಾದು ಏನಾಗೈತಿ ಈಗ ಏನದು? ಸರಿಯಾಗಿ ವಿವರಿಸಿ ಹೇಳು, ಅಳೋದ ಕರೇದು ಬಿಡು" ಸಮಾಧಾನಗೊಳಿಸಿ ತೀವ್ರ ನೇರ ವಿಷಯ ಪ್ರಸ್ತಾಪಿಸುವಂತೆ ಆಜ್ಞಾಪಿಸಿದ. ಇನ್ನೂ ಹೆಚ್ಚು ತಡಮಾಡಿದರೆ ಅವನು ಸಿಟ್ಟಿಗೇಳಬಹುದೆಂದು ಊಹಿಸಿದ ರಾಮವ್ವ ನೇರ ವಿಷಯ ಪ್ರಸ್ತಾಪಿಸಿದಳು. ಅದೇನೆಂದರೆ ಈಗೊಂದು ವಾರದಿಂದ ಭದ್ರವ್ವ, ದ್ಯಾಮವ್ವ ಜೋಳ ಬೀಸಿಕೊಂಡು ಬರಲು ಕೃಷ್ಣಪ್ಪನ ಗಿರಣಿಗೆ ಹೋದಾಗಲೆಲ್ಲ ಮೂಲಿಮನಿ ಬಾಳಪ್ಪ ಗಿರಣಿ ಕಟ್ಟೆಯ ಮೇಲೆ ಕುಳಿತುಕೊಂಡು ಅವರನ್ನು ಹಾಸ್ಯ ಮಾಡುತ್ತಾನೆಂದೂ, ಪರೋಕ್ಷವಾಗಿ ದ್ವಂದಾರ್ಥ ಬರುವ ಮಾತುಗಳನ್ನಾಡುತ್ತಾನೆಂದೂ ಸುತ್ತುಮುತ್ತ ಜನರಿರುವುದರಿಂದ ಅವರು ಎಲ್ಲ ಸಹಿಸಿಕೊಂಡು ಸುಮ್ಮನೇ ಬರಬೇಕಾಗುತ್ತದೆಂದೂ ತಿಳಿಸಿದಳು. ಇಷ್ಟೇ ಅಲ್ಲ ಮುಂದುವರೆದು ನಿನ್ನೆಯಂತೂ ಭದ್ರವ್ವಳನ್ನುದ್ದೇಶಿಸಿ (ಅವಳನ್ನು ತುಸು ವಯಸ್ಸಾದವನಿಗೆ ಕೊಟ್ಟಿದ್ದರಿದಂದ) "ಹೊಸಾ ಹೋರಿಗೆ ಹಳೇ ಚಕ್ಕಡಿ ಸಲುವಾಗಿ ನಿಧಾನ ಹೋದ್ರ ಹೋರಿ ದಣಿಯೊಂಗಿಲ್ಲ ಹೋರಿ ದಣಿಸೋಂವಾ ಬೇಕ್ಲೆ ತಮ್ಮಾ ದಣಿಸೋಂವಾ"

ಎಂದು ಯಾರೊಡನೆಯೋ ಏರುಧ್ವನಿಯಲ್ಲಿ ಹೇಳುತ್ತಲೇ ಗಿರಣಿ ಕಟ್ಟೆಯಿಂದ ಇಳಿದು ಹೋಗುವಾಗ ತನ್ನ ಮುಂಗೈಯನ್ನು ಭದ್ರವ್ವನಿಗೆ ಬಡಿಸುತ್ತಾ ಹೋದನಂತೆ. ಮನೆಗೆ ಬಂದ ಭದ್ರವ್ವ ಎಲ್ಲ ವಿಷಯ ತಿಳಿಸಿ ಊಟ ನೀರು ಬಿಟ್ಟು ಮಲಗಿಕೊಂಡಳು. ಮನೆಯಲ್ಲಿ ಗಂಡಸರಿಗೆ ಹೇಳಿದರೆ ಏನು ಅನಾಹುತವಾಗುತ್ತದೆ ಅಥವಾ ಅವರೂ ಬಾಳಪ್ಪನಿಗೆ ಹೆದರಿ ಎಲ್ಲಿ ಸುಮ್ಮನೇ ಕೂತು ಊರಲ್ಲೆಲ್ಲಾ ಬದನಾಮಿ ಆಗುವುದೋ ಎಂಬ ದೂರಾಲೋಚನೆಯಿಂದ ರಾಮಕ್ಕೆ ವಿಷಯವನ್ನು ಶೇಖರಪ್ಪನ ಎದುರಿಗೆ ತಂದಿದ್ದಳು. ಅವಳಿಗೆ ತನ್ನ ತಮ್ಮಂದಿರಾದ ಕಾಶಪ್ಪ, ದೇವಣ್ಣರು ತುಂಬ ಒಳ್ಳೆಯವರೆನಿಸಿದ್ದರೂ, ಅವರು ಸಂಪನ್ನರು, ಅಷ್ಟೊಂದು ಧೈರ್ಯದವರಲ್ಲ ಎಂಬುದು ಗೊತ್ತಿತ್ತು. ಅವರೆದುರು ಹೇಳಿಯೂ ಅವರೇನೂ ಮಾಡದೇ ಸುಮ್ಮನೇ ಸಹಿಸಿಕೊಂಡರೆ ಮತ್ತೇನೇನೋ ಎಂದು ಹೆದರಿದ್ದಳಾಕೆ. ಬಾಳಪ್ಪನ ಪುಂಡಾಟಿಕೆಯನ್ನು ಕೇಳಿದವರೆಲ್ಲ ಅವನಿಗೆ ಅಂಜುವದು ಸಹಜವೇ ಆಗಿತ್ತು.

ವಿಷಯ ಸಂಪೂರ್ಣ ಕೇಳಿದ ಶೇಖರಪ್ಪ "ಇಲ್ನೋಡವಾ ರಾಮವ್ವಕ್ಕ ಇಂತಾ ವಿಷಯ ನನ್ನಿಂದ ಕೇಳಾಕ ಆಗೋದಿಲ್ಲಾ. ಅಲ್ಲಾ ಆ ಬಾಳ್ಯಾ ಇಷ್ಟು ಮುಂದುವರಿಯಾಕ ನಿನ್ನ ಮಕ್ಕಳು ಹೆಂಗ ಬಿಟ್ರು ಅಂತೀನಿ. ಇವರದೂ ಏನರ ಐತೇನ ಮತ್ತ ಅವನ ಕೂಡ?" ಪ್ರಶ್ನೆ ನೇರವಾಗಿತ್ತು. ಅವಳ ಜಂಘಾಬಲವೇ ಉಡುಗಿತು. ತನ್ನ ಮಕ್ಕಳು ಆ ಮಟ್ಟಕ್ಕೆ ಹೋಗುವವರಲ್ಲವೆಂದು ಅವಳಿಗೆ ನಂಬಿಗೆಯಿದ್ದರೂ ಯಾಕೋ ಕಾಶಪ್ಪ ಭದ್ರವ್ವಳ ವಯಸ್ಸಿನ ಅಂತರದ ಬಗ್ಗೆ ಅನೇಕರು ಆಡಿಕೊಂಡದ್ದು ನೆನಪಾಗಿ ತುಸು ಬೆವರಿದಳು. ಆದಾಗ್ಯೂ ತಕ್ಷಣ ಸಂಭಾಳಿಸಿಕೊಂಡವಳೇ "ಛೇ ಛೇ ಇಲ್ಲ ತಮ್ಮಾ ಅಂಥ ಹೊಸಲ ಕೆಲಸಕ್ಕೆ ಕೈಹಾಕೋರಲ್ಲ ನನ್ನ ಮಕ್ಕಳು, ಆ ಬಾಳ್ಯಾ ಭಾಡ್ಯಾ ಹಂಗ ಮಾಡಿದ್ರ ಇವರೇನು ಮಾಡಬೇಕು? ಪಾಪ ಭದ್ರವ್ವ ನಿನ್ನಿಯಿಂದ ಕೂಳು ನೀರು ಬಿಟ್ ಕುಂತಾಳ" ಶೇಖರಪ್ಪ, ಮೈಯೆಲ್ಲಾ ಕಿವಿಯಾಗಿ ರಾಮವ್ವ ಆಲಿಸತೊಡಗಿದಳು. "ನಿನ್ನ ಮಕ್ಕಳ ಮ್ಯಾಲ ನಿನಗಷ್ಟು ನಂಬಿಗಿ ಇದ್ರ ನಾ ಹೇಳಿದ್ಹಂಗ ಮಾಡಬೇಕು ಇವತ್ತ ಸಂಜೀನ್ಯಾಗ ಗಿರಣಿಗೆ ಭದ್ರವ್ವ ದ್ಯಾಮವ್ವ ಕೂಡಿಕೊಂಡು ಹೋಗಬೇಕು....." ಎಂದು ಏನನ್ನೋ ಅವಳ ಕಿವಿಯಲ್ಲಿ ಪಿಸುಗುಟ್ಟಿದ್ದ. ತದೇಕಚಿತ್ತದಿಂದ ದೇವವಾನಿಯನ್ನು ಕೇಳುತ್ತಿದ್ದ ತಪಸ್ವಿಯಂತೆ ಕೈಜೋಡಿಸಿ ನಿಂತ ರಾಮವ್ವನ ಮೈಯಲ್ಲಿ ನಡುಕ ಪ್ರಾರಂಭವಾಗಿತ್ತು. ಶೇಖರಪ್ಪನ ಬಗ್ಗೆ ಸಂಪೂರ್ಣ ತಿಳಿದಿದ್ದ ಆಕೆಗೆ ಆಕಸ್ಮಾತ ಅವನು ಹೇಳಿದಂತೆ ನಡೆಯದಿದ್ದರೆ ತನ್ನ ಮಕ್ಕಳು ಮತ್ತು ತನಗೆ ಹೋದವರ್ಷ ಗಿರಿಯಪ್ಪ ಮತ್ತು ಇರಬೇಕಾದ್ರ ನಾವ್ಯಾಕ ಹೆದರೋಣು, ಏನಾಗೋದು ಇವತ್ತs ಆಗಿ ಬಿಡ್ಲಿ" ಒಣಗಿದ ನಾಲಿಗೆಯಿಂದ ತೊದಲಿದಳು. ಆಯಿತು ನಡೀ ಇನ್ನು ಎಂದೆನ್ನುವಂತೆ ಗೋಣಿನಿಂದ ಸನ್ನೆ ಮಾಡಿದಾಗ ರಾಮಮ್ಮ ಗಡಿಬಿಡಿಯಿಂದ ಹೊರನಡೆದಳು.

ಮನೆಗೆ ಬಂದ ರಾಮಮ್ಮ ಸುಮ್ಮನೆ ಕೂಡ್ರಲಿಲ್ಲ. ತನ್ನ ಕಣ್ ಸನ್ನೆಯಿಂದಲೇ ಭದ್ರವ್ವ, ದ್ಯಾಮವ್ವರಿಗೆ ಹಿಂದಿನ ಕೋಣೆಗೆ ಬರುವಂತೆ ತಿಳಿಸಿ ದೌಡಾಯಿಸಿ ಅಲ್ಲಿಗೇ ನೇರವಾಗಿ ಹೋದಳು. ಕುತೂಹಲ ಆತಂಕ ಒಂದಾಗಿ ಬೆರೆತು ಗಾಢ ಚಿಂತೆ ಎಲ್ಲರನ್ನೂ ಕಾಡುತ್ತಿತ್ತು. ಮನೆಯಲ್ಲಿಯ ಕ್ಷಣ ಕ್ಷಣಗಳೂ ಬಿಗಿಗೊಳ್ಳುತ್ತಿದ್ದವು. ಚಿಕ್ಕಮಕ್ಕಳು ಬೆರಗುಗೊಂಡು ರಾಮಮ್ಮ ಹೋಗಿ ಕುಳಿತ ಕೋಣೆಯ ಬಾಗಿಲಿಗೆ ಕಿವಿ ನಿಮಿರಿಸಿ ಕದ್ದು ಒಳಗೇನು ಸಂಭಾಷಣೆ ನಡೆದಿದೆಯೋ ಎಂದು ಕೇಳಲು ಪ್ರಯತ್ನಿಸುತ್ತಿದ್ದವು. ಸುಳಿವು ತಿಳಿದ ರಾಮಮ್ಮ ಇಷ್ಟೊಂದು ಕಠೋರವಾಗಿದ್ದನ್ನು ಕಾಣದ ಅವು ಅಲ್ಲಿಂದ ತೀವ್ರ ಓಟಕಿತ್ತವು. ರಾಮಮ್ಮ ತನ್ನ ಹಾಗೂ ಶೇಖರಪ್ಪನ ನಡುವೆ ನಡೆದ ಮಾತುಕತೆಯ ವಿವರವನ್ನೆಲ್ಲ ಸಂಕ್ಷಿಪ್ತದಲ್ಲಿಯೇ ಭದ್ರವ್ವ, ದ್ಯಾಮವ್ವರಿಗೆ ಅರುಹಿದಳು. ಮೈಯೆಲ್ಲ ಕಿವಿಯಾಗಿಸಿ ಉಸಿರುಬಿಗಿಹಿಡಿದು ಆಲಿಸಿದ ಅವರುಗಳು "ನಾವು ಏನು ಮಾಡಬೇಕು ಅನ್ನೋದನ್ನ ನೀ ಬಿಡಿಸಿ ಹೇಳವ್ವಾ, ಅದರ್ಹಂಗ್ ಮಾಡಲಿಲ್ಲ. ಅಂದ್ರ ನಮ್ಮನ್ನ ಕಡದು ಚೂರ ಚೂರ ಮಾಡ್ ನೀನು. ನಿನ್ನ ಹೊಟ್ಯಾಗ ಹುಟ್ಟಿದ ಮ್ಯಾಲೆ ನಿನ್ನ ಹೆಸರಿಗೆ ಕಳಂಕಾ ತರೋರಲ್ಲಾ ನಾವು, ಪ್ರಾಣಹೋದ್ರೂ ಚಿಂತಿಲ್ಲ ಮಾನಕ್ಕೆ ಧಕ್ಕಿ ಬರಬಾರ್ದು" ಯುದ್ಧಕ್ಕೆ ಹೊರಟ ಯೋಧರಂತೆ ಹೊರ ಬೀಳುತ್ತಿದ್ದವು ಅವರಿಬ್ಬರ ವಚನಬದ್ಧ ಮಾತುಗಳು. ಭದ್ರವ್ವನ ಮುಖವನ್ನೇ ನೋಡುತ್ತಿದ್ದ ರಾಮಮ್ಮನಿಗೆ ತಾನೇನೋ ಅವಳಿಗೆ ಅನ್ಯಾಯ ಮಾಡಿದ್ದೇನೇನೋ

ಎಂಬ ಅಳುಕು ಕ್ಷಣ ಹೊತ್ತು ಸುಳಿದು ಹೋಗದೇ ಇರಲಿಲ್ಲ. ಆದರೂ ಅಂಭಾಳಿಸಿಕೊಂಡವಳೇ "ನಾ ಯಾಕ ನಿಮ್ಮ ಮ್ಯಾಲೆ ಸಂಶೆ ಮಾಡ್ಲೆ ನನ್ನ ಹಡೆದವ್ವಗಳ್ರಾ (ಮಕ್ಕಳಿಗೆ ಹಾಗೆ ಅನ್ನುವದು ರೂಢಿ) ಮುಂದ ಎನ್ಮಾಡೋದೂ ಅನ್ನೋದು ನನಗೂ ತೋಚವಲ್ಲದಾಗ್ಯೆತಿ. ನಿಮ್ಮ ಮಾವ (ಶೇಖರಪ್ಪ) ಹೇಳಿದಂಗ ಮಾಡ್ಲಿಲ್ಲಾಂದ್ರ... ಇನ್ನೂ ಏನೇನು ಅನ್ನುತ್ತಿದ್ದಳೋ, ನಡುವೆಯೇ ಬಾಯಿ ಹಾಕಿದ ಭದ್ರವ್ವ..... "ಮೈಮ್ಯಾಲಿನ ಕಳಂಕಾ ಅಳಿಕಿಸಿಕೊಬೇಕಂದ್ರ ಈಗ ನಮಗಿರೋದು ಒಂದ ದಾರಿ. ಶೇಖರಪ್ಪ ಮಾವ ಹೇಳಿದ್ದಂಗ ಮಾಡಬೇಕು. ಇಲ್ಲಾ ಅಂದ್ರ ಯಾವದರ ಕೆರಿನೊ, ಬಾವಿನೊ ಹಾರಿ ಜೀವಾ ಕಳಕೋ ಬೇಕು ಅಷ್ಟೆ. ನೀ ಯಾಕ ಅಷ್ಟು ಚಿಂತಿ ಮಾಡ್ತೀ ಯವ್ವಾ ಹುಟ್ಟೋದು ಒಂದಿವಸ ಸಾಯೋದು ಒಂದ ದಿವಸ ನಡುವೆ ಇರೋದು ಮೂರು ದಿವಸ. ಆ ಮೂರು ದಿನಾ ಮರ್ಯಾದಿಯಿಂದ ಬಾಳೆ ಮಾಡಿ ಹೋಗೋದು ಐತಿ" ಮಗಳು ಒಮ್ಮೆಲೆ ತತ್ವಜ್ಞಾನದ ಕಡೆ ಹೊರಳಿದ್ದು ನೋಡಿ ರಾಮಮ್ಮಳ ಕರುಳು ಚುರ್ ಎಂದರೂ, ತಾನು ಆಗಾಗ ಅವರಿಬ್ಬರನ್ನೂ ಮುಕ್ತಿಮಂದಿರ ಮಹಾಸ್ವಾಮೀಜಿಯವರ ಕಡೆ ಕರೆದುಕೊಂಡು ಹೋದದ್ದು ಸಾರ್ಥಕವಾಯಿತೆಂದುಕೊಂಡಳು. ಹಾಗೆಯೇ ತುಸು ಮುಂದುವರೆದು ರಾಮಮ್ಮ ಭದ್ರವ್ವಳನ್ನು ಮುಂದೆ ಬಾಗಿಸಿ ಅವಳ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಕೂಸಿನಂತೆ ಕೈಯಾಡಿಸತೊಡಗಿದಳು. ಅವರಿಗರಿವಿಲ್ಲದಂತೆಯೇ ಮೂವರ ಕಣ್ಣಲ್ಲೂ ನೀರು ಇಳಿಯತೊಡಗಿತ್ತು. ಆದರೂ ಅವರ ಒಮ್ಮತದ ನಿರ್ಧಾರ ಗಟ್ಟಿಯಾಗಿತ್ತು.

ಚುಕ್ ಚುಕ್ ಚುಕ್ ಎಂದು ಕೃಷ್ಣಪ್ಪನ ಹಿಟ್ಟಿನ ಗಿರಣಿ ಪುನಃ ಸುರುವಾಗುತ್ತಲೇ ಲಗುಬಗೆಯಿಂದ ಜನ ತಮ್ಮ ತಮ್ಮ ಜೋಳವನ್ನು ತೆಗೆದುಕೊಂಡು ಆ ಕಡೆ ನಡೆದರು. ಎಂದಿನಂತೆ ಬಾಳಪ್ಪನೂ ತನ್ನ ಜಿನಗು ಧೋತರ, ಮುಂಗೈಕಪ್ಪಿನ ಗರಿ ಗರಿಯಾದ ಅಂಗಿ, ಕಾಲಲ್ಲಿ ಜಿರ್ಕಿ ಕಾಲನವು ಮೆಟ್ಟಿಕೊಂಡು ಎರಡು ಕೆಂಪು ಹಾಗೂ ಹಸಿರು ಹರಳಿನ ಉಂಗುರಗಳ ಬಲ ಕೈ ಬೀಸುತ್ತ ಬಂದು ತನ್ನ ಆಸನಕ್ಕೆ ಕುಳಿತುಕೊಂಡ. ಆತನ ಕಣ್ಣುಗಳು ತೀಕ್ಷ್ಣವಾಗಿ ಯಾರನ್ನೋ ಹುಡುಕುತ್ತಿದ್ದು ಸ್ಪಷ್ಟವಾಗಿತ್ತು. ಅಷ್ಟರಲ್ಲೇ ಕೃಷ್ಣಪ್ಪನೂ ಬಂದು ಸೇರಿಕೊಂಡ. ಆತನ ಲೋಕಾಭಿರಾಮದ ಮಾತುಗಳು ಬಾಳಪ್ಪನಿಗೆ ಎಳ್ಳಷ್ಟೂ ಆಸಕ್ತಿ ಹುಟ್ಟಿಸಲಿಲ್ಲ. ಯಾಂತ್ರಿಕವಾಗಿ ಹಾಂ ಹೂಂ ಮಾತ್ರ ಅನ್ನುತ್ತಿದ್ದ. ಗಿರಣಿಯ ಒಳಭಾಗ ತುಂಬಿ ಜನರ ಸಾಲು ಹೊರಗೆ ಬೆಳೆದರೂ ತನಗೆ ಬೇಕಾದವರ ದರ್ಶನವಾಗದೇ ಬಾಳಪ್ಪ ಒಳಗೊಳಗೆ ಅಸ್ತವ್ಯಸ್ತಗೊಂಡಿದ್ದ. ನಿನ್ನೆ ತಾನು ಭದ್ರವ್ವಳಿಗೆ ಮುಂಗೈ ಬಡೆಸಿಕೊಂಡು ಹೋದರೂ ಆಕೆ ಸುಮ್ಮನೇ ಹೋದದ್ದನ್ನು ನೆನಪಿಸಿಕೊಂಡು ರೋಮಾಂಚನದ ಕಂಪನ ಪುನಃ ಅನುಭವಿಸಿದ. ಯಾವದೋ ಹೊಸ ಲೋಕವೊಂದನ್ನು ಕಾಣುವ ಬಯಕೆ ತೀವ್ರವಾಯಿತವನಿಗೆ.

ತದೇಕಚಿತ್ತದಿಂದ ನೋಡುತ್ತಿದ್ದ ಆತನಿಗೆ ದೂರದಲ್ಲಿ ಜೊತೆ ಜೊತೆಯಲ್ಲಿ ಬರುತ್ತಿದ್ದ ಅಕ್ಕತಂಗಿ ಭದ್ರವ್ವ, ದ್ಯಾಮವ್ವ ಕಣ್ಣಿಗೆ ಬಿದ್ದೇ ಬಿಟ್ಟರು. ತಲೆ ಮೇಲೆ ಜೋಳದ ಬುಟ್ಟಿ ಹೊತ್ತ ಭದ್ರವ್ವಳನ್ನೇ ಕೇಂದ್ರವಾಗಿಸಿಕೊಂಡು ದೃಷ್ಟಿ ಪುಲಕಗೊಂಡು ಆತನ ಕಣ್ಣೆವೆಗಳು ಮತ್ತಷ್ಟು ಅಗಲಗೊಂಡು ಬಡೆಯುವದನ್ನೇ ಮರೆತವು. ಹಲವು ಹತ್ತು ಲೆಕ್ಕಾಚಾರ ಹಾಕಿದ ಮನಸ್ಸು ನೂರಾರು ಗಾವುದ ನಾಗಾಲೋಟ ಓಡಿ ಸ್ವರ್ಗವನ್ನೇ ತಲುಪಿತು. ಅದ್ಯಾವುದೋ ಅವರ್ಣನೀಯ ಆನಂದವನ್ನನುಭವಿಸುತ್ತಾ ಅವರು ಸಮೀಪ ಬರುವುದನ್ನೇ ಕಾಯತೊಡಗಿದ ಕಾತರಿಸಿ. ಬೇಟೆಗೆ ಹೊಂಚು ಹಾಕಿ ಸಿದ್ಧವಾಗಿ ಕುಳಿತ ಚಿರತೆಯಂತೆ ಕಾಣುತ್ತಿದ್ದ ನೋಡುವವರಿಗೆ. ದೃಢ ಹೆಜ್ಜೆಗಳನ್ನಿಡುತ್ತಾ ಗಿರಣಿಯನ್ನು ಸಮೀಪಿಸಿದ ಭದ್ರವ್ವ ದ್ಯಾಮವ್ವರೂ ಯಾವುದೋ ತಯಾರಿಯಲ್ಲಿದ್ದಾರೆಂಬುದನ್ನು ಆತ ಅರಿಯದಾಗಿದ್ದ. ಮನಸಿನಲ್ಲಿ ಮಂಡಿಗೆ ತಿನ್ನುತ್ತಿದ್ದ ಆತನ ಗೋಧಿ ಲೆಕ್ಕ ಕೊಡುವವರು ಯಾರು? ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು.

ಮುಂದೆ ದ್ಯಾಮವ್ವ ಹಿಂದೆಯೇ ಭದ್ರವ್ವ ಗಿರಣಿ ತಲುಪುತ್ತಿದ್ದಂತೆಯೇ ಬಾಳಪ್ಪ ಸಾವರಿಸಿಕೊಂಡ. ಆಕ್ರಮಣಕ್ಕೆ ಸಿದ್ಧವಾದ ಮನಸ್ಸು ಜಿಗಿಯಲು ತುದಿಗಾಲ ಮೇಲೆ ನಿಂತಿತ್ತು. ಅವನಿಗರಿವಿಲ್ಲದಂತೆಯೇ "ಒಂದ್ ಜೋಳದ ಬುಟ್ಟೀಗೆ ಇಬ್ಬರು ಗಂಟು ಬಿದ್ರ ಹೆಂಗ ಅಂತೀನಿ. ಇಬ್ಬರ ಕೈಯಾಗ ಸಿಕ್ಕು ಆ ಬುಟ್ಟಿ ನುಗ್ಗಾಗಿ ಹೋಗ್ತೈತಿ. ಎರಡು ಗೂಳಿಗಳ

ನಡುವೆ ಸಿಕ್ಕ ಎಳೆ ಗಿಡದ ಹಂಗ. ಒಟ್ಟಿನ್ಯಾಗ ಒಂದಕ್ಕೆ ಒಂದು ಮಾತ್ರ ಜತಿ ಆದ್ರ ಚೊಲೊ. ಇದೇನಿದು ಎರಡೆರಡಕ್ಕೂ ಒಂದೊಂದು ಅಂಗ್ರ....ಇಜ್ಜೆತಿ ಆತು" ಎಂಬ ಮಾತು ಹೊರಬಿತ್ತು ಯಾರನ್ನೋ ಉದ್ದೇಶಿಸಿ, ಆತ ಒಂದು ಜೋಳದ ಬುಟ್ಟಿ ತೊಗೊಂಡು ಇಬ್ಬರು ಬಂದಿರುವುದಕ್ಕೆ ಹೀಗೆ ಟೀಕಾಸ್ತ್ರ ಬಿಡುತ್ತಿದ್ದಾನೆ ಎಂದು ಅಕ್ಕ ತಂಗಿಯರಿಬ್ಬರಿಗೂ ಖಾತ್ರಿಯಾಯಿತು. ಆದರೂ ಅವನ ಕಡೆ ಲಕ್ಷ್ಯ ಕೊಡದೇ ಅವರು ಗಂಭೀರವಾಗಿ ಹೋಗಿ ಸಾಲಿನಲ್ಲಿ ಕೂಡಿಕೊಂಡರು. ಜೋಳದ ಬುಟ್ಟಿಯನ್ನು ತಲೆಯಿಂದ ಕೆಳಗಿಳಿಸಿ ಇಟ್ಟು ತಮ್ಮ ಸರದಿಗಾಗಿ ಕಾಯತೊಡಗಿದರು. ಇದೇ ವೇಳೆಗಾಗಿ ಎದುರು ನೋಡುತ್ತಿದ್ದ ಬಾಳಪ್ಪ ಕಟ್ಟೆಯ ಮೇಲಿಂದ ಕೆಳಗಿಳಿಯುವ ನೆಪ ಮಾಡಿಕೊಂಡು ಮುಂದೆ ಬಂದ, ಕಾಲು ಚಾಚಿದ. ಚಾಚಿದ ಕಾಲು ನೇರವಾಗಿ ಬಂದು ಭದ್ರವ್ವನ ನಡಕ್ಕೆ ತಾಗಿತು. ವಾರೆಗಣ್ಣಿನಿಂದ ಇದನ್ನೇ ನೋಡುತ್ತಿದ್ದ ದ್ಯಾಮವ್ವ ಕೆಂಡವಾದಳು. ತಕ್ಷಣ ಕೆಳಬಾಗಿ ಜೋಳದ ಬುಟ್ಟಿಯೊಳಗೆ ಅಡಗಿಸಿ ಇಟ್ಟ ಚಪ್ಪಲಿಯನ್ನು ಹೊರತೆಗೆದಳು. ಹಾಗೆಯೇ ಬಾಳಪ್ಪನ ಮುಖಕ್ಕೆ .ಫಟ್' ಎಂದು ಇಕ್ಕರಿಸಿಯೇ ಬಿಟ್ಟಳು. ಭದ್ರವ್ವನೂ ತಡ ಮಾಡಲಿಲ್ಲ. ಮೈಯಲ್ಲಿ ದೇವರು ಬಂದವಳಂತೆ ಮೇಲಿನ ಹಲ್ಲುಗಳಿಂದ ಕೆಳದುಟಿ ಕಚ್ಚಿ "ಧೊಪ್ಪ" ಎಂದು ಮತ್ತೊಂದು ಕಪಾಳಕ್ಕೆ ಬಾರಿಸಿದಳು. ಅತ್ಯಂತ ಅನಿರೀಕ್ಷಿತವಾದ ಈ ಆಕ್ರಮಣದಿಂದ ಕಂಗಾಲಾದ ಬಾಳಪ್ಪನಿಗೆ ಏನೂ ತೋಚದೇ ಕೆಳಬಾಗಿ ಮುಖ ಮುಚ್ಚಿಕೊಂಡನು. ಆತನ ಜಂಘಾಬಲವೇ ಉಡುಗಿ ಹೋಗಿತ್ತು. ಸುತ್ತುಮುತ್ತ ಕೂಡಿದ ಜನಕ್ಕೂ ಇದೊಂದು ಚಕಿತಗೊಳಿಸುವ ಘಟನೆಯಾಯಿತು. ಗಡಿಬಿಡಿ ಗದ್ದಲ ಸುರುವಾಗಿ ಜನ ಚಲ್ಲಾಪಿಲ್ಲಿಯಾಗಿ ಅತ್ತಿತ್ತ ಓಡಾಡತೊಡಗಿತು.

ಕ್ಷಣದಲ್ಲಿಯೇ ಸುದ್ದಿ ರಾಮಮ್ಮನಿಗೂ ತಲುಪಿತು. ಇದಕ್ಕಾಗಿಯೇ ಕಾಯುತ್ತಿದ್ದ ಅವಳು ತಕ್ಷಣ 'ಬರ್ರೆಪೋ' ಎಂದು ಚೀರುತ್ತ ಕೃಷ್ಣಪ್ಪನ ಗಿರಣಿಯ ಕಡೆಗೆ ಲಗುಬಗೆಯ ಹೆಜ್ಜೆ ಹಾಕಿದಳು. ಅವಳ ದೃಢ ನಡಿಗೆಯಲ್ಲಿ ಮಹತ್ಕಾರ್ಯ ಒಂದನ್ನು ಸಾಧಿಸಿದ ಧನ್ಯತಾಭಾವ ಹಾಗೂ ಆತ್ಮತೃಪ್ತಿ ಎರಡೂ ಎದ್ದು ಕಾಣುತ್ತಿದ್ದವು.

## ಡಾ. ಮನು ಬಳಿಗಾರ್ ಕೃತಿಗಳು

**ಕಥಾ ಸಂಕಲನ**
ಅವ್ಯಕ್ತ
ಋಣ
ಬದುಕು ಮಾಯೆಯ ಮಾಟ
ದ ಡೆಟ್ ಆ್ಯಂಡ್ ಅದರ್ ಸ್ಟೋರೀಸ್
ಕೆಲವು ಕತೆಗಳು
ಅನುಭೂತಿ (ಹಿಂದಿಯಲ್ಲಿ)

**ಕವನ ಸಂಕಲನ**
ನನ್ನ ನಿನ್ನೊಳಗೆ
ಎದ್ದವರು ಬಿದ್ದವರು
ಸಾಕ್ಷರ ಗೀತೆಗಳು
ನಯಾಗರಾ ಮತ್ತು ಜಲಪಾತಗಳು
ರವೀಂದ್ರರ ಮಿಂಚಿನ ಹನಿಗಳು (ಅನುವಾದ)
ಆಯ್ದ ಕವನಗಳು

**ಲಲಿತ ಪ್ರಬಂಧ ಸಂಕಲನ**
ಏಕಾಂತ ಮತ್ತು ಏಕಾಗ್ರತೆ
ಸಂಸ್ಕೃತಿ ವಿಹಾರ

**ನಾಟಕ**
ಮೈಲಾರ ಮಹಾದೇವ

**ಅಂಕಣ ಬರಹ**
ಬೆಳಕ ಬೆಡಗು (ಸಾಕ್ಷಿ ಪ್ರಜ್ಞೆ – ಪ್ರಜಾವಾಣಿ)

**ಜೀವನ ಚರಿತ್ರೆ**
ಅತಿವಿರಳ ರಾಜಕಾರಣಿ ಎಸ್.ಆರ್. ಕಂಠಿ
ಪ್ರತಿಭಾವಂತ ಸಂಸದೀಯ ಪಟು
ನಜೀರ್ ಸಾಬ್
ಅಪ್ಪ

**ಸಂಪಾದನೆ**
ಬಹುಮುಖಿ (ಶಿವರಾಮ ಕಾರಂತರ ಬದುಕು-ಬರಹ)
ಗಾನಗಂಧರ್ವ (ಕುಮಾರ ಗಂಧರ್ವರ ಜೀವನ ಸಂಗೀತ)
ತಲಸ್ಪರ್ಶಿ (ವಿಮರ್ಶಾ ಲೇಖನಗಳು, ಡಾ. ಜಿ.ಎಂ. ಹೆಗಡೆಯವರೊಂದಿಗೆ)
ಅಕ್ಷರ ಮಿಲನ
ಶಾಂತಸಾಗರ
ಜ್ಞಾನ ಪ್ರಭಾ (ಪಾಕ್ಷಿಕ) / ಅಕ್ಷರ ಪ್ರಭಾ
ಕಲ್ಪವೃಕ್ಷ
ತುಳಸಿ, ಇತ್ಯಾದಿ

ಪರಮ ಶಂಕರ ಪ್ರಕಾಶನ ಶಿಗ್ಗಿ, ಬೆಂಗಳೂರು-560 068